ರಷ್ಟು ಅಂದರೆ ಸುಮಾರು [illegible] ಜನರು ತಮ್ಮ ಮೂಲ ವ್ಯವಸಾಯದ ಕೃಷಿಯನ್ನೇ ಅವಲಂಬಿಸಿರುವರು. ಸಾಧಾರಣ ತಲಾ ೬ ದಶಾಂಶದಷ್ಟು ಎಕರೆ ಭೂಮಿಯು ಪ್ರತಿ ಒಬ್ಬನ ಪಾಲಿಗೆ [illegible]

[illegible]

ದಲ್ಲಿ ೧೨೦ ಇಂಚು ಮಳೆ ಬೀಳುತ್ತದೆ. ಹಾಗೂ ಅದರ ಉಷ್ಣತಾಮಾನವು ಬೇಸಿಗೆಯಲ್ಲಿ ೯೦ರಷ್ಟು ಇದ್ದರೆ ಚಳಿಗಾಲದಲ್ಲಿ ೬೦ರ ವರೆಗೆ ಇಳಿಯುತ್ತದೆ. ಅರಣ್ಯಗಳಿಂದ ತುಂಬಿರುವ ಘಟ್ಟದ ಮೇಲಿರುವ ಪ್ರದೇಶದಲ್ಲಿ ೩೦೦ ಇಂಚು ಮಳೆ ಬೀಳುತ್ತದೆ. ಮತ್ತು ಚಳಿಗಾಲದಲ್ಲಿ ಅಲ್ಲಿಯ ಉಷ್ಣತಾಮಾನವು ೫೦ಕ್ಕೆ ಇಳಿಯುತ್ತದೆ.

[illegible]

ಗಣಿತ-ರಂಜನೆ

— “ಗಣಿತಾನಂದ”

ಅಂಕಿಗಳಿಗೆಕೂಡ ಒಂದು ಹುಟ್ಟುಗುಣ, ಸ್ವಭಾವ ಇವೆಯೆಂದರೆ ತಪ್ಪಾಗಲಿಕ್ಕಿಲ್ಲ. ಉದಾಹರಣೆಗೆ ಈ ಕೆಳಗಿನ ಲೆಕ್ಕವನ್ನು ನೋಡಿರಿ. ಇದರಲ್ಲಿ ಎಲ್ಲ ಅಂಕಿಗಳೂ ಕೊನೆಗೆ ‘೯’ ಆಗಿ ಪರಿವರ್ತನೆ ಹೊಂದುವ ಮೋಜು ನೋಡಿರಿ.

ನಾಲ್ಕು ಅಂಕಿಗಳುಳ್ಳ, ಆದರೆ ಮೊದಲನೆಯದು ಅಥವಾ ಮೂರನೆಯದು, ಇಲ್ಲವೆ ಎರಡನೆಯದು ಅಥವಾ· ನಾಲ್ಕನೆಯದು ಒಂದೇ ಆಗಿರುವ ಒಂದು ಸಂಖ್ಯೆಯನ್ನು ತೆಗೆದುಕೊಳ್ಳಿರಿ. ೭೧೩೧

ಅದನ್ನೇ ತಿರುವು ಮುರುವು ಮಾಡಿಟ್ಟು ೧೩೧೭

ಎರಡರಲ್ಲಿ ಅಂತರ ತೆಗೆಯಿರಿ ೫೮೧೪

ಇದನ್ನೇ ಮತ್ತೆ ತಿರುವು ಮುರುವು ಮಾಡಿ ೪೧೮೫

ಎರಡನ್ನೂ ಕೂಡಿಸಿರಿ ೯೯೯೯

ಹೌದೇ?

೦ . ೦ ೦

ಶೂನ್ಯ (೦) ವನ್ನು ಶೂನ್ಯ (೦) ದಿಂದಭಾಗಿಸಿದರೆ ಬರುವಉತ್ತರವೂಶೂನ್ಯ (೦) ವೆಂಬುದನ್ನು ಗಣಿತದ ಅಲ್ಪಜ್ಞಾನವಿದ್ದವರೂ ಬಲ್ಲರು. ಆದರೆ ಶೂನ್ಯದಿಂದ ಶೂನ್ಯವನ್ನು ಭಾಗಿಸಿದರೆ ೧೦ ಎನ್ನುವ ಉತ್ತರ ಬರುವುದೆಂದರೆ ಗಣಿತದ ಮಾಟದಲ್ಲಿ ಅದು ಅಸಾಧ್ಯ ಎಂದು ಮಾತ್ರ ಹೇಳಲಿಕ್ಕಾಗದು. ಉದಾಹರಣೆಗೆ ಈ ಕೆಳಗಿನ ಬೀಜ ಗಣಿತದಲೆಕ್ಕವನ್ನು ನೋಡಿರಿ. ೨ಅರಲ್ಲಿ೨ಅನ್ನು ಕಳೆದರೆ(೦)ಉಳಿಯುತ್ತದೆ. ಅರಲ್ಲಿ ಅನ್ನು ಕಳೆದರೂ(೦)ಉಳಿಯುತ್ತದೆ. (೨ಅ-೨ಅ)ನ್ನು (ಅ-ಅ) ರಿಂದ ಭಾಗಿಸಿದರೆ ಉತ್ತರವು ೦ ಆಗಲೇಬೇಕಲ್ಲೇ?

$$\frac{(೨ಅ-೨ಅ)}{(ಅ-ಅ)} = ೦ \text{ ಹೇಗೆ?}$$

ಆದರೆ ಬೀಜ ಗಣಿತದಂತೆ ಲೆಕ್ಕ ಹೀಗಾಗುವದು:

$$\frac{(ಅ-ಅ)\ (ಅ+ಅ)}{(ಅ-ಅ)}$$

ಇದರಲ್ಲಿ (ಅ-ಅ)ನ್ನು(ಅ-ಅ) ಭಾಗಿಸುವುದರಿಂದ ಎರಡನ್ನೂ ಬಿಟ್ಟರೆ ಉಳಿದದ್ದು (ಅ+ಅ) ಅರ್ಥಾತ್ ೧೦

ಆದರೆ (೦)ವನ್ನು(೦)ದಿಂದ ಭಾಗಿಸಿದರೆ ೧೦ ಎಂದು ಯಾರೂ ಉತ್ತರ ಕೊಡಲಾರರು!

> ಮನಸ್ಸಿಗೆ ರಂಜನೆಯನ್ನಿತ್ತು ಬುದ್ಧಿಯನ್ನು ಹರಿತಗೊಳಿಸುವ ಅದ್ಭುತ ಶಕ್ತಿ ಗಣಿತದಲ್ಲಿದೆ. ಗಣಿತದ ಈ ಶಕ್ತಿಯನ್ನು ಕಂಡು ಕೌತುಕಪಟ್ಟು ಆನಂದಪಟ್ಟು ಉಲ್ಲಸಿತರಾದವರು, ಪಥಿಕ' ವಾಚಕರಲ್ಲಿ ಅನೇಕರಿದ್ದಾರೆ. ಅವರೆಲ್ಲ ದಯವಿಟ್ಟು ಈ ವಿಭಾಗಕ್ಕೆ ಸಹಕರಿಸಬೇಕು.

* * *

ನಗರ ವಾಸಿಗಳು ಹಳ್ಳಿಗರಿಗೆ ತಿಳಿಯದ ವಿಷಯಗಳೇ ಬಹಳವೆಂಬ ಹಾಗೂ ತಮಗೆ ತಿಳಿಯದ್ದು ಒಂದೂ ಇಲ್ಲ ಎನ್ನುವ ಜಂಭದಲ್ಲಿ ಹಳ್ಳಿಗರನ್ನು ಕಂಡು ನಗೆಯಾಡುವದುಂಟು. ಆದರೆ ಹಳ್ಳಿಯ ಹುಡುಗರೂ ತಿಳಿದ ಕೆಲವು ಲೆಕ್ಕಗಳು ಪಟ್ಟಣದವರನ್ನು ಹೇಗೆ [illegible]

[illegible]

೧ ರೂಪಾಯಿ ಇದ್ದಿದ್ದರೆ...?

ಇಬ್ಬರು ದರೋಡೆಖೋರರು ಅಡವಿಯಲ್ಲಿ ಹೊರಟಿದ್ದಾಗ ಓರ್ವ ಮಾರವಾಡಿಯು ಭೆಟ್ಟಿಯಾದನು. ಅವನಲ್ಲಿದ್ದುದನ್ನು ಕಸಿದುಕೊಳ್ಳಬೇಕೆಂಬ ಇಚ್ಛೆಯಿಂದ ದರೋಡೆಖೋರರಿಬ್ಬರೂ ಅವನ ಮೇಲೆ ಬಿದ್ದರು.

ಮಾರವಾಡಿಯೂ ಕಡಿಮೆಯವನಿದ್ದಿಲ್ಲ. ಸುಮಾರು ಒಂದು ತಾಸಿನ ವರೆಗೆ ಅವರೊಂದಿಗೆ ಹೋರಾಡಿದ. ಕೊನೆಗೆ ಒಬ್ಬನು ಮಾರವಾಡಿಯ ಕೈಗಳೆರಡನ್ನೂ ಭದ್ರವಾಗಿ ಹಿಡಿದುಕೊಂಡನು. ಮತ್ತೊಬ್ಬನು ಅವನ [illegible] ಮಾರವಾಡಿಯ [illegible] ಒಂದು [illegible] ಅವನನ್ನು ಕಂಡು ಅವನಿಗೆ [illegible] ಜೊತೆಗಾರ [illegible]

"[illegible] ! ಈ ಮಾರವಾಡಿ [illegible] [illegible] ಒಂದು [illegible] ಒಂದು ರೂಪಾಯಿ [illegible] ?"

ಶ್ರೀ ಲಕ್ಷ್ಮೀ ಭವನ

★

ಆಕಾಶ—ಗಂಗೆಯರು

— "ನಕ್ಷತ್ರ ವಿಹಾರಿ"

ಒಂದು ಅಬ್ಜ ಬೆಳಕಿನ ವರ್ಷಗಳ ದೂರದಲ್ಲಿ ಆಕಾಶ ಗಂಗೆ(The Milky Way=ನಕ್ಷತ್ರಮಂಡಲ ಮಾಲೆ) ಹರಿದಿರುವಳೆಂದರೆ ಸೋಜಿಗವಾದರೂ ಸತ್ಯವಿದೆ. ಎಷ್ಟು ದೂರದಲ್ಲಿ ಈ ಗಂಗೆಯ ಪಾತ್ರವೆಂಬುದನ್ನು ಲೆಕ್ಕ ಮಾಡುವುದು ಓದುಗರಿಗೇ ಇರಲಿ. ಬೆಳಕಿನ ವೇಗವು ಒಂದು ಸೆಕಂಡಿಗೆ ೧,೮೬,೦೦೦ ಮೈಲು ಎಂದಿಷ್ಟೇ ನಾನು ನೆನಪು ಮಾಡಿಕೊಡಬೇಕಾದದ್ದು.

ಅಮೇರಿಕೆಯ ಪಲೋಮಾರ್ ವೇಧಶಾಲೆಯಲ್ಲಿ ೨೦೦ ಇಂಚಿನ ದೂರದರ್ಶಕ ಯಂತ್ರವನ್ನು ಕೂಡ್ರಿಸಿದ ಮೇಲೆ ಆದಿ ಅಂತ್ಯವಿಲ್ಲದ ಆಕಾಶದಲ್ಲಿ ಇನ್ನಿಷ್ಟು ಅದ್ಭುತಗಳನ್ನು ಮನುಷ್ಯ ಕಂಡಿದ್ದಾನೆ. ನಮ್ಮ ಪೃಥ್ವಿಯ ಸುತ್ತ ಹಮ್ಮಿರುವಂಥ ಆಕಾಶ ಗಂಗೆಯರನೇಕರ ದರ್ಶನವು ಮನುಷ್ಯನಿಗಾಗಿದೆ.

ಎಂಡ್ರೋಮಿಡಾ ಎಂಬ ಹೆಸರಿನಿಂದ ಕರೆಯಲ್ಪಡುತ್ತಿರುವ ಆಕಾಶ ಗಂಗೆಯೇ ನಮಗೆ ಅತಿ ಸಮೀಪವಾದುದು. ಬರೀ ಕಣ್ಣಿಗೂ ಕಾಣುವ ಈ ನಕ್ಷತ್ರ ಮಂಡಲ ಮಾಲೆಯು ಏಳು ಲಕ್ಷ ಬೆಳಕಿನ ವರ್ಷಗಳ ದೂರದಲ್ಲಿದೆ. ಉಳಿದವು ದೂರ ದೂರ ಬಹು ದೂರವಿದ್ದು ಆಕಾಶದಲ್ಲಿ ಒಂದಿಷ್ಟು ಬಿಳಿಬಣ್ಣದ ಕಲೆಯಂತೆ ಕಾಣುತ್ತವೆ.

ಈ ನಕ್ಷತ್ರ ಮಂಡಲ ಮಾಲೆಗಳನ್ನು ನಾವು ಈಗಲೀಗ ಅರಿಯತೊಡಗಿರುವೆವಾದರೂ ನಮ್ಮ ಹಳೆಯಕಾಲದ ಗ್ರಹವಿಜ್ಞಾನಿಗಳು ಅವುಗಳ ಅಸ್ತಿತ್ವವನ್ನು ಅರಿತಿದ್ದರು. ಸ್ವೀಡನ್‌ಬರ್ಗ ಮತ್ತು ಕ್ಯಾಂಟರು, ಉಳಿದ ವಿಜ್ಞಾನಿಗಳು ನಕ್ಷತ್ರ ಮಂಡಲ ಮಾಲೆಗಳಿರುವುದನ್ನು ಅರಿಯುವ ಮೊದಲೇ, ಅಂಥ ಮಾಲೆಗಳು ಬಹುವಾಗಿ ಇರುವುದನ್ನು ಭವಿಷ್ಯವಾಡಿದ್ದರು.

ಫ್ರಾನ್ಸ ದೇಶದ ಗ್ರಹವಿಜ್ಞಾನಿ ಲ್ಯಾಕಾಯಿಲನು(Lacaille) ತಿಳಿಯಾದ ಬಾನನ್ನು ನೋಡಲೆಂದು ಕೇಪ್ ಆಫ್ ಗುಡ್ ಹೋಪಕ್ಕೆ ೧೭೫೦ ರಲ್ಲಿ ಹೋಗಿ ೧೭೫೪ರ ವರೆಗೆ ಅಲ್ಲಿಯೇ ನಿಂತನು. ಜಗತ್ತಿನಲ್ಲಿ ಮೊಟ್ಟ ಮೊದಲಬಾರಿ ಶಾಸ್ತ್ರೀಕ್ತವಾಗಿ ಆಕಾಶಗಂಗೆಯರ ಅಭ್ಯಾಸ ಮಾಡಿ ಅಂಥ ೪೨ ಗಂಗೆಯರನ್ನು ಕಂಡು ಮರಳಿದನು.

ಸ್ವಲ್ಪ ವರ್ಷಗಳ ನಂತರ ಪ್ಯಾರಿಸ ನಗರದಲ್ಲಿ ಚಾರ್ಲಸ್ ಮೆಸಾಯರ ಎಂಬ

ವರೂ ಇದೇ ಕೆಲಸವನ್ನು ಮುಂದುವರಿಸಿ [illegible] ರಹಸ್ಯವ್ಯಕ್ತಿಗೆ [illegible] ಆಕಾಶ ಗಂಗೆಯಿರುವರೆಂದು ಕಂಡರು. ಕೆಲವುಗಳನ್ನು ಅವರ [illegible] ಕರೆಯಲಾಗುತ್ತದೆ. ಉದಾಹರಣೆಗೆ [illegible] ಆಕಾಶ ಗಂಗೆಯನ್ನು [illegible] ಅಥವಾ [illegible] ಎಂದು ಕರೆಯಲಾಗುತ್ತದೆ.

[illegible]

ದಶಲಕ್ಷ ನಕ್ಷತ್ರ ಮಂಡಲ ಮಾಲೆಗಳು ಕಂಡಿವ್ಯು, ಪಲೋಮಾರ ವೇಧಶಾಲೆಯಲ್ಲಿ ಹಲವಾರು ಕೋಟಿ ಆಕಾಶ ಗಂಗೆಯರ ದರ್ಶನವಾಗಿದೆ.

ಒಂದು ಆಕಾಶಗಂಗೆ ಎಂದರೆ ಒಂದು ನಡುಗಡ್ಡೆ ಲೋಕ. ಆದರದು ಎಂಥ [illegible] ಎಂಬುದನ್ನು ತಿಳಿದುಕೊಳ್ಳುವುದು ಅಗತ್ಯ. ಈ ಬಗ್ಗೆ "ನೂರು ಅಬ್ಜ ನಕ್ಷತ್ರಗಳಿಂದ ಒಂದು ಆಕಾಶಗಂಗೆಯಾಗುತ್ತದೆ. ಅಂಥ ನೂರು ಅಬ್ಜ ಆಕಾಶಗಂಗೆಯಿಂದ ನಮ್ಮ ವಿಶ್ವವಾಗಿದೆ" ಎಂದು ಸರ್ ಆರ್ಥರ್ ಎಡಿಂಗ್ಟನ್ನರು [illegible] ವಿಶ್ವದ ವಿರಾಟ [illegible] ಅಸರೆ ಸಿಗ [illegible]

[illegible]

●

★ ಪಂಚ ದ್ರಾವಿಡ ಭಾಷೆಗಳಲ್ಲಿ
ಒಂದಾದರೂ ಅಷ್ಟು ಸುದಿಯಾಗಿ
ಉಳಿದಿರುವ ದಕ್ಷಿಣದ ಭಾಷೆ...

ತೆಂಕನಾಡಿನ ಭಾಷೆ

ತುಳುವೂ ಜೀವಂತ ಭಾಷೆಯಾಗಿದೆ

— ಪಡಾರು ಮಹಾಬಲೇಶ್ವರ ಭಟ್ಟ

ಪಂಚದ್ರಾವಿಡ ಭಾಷೆಗಳಲ್ಲಿ ತುಳು ಒಂದಾಗಿದೆ. ಆದರೆ ಇದಕ್ಕೆ ಕನ್ನಡ, ತೆಲುಗು, ಮಲೆಯಾಳಿ, ತಮಿಳಿಗಿರುವಂತೆ ಲಿಪಿ ಇರುವುದಿಲ್ಲ. ಜನರೇನೋ ಮಲೆಯಾಳ ಲಿಪಿಯನ್ನೇ ತುಳು ಲಿಪಿ ಎನ್ನುವುದಿದೆ. ಆದರೆ ಇದು ನಿರಾಧಾರ. ಹಿಂದೆ ಮಂತ್ರಮೂಲಿಕೆಗಳನ್ನೋ ಔಷಧಿ-ಜ್ಯೋತಿಷ್ಯವನ್ನೊ ಪ್ರಯೋಗಿಸುವವರು ಮಲಬಾರಿನಿಂದ ಕಲಿತು ಒರುತ್ತಿದ್ದುದರಿಂದ ಅದೇ ಲಿಪಿ ತುಳುನಾಡಲ್ಲೂ ಬಳಕೆಗೆ ಬಂದಿರಬೇಕು. ಅಂತೂ ತುಳುವಿಗೆ ಒಂದು ಸ್ವತಂತ್ರವಾದ ಲಿಪಿ ಇಲ್ಲ. ಅದರ ಬೆಳವಣಿಗೆ, ಸಂಸ್ಕಾರಗಳೆಲ್ಲವೂ ಕನ್ನಡದೊಂದಿಗೆ ನಡೆದು ಬಂದಿದೆ. ಇದರಿಂದ ತುಳು ನುಡಿಗೆ ಕನ್ನಡದ ಪ್ರಭಾವ ಬೀರುವುದು ಸಹಜ.

ತುಳುವಿಗೆ ಲಿಪಿ ಇಲ್ಲವಾದುದರಿಂದ, ಅದು ಓದಿಕಲಿಯುವ ಭಾಷೆಯಾಗಿರದೆ ಪಂಡಿತರ ನಿಯಮಕ್ಕೊಳಗಾಗದೆ ಕೇವಲ ಜನಸಾಮಾನ್ಯರ ಆಡುನುಡಿಯಾಗಿದೆ. ಅದರೂ ಅದಕ್ಕೊಂದು ಸ್ವತಂತ್ರವಾದ ವ್ಯಾಕರಣವಿದೆ. ನಾಮಪದ, ಕ್ರಿಯಾಪದಗಳಷ್ಟೆ ನಿಯಮ ಬದ್ಧವಾದವುಗಳು. ಇತರ ಭಾಷೆಗಳಲ್ಲಿರುವಂತೆ ವಿಭಕ್ತಿಗಳಿವೆ.

ಉದಾ:— ರಾಮು-ರಾಮೆ; ರಾಮಾ-ರಾಮಾ; ರಾಮನನ್ನು-ರಾಮೆನು; ರಾಮನಿಂದ-ರಾಮೆಡ್ದು; ರಾಮನಿಗೆ-ರಾಮೆಗ್; ರಾಮನದೆಸೆಯಿಂದ-ರಾಮಡ್ದು; ರಾಮನ-ರಾಮೆನ; ರಾಮನಲ್ಲಿ-ರಾಮೆಡ-ಹೀಗೆ ಬರುತ್ತವೆ.

ಸ್ತ್ರೀಲಿಂಗವಾದರೆ ಪ್ರಾಯೇಣ ಉಕಾರಾಂತವೂ, ನಪುಂಸಕಲಿಂಗವು ಪುಲ್ಲಿಂಗದಂತೆಯೂ ಇರುತ್ತವೆ. ವಚನಗಳು ಎರಡೇ ಇದ್ದು 'ಅವರು' ಎಂಬರ್ಥದಲ್ಲಿ "ಆಕಳು" ಎಂದು ಪ್ರಯೋಗಿಸಲ್ಪಡುತ್ತದೆ. ಕ್ರಿಯಾಪದ ರಚನೆಯಲ್ಲಿ ಧಾತುಗಳಿಗೆ "ಎ" ಪ್ರತ್ಯಯ ಪುಲ್ಲಿಂಗದ, "ಆಳು" ಸೇರಿಸಿದರೆ ಸ್ತ್ರೀಲಿಂಗದ, 'ಉಂಡು' ಸೇರಿಸಿದರೆ ನಪುಂಸಕ ಲಿಂಗದವುಗಳೂ ಆಗು

> ದಕ್ಷಿಣ ಕನ್ನಡ ಜಿಲ್ಲೆಯ [illegible] ಸ್ಕೂಲು ತರುಣ ಬರಹಗಾರರಾದ [illegible] ಹುವಿನ ಶ್ರೀ. ಮಹಾಬಲೇಶ್ವರ ಭಟ್ಟರು ದಕ್ಷಿಣ ಕನ್ನಡದಲ್ಲಿ ಕನ್ನಡದ ಸೋದರಿಯಾಗಿ ಸಹಜೀವನ ಸಾಗಿಸುತ್ತಿರುವ ತುಳು ಭಾಷೆಯ ಪರಿಚಯವನ್ನಿಲ್ಲಿ ಮಾಡಿಕೊಟ್ಟಿದ್ದಾರೆ. ಮುಂದಿನ ತಿಂಗಳು ಅವರು ತುಳುವಿನ ಪ್ರಸಿದ್ಧ ಹಾಡುಗಳಾದ [illegible] ಲೆಯ ಬಗ್ಗೆ ಬರೆಯುವರು.

ತ್ತವೆ. ಬಹುವಚನದಲ್ಲಿ "ಅರು" ಸೇರಿಸಿದರಾಯಿತು. ಹಾಗೆ ಮಧ್ಯಮ ಪುರುಷದಲ್ಲಿ "ಅಲ" ಏಕವಚನದಲ್ಲೂ "ಅರಿ" ಬಹುವಚನದಲ್ಲೂ ಉತ್ತಮ ಪುರುಷದಲ್ಲಿ "ಎ" ಏಕವಚನದಲ್ಲೂ "ಓ" ಬಹುವಚನದಲ್ಲೂ ಪ್ರಯೋಗಿಸಲ್ಪಡುತ್ತವೆ.

[illegible]

ಉಳಿದು ಕೊಂಡಿದೆ. ಆದರೆ ಅದರಲ್ಲಿ ಸಾಹಿತ್ಯದ ರಚನೆಯಾಗಿಲ್ಲವೆಂದು ತಿಳಿಯಬಾರದು. ಬೇಕೆಂಬಷ್ಟು ಆಗಿವೆ. ತುಳು ಕನ್ನಡದ ಪ್ರಭಾವ ಬಿದ್ದು ಬಹಳ ಪುಷ್ಟಿಯನ್ನು ಹೊಂದಿವೆಯೆನ್ನಬೇಕು.

ತುಳು ಆಡುವವರೂ ಜನರಲ್ಲವೆ? ಅವರಿಗೂ ಹೃದಯವಿಲ್ಲವೇ? ಅವರೂ ಜೀವನದ ಸೌಂದರ್ಯವನ್ನನುಭವಿಸುತ್ತಿಲ್ಲವೇ? ಅವರಿಗೂ ಜೀವನದ ಹೋರಾಟವಿದೆ, ಅನುಭವವಿದೆ; ವಿಚಾರಶಕ್ತಿ ಇದೆ. ಸಾಹಿತ್ಯಕ್ಕೆ ಇನ್ನೇನು ಬೇಕು? ವಿಚಾರಶಕ್ತಿ, ಭಾವ, ಅನುಭವ, ಇವುಗಳಿದ್ದರೆ ಸಾಹಿತ್ಯ ರಚನೆ ತನ್ನಿಂದ ತಾನೇ ಒಸರುತ್ತದೆ. ಇದು [illegible] ತಿಳಿಯಬೇಕು. [illegible] ಸಾಹಿತ್ಯವನ್ನು ರಚಿಸಿದ್ದಾರೆ. [illegible] ವೇದ ಮಂತ್ರ [illegible] ಬಾಯಿಗೆ ಹೇಗೆ [illegible]

[illegible]

★ ವಿಶ್ವ ವಿಖ್ಯಾತ ಲೇಖಕರೊಬ್ಬರ ಸಂಚಾರಿ ಜೀವನದ ಜ್ಞಾನ ಮತ್ತು ಅನುಭವಗಳ ಆಧಾರದಿಂದ...

ಸಹಜೀವನ

ಬದುಕಿನಲ್ಲಿ ನಾನು ಇದನ್ನು ನಂಬುವೆ

— ಕೆ. ಬಂಕಾಮಣಿ

ನಾನು ನಿಂತಿರುವ ಈ ನೆಲದ ಮೇಲಿರುವವರೆಲ್ಲರೂ ನನ್ನ ಅಣ್ಣ ತಮ್ಮಂದಿರು. ಇದೇ ನನ್ನ ತಿಳಿವಳಿಕೆ. ಅವರಿಗೂ ನನ್ನಂಥ ಆತ್ಮವಿದೆ. ಗೆಳೆತನದ ಒಲುಮೆ-ನಲುಮೆಗಳೂ ಇವೆ. ಬದುಕಿನ ಗೆಲುವು-ಒಲವುಗಳ ಬಗ್ಗೆ ಅವರಲ್ಲಿಯೂ ನನ್ನಲ್ಲಿರುವ ಅನಿಸಿಕೆಗಳಿವೆ. ಚೆಲುವನ್ನು ಅರಿಯುವ, ಸವಿಯುವ ಕುರಿತು ಅವರೂ ನಾನೂ ಒಂದೇ ತರವಾಗಿರುವೆವು. ಚೆಲುವನ್ನು ಅರಳಿಸುವುದರಲ್ಲಿ. ಒಲವನ್ನು ಬೆಳೆಸುವುವರಲ್ಲಿ, ನಲಿವನ್ನು ಹೆಚ್ಚಿಸುವುದರಲ್ಲಿ ನನ್ನ ಸಹಜೀವಿಗಳೆಲ್ಲರೂ ನನ್ನಂತಹವರು -ಎಂಬುದನ್ನು ಈ ಭೂಗೋಲದ ಬೇರೆ ಬೇರೆ ಭಾಗಗಳಲ್ಲೆಲ್ಲ ನಾನು ಹರಿಕಾರನಾಗಿ ಹೋಗಿ ಕಂಡುಕೊಂಡಿದ್ದೇನೆ. ಕಟ್ಟಡವಿಯಲ್ಲಿರುವ ಕಾಡು ಮನುಷ್ಯ, ನವನಗರದಲ್ಲಿರುವ ನಾಗರಿಕ ಸುಸಂಸ್ಕೃತ ಇವರೆಲ್ಲ ಒಡಹುಟ್ಟಿದವರು ಒಲುಮೆಯಿಂದ ನನ್ನನ್ನು ಕಂಡಿದ್ದಾರೆ. ಇನ್ನೂ ಶಿಲಾಯುಗದ ವಿಚಾರಗಳಲ್ಲಿರುವ ಮಾನವರ ಜೊತೆ ನಾನು ಬೆರೆತಿದ್ದೇನೆ. ನಾನು ಜಲಜನಕ ಬಾಂಬುಗಳ ಯುಗದವನು. ಆದರೆ ಅವರಿಗೂ ನನಗೂ ಒಂದೇ ಬಂಧುರ ಬೆಸುಗೆಯಿತ್ತು. ಆದ್ದರಿಂದ ನಮ್ಮ ಕೂಟವು ಸೊಗ ಸಂತಸಗಳ ಕೇಳಿಯಾಯಿತು.

ಅನೇಕ ಕಡೆಗಳಲ್ಲಿ ನನ್ನ ಅವರ ಆಚಾರ ವಿಚಾರಗಳು ಬೇರೆ ಬೇರೆಯಾಗಿದ್ದವು. ನಾಗರಿಕತೆ ಸಂಸ್ಕೃತಿಗಳೂ ಭಿನ್ನ ಭಿನ್ನವಾಗಿದ್ದವು. ಭಾಷೆಗಳ ಭೇದವು ಎದ್ದು ಕಾಣುತ್ತಿತ್ತು. ಅವರು ಮಾಂಸವನ್ನೇ ತಿನ್ನದವರು, ಕೆಲವೆಡೆ ಇದ್ದರು ಕೆಲವೆಡೆ ನಾಯಿಯ ಮಾಂಸ ತಿನ್ನುವವರೂ ಇದ್ದರು. ಅವೆಲ್ಲದಕ್ಕೂ ಬೇರೆಯಾಗಿದ್ದರೂ ನಾನೂ ಅವರ ಸಂಗಡಿಗನಾಗಿ ಸುಖದಿಂದಿದ್ದೆನು. ಅವರ-ನನ್ನೊಳಗಿನ ಅವೆಲ್ಲ ವಿಷಯಗಳು ನಮ್ಮ ನಮ್ಮಲ್ಲಿ ಮೈಗೂಡದಿದ್ದರೂ ಅವರ ನಮ್ಮ ಮನಗೂಡಿದ್ದವು. ಆ ಒಂದುಗೂಡಿದ ಮನವೇ

> ಇಂಗ್ಲಿಷ್ ಭಾಷೆಯ ಹೆಸರಾದ ಲೇಖಕರಾದ ಶ್ರೀ ಜೆ. ಬಿ. ಮಿಟಿಗೆನ್ ಅವರು "ರಿಲಿಜನ್ಸ್ ಸೊಸಾಯಿಟಿ ಆಫ್ ಫ್ರೆಂಡ್ಸ್" ಅದರ ಸದಸ್ಯರು. ಅವರು ಎಡ್‌ವರ್ಡ್ ಮರ‍್ರೋರವರ ಐದು ನಿಮಿಷಗಳ ಬಾನುಲಿ ಪ್ರಸಾರ ಮಾಲೆಯಲ್ಲಿ ಮಾಡಿದ ಭಾಷಣವೊಂದರ ಆಧಾರದ ಮೇಲೆ ಶ್ರೀ ಬಂಕಾಮಣಿಯವರು ಈ ಲೇಖನವನ್ನು ಬರೆದಿದ್ದಾರೆ.

ಮಾನವ ಬಾಂಧವ್ಯದಸೂತ್ರ. ಲೋಕದ ಬಹುಭಾಗದಲ್ಲಿಸಂಚರಿಸಿನನ್ನ ಒಡಹುಟ್ಟಿದ ವರೊಡನೆ [illegible]

[illegible]

ಇವೆಲ್ಲ ಕಲಿತಿದ್ದೇನೆ. ಲೋಕವಾದರೂ ಒಂದು ದಿನ ಹೀಗೆಯೇ ಕಲಿಯಬಹು ದೆಂದು ನೆರೆನಂಬಿದ್ದೇನೆ.

ದೂರದ ಆ ಗುಡ್ಡದೋರೆಯಲ್ಲಿ ಅದರ ಕಿಬ್ಬೆಟ್ಟದ ಕಿಬ್ಬದಿಯಲ್ಲಿ ನನ್ನ ಮನೆಯಿದೆ. [illegible] ಬಾನ ತಳದಲ್ಲಿ ಬೆಳ್ಮುಗಿಲ ಹರಿ ಗೋಲುಗಳು ಹಾಯುಬಿಡಿಸಿ ಅಲ್ಲಿ ಹರಿ ಯುತ್ತಿವೆ. [illegible] ದನಿ ಮಾಡಿ ಮೆಲ್ಲನೆ [illegible] ಹಸಿರೆಲೆ ಬಳ್ಳಿಗಳು ಹೊಸ [illegible] ಮೆರೆಯುತ್ತಿವೆ. ತುಂಬಿಗಳು [illegible] ಸಂತಸದಿಂದ

[[illegible]]

[illegible]

ಸತ್ಯ ವಿದ್ಯಾರಾಜ

[illegible]

ಶ್ರೀ ನೆಹರೂರವರು ಸಂತಸದಲ್ಲಿದ್ದಾಗ

ಭಾರತ-ರತ್ನ ಶ್ರೀ ನೆಹರೂರ ವರು ಸಂತಸದಲ್ಲಿದ್ದಾಗ ಮಗುವಿಗಿಂತಲೂ ಚಿಕ್ಕ ಮಗುವಿನಂತೆ ಆಗುತ್ತಾರೆಂಬುದು ಬಹಳ ಜನರಿಗೆ ಗೊತ್ತಿಲ್ಲ.

ಲಾಲಬಹದ್ದೂರರ ಬದಲು....!

ಕಳೆದ ತಿಂಗಳು ಗುಜರಾಥದ ಕಚ್ಛ ದೊಳಗೆ ಭೂಕಂಪವಾಯಿತು. ಅಲ್ಲಿಯ ಪರಿಸ್ಥಿಯನ್ನು ನೋಡಿಕೊಂಡು ಬರಲು ನೆಹರೂರವರು ಕಚ್ಛಕ್ಕೆ ಹೋದರು. ಜೀಪಿ ನಲ್ಲಿಹೊರಟಿರುವಾಗ ಅಪಘಾತ ಸಂಭವಿಸಿ ಜೀಪಿನೊಳಗೆ ಕುಳಿತವರೆಲ್ಲರೂ ಕೆಳಕ್ಕೆಸೆ ಯಲ್ಪಟ್ಟರು. ಅಂಥ ಸಮಯದಲ್ಲಿಯೂ ನೆಹರೂರವರು 'ಭೂಕಂಪದ ಧಕ್ಕೆಯು ನನಗೂ ಸ್ವಲ್ಪ ತಗುಲಿತು' ಎಂದು ನಗುತ್ತ ನುಡಿದರು

ಕಚ್ಛದಿಂದ ದಿಲ್ಲಿಗೆ ಮರಳಿದೊಡನೆ ತಮ್ಮನ್ನು ಸ್ವಾಗತಿಸಲು ವಿಮಾನ ನಿಲ್ದಾ ಣಕ್ಕೆ ಬಂದವರೆದುರು(ಅವರನ್ನು ಸ್ವಾಗತಿ ಸಲು ಗೋವಿಂದವಲ್ಲಭಪಂತ ಮೊದಲಾ ದವರು ಬಂದಿದ್ದರು)–"ಅಪಘಾತ ಸಮ ಯದಲ್ಲಿ ನನ್ನ ಮೇಲೆ ಲಾಲಬಹಾದ್ದೂರ ಶಾಸ್ತ್ರಿಗಳು ಬಿದ್ದರೆಂದೇ ಒಳಿತಾಯಿತು (ಏಕೆಂದರೆ ಅವರು ಬಡಕಲಾಗಿದ್ದಾರೆ) ಅವರ ಬದಲು ದಪ್ಪ ಗಾತ್ರದ ವ್ಯಕ್ತಿ ಬಿದ್ದಿ ದ್ದರೆ...." ಎಂದು ಶ್ರೀ ಪಂತರತ್ತ ನೋ ಡುತ್ತ ನುಡಿದು ಎಲ್ಲರನ್ನೂ ಹಾಸ್ಯದ ಕಡಲಲ್ಲಿ ತೇಲಿಸಿದರು.

ನಾನೂ ಒಬ್ಬ ನಟ

೧೯೫೮ರಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಅಧಿವೇಶನವು ಅಜಮೀರದಲ್ಲಿ ನಡೆಯಿತು. ಆಗ ಅಲ್ಲಿಯ ಮುಖ್ಯಮಂತ್ರಿಗಳಾದ ಶ್ರೀ ಹರಿಭಾವು ಉಪಾಧ್ಯಾಯರು ತಮ್ಮ ನಿವಾಸಸ್ಥಾನದಲ್ಲಿ ಒಂದು ಸಮಾರಂಭವನ್ನೇರ್ಪಡಿಸಿದ್ದರು. ಅದರಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಇರಿಸಲಾಗಿತ್ತು.

ವಿದ್ಯಾರ್ಥಿನಿಯರು [illegible] ರಂತೂ ತುಂಬಾ ಹರ್ಷಗೊಂಡರು. ಅಲ್ಲದೆ ಚಟಕ್ಕನೆ ಎದ್ದು ಹೋಗಿ ಹುಡುಗಿಯರ ಗುಂಪಿನೊಳಗೆ ಸೇರಿಕೊಂಡರು. ತಮಗೆ ಕುಣಿಯಬೇಕೆಂಬ ಸ್ಫೂರ್ತಿ ಬಂದಿದ್ದರೂ ಅವನ್ನು ತಡೆದುಕೊಂಡು—

"ನನಗೆ ಕುಣಿಯಲಿಕ್ಕೆ ಬರಬಹುದೆಂದು ನನಗೇನೂ ಅನಿಸುವದಿಲ್ಲ. ಇದನ್ನು ನನಗಾರೂ ಕಲಿಸಲೇ ಇಲ್ಲ. ಇಲ್ಲದಿದ್ದರೆ ನಾನು ಕೂಡ ಕುಣಿಯುತ್ತಿದ್ದೆ, ಹಾಡುತ್ತಿದ್ದೆ. ಆದರೆ ನಾನೊಬ್ಬ ಒಳ್ಳೆಯ ನಟನೆಂಬುದನ್ನು ನೀವು ಲಕ್ಷದಲ್ಲಿಡಿರಿ. ರಾಜಕಾರಣದಲ್ಲಿ ಅಭಿನಯಿಸದ ಹೊರತು ಇನ್ನೇನು ಮಾಡುವುದಿತ್ತು?" ಎಂದು ನುಡಿದು ಹಾಸ್ಯದ ಹೊನಲನ್ನು ಹರಿಸಿದರು.

ಫಾಯಿಟ್ ವಿಥ್ ದುಷ್ಯಂತ!

ಅದೇ ವರ್ಷದ (೧೯೫೮ರ) ಕೊನೆಗೆ ರಾಷ್ಟ್ರೀಯ ನಾಟ್ಯ ಮಹೋತ್ಸವ ಜರುಗಿದ್ದು ಎಲ್ಲರಿಗೂಗೊತ್ತಿದೆ. ಆಗ ಮುಂಬೈ ಬ್ರಾಹ್ಮಣ ಸಭೆಯವರು ಸಂಸ್ಕೃತ "ಶಾಕುಂತಲ''ವನ್ನು ಅಭಿನಯಿಸಿದರು. ಆ ನಾಟಕವು ನೆಹರೂರವರಿಗೆ ಬಹಳ ಹಿಡಿಸಿತು. ಅದರಲ್ಲಿ ಅಭಿನಯಿಸಿದವರಿಗೆಲ್ಲನೆಹರೂರವರು ಸ್ವಹಸ್ತದಿಂದ ಪುಷ್ಪಗಳನ್ನು ಅರ್ಪಿಸಿದರು.

ಆ ಸಮಯದಲ್ಲಿ ಶಕುಂತಲೆಯ ಪಾತ್ರ ವಹಿಸಿದ್ದ ಶಕುಂತಲಾ ಡೋಂಗರೆಯವರು ಬೇಗ ಮುಂದೆ ಬಾರದ್ದರಿಂದ ನೆಹರೂರವರು ಪುಷ್ಪಗಳನ್ನು ಕೈಯ್ಯಲ್ಲಿ ಹಿಡಿದುಕೊಂಡು—

''ಶಕುಂತಲಾ ಎಲ್ಲಿದ್ದಾಳೆ?'' ಎಂದು ಸುತ್ತಲೂ ಅವಳನ್ನು ಶೋಧಿಸತೊಡಗಿದರು. ಯಾರೋ ಒಬ್ಬರು ಹಾಸ್ಯಕ್ಕಾಗಿ "ದುಷ್ಯಂತ ವಿಲ್ ಫಾಯಿಟ್ ವಿಥ್ ಯು" (ದುಷ್ಯಂತನು ನಿನ್ನೊಂದಿಗೆ ಯುದ್ಧ ಮಾಡಬಹುದು) ಎಂದರು. ಆಗ ಮರುಕ್ಷಣವೇ ನೆಹರೂರವರು—

"ಆಲ್ ರಾಯಿಟ್. ಆಯ್ ಶಾಲ್ ಫಾಯಿಟ್ ವಿಥ್ ದುಷ್ಯಂತ" (ಸರಿ. ನಾನೂ ದುಷ್ಯಂತನೊಂದಿಗೆಯುದ್ಧ ಮಾಡುತ್ತೇನೆ) ಎನ್ನುತ್ತಲೆಎಲ್ಲರೂ ಬಿದ್ದು ಬಿದ್ದು ನಕ್ಕರು.

ರಾಯಭಾರಿಯೊಂದಿಗೆ ದ್ವಂದ್ವ!

ದುಷ್ಯಂತನನ್ನು ಯುದ್ಧಕ್ಕೆ ಆಹ್ವಾನಿಸಿದಶ್ರೀನೆಹರೂರವರುಒಂದು ಸಲಪ್ರತ್ಯಕ್ಷ ದ್ವಂದ್ವಕ್ಕೂ ಸಿದ್ಧರಾಗಿದ್ದರು. ಒಂದು ಸಮಾರಂಭದಲ್ಲಿ ಇಜಿಪ್ತದ ರಾಯಭಾರಿಗಳಾದ ಶ್ರೀ ಕಮಾಲರಿಗೆ ಭಾರತದಲ್ಲಿಯ ಖಡ್ಗಗಳ ದ್ವಂದ್ವವನ್ನು ನೋಡುವ ಅಭಿಲಾಷೆಯಾಯಿತು. ಅವರು ತಮ್ಮ ಮನದಿಚ್ಛೆಯನ್ನು ನೆಹರೂರವರಿಗೆ ತಿಳಿಸಿದರು. ಕೂಡಲೆ ಅವರು ಎರಡು ಬೆತ್ತಗಳನ್ನು ತರಿಸಿ ಒಂದನ್ನು ಕಮಾಲರಿಗೆ ಕೊಟ್ಟು ಇನ್ನೊಂದನ್ನು ತಾವು ತೆಗೆದುಕೊಂಡರು.

ಅನಂತರ ನೆಹರೂರವರು ಬೆತ್ತವನ್ನು ಖಡ್ಗ ಹಿಡಿದುಕೊಂಡು ನಿಲ್ಲುವ ಭಂಗಿಯಲ್ಲಿ ಹಿಡಿದುನಿಂತುಕೊಂಡು ಕಮಾಲರ ಬೆತ್ತಕ್ಕೆ ಸೋಂಕಿಸಿದರು. ಆದರೆಮುಂದೇನು ಮಾಡಬೇಕೆಂಬುದು ಕಮಾಲರಿಗೆ ಗೊತ್ತಿರದ ಮೂಲಕ ಮುಂದಿನ 'ತಾಲೀಮು' ಅಷ್ಟಕ್ಕೆ ನಿಂತುಬಿಟ್ಟಿತು. ಆಗ ನೆಹರೂರವರು ನಗುತ್ತ ನುಡಿದರು

"ಹ್ಹೆ! ನಿಮಗೆ ಬೆತ್ತವನ್ನು ಕೂಡ ತಿರುಗಿಸಲು ಬರುವದಿಲ್ಲವೆಂದಾಗ ಖಡ್ಗಗಳ ಸುದ್ದಿಯನ್ನೆತ್ತುವದರಲ್ಲಿ ಏನರ್ಥವಿದೆ?''



ಅನರ್ಥ-ಕೋಶ

ಸೇಂದಿ: ತಾಳೆಯ ಮರದಿಂದ ತೆಗೆದ ಅಮಲಿನ ಮದ್ಯ-ಸಕ್ಕರೆ ಹಾಕಿದ ಅಗಸ ರಂಗಡಿಯ ಸಾಬೂನಿನಂತೆ ಅದರ ರುಚಿ ಇರುತ್ತದೆ. —ಟೈಮ್ಸ್ ಮೆಗೆಝಿನ್

o o o

ಉಪದೇಶ: ಚಲಾವಣೆಯಲ್ಲಿರುವ ಅತ್ಯಂತ ಸಣ್ಣ ನಾಣ್ಯ.

o o o

ಅಗಣಿತ ಸಂಪತ್ತು: ಉತ್ಪನ್ನ-ಕರ ಶಾಖೆಯ ಜನರ ಕಿವಿಗೆ ಎಂದೂ ಬೀಳದ ಆ ಹೆಚ್ಚಿನ ಚುಟುಕು ಚೂರು.

o o o

ಪರಿಪೂರ್ಣತಾ ತಜ್ಞ:
ವ್ಯವಹಾರದಲ್ಲಿ ನಿಮಗೆ ಗೊತ್ತಿರುವುದಕ್ಕಿಂತ ಕಡಿಮೆ ಗೊತ್ತಿದ್ದು, ನಿಮ್ಮ ವ್ಯವಹಾರವನ್ನು ನೀವು ಹೇಗೆ ನಡೆಸಬೇಕೆಂದು ನಿಮಗೇ (ಸಲಹೆ) ಹೇಳುತ್ತ' ಅವನು ಹೇಳಿದಂತೆ ನಡೆಯದೆ ನೀವು ಸರಿಯಾಗಿಯೇ ನಡೆದಿದ್ದರೂ, ನಿಮ್ಮ ವ್ಯವಹಾರದಲ್ಲಿ ನಿಮಗೆ ಎಂದೂ ಗಳಿಕೆಯಾಗುವುದಕ್ಕಿಂತ ಹೆಚ್ಚಾಗಿಯೇ ಪಡೆಯುವ ಒಬ್ಬ ಆಸಾಮಿ.

ತಜ್ಞ: ಪ್ರಭಾವ ಬೀರುವ ರೀತಿಯಲ್ಲಿ ಯಾವುದೊ ಸರಳ ವಿಷಯವನ್ನು ತೊಡಕಿನದಾಗಿಸುವ ಕಲೆಯನ್ನು ಬಲ್ಲ ಓರ್ವ ವ್ಯಕ್ತಿ.

ಸುಧಾರಕ: ತನ್ನ ಸದಸದ್ವಿವೇಕವು ನಿಮ್ಮ ದಾರಿಯ ಬೆಳಕು ಎಂದು ಹಟದಿಂದ ಹೇಳುವವನು.

ಕಾರಕೂನ: ತೀರ ಸ್ವಲ್ಪದರ ಬಗ್ಗೆ ಬಹಳ ಗೊತ್ತಿರುವ, ಸ್ವಲ್ಪದರ ಬಗ್ಗೆ ಬಹಳ ಬಹಳ ಗೊತ್ತುಮಾಡಿಕೊಳ್ಳುತ್ತ ಅಂತ್ಯದಲ್ಲಿ ಪ್ರಾಯಶಃ ಶೂನ್ಯದ ಬಗ್ಗೆ ಎಲ್ಲವನ್ನೂ ಗೊತ್ತುಮಾಡಿಕೊಳ್ಳುವ ವ್ಯಕ್ತಿ.

ವ್ಯವಸ್ಥಾಪಕ: ಬಹಳದರ ಬಗ್ಗೆ ತೀರ ಸ್ವಲ್ಪ ಗೊತ್ತಿರುವ, ಬಹಳ ಬಹಳದರ ಬಗ್ಗೆ ಸ್ವಲ್ಪ ಸ್ವಲ್ಪವನ್ನು ಗೊತ್ತುಮಾಡಿಕೊಳ್ಳುತ್ತ, ಅಂತ್ಯದಲ್ಲಿ ಎಲ್ಲದರ ಬಗ್ಗೆ ಪ್ರಾಯಶಃ ಶೂನ್ಯವನ್ನು ಗೊತ್ತುಮಾಡಿಕೊಳ್ಳುವಾತ.

ಮದುವೆ: ಹೆಂಡತಿಗೆ ಎಂಥ ಗಂಡು ಸೇರಿಕೆಯಾಗುವದೆನ್ನುವದನ್ನು ಗಂಡು ಕಂಡುಹಿಡಿಯುವ ಒಂದು ವಿಧಾನ.

ಹಳೆ ಮನುಷ್ಯ: ಕಾದಂಬರಿಯಲ್ಲಿ ನಾಯಕನು ನಾಯಕಿಯನ್ನು ಕೊನೆಯ ಪುಟದ ವರೆಗೂ ಮುದ್ದಿಸಲಿಲ್ಲವೆಂದು ನೆನಪಿನಿಂದ ಹೇಳಬಲ್ಲವನು.

ಕಾಲುನಡಿಗೆಯುವ: ಒಬ್ಬ ಪತ್ನಿ, ಇಬ್ಬರು ಪುತ್ರರು, ಮೂವರು ಪುತ್ರಿಯರು ಹಾಗೂ ಒಂದೇ ಮೋಟರು ಕಾರುಳ್ಳ ಗಂಡು.

●

ಬದುಕಿನಲ್ಲಿ ನಾನು ಇದನ್ನು ನಂಬುವೆ

[illegible]

ಕರ್ಮಯೋಗಿಗಳಿದ್ದಾರೆ, ಬಟ್ಟೆ ನೇಯುವ ನೇಕಾರರಿದ್ದಾರೆ. ಬುಟ್ಟಿ ಚಾಪೆ ಹೆಣೆಯುವವರಿದ್ದಾರೆ. ಒಟ್ಟಿನಲ್ಲಿ ಬದುಕಿನ ಸೊಗಕ್ಕೆ ಬೇಕಾದುದೆಲ್ಲ ಒದಗಿಸುವವರಿದ್ದಾರೆ. ಆ ನನ್ನ ಮನೆಗೆ ಬನ್ನಿ, ಅಲ್ಲಿ [illegible] ಭಯವಿಲ್ಲ. ಆಫ್ರಿಕದ [illegible] ಬರಲಿ, ಚೀನಾ ಮೊಂಗೋ[illegible] ಬರಲಿ, [illegible] ಬರಲಿ, ರಶಿಯಾ[illegible] ಬರಲಿ, [illegible] ಬರಲಿ, [illegible] ಬದುಕಿನ [illegible]

[illegible]

ಮಿಠಾಯಿ

[illegible]

×× ದೊಡ್ಡವರಾಗಿ ತೋರಿಸಿಕೊಳ್ಳುತ್ತ ಯಾರಿಗೆ ಟೊಪ್ಪಿಗೆ ಹಾಕಬೇಕು ಎಂದು ಸದಾ ಯೋಚಿಸುವ ಪ್ರಪಂಚದ...

ಒಬ್ಬ ಸಭ್ಯ ಗೃಹಸ್ಥ!

— ಎಸ್. ಡಿ. ಸಿಂಧೆ

ಪುಣೆ–ಬೆಂಗಳೂರು ಎಕ್ಸಪ್ರೆಸ್ ಗಾಡಿ ಸರಿಯಾಗಿ ಮುಂಜಾನೆ ಏಳು ಘಂಟೆಗೆ ಬೆಳಗಾಂವ ನಿಲ್ದಾಣ ತಲುಪಿತು. ಒಮ್ಮೆಲೇ ಅನೇಕ ಪ್ರವಾಸಿಕರು ಗಾಡಿಯುಳಿದು ಹೋಗಹತ್ತಿದರು. ಎರಡನೇ ವರ್ಗದ ಡಬ್ಬಿಯಿಂದ ಸಭ್ಯಗೃಹಸ್ಥರೊಬ್ಬರು ನಿಧಾನವಾಗಿ ಡಬ್ಬಿಯಿಂದ ಕೆಳಗಿಳಿಯುತ್ತಿರುವುದು ಟಿಕೆಟ್ ಕಲೆಕ್ಟರರಿಗೆ ಗೋಚರಿಸಿತು. ಅವರು ಅಲ್ಲಿಗೆ ಬಂದು "ರಾಯರೇ, ನಿಮ್ಮ ಟಿಕೆಟ್ ಎಲ್ಲಿ ?" ಅಂದರು.

"ಓಹೋ, ಟಿಕೆಟ್ ಈಗ ತೋರಿಸುತ್ತೇನೆ. ಈ ಸಾಮಾನುಗಳನ್ನು ಸ್ವಲ್ಪ ನೋಡಿಕೊಳ್ಳಿ. ಈಗ ಹಮಾಲನನ್ನು ಕರೆತರುತ್ತೇನೆ". ಎಂದು ಸಭ್ಯಗೃಹಸ್ಥರು ಅವಸರದಿಂದ ಹೋಗಿ ಬರುವಾಗ ಹಮಾಲನನ್ನು ಕರೆತಂದರು.

ಸಭ್ಯ ಗೃಹಸ್ಥರ ಉಡುಪು ತೊಡಪುಗಳೆಲ್ಲವೂ ಆಧುನಿಕ, ಅವರ ಗಂಭೀರ ಮುಖ ಮುದ್ರೆ ಹಾಗೂ ತೇಜಃಪುಂಜವಾದ ನೇತ್ರಗಳು ಅವರ "ಸಭ್ಯತನಕ್ಕೆ" ಇನ್ನಷ್ಟು ಮೆರಗು ಕೊಡುತ್ತಿದ್ದವು. ಹೀಗಾಗಿ ಟಿಕೆಟ್ ಕಲೆಕ್ಟರನು ಅವರ ಸಾಮಾನು ಕಾಯುವ ಹೊಣೆ ಹೊರಬೇಕಾಯಿತು.

ಸಭ್ಯಗೃಹಸ್ಥರು ಎರಡು ಮೂರು ಸಾರೆ ಹಮಾಲನ ಮೇಲೆ ತಮ್ಮ ಸಾಮಾನುಗಳನ್ನು ಹೇರಿಕೊಂಡು ನಿಲ್ದಾಣದ ಹೊರಗೆ ಇಟ್ಟು ಬಂದರು. ನಾಲ್ಕನೇ ಸಾರೆ ಪುನಃ ಪ್ಲಾಟ ಫಾರ್ಮಿನ ಮೇಲೆ ಬಂದು 'ಮಿಸ್ಟರ ನಿಮಗೆ ಥ್ಯಾಂಕ್ಸ' ಎಂದು ಟಿಕೆಟ್ ಕಲೆಕ್ಟರರಿಗೆ ಹೇಳಿದರು. ಅವರ ಮೇಲೆಯೇ ದೃಷ್ಟಿ ಇಟ್ಟಿದ್ದ ಟಿಕೆಟ್ ಕಲೆಕ್ಟರ 'ಏನು ರಾಯರೇ ನಿಮ್ಮ ಟಿಕೆಟ್ ಕೊಡಿರಿ.' ಎಂದರು.

"ಏನು ಟಿಕೆಟ್?" ಎಂದು ಅಲ್ಲಿ ಇಲ್ಲಿ ಜೇಬಿನಲ್ಲಿ ಹುಡುಕಾಡಿದಂತೆ ಮಾಡಿದರು. ಓಹೋ, ನಿಮ್ಮ ಕಡೆಗೆ ಮೊದಲೇ ಕೊಟ್ಟುಬಿಟ್ಟಿದ್ದೇನೆ. ಹೀಗೇಕೆ ನನ್ನನ್ನು ಅವಮಾನಗೊಳಿಸುವಿರಿ"? ಎನ್ನುತ್ತ ಒಮ್ಮೆಲೇ ಸಭ್ಯ ಗೃಹಸ್ಥರು ಗರ್ಜಿಸಿದರು

> ಒಂದು ಕಣ್ಣಿಗೆ ಸುಣ್ಣ ಮತ್ತೊಂದು ಕಣ್ಣಿಗೆ ಬೆಣ್ಣೆ ಹಾಕುತ್ತ ವಂಚಿಸುವುದನ್ನೇ ಉಪಜೀವನದ ವೃತ್ತಿಯನ್ನಾಗಿ ಮಾಡಿಕೊಂಡ ಆಷಾಢಭೂತಿಗಳು ಪ್ರಪಂಚದಲ್ಲಿ ಸಾಕಷ್ಟಿದ್ದಾರೆ. ಅವರು ಮಾಡುವ "೪೨೦" ಕೃತಿಗಳನ್ನು ಕಂಡು ಕೇಳಿ ಅನುಭವಿಸಿದವರೂ ಇದ್ದಾರೆ. ಶ್ರೀ ಶಿಂಧೆಯವರು ಈಗಿನ ಅಂಥದೊಂದು ಅನುಭವವನ್ನಿಲ್ಲಿ ನಿರೂಪಿಸಿದ್ದಾರೆ. ಈ ವಿಭಾಗಕ್ಕೆ ಓದುಗರು ಸಹಕರಿಸಬೇಕು.

ಟಿಕೆಟ ಕಲೆಕ್ಟರ ಗಾಬರಿಯಾದ ನೇನೋ ನಿಜ. ಆದರೆ "ನೀವು ಟಿಕೆಟ್ಟು ಕೊಟ್ಟಿಲ್ಲ. ಕೊಟ್ಟು ಮುಂದೆ ಹೋಗಿರಿ" ಎಂದು ತನ್ನ ಅಧಿಕಾರಯುತ ವಾಣಿಯಿಂದ ಮೆಲ್ಲಗೇ ನುಡಿದನು.

ಸಭ್ಯ ಗೃಹಸ್ಥರ ಬಣ್ಣವೇ ಬದಲಾಯಿತು. [illegible]

[illegible]

ಒಮ್ಮಿಂದೊಮ್ಮೆಲೇ ಗೃಹಸ್ಥರು ತಮ್ಮ ಜೇಬಿನೊಳಗಿನ ಡಾಯರಿ ತೆಗೆದು-ಯಾವದೋ ಒಂದು ಪಾನು ತೋರಿಸಿದರು.

"ಇದೋ ನೋಡಿರಿ. ಈ ನಂಬರಿನ ಟಿಕೆಟ್ ನಿಮ್ಮ ಕಡೆಗೆ ಕೊಟ್ಟಿದ್ದೇನೆ. ನಿಮ್ಮ ಕೈಯಲ್ಲಿರುವ ಟಿಕೆಟ್ ತಪಾಸ ಮಾಡಿ ನೋಡಿರಿ" ಎಂದು ಅಟ್ಟಹಾಸದ ಧ್ವನಿಯಲ್ಲಿ ಸಭ್ಯಗೃಹಸ್ಥರು ನುಡಿದರು.

ಟಿಕೆಟ್ ಕಲೆಕ್ಟರ ಟಿಕೆಟ್ಟುಗಳನ್ನು [illegible]

[illegible]

[illegible]

★ ಬೆಲೆಯು ಭಾರವಾಗಿ ಬಡವರನ್ನು ಅನೀತಿಯ ಅಪ್ರಮಾಣಿಕ ನಡತೆಗೆ ಎಳೆಯುವ ತಾಂಡವ ನಡೆಸಿದ್ದ...

ಒಂದು ಮಹಾಸನ್ನಿವೇಶ

ಅಂಚೆಯ ತಿಕೀಟುಗಳು ಅಗ್ಗವಾದುದು ಎಂತು

—ಕೆ. ಎಂ. ಜಕ್ಕರಡ್ಡಿ

ಮುಕ್ಕಾಲಾಣೆಯಲ್ಲಿ (ಮೂರು ದುಡ್ಡಿನಲ್ಲಿ) ಒಂದು ಓಲೆಯು ಇಂದು ಭಾರತದ ಒಂದು ತುದಿಯಿಂದ ಇನ್ನೊಂದು ತುದಿಯ ವರೆಗೆ ಸಂದೇಶವನ್ನು ಹೊತ್ತುಕೊಂಡು ಹೋಗುತ್ತದೆ. ಮುಂದುವರಿದ ಇಂದಿನ ಜಗತ್ತಿನಲ್ಲಿ ಕಾರ್ಡಿನ ಇಲ್ಲವೆ ಲಕೋಟಿಯ ಸೋಯಿಸ್ಕರವಾದ ಬೆಲೆಯು ಬಡವನಿಗೂ ಭಾರವಾಗದಷ್ಟಿದೆಯೆಂಬುದನ್ನು ಎಲ್ಲರೂ ನೋಡುತ್ತಿದ್ದೇವೆ. ಆದರೆ ಅಂಚೆಯ ದರವು ಇಷ್ಟೊಂದು ಕಡಿಮೆಯಾಯಿತೆಂಬುದು ಮಾತ್ರ ಒಂದು ವಿಚಿತ್ರ ಕತೆಯೇ ಆಗಿದೆ.

ಸುಮಾರು ೧೫೦ ವರ್ಷಗಳ ಹಿಂದಿನ ಮಾತು. ಲೇಕ ಜಿಲ್ಲೆಯಲ್ಲಿನ ಕೆಂಬರ್ಲ್ಯಾಂಡ್‌ದಲ್ಲಿ ರೋಲಂಡ ಹಿಲ್‌ನೆಂಬ ಗೃಹಸ್ಥನೊಬ್ಬನಿದ್ದನು. ಒಂದು ಸಲ ಅವನು ಪ್ರವಾಸ ಮಾಡುತ್ತಿದ್ದಾಗ, ಓರ್ವ ಅಂಚೆಯುವನು ಕಣ್ಣಿಗೆ ಬಿದ್ದನು. ಪತ್ರಗಳನ್ನು ಹಂಚಲು ಬಂದ ಆ ಅಂಚೆಯವನು ಲಕ್ಕೋಟಿಯೊಂದನ್ನು ಹಿಡಿದುಕೊಂಡು ಒಂದು ಚಿಕ್ಕ ಮನೆಯ ಎದುರು ನಿಂತುಕೊಂಡಿದ್ದನು.

ಮನೆಯೊಳಗಿಂದ ಹೊರಬಂದ ತರುಣಿಯು ಆ ಲಕ್ಕೋಟಿಯನ್ನು ಇಸಿದುಕೊಂಡು ಮೇಲೆ ಕೆಳಗೆ ಚನ್ನಾಗಿ ದಿಟ್ಟಿಸಿ ನೋಡಿ ಅಂಚೆಯವನಿಗೆ ಮರಳಿಕೊಟ್ಟಳು. ಅದನ್ನು ತೆಗೆದುಕೊಂಡಿದ್ದರೆ ಅವನಿಗೆ ಶಿಲಿಂಗ್ ನಾಣ್ಯವನ್ನು ಕೊಡಬೇಕಾಗಿತ್ತು. ಹೊಟ್ಟೆಗೇ ಸಾಲದಿರುವಾಗ ಲಕ್ಕೋಟಿಗಾಗಿ ಒಂದು ಶಿಲಿಂಗ್ (ಹನ್ನೆರಡಾಣೆ) ತೆರುವದು ಅವಳಿಂದ ಸಾಧ್ಯವಿರಲಿಲ್ಲ. ಅದಕ್ಕೆಂದೇ ಅವಳು ಅದನ್ನು ತಿರುಗಿಕೊಟ್ಟಳು.

ಇದೆಲ್ಲವನ್ನು ದೂರದಲ್ಲಿ ನಿಂತು ನೋಡುತ್ತಿದ್ದ ರೋಲಂಡನಿಗೆ ಆ ಮುಗ್ಧೆಯ ಬಗ್ಗೆ ಕನಿಕರ ಹುಟ್ಟಿ ಅಂಚೆಯವನಿಗೆ ತಾನೇ ಒಂದು ಶಿಲಿಂಗ್ ಕೊಟ್ಟು ಲಕ್ಕೋಟಿಯನ್ನು ಕೊಡಿಸಿದನು. ಹಣ ದೊರೆತೊಡನೆ ಅಂಚೆಯವನು ಹೋಗಿಬಿಟ್ಟನು. ಆಗ ಅವಳು—

ಅನೀತಿಯು ತಿರುಗುಬಾಣಿಯಲ್ಲಿ [illegible]

"ನೀವು ಸುಮ್ಮನೆ ಒಂದು ಶಿಲಿಂಗ್ [illegible]

[illegible]

ಇದೆ. ನೀವು ಸುಮ್ಮನೆ ಒಂದು ಶಿಲಿಂಗ್ ಹಾಳು ಮಾಡಿದಿರಿ" ಎಂದು ಲಕ್ಕೋಟೆಯನ್ನೊಡೆದು ತೋರಿಸಿದಳು. ನಿಜಕ್ಕೂ ಅದರಲ್ಲಿ ಬಿಳಿಹಾಳೆಯಿದ್ದಿತು.

ಅದನ್ನು ಕಂಡು ರೋಲಂಡ ಹಿಲ್ಲನಿಗೆ ಕೆಡಕೆನಿಸಿತು. ಬಡತನವು ಮನುಷ್ಯನಿಗೆ ಎಂಥ ಮೋಸಕಾರ್ಯವನ್ನು ಮಾಡಲಿಕ್ಕೆ ಹಚ್ಚುತ್ತದೆ ಎಂದು ಭಾವಿಸಿ ಅಂಚೆಯ ದರವು ಕಡಿಮೆಯಾಗಬೇಕು, ಇದರಿಂದ ಸರಕಾರಕ್ಕೂ ಲಾಭವಿದೆ ಎಂದು ಚಳುವಳಿ ಹೂಡಿದನು. ಅದರ ಫಲವಾಗಿ ಅಗ್ಗದ ಅಂಚೆ ಚೀಟಿಗಳು ಬ್ರಿಟಿಶ ಸರಕಾರದವರಿಂದ [illegible]

[illegible]

★ ಭಾರತದಲ್ಲಿ ಬೆಳೆಯುತ್ತಲೇ ನಡೆದ ನಿರುದ್ಯೋಗಿಗಳ ಸಂಖ್ಯೆ ಇಳಿಸಲು ಯೋಜಿತವಾಗಿರುವ

ದ್ವಿತೀಯ ಯೋಜನೆಯಲ್ಲಿ ಉದ್ಯೋಗಾವಕಾಶ

— ಎಸ್. ಎಸ್. ಚಂದ್ರಶೇಖರಮಠ, ಎಂ. ಎ.

ಭಾರತವಿಂದು ಎದುರಿಸುತ್ತಿರುವ ಅನೇಕ ಆಂತರಿಕ ಸಮಸ್ಯೆಗಳಲ್ಲಿ ನಿರುದ್ಯೋಗ ನಿವಾರಣೆಯ ಸಮಸ್ಯೆ ಹೆಚ್ಚು ಮಹತ್ವದ್ದಾಗಿದೆ. ಸದ್ಯಕ್ಕೆ ೨೦ ಲಕ್ಷ ಜನ ನಿರುದ್ಯೋಗಿಗಳೂ ಕೈತುಂಬ ಉದ್ಯೋಗವಿಲ್ಲದವರೂ ಇದ್ದಾರೆ. ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ಅನೇಕ ಅಭಿವೃದ್ಧಿ ಯೋಜನೆಗಳನ್ನು ಕೈಕೊಂಡಾಗಲೂ ಕೂಡ ನಿರುದ್ಯೋಗಿಗಳ ಸಂಖ್ಯೆ ಬೆಳೆಯುತ್ತಲೇ ಬಂದಿದೆ. ಪ್ರತಿವರುಷ ೧೮ ಲಕ್ಷ ಕೆಲಸಗಾರರು ಹೆಚ್ಚಾಗುತ್ತಾರೆ. ಇನ್ನೂ ಸಾಕಷ್ಟು ಅಭಿವೃದ್ಧಿ ಹೊಂದದಿರುವ ಭಾರತದಲ್ಲಿ ದಿನೇ ದಿನೇ ಹೆಚ್ಚುತ್ತಿರುವ ನಿರುದ್ಯೋಗಿಗಳ ಸಮಸ್ಯೆಯು ಅತಿ ಗಡುಚಾದ ಪ್ರಶ್ನೆಯಾಗಿ ಪರಿಣಮಿಸಿದೆ. ಅದರ ತೀವ್ರತೆಯನ್ನರಿತೇ ರಾಷ್ಟ್ರದ ಯೋಜಕರು ಮತ್ತು ತಜ್ಞರು ದೀರ್ಘವಾದ ವಿಚಾರ ವಿನಿಮಯದ ನಂತರ ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ನಿರುದ್ಯೋಗ ಪ್ರಶ್ನೆಯನ್ನು ಧೈರ್ಯದಿಂದ ಎದುರಿಸುವ ಸಾಹಸಮಾಡಿದ್ದಾರೆ.

ಸ್ವರೂಪ ವೈವಿಧ್ಯ

ದೇಶದ ನಿರುದ್ಯೋಗ ಸಮಸ್ಯೆಯ ಮೂಲವನ್ನು ಪೃಥಃಕರಿಸುತ್ತ ಹೋದಂತೆ ಅದರ ವಿವಿಧ ಸ್ವರೂಪಗಳ ಜೊತೆಗೆ ಅದರ ಕಾರಣಗಳೂ ಹೊರಬೀಳುತ್ತವೆ. ನಿರುದ್ಯೋಗಿಗಳ ಸಂಖ್ಯೆ ಇಂದು ಹೆಚ್ಚುತ್ತಿರುವ ಮುಖ್ಯ ಕಾರಣಗಳಲ್ಲಿ ಜನಸಂಖ್ಯೆ ಮಿತಿಮೀರಿ ಬೆಳೆಯುತ್ತಿರುವುದೂ ಒಂದಾಗಿದೆ. ಜನಸಂಖ್ಯೆಯ ಹೆಚ್ಚಳದೊಂದಿಗೆ ಸಾಗುವಳಿ ಭೂಮಿಯ ಮೇಲಿನ ಒತ್ತಡ ಹೆಚ್ಚಾಗಿ, ಹಿಡುವಳಿಗಳು ಸಣ್ಣವಾಗಿ, ನಿರುದ್ಯೋಗಿಗಳಾದ ಹಳ್ಳಿಗರು ಕೆಲಸ ಹುಡುಕುತ್ತ ಪಟ್ಟಣಗಳಿಗೆ ಬರುತ್ತಿದ್ದಾರೆ. ಸಾಕಷ್ಟು ಔದ್ಯೋಗೀಕರಣ ಸಾಧಿಸದಿರುವ ಪಟ್ಟಣವು ಅವರ್ಲ್ಲೆಗೂ ಉದ್ಯೋಗವನ್ನೊದಗಿಸುವುದು ಅಸಾಧ್ಯವಾಗಿದೆ.

ಒಕ್ಕಲತನದಲ್ಲಿ ತೊಡಗಿದವರಿಗಾದರೂ ವರುಷದಲ್ಲಿ ಪೂರ್ಣ ಕೆಲಸವಿರುವುದಿಲ್ಲ.

ಆರ್ಥಿಕ ವಿಷಯಗಳನ್ನು ಆಸ್ಥೆಯಿಂದ ಅಭ್ಯಸಿಸುವ ತರುಣ ಪತ್ರಿಕೋದ್ಯಮಿ ಶ್ರೀ. ಚಂದ್ರಶೇಖರಮಠರು 'ಪಥಿಕ' ವಾಚಕರಿಗೆ ಈಗಾಗಲೇ ಪರಿಚಿತರು. ಈ ಸಲ ಅವರು ನಮ್ಮ ನಿರುದ್ಯೋಗ ಸಮಸ್ಯೆಯನ್ನು ಬಿಡಿಸಲು ನಡೆದಿರುವ ಪ್ರಯತ್ನವನ್ನು ವಿವೇಚಿಸಿದ್ದಾರೆ.

ಪ್ರತಿವರುಷ ಎರಡರಿಂದ ಆರು ತಿಂಗಳ ವರೆಗೆ ನಿರುದ್ಯೋಗಿಗಳಾಗಿ ಉಳಿಯುತ್ತಾರೆ. ಈ ತರದ ಋತುಮಾನದ ನಿರುದ್ಯೋಗವು (Seasonal Unemployment) ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ಪ್ರಮಾಣದಲ್ಲಿರುತ್ತದೆ. ಪಶ್ಚಿಮ ಬಂಗಾಲದಲ್ಲಿ [illegible]

[illegible]

ರುವ ನಿರುದ್ಯೋಗ ಸಮಸ್ಯೆಯ ಬೃಹದ್ರೂಪವನ್ನು ಗಮನಿಸಿ ಯೋಜನಾ ಆಯೋಗವು ಇಂದಿಗೆ ಸುಮಾರು ಒಂದು ವರುಷದ ಹಿಂದೆ ಒಂದು ಅಭ್ಯಾಸ ಮಂಡಳವನ್ನು ನೇಮಿಸಿತು. ಅದು ಮಾಟ್ರಿಕ್ಯುಲೇಶನ್ ಮಟ್ಟವನ್ನು ಪ್ರಮಾಣವಾಗಿಟ್ಟುಕೊಂಡು ದೇಶದಲ್ಲಿ ಒಟ್ಟು ೫.೫ ಲಕ್ಷ ಜನ ಕಲಿತ ನಿರುದ್ಯೋಗಿಗಳಿರುವರೆಂದೂ ಮುಂದಿನ ಐದು ವರುಷಗಳಲ್ಲಿ ಮತ್ತೆ [illegible] ಲಕ್ಷ ನಿರುದ್ಯೋಗಿ ಕಲಿತವರು [illegible] ಅಂದಾಜು ಮಾಡಿತು.

[illegible]

[illegible]

ಯೋಜನಾವಧಿಯಲ್ಲಿ ೧೦೦ ರಿಂದ ೧೫೦ ಲಕ್ಷ ಜನರಿಗೆ ಉದ್ಯೋಗವೊದಗಿಸುವುದ ಗತ್ಯವೆಂಬ ನಿರ್ಧಾರಕ್ಕೆ ಬಂದಿದೆ; ಸಮಸ್ಯೆಯ ವಿವಿಧ ಮುಖಗಳನ್ನು ಸ್ಥೂಲವಾಗಿ ಅಭ್ಯಸಿಸಿ, ಹೆಚ್ಚು ಹೆಚ್ಚು ಜನರಿಗೆ ಉದ್ಯೋಗ ಒದಗಿಸಬಲ್ಲ ಅಭಿವೃದ್ಧಿ ಕಾರ್ಯಕ್ರಮಗಳನ್ನು ಯೋಜನೆಯಲ್ಲಿ ತೋರಿಸಿದೆ. ದೊಡ್ಡ ದೊಡ್ಡ ಉದ್ದಿಮೆಗಳನ್ನು ಸ್ಥಾಪಿಸುವುದರ ಜೊತೆಗೆ ಗ್ರಾಮೋದ್ಯೋಗ, ಗೃಹೋದ್ಯೋಗ ಹಾಗು ಸಣ್ಣ ಪ್ರಮಾಣದ ಉದ್ದಿಮೆಗಳಿಗೆ ಪ್ರೋತ್ಸಾಹವಿತ್ತಿದೆ. ಮನುಷ್ಯ ಶಕ್ತಿ ವಿಪುಲವಾಗಿರುವ ಭಾರತದಲ್ಲಿ ಅದನ್ನು ಹೆಚ್ಚು ತ್ವರಿತವಾಗಿ ಕೆಲಸಕ್ಕೆ ಹಚ್ಚುವ ತಂತ್ರಗಳತ್ತ ಆಯೋಗವು ಹೆಚ್ಚು ಒಲವು ತೋರಿಸಿದೆ ಎನ್ನಬಹುದು. ನೀರಾವರಿ, ವಿದ್ಯುಚ್ಛಕ್ತಿ, ಒಕ್ಕಲತನ ಅಭಿವೃದ್ಧಿ, ಹೆಚ್ಚು ಭೂಮಿಯನ್ನು ಸಾಗುವಳಿ ಮಾಡುವುದು—ಇವೇ ಮೊದಲಾದ ಯೋಜನೆಗಳು ಹತ್ತು ಲಕ್ಷಕ್ಕಿಂತ ಹೆಚ್ಚು ಜನರಿಗೆ ಪೂರ್ಣಾವಧಿಯ ಕೆಲಸವೊದಗಿಸುವುದಲ್ಲದೆ ಕಡಿಮೆ ಕೆಲಸವುಳ್ಳವರಿಗೆ ಪೂರಕ ಉದ್ಯೋಗವನ್ನೊದಗಿಸುವಲ್ಲಿ ಸಹಾಯವಾಗಬಲ್ಲವು.

ಕಲಿತ ನಿರುದ್ಯೋಗಿಗಳ ಸಮಸ್ಯೆಯನ್ನು ಅಲ್ಪಾವಧಿಯ ಅಥವಾ ತಾತ್ಕಾಲಿಕ ಕ್ರಮಗಳಿಂದ ಬಿಡಿಸುವುದು ಫಲಕಾರಿಯಲ್ಲವೆಂದು ಆಯೋಗವು ಮನಗಂಡಿದೆ. ರಾಷ್ಟ್ರದ ಆರ್ಥಿಕ ಅಭಿವೃದ್ಧಿಯ ಅವಶ್ಯಕತೆಗಳನ್ನು ಪೂರೈಸಬಲ್ಲ ಶಿಕ್ಷಣ ಮತ್ತು ತರಬೇತಿ ಸೌಕರ್ಯಗಳನ್ನು ವಿಸ್ತರಿಸಬೇಕೆಂದು ಅದು ಸೂಚಿಸಿದೆ. ಬ್ರಿಟಿಷ ಕಾಲದ ಶಿಕ್ಷಣ ಪದ್ಧತಿಯ ನ್ಯೂನತೆಗಳನ್ನು ಚನ್ನಾಗಿ ಅರಿತ ಭಾರತವು ತನ್ನ ಶಿಕ್ಷಣ ಪದ್ಧತಿಯಲ್ಲಿ ಈ ರೀತಿಯ ಮಾರ್ಪಾಟು ಬಯಸಿದ್ದರಲ್ಲಿ ಆಶ್ಚರ್ಯವಿಲ್ಲ. ಬೇರೆ ಬೇರೆ ವೃತ್ತಿಗಳಲ್ಲಿ ತರಬೇತಿ ಹೊಂದಿದವರಿಗೆ ಸಂಣ ಮತ್ತು ಮಧ್ಯಮ ತರಗತಿಯ ಉದ್ದಿಮೆಗಳಲ್ಲಿಯೂ ಗ್ರಾಮಾಂತರ ಆರ್ಥಿಕ ವ್ಯವಸ್ಥೆಯ ತಳಹದಿಯಾಗಿರುವ ಸಹಕಾರಿ ಕ್ಷೇತ್ರದಲ್ಲಿಯೂ ಸಾಕಷ್ಟು ಅವಕಾಶವಿದ್ದು ಅದರಿಂದ ಕಲಿತವರ ನಿರುದ್ಯೋಗ ಎಷ್ಟೋ ಕಡಿಮೆಯಾಗಲು ಸಾಧ್ಯವಿದೆ.

ಇಷ್ಟು ದೊಡ್ಡ ಪ್ರಮಾಣದಲ್ಲಿ ಉದ್ಯೋಗಾವಕಾಶದ ಗುರಿ ಇಟ್ಟುಕೊಂಡಿರುವುದರ ವ್ಯಾವಹಾರಿಕತೆಯನ್ನು ಕೆಲವರು ಪ್ರಶ್ನಿಸಿದ್ದುಂಟು; ಪಾಶ್ಚಿಮಾತ್ಯ ರಾಷ್ಟ್ರಗಳು ಔದ್ಯೋಗಿಕ ಮತ್ತು ಶೈಕ್ಷಣಿಕ ಪ್ರಗತಿ ಸಾಧಿಸಿದ ರಾಷ್ಟ್ರಗಳಾಗಿದ್ದು ಭಾರತವಿನ್ನೂ ಆ ದಿಶೆಯಲ್ಲಿ ಒಂದೊಂದೇ ಹೆಜ್ಜೆ ಇಡುತ್ತದೆಯೆಂಬುದನ್ನವರು ಗಮನಿಸಿದಂತಿಲ್ಲ. ಹೀಗಿರುವಾಗ ಪಶ್ಚಿಮದ ತತ್ವಗಳನ್ನೇ ಭಾರತಕ್ಕೂ ಅನ್ವಯಿಸ ಬರುವಂತಿಲ್ಲ. ಭಾರತದ ನಿರುದ್ಯೋಗ ಸಮಸ್ಯೆಯನ್ನು ಭಾರತೀಯ ಹಿನ್ನೆಲೆಯಲ್ಲಿಯೇ ಕಾಣಬೇಕಾಗುವುದು.

ಭಾರತವು ಕೈಕೊಂಡಿರುವ ದ್ವಿತೀಯ ಯೋಜನೆ ಹೆಚ್ಚು ಆಕಾಂಕ್ಷೆಯುಳ್ಳದ್ದಾಗಿದೆ. ನಿರುದ್ಯೋಗ ಸಮಸ್ಯೆಯನ್ನೆದುರಿಸಲು ಅದು ಪಣತೊಟ್ಟು ನಿಂತಿದೆ. ನಾಡಿನ ಲಕ್ಷಗಟ್ಟಲೆ ಜನರಿಗೆ ಉದ್ಯೋಗ ದೊರೆತು ಅವರ ಜೀವನ ಮಟ್ಟ ಸುಧಾರಿಸಿ, ಸುಖ-ಶಾಂತಿ ನೆಲೆಸಬೇಕಾದರೆ ಜನತೆ ಮತ್ತು ಖಾಸಗಿ ಕ್ಷೇತ್ರದವರು ಈ ಯೋಜನೆಯ ಯಶಸ್ವಿ ಕಾರ್ಯಚರಣೆಗೆ ತಮ್ಮ ಸಹಾಯ-ಸಹಕಾರ ನೀಡುವುದು ಅಗತ್ಯವಾಗಿದೆ.

●

ನಗೆ ಮುಗಿಲ ಛಕ ಛಕ

[illegible]

★

ಲೋಕದ ಮೂಲೆ ಮೂಲೆಗಳಲ್ಲಿಯ
ಧ್ವನಿಯನ್ನು ವಿದ್ಯುದಶ್ವದ ಮೇಲೆ
ಸವಾರಿಮಾಡಿಸಿ ತರುತ್ತಿರುವ...

ಬಾನುಲಿಯ ಧ್ವನಿಗ್ರಹಣ ಮತ್ತು ಬಿತ್ತರಣೆ

— ಕೇ. ಕೃ. ಛಪ್ಪರ

ನಾವು ಬಾಯಿಯಿಂದ ಉಚ್ಚರಿಸುವ ಶಬ್ದವು ಸ್ವಲ್ಪ ದೂರದವರೆಗೆ ಹೋಗುವದರೊಳಗೇ ಕುಂದುತ್ತದೆ. ನಂತರ ಕ್ರಮೇಣ ನಾಶ ಹೊಂದುತ್ತದೆ. ಆದರೆ ಲಂಡನ್, ನ್ಯೂಯಾರ್ಕ, ಮಾಸ್ಕೊ ಮುಂತಾದ ಬಾನುಲಿ ಕೇಂದ್ರಗಳಿಂದ ಬರುವ ಭಾಷಣ ಸಂಗೀತಗಳು ನಮಗೆ ಏನೂ ಕಾಲವಿಲಂಬವಿಲ್ಲದೇ ಗಟ್ಟಿಯಾಗಿ ಕೇಳಿಸುತ್ತವೆ. ಹಾಗೆ ಕೇಳಿಸಲು ಆಕಾಶವಾಣಿಯು ಒಂದು ಅನಿವಾರ್ಯ ಸಾಧನವಾಗಿದೆ.

ಶಬ್ದವು ಸಾಮಾನ್ಯವಾಗಿ ಒಂದು ಸೆಕಂಡಿಗೆ ೧೧೦೦ ಫೂಟು ಅಂದರೆ ೧।೫ ಮೈಲುಗಳ ವೇಗದಿಂದ ಚಲಿಸುತ್ತದೆ; ಈ ವೇಗದಿಂದ ಚಲಿಸುವ ಶಬ್ದವು ಲಂಡನ್‌ದಿಂದ ನಾವಿರುವ ಭಾರತದ ಯಾವದೊಂದು ಸ್ಥಳಕ್ಕೆ ಬರಲು ಸುಮಾರು ೮ ತಾಸುಗಳ ಅವಧಿಬೇಕಾಗುತ್ತದೆ. ಆದರೆ ಆಕಾಶವಾಣಿ ಉಪಕರಣಗಳಿಂದ ಲಂಡನ್‌ದ ಬಿ. ಬಿ. ಸಿ ಕೇಂದ್ರದಲ್ಲಿ ಹೊರಟ ಶಬ್ದವನ್ನು ಅದೇ ಕ್ಷಣದಲ್ಲಿ ನಾವಿಲ್ಲಿ ಕೇಳಬಹುದು

ನಾವು ಎಲ್ಲಿಗಾದರೂ ಹೋಗುವದಿದ್ದರೆ ನಮ್ಮ ಸಹಜ ವೇಗದಿಂದ ಎಂದರೆ ಕಾಲ್ನಡೆಯಿಂದ ಹೋಗುವದಾದರೆ ಸಾವಕಾಶವಾಗಿ ಹೋಗುತ್ತೇವೆ. ಆದರೆ ದೂರ ಹೋಗುವದಿದ್ದರೆ ಸೈಕಲ್, ಮೋಟರ, ಗಾಡಿ, ವಿಮಾನ ಇತ್ಯಾದಿ ವಾಹನಗಳನ್ನು ಆರಿಸಿಕೊಂಡು ಅವಕ್ಕೆ ತಕ್ಕ ವೇಗದಂತೆ ಹೋಗಲು ಸಮರ್ಥರಾಗುತ್ತೇವೆ. ಶಬ್ದವನ್ನು ವೇಗದಿಂದ ಓಡಿಸಲು ಅದಕ್ಕೂ ಒಂದು ವಾಹನವನ್ನೇರಿಸಬೇಕಾಗುವುದು.

ಅತಿ ವೇಗದಿಂದ ಚಲಿಸುವ ವಾಹಕದ ಮೂಲಕ ಶಬ್ದವು ಚಲಿಸುವಂತಾದರೆ ಮಾತ್ರ ಲಂಡನ್‌ನಿಂದ ತತ್‌ಕ್ಷಣ ನಮಗೆ ತಲುಪಲು ಸುಲಭ ಸಾಧ್ಯವಾಗುವದು ಬೆಳಕಿನ ವೇಗದಿಂದ ಅಂದರೆ ಒಂದು ಸೆಕಂಡಿಗೆ ೧೮೬೦೦೦ ಮೈಲುಗಳಷ್ಟು ವೇಗದಿಂದ ಚಲಿಸುವ ಇಲೆಕ್ಟ್ರೊ ಮ್ಯಾಗ್ನ್ಯಾಟಿಕ್ ತರಂಗಗಳ ಮೂಲಕ ಶಬ್ದವು ಸಂಚರಿಸಿ, ಪ್ರತ್ಯಕ್ಷವಾತನಾಡುತ್ತಿರುವಂತೆ ನಮ್ಮ ಕರ್ಣ ಪಟಲದ ಮೇಲೆ ಪರಿಣಾಮ

> ಬಹಳ ವಿಷಯಗಳ ಬಗ್ಗೆ ಬಹಳಷ್ಟು ಬಲ್ಲವರಾದ ಪ್ರಸಕ್ತ ಲೇಖಕರು ಜೀವನದಲ್ಲಿ ಹೆಚ್ಚಿನ ಅನುಭವವುಂಡ ಪತ್ರಿಕೋದ್ಯಮಿಗಳು ನವಯುಗ-ವಿಶಾಲಕರ್ನಾಟಕ ಸಂಪಾದಕ ಮಂಡಳದಲ್ಲಿರುವ ಅವರು ಪ್ರಸ್ತುತ ಲೇಖನದಲ್ಲಿ ಬಾನುಲಿಯ ಜಟಿಲ ಕಾರ್ಯಾಚರಣೆಯ ಸ್ಥೂಲ ಪರಿಚಯ ಮಾಡಿಕೊಟ್ಟಿದ್ದಾರೆ.

ಮಾಡಲು ಆಕಾಶವಾಣಿಯ ಮೂಲಕ ಸಮರ್ಥವಾಗುತ್ತದೆ.

ಆಕಾಶವಾಣಿ ಕೇಂದ್ರಗಳಲ್ಲಿ ಹೊರಟ ಶಬ್ದವು ಅದೇ ಆವರ್ತನ ಸಂಖ್ಯೆಯುಳ್ಳ ವಿದ್ಯುತ್ ತರಂಗಗಳಲ್ಲಿ ಪರಿವರ್ತಿಸಲ್ಪಡುತ್ತದೆ. ಇತರ ಉಪಕರಣಗಳ ಮೂಲಕ ಆ ಕೇಂದ್ರದಲ್ಲಿ ಉತ್ಪಾದಿತವಾದ [illegible]

[illegible]

ನಂತರ ಅವು ನಮ್ಮ ರೇಡಿಯೋ ರಿಸೀವರ್ ಅಥವಾ ಗ್ರಾಹಕದ ಮೂಲಕ ಧ್ವನಿ ತರಂಗಗಳಲ್ಲಿ ಪರಿವರ್ತಿಸಲ್ಪಡುತ್ತವೆ. ಆಕಾಶವಾಣಿ ತರಂಗಪ್ರಸಾರಕ ಮತ್ತು ಗ್ರಾಹಕಗಳು ಧ್ವನಿ ಪರಿವರ್ತನೆಯ ಕಾರ್ಯ ಸಾಧಿಸುವ ಜಟಿಲವಾದ ಯಂತ್ರೋಪಕರಣಗಳಿಂದೊಡಗೂಡಿವೆ.

ಶಬ್ದ ತರಂಗಗಳು ವಿದ್ಯುತ್ ತರಂಗಗಳಲ್ಲಿ ಪರಿವರ್ತಿಸಲ್ಪಟ್ಟ ನಂತರ ಬಾನುಲಿ ಉಪಕರಣಗಳ ಮೂಲಕ ಇಲೆಕ್ಟ್ರೋ ಮ್ಯಾಗ್ನೆಟಿಕ್ ತರಂಗಗಳೊಡನೆ ಬೆರೆಸಿ [illegible]

[illegible]

★ ಸತ್ತ ತನ್ನ ತಂಟೆಗೆ ಯಾರೂ ಬೇಡ
ಎಂದು ಇಜಿಪ್ತದ ದೊರೆ ಶಾಪಕೊಟ್ಟ;
೩೦೦೦ ವರ್ಷಗಳ ನಂತರ ಅದರಿಂದ...

ರೆಕ್ಕೆ ಕಟ್ಟಿಕೊಂಡು ಬಂದಿತು ಸಾವು

“ ಪತಂಗ ”

ಮನುಷ್ಯ ಸತ್ತ ಮೇಲೂ ಅವನ ಆತ್ಮ ತನ್ನ ಶಕ್ತಿಯನ್ನು ತೋರಿಸಬಲ್ಲದೆಂದು ಪ್ರಾಯಶಃ ಜಗತ್ತಿನ ಎಲ್ಲರೂ ನಂಬುತ್ತಾರೆ. ಈ ಅಗೋಚರವಾದ ಅನಿರ್ವಚನೀಯವಾದ ಶಕ್ತಿಗೆ ಭೂತಶಕ್ತಿ ಎಂದು ಕೆಲವರು ಕರೆದರೆ ಇನ್ನು ಕೆಲವರು ಏನೆಂದು ಕರೆಯಬೇಕೆಂಬುದು ತಿಳಿಯದೆ ದಂಗಾಗುತ್ತಾರೆ.

ಒಬ್ಬ ಮನುಷ್ಯ ಸತ್ತಮೇಲೆ ಈ ಅದ್ಭುತ ಶಕ್ತಿ ಸಾವಿರಾರು ವರ್ಷಗಳ ವರೆಗೂ ಇರಬಲ್ಲದೆಂದು ತೋರುತ್ತದೆ. ಇಜಿಪ್ತದ ಪುರಾತನ ಗೋರಿಗಳನ್ನು ಅಗೆದು ತೆಗೆದಾಗ ಇದು ವ್ಯಕ್ತಪಟ್ಟಿದೆ. ಮೂರು ಸಾವಿರ ವರ್ಷಗಳ ಹಿಂದೆ ಇಜಿಪ್ತವನ್ನು ಆಳಿದ ಬಾಲರಾಜ ತುಟಿನ್ ಖಾಮೆನ್ನನ ಗೋರಿಯನ್ನು ಅಗೆದದ್ದರ ಪರಿಣಾಮ ಗಮನಾರ್ಹವಿದೆ.

೧೯೨೨ ರಲ್ಲಿ ಈ ಗೋರಿಯನ್ನು ಅಗೆಯಲಾಯಿತು. ಶವವಿದ್ದ ಕವಚದ ಮೇಲೆ "ಫರೋವ್ವಾ (ದೊರೆ) ನ ಸಮಾಧಿಯನ್ನು ಮುಟ್ಟಿದವನಿಗೆ ಸಾವು ರೆಕ್ಕೆ ಕಟ್ಟಿಕೊಂಡು ಹಾರಿ ಬರುತ್ತದೆ” ಎಂದು ಬರೆಯಲಾಗಿತ್ತು. ಗೋರಿಯನ್ನು ಅಗೆದ ಜನರಿಗೆ ಅದರ ಅರ್ಥ ಬೇಗ ಆಗಲಿಲ್ಲ.

ಇವರ ಅಜ್ಞಾನದ ಪರಿವೆ ಸಮಾಧಿಸ್ಥ ದೊರೆಗೆ ಏಕೆ ಇರಬೇಕು? ಆತನ ಶಾಪದ ಯಂತ್ರ ತಿರುಗಲು ಮೊದಲು ಮಾಡಿತು. ಗೋರಿಯನ್ನು ಅಗೆದ ೨೦ರಲ್ಲಿ ೧೫ ಜನ ಬಹುಬೇಗ ಸತ್ತರು. ಗೋರಿಯನ್ನು ನೋಡಿ ಬಂದ ಸುದ್ದಿಗಾರರು ತೀವ್ರದಲ್ಲಿ ವಿಚಿತ್ರ ರೀತಿಯಲ್ಲಿ ಮಡಿದರು.

ಸತ್ತ ದೊರೆಯ ಗೋರಿಯನ್ನು ಹೊಕ್ಕು ಶವವನ್ನು ತೆಗೆದು ಮುಖವನ್ನು ನೋಡಿದವರೆಲ್ಲ ಬದುಕಿದ್ದು ಮುಂದೆ ಕೆಲವಾರು ದಿನ ಮಾತ್ರ. ಗೋರಿಯಲ್ಲಿ ಮೊದಲು ಪ್ರವೇಶ ಮಾಡಿದ ಕರ್ನಾರ್ವಾನದ ಅರ್ಲರು ಶವ ಪಾತ್ರೆಗಳಲ್ಲೊಂದರಲ್ಲಿ ಕೈಯಿಟ್ಟರು. ಪಾತ್ರೆಯಿಂದ ಗುಲಾಬಿಯ ವಾಸನೆ ಹೊಮ್ಮಿ ಬಂದಿತು ಮರುಕ್ಷಣ

ಇಪ್ಪತ್ತು ವರ್ಷಗಳಿಂದ ತೀವಿದಾಗೊಮ್ಮೆ ಕಥೆ ಕವನಗಳನ್ನು ಬರೆಯುತ್ತಿರುವ ಹಿರಿಯ ಲೇಖಕರಲ್ಲಿ ‘ಪತಂಗ’ರು ‘ಪಥಿಕ’ಕ್ಕಾಗಿ ತಮ್ಮ ಸಂಗ್ರಹದಿಂದ ಭೂತ ಕಥೆಗಳನ್ನು ಒದಗಿಸಲು ಒಪ್ಪಿದ್ದಾರೆ. ಪ್ರಸ್ತುತ ಲೇಖನಕ್ಕೆ ಸ್ಯಾಮ್ ನೇಪಿಯರ್ ಎಂಬ ಇಂಗ್ಲಿಷ ಪತ್ರಿಕೋದ್ಯಮಿಯ ಲೇಖನವು ಆಧಾರವೆಂದು ಅವರು ತಿಳಿಸಿದ್ದಾರೆ.

★ ಎರಡೂವರೆ ಸಾವಿರ ವರ್ಷಗಳ
ಹಿಂದೆಯೇ ನಮ್ಮ ಪುಣ್ಯಭೂಮಿಯಲ್ಲಿ
ರೋಗ ನಿವಾರಣೆಗಾಗಿ ನಡೆಯುತ್ತಿತ್ತು...

ಅದ್ಭುತವಾದ ಶಸ್ತ್ರ ಚಿಕಿತ್ಸೆ

— ವಾಯ್. ಸಾವಿತ್ರಿದೇವಿ

ಅಶೋಕ ಹಾಗೂ ಚಂದ್ರಗುಪ್ತನ ಕಾಲದಲ್ಲಿ ಆಯುರ್ವೇದದ ಪ್ರಭಾವವು ಭಾರತದ ಎಲ್ಲೆಡೆಗೂ ಪಸರಿಸಿತ್ತು. ಆಗ ಪಂಜಾಬದ ತಕ್ಷ ಶಿಲೆಯಲ್ಲಿ ಆಯುರ್ವೇದದ ಬಹು ದೊಡ್ಡ ವಿದ್ಯಾಪೀಠವೇ ಇದ್ದಿತು. ಅದರಲ್ಲಿ ಜಗತ್ ಪ್ರಸಿದ್ಧರಾದಂಥ ತಜ್ಞ ವೈದ್ಯರು, ಆಚಾರ್ಯರು ಕೆಲಸಮಾಡುತ್ತಿದ್ದರು:

ಬುದ್ಧನ ಸಮಯಕ್ಕೆ ತಕ್ಷಶಿಲೆಯ ವಿದ್ಯಾಪೀಠದಲ್ಲಿ ಅತ್ರೇಯರು ವೈದ್ಯರಾಗಿದ್ದರು. ಅವರಲ್ಲಿ ವೈದ್ಯಕೀಯ ಶಿಕ್ಷಣವನ್ನು ಪಡೆಯಲು ಜೀವಕ ಕುಮಾರ ಭೃತ್ಯನೆಂಬ ವಿದ್ಯಾರ್ಥಿಯು ಬಂದು ಏಳು ವರ್ಷಗಳ ವರೆಗೆ ಅಲ್ಲಿದ್ದುಕೊಂಡು ಶಿಕ್ಷಣ ಪಡೆದನು.

ವೈದ್ಯಕೀಯ ಶಿಕ್ಷಣವನ್ನು ಮುಗಿಸಿಕೊಂಡು ಜೀವಕ ಕುಮಾರ ಭೃತ್ಯನು ತನ್ನೂರಿಗೆ ಮರಳಿದೊಡನೆ ಅಲ್ಲಿಯ ಅರಸನಾದ ಬಿಂಬಸಾರನ ಅಸಾಧ್ಯವಾದ ರೋಗವನ್ನು ಗುಣಪಡಿಸಿದನು. ಇದರಿಂದ ಸಂತುಷ್ಟನಾದ ಅರಸನು ಅವನನ್ನು ತನ್ನ ಆಸ್ಥಾನದಲ್ಲಿ ರಾಜವೈದ್ಯನೆಂದು ಇರಿಸಿಕೊಂಡನು. ಬಿಂಬಸಾರನು ಕ್ರಿಸ್ತಶಕಕ್ಕೆ ಮುಂಚೆ ಆರನೆಯ ಶತಕದಲ್ಲಿದ್ದನು.

ಜೀವಕ ವೈದ್ಯನ ಬಗೆಗೆ 'ಮಹಾವಗ್ಗ' ವೆಂಬ ಬೌದ್ಧ ಗ್ರಂಥದಲ್ಲಿ ಒಂದು ಉಲ್ಲೇಖವು ಬರುತ್ತದೆ. ಅವನು ಅಂತ್ರಾಂತ್ರ ಪ್ರವೇಶ ವೆಂಬ ಕರುಳಿನ ರೋಗವನ್ನು ಶಸ್ತ್ರಕ್ರಿಯೆಯಿಂದ ಗುಣಪಡಿಸಿದನು.

ವಾರಣಾಸಿಯಲ್ಲಿಯ ಓರ್ವ ಶ್ರೇಷ್ಠಿಯ ಮಗನು, ಆಟವಾಡುವಾಗ, ಹಾರಾಡಿದ ಜಿಗಿದಾಡಿದ್ದರ ಪರಿಣಾಮವಾಗಿ ಅವನ ಕರುಳುಗಳು ಒಂದಕ್ಕೊಂದು ತೊಡಕು ಹಾಕಿಕೊಂಡಿದ್ದವು. ಅದರ ಪರಿಣಾಮವಾಗಿ ಆ ಹುಡುಗನಿಗೆ ಊಟವಂತೂ ದೂರೇ ಉಳಿಯಿತು. ಗಂಜಿಯಂಥ ಪದಾರ್ಥವೂ ದಕ್ಕದಂತಾಯಿತು.

ಹೀಗಾಗಿ ಅವನು ಹಾಸುಗೆ ಹಿಡಿದುಬಿಟ್ಟನು. ಆ ಹುಡುಗನ ತಂದೆಯು ನಾನಾ ರೀತಿಯ ಉಪಚಾರಗಳನ್ನು

ಕನ್ನಡ ಮಹಿಳೆಯರು ಲೇಖನ ಕ್ಷೇತ್ರಕ್ಕೆ ಇಳಿಯುವುದು ಕಡಿಮೆಯಾಗಿದ್ದು ಆ ಕೊರತೆಯನ್ನು ತುಂಬಲು ಯುವತಿಯರು ಮುಂದೆ ಬರಬೇಕಾಗಿದೆ. ಗದುಗಿನ ಸೋದರಿ ಸಾವಿತ್ರಿದೇವಿ ಇನ್ನೂ ವಿದ್ಯಾರ್ಥಿನಿಯಾಗಿದ್ದು "ಪಥಿಕ"ದ ಬರಹಗಾರ, ಬಳಗಕ್ಕೆ ಅವರನ್ನು ಆದರದಿಂದ ಸ್ವಾಗತಿಸುತ್ತೇವೆ.

ನಾಡಿಸಿದರೂ ಗುಣವಾಗಲಿಲ್ಲ. ಕೊನೆಗೆ ಅರಸನಾದ ಬಿಂಬಿಸಾರನ ಬಳಿ ಹೋಗಿ ವಿವರಿಸಲು ಅವನು ಜೀವಕ ವೈದ್ಯನನ್ನು ಶ್ರೇಷ್ಠಿಯ ಜೊತೆಗೆ ವಾರಣಾಸಿಗೆ ಕಳುಹಿದನು.

ವಾರಣಾಸಿಗೆ ಬಂದ ಜೀವಕ ವೈದ್ಯನು [illegible]

ಯೆಯನ್ನು ಯಶಸ್ವಿಗೊಳಿಸಿ ತೋರಿಸಿದನು.

ಮುಂದೆ ಕೆಲದಿನಗಳಲ್ಲಿ ಶಸ್ತ್ರಕ್ರಿಯೆಯ ಗಾಯವು ಮಾಯ್ದು ಅವನು ಮೊದಲಿನಂತೆ ನಿರೋಗಿಯಾದನು. ಸಂತುಷ್ಟನಾದ ಶ್ರೇಷ್ಠಿಯು ಜೀವಕ ವೈದ್ಯನನ್ನು ಸನ್ಮಾನಿಸಿ ಹದಿನಾರು ಸಾವಿರ 'ಕಾರ್ಷಾಪಣ' (ಬಂಗಾರದ ನಾಣ್ಯ)ಗಳನ್ನು ಕೊಟ್ಟನು.

[illegible]

ಹುಬ್ಬಳ್ಳಿ ಗೆಸ್ಟ್ ಹೌಸ್
ಹುಬ್ಬಳ್ಳಿ
[illegible]
Hubli Guest House
For Tea, Coffee
Boarding & Lodging

ಆಗ ಆಕೆಗೆ ಸಮಾಧಾನವಾಯಿತು !

— ಜಂಬುನಾಥ ಯಾವಗಲ್ಲ

ರೇಡಿಯಮ್ ಎಂದೊಡನೆ ಮದಾಮ್ ಕ್ಯೂರಿಯವರ ನೆನಪಾಗುವದು ಸ್ವಾಭಾವಿಕವಾಗಿದೆ. ರೇಡಿಯಮ್‌ನ್ನು ಅವರೇ ಶೋಧಿಸಿದರು. ವಿಜ್ಞಾನದಲ್ಲಿ ಮುಂದುವರಿದ ಅವರು ಸ್ವಾತಂತ್ರ್ಯ ಪ್ರೇಮ–ದೇಶಪ್ರೇಮ-ದಲ್ಲಿ ಕೂಡ ಯಾರಿಗೂ ಹಿಂದೆ ಬಿದ್ದಿರಲಿಲ್ಲ.

ದೇಶದ ಬಗೆಗೆ ಪ್ರೀತಿಯಿದ್ದಂತೆ ದೇಶದ್ರೋಹಿಗಳ ಬಗ್ಗೆ ಎಂಥವರಿಗೂ ತಿರಸ್ಕಾರ ಭಾವನೆಯಿರುತ್ತದೆ. ಮದಾಮ್ ಕ್ಯೂರಿ ಪೋಲಂಡದವರು. ಅವರು ವಿದ್ಯಾರ್ಥಿನಿಯಾಗಿದ್ದಾಗ ಪೋಲಂಡವು ಜರ್ಮನರ ಅಧೀನದಲ್ಲಿತ್ತು. ಪೋಲಂಡ ಹಾಗು ಜರ್ಮನಿಯ ನಡುವೆ ಯುದ್ಧ ನಡೆದ ಸಮಯದಲ್ಲಿ ಪೋಲಂಡದ ಕೆಲ ದೇಶದ್ರೋಹಿಗಳು ಜರ್ಮನರಿಗೆ ಸಹಾಯ ಮಾಡಿದ್ದರಿಂದ ಅವರ ಕೈ ಮೇಲಾಗಿ ಪೋಲಂಡವು ಗುಲಾಮಗಿರಿ ಗೊಳಗಾಗಿತ್ತು.

ತಮಗೆ ಸಹಾಯ ಮಾಡಿದವರ ಜ್ಞಾಪಕಾರ್ಥವಾಗಿ ಜರ್ಮನರು ಒಂದು ಸ್ಮಾರಕವನ್ನು ನಿರ್ಮಿಸಿದರು. ಆ ಸ್ಮಾರಕವು ಜರ್ಮನರಿಗೆ ಹುತಾತ್ಮರ ಸ್ಮಾರಕವಾಗಿದ್ದರೆ, ಸ್ವಾತಂತ್ರ್ಯಪ್ರಿಯ ಪೋಲರಿಗೆ ದೇಶದ್ರೋಹಿಗಳ ಸ್ಮಾರಕವಾಗಿತ್ತು. ಕ್ಯೂರಿಯವರು ಕೂಡ ಅದನ್ನು ದೇಶದ್ರೋಹಿಗಳ ಸ್ಮಾರಕವೆಂದೇ ತಿಳಿದಿದ್ದರು.

ಮದಾಮ್ ಕ್ಯೂರಿ ಶಾಲೆಗೆ ಹೋಗುವ ಮಾರ್ಗದಲ್ಲಿಯೇ ಆ ಸ್ಮಾರಕವಿದ್ದಿತು. ಶಾಲೆಗೆ ಹೋಗುವಾಗ ಅದು ಕಣ್ಣಿಗೆ ಬೀಳುತ್ತಲೆ ಅವರಿಗೆ ಎಲ್ಲಿಲ್ಲದ ಕೋಪ ಬರುತ್ತಿತ್ತು. ಕೋಪವನ್ನು ತೀರಿಸಿಕೊಳ್ಳುವ ಇನ್ನಾವ ಮಾರ್ಗವೂ ಗೋಚರವಾಗದೇ ಹೋಗಲು ಅದರ ಮೇಲೆ ಥೂ ಎಂದು ಉಗಿದು ಮುಂದೆ ಹೋಗುತ್ತಿದ್ದರು. ಇದು ಅವರ ದೈನಂದಿನ ಕ್ರಮವಾಗಿ ಬಿಟ್ಟಿತ್ತು. ಅಲ್ಲದೆ ಆ ರೀತಿ ಉಗಿದು ಹೋದಾಗಲೆ ಅವರ ಮನಸ್ಸಿಗೆ ನೆಮ್ಮದಿ ಸಿಗುತ್ತಿತ್ತು.

ಒಂದು ದಿನ ಅವರು ಉಗಿಯುವದನ್ನು ಮರೆತು ಹಾಗೆಯೇ ಶಾಲೆಗೆ ಹೋದರು. ಮೊದಲನೆಯ ತಾಸು ನಡೆದಾಗ ಅವರ ಮನಸ್ಸಿಗೆ ಸಮಾಧಾನವೇ ಇರಲಿಲ್ಲ

ರೆಕ್ಕೆ ಕಟ್ಟಿಕೊಂಡು ಬಂದಿತು ಸಾವು

[..ನೇ ಪುಟದಿಂದ ಮುಂದೆ ಸಾಗಿದ್ದು]

ರಾಗಿ ಕಾಲವಶರಾದರು ಆದರೆ ಅವರ ರೋಗವನ್ನು ಗುರುತಿಸುವುದು ಯಾರಿಂದಲೂ ಆಗಲಿಲ್ಲ.

ಲಾರ್ಡ [illegible]

[illegible]

ಪ್ರೊ: ಪಾಸಾನೋವ್ವಾರು ೧೯೨೩ ರಲ್ಲಿ ಯಾವುದೋ ವಿಚಿತ್ರ ರೋಗದಿಂದ ನಿಧನ ಹೊಂದಿದರು.

ಸಮಾಧಿಯನ್ನು ತೆರೆದು ಪ್ರವೇಶ ಮಾಡಿದ್ದರ ವಿವರಗಳನ್ನು ವರದಿ ಮಾಡಿದ ವಿಖ್ಯಾತ ಗ್ರಂಥಕರ್ತ ಹಾಗೂ ಪತ್ರಿಕೋದ್ಯಮಿ ಆರ್ಥರ ವೇಗೆಲ್ಲರು ಅಜ್ಞಾತ ರೋಗದಿಂದ ನರಳಿ ನರಳಿ ಸತ್ತರು.

[illegible]

* ಮುಂದುವರಿದ ವಿಜ್ಞಾನ ಪಥ *

"ರಾಮದಾಸ" ಹುಬ್ಬಳ್ಳಿ

ಬರ್ಲಿನ್‌ದಿಂದ ಲಾಯಪಜಿಗದವರೆಗೆ ಟೆಲಿವಿಜಿನ್ ಟೇಲಿಫೋನ (ದೂರದರ್ಶಕ ಟೆಲಿಫೋನ) ಆಗಿದೆ. ಇದರ ಮೂಲಕ ಮೂಕರು ಕಿವುಡರೂ ಮಾತನಾಡಿಕೊಳ್ಳಬಹುದು. ಒಬ್ಬ ಮೂಕನನ್ನು ಒಂದೆಡೆಗೆ ಒಬ್ಬ ಕಿವುಡನನ್ನು ಇನ್ನೊಂದೆಡೆಗೆ ನಿಲ್ಲಿಸಿ, ಈ ಯಂತ್ರದ ಮೂಲಕ ಅವರಲ್ಲಿ ಮಾತುಕಥೆ ನಡೆಯುವ ಪ್ರಯೋಗ ಮಾಡಿಯಾಯಿತು. ಪ್ರತಿಯೊಬ್ಬನ ಯಂತ್ರದ ಹತ್ತಿರ ಇರುವ ಪರದೆಯ ಮೇಲೆ ದೂರದ ವ್ಯಕ್ತಿಯ ಸ್ಪಷ್ಟವಾದ ಭಾವಚಿತ್ರ ಮೂಡಿತ್ತು. ಆ ಚಿತ್ರದೊಡನೆ ಸನ್ನೆಗಳ ಸಹಾಯದಿಂದ ಆ ಯಂತ್ರದ ಹತ್ತಿರ ಇದ್ದವರು ಮಾತಾಡುವರು. ೮೦೫ ಮೈಲು ದೂರದಲ್ಲಿ ಮಾತಾಡುತ್ತಿರುವ ಒಬ್ಬ ಮೂಕನ ಭಾವಚಿತ್ರವನ್ನೂ ತೆಗೆಯಲಾಯಿತು.

ಇತ್ತೀಚೆಗೆ ಒಂದು ಹೊಸ ನಮುನೆಯ ಗಾಜು ಶೋಧಿಸಲ್ಪಟ್ಟದೆ. ಅದರ ಬಲವನ್ನು ಪರೀಕ್ಷಿಸಲಿಕ್ಕೆ ಒಂದು ಪ್ರಯೋಗವನ್ನು ಮಾಡಲಾಯಿತು. ಆ ಗಾಜಿಗೆ "ಆರ್ಮರ್ ಪ್ಲೇಟ" ಎಂದು ಹೆಸರು. ಆ ಗಾಜಿನ ಒಂದು ಇಂಚು ದಪ್ಪವಾದ ಹಲಿಗೆಗೆ ೩ ಸಂಣ ಆನೆಮರಿಗಳನ್ನು ತೂಗುಹಾಕಿದ್ದಳದೆ; ಹಲಿಗೆಯ ನಡುವೆ ೩ ಜನ ಕೂತರು. ಆದರೂ ಅದು ಒಡೆಯಲಿಲ್ಲ ಬಗ್ಗಿತು ಮಾತ್ರ! ಒಂದುವರೆ ಪೌಂಡ್ಸು ಭಾರದ ಒಂದು ಸಾಮಾನನ್ನು ಒಂದು ಫೂಟ ಎತ್ತರದಿಂದ ಆ ಗಾಜಿನ ಮೇಲೆ ಒಗೆದರೂ, ಎಲ್ಲಿಯೊ ಒಂದು ಚೂರು ಹಾರುತ್ತದೆ. ಒಡೆಯುವದಿಲ್ಲ, ಒಡೆಯಬೇಕಾದರೆ ೧೦ ಫೂಟು ಎತ್ತರದಿಂದ ಒಗೆಯಬೇಕಾಗುತ್ತದೆ.

ಹೆಣಗಳ ನೆತ್ರರಿನ ಉಪಯೋಗ

ಸೋವಿಯಟ್ ರಷ್ಯದೇಶದಲ್ಲಿ ಪ್ರಪಂಚವನ್ನೇ ಅಚ್ಚರಿಗೊಳಿಸುವಂಥಹ ಪ್ರಯೋಗಗಳು ನಡೆದಿವೆ. ಅವುಗಳಲ್ಲಿ ಹೆಣಗಳ ನೆತ್ತರಿನ ಪ್ರಯೋಗವೊಂದು ರಷ್ಯದ ರಾಜಧಾನಿಯಾದ ಮಾಸ್ಕೋ ನಗರದಲ್ಲಿಯ ಸ್ಕಫೆಸಾರ್ಸಿ ಸೆಂಟ್ರಲ್ ಹಾಸ್ಪಿಟಲಿನಲ್ಲಿ . ಸತ್ತವರ ನೆತ್ತರನ್ನು ಶೇಖರಿಸುವ ಕಾರ್ಯವು ನಡೆದಿದೆ. ಮುಳುಗಿಯಾಗಲಿ, ವಿದ್ಯುತ್ತಿನಿಂದಾಗಲಿ ತೀರಿದವರ ನೆತ್ತರವನ್ನು ೬-೮ ಗಂಟೆಯೊಳಗಾಗಿ ತೆಗೆದುಕೊಂಡು ಬಿಡುವರು ಇದನ್ನು ರಕ್ತ ಪೂರೈಕೆ ಕಡಿಮೆಯಾಗಿ ಸಾಯುವವರ ದೇಹದಲ್ಲಿ ಸೇರಿಸಿ, ಅವರನ್ನು ಬದುಕಿಸಲಾಗುತ್ತಿದೆ.

ಕೃತ್ರಿಮ ಹೃದಯಂಗಳು

ಹೃದಯವೇ ಶರೀರದ ಬಹು ಕೋಮಲವಾದ-ಸೂಕ್ಷ್ಮವಾದ-ಅಂಗವು ಈವರೆಗೂ ಯಾವ ವೈಜ್ಞಾನಿಕನೂ ಇದನ್ನು ತಯಾರಿಸಿರಲಿಲ್ಲ. ಆದರೆ ಕರ್ನಲ್ ಲಿಂಡ್‌ಬರ್ಗ್‌ರೆಂಬವರು ಒಂದು ಕೃತಿಮ ಹೃದಯವನ್ನು ತಯಾರಿಸಿ, ಡೆನ್ಮಾರ್ಕ ನಗರದಲ್ಲಿ ಜರುಗಿದ ಅಂತರಾಷ್ಟ್ರೀಯ ಪ್ರದರ್ಶನದಲ್ಲಿ ಇರಿಸಿದ್ದರು ಈ ಹೃದಯವನ್ನು ಸತತವಾಗಿ ೫ ವರ್ಷ ಪಂಪ್ರಮಾಡುವಂತೆ ಅವರು ಸಿದ್ಧಗೊಳಿಸಿರುವರು.

ವಿಮರ್ಶೆ ಹೀಗಿದ್ದರೆ?

ಸಂಗೀತಜ್ಞ ರತ್ನ ಶ್ರೀ ಯವರು ಭೈರವಿ ರಾಗವನ್ನೆತ್ತಿದ್ದರು. ಭೈರವಿ ಹೆದರಿ ಓಡಿ ಹೋದವಳು ಕೊನೆಗೂ ಮರಳಿ ಬರಲಿಲ್ಲ.

° ° °

‘ಕುರುಕ್ಷೇತ್ರ’ದಲ್ಲಿ ಶ್ರೀ — ಅರ್ಜುನನಾಗಿದ್ದರು. ನಾಟಕವು ‘ಉತ್ತರ ಕುಮಾರ’ನಾಗಿದ್ದರೆ ಶ್ರೀ — ಯವರ ಅಭಿನಯ ಅತ್ಯುತ್ಕೃಷ್ಟವಾಗುತ್ತಿತ್ತು.

° ° °

ನಾವು ಹುಟ್ಟಿದ ಮೇಲೆ ಮೊದಲ ಬಾರಿ ನಮ್ಮ ಕಾಲುಗಳ ಮೇಲೆ [illegible] ಅವು ಮುರಿಗಿ ಬಿಟ್ಟಿದ್ದವು.

° ° °

[illegible]

° ° °

[illegible]

[illegible]!

[illegible]

ಎಲ್ಲಿಂದ ಹೋಗುವರೋ ಅಲ್ಲಿಗೆ ಆನಂದ ಆಗಮಿಸುತ್ತದೆ.

° ° °

ಎಷ್ಟು ಬಾರಿ ಚರ್ಮ ಸುಲಿದರೂ ಏನೂ ಆಗಲಾರದ ಪ್ರಾಣಿ ಒಂದೇ— ಮನುಷ್ಯ!

° ° °

ಇಬ್ಬರು ಸಾಕಷ್ಟು ಕುಡಿದು ಕಾರಿನಲ್ಲಿ ಹೋಗುತ್ತಿದ್ದರು. ಒಬ್ಬ ತಡವರಿಸಿದ: "ಎದುರಿಗೆ ನೋಡು, ಆ ಪೂಲು ನಮ್ಮ ಕಡೆಗೆ ಓಡಿ ಬರುತ್ತಿದೆ. ಅದು ಹೋಗಲು ದಾರಿ ಕೊಡು"

"ನಾನು ದಾರಿ ಕೊಡಬೇಕು?" ಎಂದ ಇನ್ನೊಬ್ಬ. 'ಅಯ್ಯೋ! ನೀನೇ ಮೋಟರ ಡ್ರೈವ್ ಮಾಡುತ್ತಿ!' ಎಂದು [illegible] ಚಕ್ರ [illegible] ದಾರಿ ಬಿಟ್ಟ!

●

[illegible]

[illegible] ಭವನ

[illegible]

★ ಲೆಕ್ಕಾಚಾರದ ಸಹಾರಾದಲ್ಲಿ
ಕಲಾ ಬ್ರಹ್ಮರ ನಂದನವನ್ನು
ತೆರೆದ ಚಿತ್ರಶಿಲ್ಪಿಗಳ ಶಿಲ್ಪಿ...

ಒಬ್ಬ ಪ್ರಯತ್ನವಾದಿ

ಶ್ರೀ. ಟಿ. ಪಿ. ಅಕ್ಕಿ

— ಉತ್ತರಧ್ರುವ

ತನ್ನ ಪ್ರೇಯಸಿ ರುಕ್ಸಾನಾಳು ಗುರುವಾದ ಅರಸ್ತುನನ್ನು ಹೀಗಳೆದು ಮಾತನಾಡಿದ್ದಕ್ಕೆ ಜಗಜ್ಜೇತಾ ಸಿಕಂದರನು:

"ರುಕಸಾನಾ! ಒಬ್ಬ ಅರಸ್ತು ಮನಸ್ಸು ಮಾಡಿದರೆ ಸಾವಿರ ಸಿಕಂದರರನ್ನು ಹುಟ್ಟಿಸಬಲ್ಲ; ಆದರೆ ಸಾವಿರ ಸಿಕಂದರರು ಕೂಡಿ ಒಬ್ಬ ಅರಸ್ತುನನ್ನು ನಿರ್ಮಿಸಲಾರರು" ಎಂದು ಉತ್ತರಿಸಿದ್ದ.

ಈ ಮಾತಿನಲ್ಲಿ ಸಿಕಂದರನಲ್ಲಿಯ ಗುರುಭಕ್ತಿಯ ಜೊತೆಗೆ ಗುರುವಿನಲ್ಲಿ ಎಂಥ ಸಾಮರ್ಥ್ಯವಿರುವುದೆಂಬುದೂ ಗೊತ್ತಾಗುವದು.

ಇಂದು ಕಲಾವಂತರನ್ನು ಜಗತ್ತು ಗೌರವಿಸುತ್ತದೆ. ಅವರಲ್ಲಿಯ ಕಲೆಗೆ ಮಹತ್ವವನ್ನೀಯುತ್ತದೆ. ಆದರೆ ಆ ಕಲಾಕಾರನ [illegible] ಒಳಿವನ್ನು ಅವನ ಬಾಲ್ಯದಲ್ಲಿಯೇ ಕಂಡು ಹಿಡಿದು, ಪ್ರೋತ್ಸಾಹಿಸಿ ಅವನನ್ನು ಉನ್ನತಮಟ್ಟಕ್ಕೇರಿಸುವ ತೆರೆಮರೆಯ ವ್ಯಕ್ತಿಯ ಪಾತ್ರವು ಮಾತ್ರ ತುಂಬಾ ಹಿರಿದು. ಅಂಥ ಕಾರ್ಯವನ್ನು ಮಾಡುವ ಕೆಲವೇ ಕೆಲವರಲ್ಲಿ ಗದುಗಿನ ಶ್ರೀಮಾನ್ ಟಿ. ಪಿ. ಅಕ್ಕಿಯವರೂ ಒಬ್ಬರಾಗಿದ್ದಾರೆ.

ಶ್ರೀ. ಟಿ. ಪಿ. ಅಕ್ಕಿಯವರು

ಗದುಗಿನಂಥ ‘ಲೆಕ್ಕಾಚಾರದ’ ನಗರದಲ್ಲಿ ಕಲಾಮಂದಿರವನ್ನು ನಡೆಸಿಕೊಂಡು ಹೋಗುವದೆಂದರೆ ಸಹಾರಾ ಮರುಭೂಮಿಯಲ್ಲಿ ನಂದನ ವನವನ್ನು ನಿರ್ಮಿಸಲು ಹೊರಟಂತೆ ಎಂಬುದು ಎಂಥವರೂ ಒಪ್ಪತಕ್ಕ ಸಂಗತಿಯಾಗಿದೆ. ಅಂಥಲ್ಲಿ ಶ್ರೀ ಅಕ್ಕಿಯವರು "ವಿಜಯ ಕಲಾ ಮಂದಿರ" ವೆಂಬ ಸಂಸ್ಥೆಯನ್ನು ತಾವೇ ನಿರ್ಮಿಸಿ ಅದನ್ನು ಯಶಸ್ವಿಯಾಗಿ ನಡೆಯಿಸುತ್ತಿದ್ದಾರೆ.

ದಿನಾಂಕ ೧—೬—೪೭ ರಂದು ಕೇವಲ ಹತ್ತು ವಿದ್ಯಾರ್ಥಿಗಳಿಂದ ಪ್ರಾರಂಭವಾದ ಈ ಕಲಾಮಂದಿರವು ಇಂದು ನೂರೆಂಟು ಜನ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ಚಿತ್ರಕಲೆ-ಸಂಗೀತ ಕಲೆ ಹಾಗು ನೃತ್ಯ ಕಲೆಯ ವಿದ್ಯೆಯನ್ನು ನೀಡುತ್ತಿದೆ [illegible]

[illegible]

ಪಾತ್ರರಾದ ಎಷ್ಟೋ ಬಡ ವಿದ್ಯಾರ್ಥಿಗಳು ಇಂದು ಸುಖವಾಗಿ ಜೀವಿಸುತ್ತಿದ್ದಾರೆ.

ಜೀವನ [illegible]ಕ್ಕಾಗಿ ಅಕ್ಕಿಯವರು ಗದುಗಿನ ಮುನಸಿಪಲ್ ಹೈಸ್ಕೂಲಿನಲ್ಲಿ ಶಿಕ್ಷಕರಾಗಿದ್ದಾರೆ. ಅವರು ತಮ್ಮ ಜೀವನದ [illegible] ರಿಂದಲೇ [illegible]

[illegible]

ರಬ್ಬರ ಸ್ಟಾಂಪು

[illegible]

ನವ ಸಾಹಿತ್ಯ ಪಥ

ಗುರುಕೃಪೆ:-(ಏಳು ಕತೆಗಳಸಂಗ್ರಹ) ಲೇ: **ಎಸ್ ವಿ ಕೋನೇರಿಪುರ**, ಪ್ರಕಾಶಕರು: ಭಾರತೀ ಸಾಹಿತ್ಯ ಭಂಡಾರ ಯರನಾಳ ಬೆಲೆ ೦-೮-೦ ಪುಟ ೮೦

ಇದು ಒಂದು ಮನರಂಜನೆ ಪಡೆಯಬಹುದಾದಂಥ ಲಘು ಕತೆಗಳ ಸಂಗ್ರಹ ಸಣ್ಣ ಸಣ್ಣ ವಾಕ್ಯಗಳು ಕಥೆಗಳನ್ನು ಮುಂದಕ್ಕೆ ಓದುವಂತೆ ಉತ್ಸಾಹ ಹುಟ್ಟಿಸುತ್ತವೆ. ಲೇಖಕರು ಕಥೆಹೇಳುವಂತೆ ಬರೆದಿದ್ದಾರೆ. ಮುಂದೇನಾಯಿತು ಎಂಬ ಕುತೂಹಲವನ್ನು ಕಾಯುತ್ತ ಹೋಗಿ ಕೊನೆಗೆ ಕತೆ ಮುಕ್ತಾಯವಾದಾಗ ಏನಾದ ಹಾಗಾಯಿತು? ಎಂದು ವಿಚಾರಿಸಿದರೆ ಈ ಕಥೆಗಳು ಮನರಂಜನೆ ಎಂಬುದಕ್ಕಿಂತ ಹೆಚ್ಚಿನ ಉತ್ತರ ಕೊಡಲಾರವು.

ಮೊದಲ ಕತೆ ಗುರುಕೃಪೆಯಲ್ಲಿ ಒಂದು ಅಸಾಧ್ಯವಾದ ಘಟನೆ ನಡೆದಿದೆ. ೬ತಿಂಗಳ ಕಠಿಣ ಸಜೆ ಅನುಭವಿಸುವ ಪಾಂಡುರಂಗ ರಾಯರು ಅದೇ ಕಾಲಕ್ಕೆ ಮಳಖೇಡದಲ್ಲಿ ಟೀಕಾಚಾರ್ಯರ ಪೂಜೆ ಮಾಡುತ್ತಿರುತ್ತಾರೆ. ಟೀಕಾಚಾರ್ಯನ ಪವಾಡವಂತೂ ಕತೆಯ ಉದ್ದೇಶವೇ ಎಂದು ಸ್ಪಷ್ಟವಾಗಿದೆ.

ಬಂಗಾರದ ಹೆಣ್ಣು:- (ಕಾದಂಬರಿ) ಲೇ. ಎಂ. **ದಸ್ತಗೀರ್ ಗದಗ**, ಪ್ರಕಾಶಕರು: **ಪ್ರತಿಭಾ ಗ್ರಂಥಮಾಲೆ ಧಾರವಾಡ**. ಬೆಲೆ ೦-೧೪-೦ ಪುಟಗಳು ೮೦

ಬಂಗಾರದ ಹೆಣ್ಣು ' ತರುಣನೊಬ್ಬನ ಸಾಹಸ ಚಿತ್ರಿಸುವ ಕಾದಂಬರಿ. ನೀಲ ಅಡಿನ ಮತ್ತು ಪಥ್ ಬ್ರೀಬನ್ ಎಂಬ ಇಬ್ಬರು ಯುವಕರು ಕಾಡಿನ ಅರಸನಾದ ಶರ್ಲನ ಮಗಳು ಮೆಲೀಸಾಳನ್ನು ಪಡೆಯುವುದಕ್ಕಾಗಿ ಕಾಡಿನಿಂದ ಬಂಗಾರ ತರುವ ಸಾಹಸ ಕಾದಂಬರಿಯ ಕಥೆ ಧೂರ್ತ ಪಪ್, ವಿನಯ ವಿವೇಕ ಮತ್ತು ನೀತಿಗಳುಳ್ಳ ನೀಲನೊಡನೆ ಸ್ಪರ್ಧಿಸುತ್ತಾನೆ. ನೀಲನ ಕೆಲಸವನ್ನು ಅಪಹಾರ ಮಾಡಿದ್ದರಿಂದಲೇ ತನ್ನ ಉದ್ದೇಶಪೂರ್ಣವಾಗುತ್ತದೆ ಎಂದು ಅವನು ನಂಬಿದ್ದನು. ಇಬ್ಬರೂ ಎರಡು ನೀತಿಗಳ ಪ್ರತಿನಿಧಿಗಳು. ಇಬ್ಬರಲ್ಲಿ ನೀಲನ ಮಾನವೀಯ ಗುಣ ದೊಡ್ಡದು. ಆದರಿಂದ ಅವನ "ಗೂಳಿ" ವಿಜಯಕ್ಕೆ ಕಾರಣವಾಯಿತು.

ದಸ್ತಗೀರರ ಶೈಲಿ ಆಕರ್ಷಕವಾಗಿದೆ. ಓದುಗರನ್ನು ಎತ್ತಹೇಗೆ ಒಯ್ಯಬೇಕೆಂದು ಅವರು ಬಲ್ಲರು. ಶೈಲಿಯಲ್ಲಿ ಈ ಗುಣ ಇರುವುದರಿಂದ ಕ್ಯಾಲಿಫೋರ್ನಿಯಾ ಪ್ರವಾಸ ಮಧ್ಯದ ಘಟನೆಗಳು ವಿಶೇಷವಾಗಿ ಆದಿವಾಸಿಗಳ ಪ್ರಕರಣವು ಅಸಂಗತವಾಗಿದ್ದು ಸಾಮಾನ್ಯ ಓದುಗನ ಕಣ್ಣು ತಪ್ಪಿಸಿಕೊಳ್ಳುವುದು.

ಮಿಸ್ ರೋಜಾ:— (ಪತ್ತೇದಾರಿ ಕಾದಂಬರಿ) ಲೇ. ಶ್ರೀ ಎಂ ಸಿದ್ಧರಾಮೇಶ ಪ್ರಕಾಶಕರು ಸಮಾಜ ಪ್ರಕಟನಾಲಯ ಗದಗ, ೧೧೩ ಪುಟಗಳು ಬೆಲೆ ೦ ೬-೦

ಈಗಾಗಲೇ ಎರಡು ಪತ್ತೇದಾರಿ ಕಾದಂಬರಿಗಳನ್ನು ಬರೆದು ಓದುಗರಿಗೆ ಪರಿಚಿತರಾಗಿರುವ ಶ್ರೀ ಎಂ ಶಿದ್ಧರಾಮೇಶರು ತಮ್ಮ ಮೂರನೆಯ ಕೃತಿಯಲ್ಲಿ ಸಾಕಷ್ಟು ಮುಂದುವರಿದಿದ್ದಾರೆಂದೇ ಹೇಳಬೇಕು. ಅನವಶ್ಯಕ ಹೆಣ್ಣಿನ ವರ್ಣನೆಗಳು ಹಾಗು ಕೆಲವು ಅಸ್ವಾಭಾವಿಕ ಸನ್ನಿವೇಶ

ಶ್ರೀ. ಟಿ. ಪಿ. ಅಕ್ಕಿ

[[illegible]]

ದೊರಕಿಸಬಲ್ಲನು" ಎಂದು ಶ್ರೀ. ಅಕ್ಕಿಯವರು ಹೇಳುತ್ತಾರೆ. ಅದೇ ರೀತಿ ಅವರು ಜೀವನದುದ್ದಕ್ಕೂ ನಡೆದುಕೊಂಡು ಬಂದಿದ್ದಾರೆ. [illegible]

[illegible]

ಕಲೆಯನ್ನು ಪೋಷಿಸುತ್ತಿದ್ದಾರೆ. ಶ್ರೀಗಳಾದ ಎಮ್. ಎ. ಚೆಟ್ಟಿ, ಸಿ. ಎನ್. ಪಾಟೀಲ, ಕಾಳೆ ವ್ಹಿ. ಟಿ, ಕಮಾನಗಾರ ಹಾಗು ಸಿ. ಟಿ. ರಾಯಕರರಂಥ ನಿಷ್ಣಾತ ಚಿತ್ರ ಶಿಲ್ಪಿಗಳು ಕುಮಾರಿ ಅಸಂಗಿಯವರಂಥ ಹೆಣ್ಣುಮಕ್ಕಳ ಕಲಾ ಪರಿಣತರೂ ಶ್ರೀ. ಅಕ್ಕಿಯವರೊಂದಿಗೆ ಸಹಕರಿಸಿ [illegible]

[illegible]

ಒಂದು ಮರಾಠಿ ಕತೆ

ಅವನು ನಿಜ ಹೇಳಿದ್ದರೆ?

ಶ್ರೀ ಮುಕುಂದ ಪರಾಂಜಪೆ

ಅನು: ಜಿ. ಕೆ. ಕ್ಷೀರಸಾಗರ, ಬಿ. ಕಾಂ. ಹುಬ್ಬಳ್ಳಿ

ಕಟ್ಟಿಗೆ ಹೊರೆಗಳನ್ನು ಮಾರಾಟ ಮಾಡಿ ಉಪಜೀವಿಸುವ ಕಾಳಪ್ಪನು ಬಹು ಪ್ರಾಮಾಣಿಕನು. ಅವನಲ್ಲಿರುವ ಪ್ರಾಮಾಣಿಕತನವು ಬಹು ಪ್ರಾಚೀನ ಕಾಲದ್ದು. ಒಂದು ಸಲ ಅವನು ಕಟ್ಟಿಗೆಗಳನ್ನು ತರಲೋಸುಗ ಅರಣ್ಯಕ್ಕೆ ಹೋದಾಗ ಅವನ ಕೊಡಲಿಯು ಕೈ ಜಾರಿ ಕೆರೆಯೊಳಗೆ ಬಿದ್ದಿತು. ಆಗ ಅವನು ಕೆರೆಯ ದಂಡೆಯ ಮೇಲೆ ಅಳುತ್ತ ಕುಳಿತುಕೊಳ್ಳಲು ವಿಷ್ಣುವು ಅವನಿಗೆ ಪ್ರತ್ಯಕ್ಷನಾಗಿ ಮೊದಲು ಬಂಗಾರ, ಅನಂತರ ಬೆಳ್ಳಿಯ ಕೊನೆಗೆ ಅವನ [illegible] ಕೊಡಲಿಯನ್ನು ನೀರಿನೊಳಗಿಂದ ಹೊರತೆಗೆದು ತೋರಿಸಿದನು. ಕಾಳಪ್ಪನ ಪ್ರಾಮಾಣಿಕತನಕ್ಕೆ ಮೆಚ್ಚಿದ ವಿಷ್ಣುವು ಅವನ ಕೊಡಲಿಯ ಜೊತೆಗೆ ಬಂಗಾರ—ಬೆಳ್ಳಿಯ ಕೊಡಲಿಗಳನ್ನೂ [illegible] ಕೊಟ್ಟಿದ್ದನು.

ಅದೇ ಪ್ರಾಚೀನ ಕಾಳಪ್ಪನು ಆಧುನಿಕನಾಗಿ ಹೆಂಡತಿಯೊಂದಿಗೆ ಒಂದು ಸಲ ಮುಂಬಯಿಗೆ ಬಂದನು. ಅವನು ಮುಂಬಯಿಗೆ [illegible] ಹೆಂಡತಿಯು ಒತ್ತಾಯವೂ [illegible]ವಾಗಿತ್ತು. ಪತಿ-ಪತಿಗಳೀರ್ವರೂ ಮಹಾ ನಗರ ಮುಂಬಯಿಯನ್ನು [illegible] ಗಣ್ಣುಗಳಿಂದ ನೋಡುತ್ತ [illegible] ಜನರ ಗದ್ದಲದಲ್ಲಿ ಅವನ ಹೆಂಡತಿ ತಪ್ಪಿಸಿಕೊಂಡಳು. ಕಾಳಪ್ಪನಿಗೆ [illegible] ದಂತಾಯಿತು. ಕೊನೆಗೆ ಅವನಿಗೆ ವಿಷ್ಣುವಿನ ನೆನಪಾಯಿತು. ಎಲ್ಲಿಯಾದರೂ ಏಕಾಂತ ಸ್ಥಳಕ್ಕೆ ಹೋಗಿ ಅಳುತ್ತ ಕುಳಿತುಕೊಂಡರೆ ಸಾಕು, ವಿಷ್ಣುವು ತಾನೇ ಭೆಟ್ಟಿಯಾಗುತ್ತಾನೆ, ನನ್ನ ಹೆಂಡತಿಯನ್ನು ಹುಡುಕಿಕೊಂಡು ಬರುತ್ತಾನೆ, ಎಂಬ ತನ್ನ ಹಿಂದಿನ ಅನುಭವದಂತೆ ಅವನು ಒಂದು ನಿರ್ಜನವಾದ ಸ್ಥಳಕ್ಕೆ ಹೋಗಿ ಅಳುತ್ತ ಕುಳಿತುಕೊಂಡನು.

ಅವನು ಯೋಚಿಸಿಕೊಂಡಂತೆ ವಿಷ್ಣುವು ಪ್ರತ್ಯಕ್ಷನಾಗಿ—

"ಏಕೆ ಅಳುತ್ತಿರುವಿ ಭಕ್ತಾ! ಈ ಸಲವೂ ಕೊಡಲಿಯನ್ನು ಕಳೆದುಕೊಂಡಿರುವಿಯೋ, ಇಲ್ಲವೆ ಕೊಡಲಿಯ ಕಾವು ಮುರಿದು ಹೋಗಿದೆಯೋ?" ಎಂದು ಕೇಳಿದ.

ಆಗ ಕಾಳಪ್ಪನು, "ಅಂಥದೇನೂ ಜರುಗಿಲ್ಲ ದೇವಾ! ಆದರೆ ಈ ಸಲ ನನ್ನ

ಹೆಂಡತಿಯನ್ನೇ ಕಳೆದುಕೊಂಡಿದ್ದೇನೆ." ಎಂದು ಅಳುತ್ತಲೇ ಉತ್ತರಿಸಿದನು.

"ಹೀಗೇನು? ಸರಿ. ನಿನ್ನ ಹೆಂಡತಿಯನ್ನು ಈಗ ಹುಡುಕಿಕೊಂಡು ತರುತ್ತೇನೆ. ನೀನು ಅಳಬೇಡ" ಎಂದು ವಿಷ್ಣುವು ಅವನನ್ನು ಸಂತೈಸಿ ಮುಂಬಯಿಗೆ ಹೋದನು.

ವಿಷ್ಣುವು ಕಾಳಪ್ಪನ ಹೆಂಡತಿಯನ್ನು ಕರೆದುಕೊಂಡು ಬರುವಷ್ಟರಲ್ಲಿ ಆ ಪ್ರಕರಣವೇ ಮುಗಿದು ಹೋಗುತ್ತಿತ್ತು. ಆದರೆ [illegible]

[illegible]

ಬಹಳಷ್ಟು ಮೌಲ್ಯದ ಆಭರಣಗಳನ್ನು ಧರಿಸಿದವಳೂ ಆದ ಒರ್ವ ವೇಶ್ಯೆಯನ್ನು ಕರೆದುಕೊಂಡು ಬಂದನು. ಈ ರೀತಿ ಕರೆತರುವಲ್ಲಿ ರೂಪದ ಜೊತೆಗೆ ಆಭರಣಗಳ ಲಾಲಸೆಯು ಅವನಿಗೆ ಹುಟ್ಟುಹೇಳಲು ಹೆಚ್ಚುವದೇನೋ ಎಂದು ಪರೀಕ್ಷಿಸಬೇಕಾಗಿತ್ತು. ಅದರಂತೆ ಕಾಳಪ್ಪನಿಗೆ "ಇವಳು ನಿನ್ನ ಹೆಂಡತಿಯೋ?" ಎಂದು ಕೇಳಿದನು.

[illegible]

ಜನಪದ ಸಾಹಿತ್ಯ

ತಾವರಿಯ ಗಿಡಹುಟ್ಟಿ ದೇವರಿಗೆ ನೆರಳಾದಿ।
ನಾ ಹುಟ್ಟಿ ಮನಿಗೆ ಎರವಾದೆ। ಹಡೆದವ್ವ।
ನೀ ಕೊಟ್ಟ ಮನಿಗೆ ಹೆಸರಾದೆ॥

× × ×

ಹೆಣ್ಣು ಹಡಿಯಲಿ ಬ್ಯಾಡ ಹೆರವರಿಗೆ ಕೊಡಬ್ಯಾಡ।
ಹೆಣ್ಣು ಹೋಗಾಗ ಅಳಬ್ಯಾಡ। ಹಡೆದವ್ವ।
ಸಿಟ್ಟಾಗಿ ಶಿವಗ ಬೈಬ್ಯಾಡ॥

× × ×

ಬ್ಯಾಸಗಿ ದಿವಸಕ್ಕ ಬೇವಿನ ಮರತಂಪು।
ಭೀಮರತಿಯೆಂಬ ಹೊಳೆತಂಪು! ಹಡೆದವ್ವ।
ನೀ ತಂಪು ನನ್ನ ತವರೀಗಿ॥

× × ×

ಕಡಗ ಇಲ್ಲದ ಕೈಯು ಕರುಣ ಇಲ್ಲದ ಪುರುಷ।
ಹಡೆದವ್ವನಿಲ್ಲದ ತವರೀಗಿ। ಹೋದಾರ
ಒಡಿವ್ಯಾಗ ವಸ್ತ್ರ ಇಳಧಾಂಗ

× × ×

ಅಕ್ಕ ಇದ್ದರ ಭಾವ, ರೊಕ್ಕ ಇದ್ದರ ಸಂತಿ।
ಮಕ್ಕಳಿದ್ದರ ಮುನಿಮಾರ। ಹಡೆದವ್ವ।
ನೀ ಇದ್ದರ ನಮಗ ಸವರಾಜ್ಯ॥

× × ×

ಕಣ್ಣು ಮಕ್ಕಳ ಕಳುವಿ, ಕಣ್ಣೀಗಿ ನೀರ ತಂದು।
ಕಣ್ಣು ಕೆಳ್ಗಡಲಿ ಮುಸುಗ್ಹಾಕಿ। ಹಡೆದಪ್ಪ।
ಕಣ್ಣು ಹಾಕಿಂದ ಜಲುಮಾಕ॥

× × ×

ಕೋಟದ ಮಾಡೇನ ಸೂರ್ಯಚಂದ್ರಾಮೇನ।
[illegible] ಬಸಲೇನ। ಹಡೆದವ್ವ।
[illegible] ನಿನ್ನಣ್ಣ ಹೌದೇನ॥

× × ×

[illegible] ತವರೀಗಿ ಏನೆಂದು ಹಾಡಲೇ
[illegible] ಕರಿಕೀಯು। ಕುಡಿಯಂಗ।
[illegible]॥

ಕಾಸೀಗಿ ಹೋಗಲಕ ಏಸೊಂದು ದಿಸಬೇಕ।
ತಾಸೊತ್ತಿನ್ಹಾದಿ ತವರೂರ। ಮನಿಯಾಗ।
ಕಾಸಿ ಕುಂತಾಳ ಹಡೆದವ್ವ।

× × ×

ಹಾಸೀಗಿ ಹಾಸೆಂದಾ ಮಲ್ಲೀಗಿ ಮುಡಿಯೆಂದಾ।
ಬ್ಯಾಸತ್ತರ ಮಡಿದಿ ಮಲಗೆಂದಾ। ನನ ರಾಯಾ।
ತನ ನೋಡಿ ತವರ ಮರಿಯೆಂದಾ॥

× × ×

ಗಂಧೆಣ್ಣಿ ಹಚಿಕೊಂಡು ಗಂಗ್ಯಾಗ ನಿಂತಾಳ।
ಒಂದೊಂದ್ಯ ಹೇಳಿ ನಗತಾಳ। ರಾಯರಿಗೆ।
ಎಂಥ ಸಿರಿಗಂಗಿ ಹಡದಾಳ॥

× × ×

ಹಾಸೀಗಿ ಹಾಸೆಂದ್ರು ಮಲ್ಲೀಗಿ ಮೂಸೆಂದ್ರು
ನಿಂತು ನೂರಿಲಿಯ ಮಡಿಚೆಂದ್ರು। ರಾಯರಿಗೆ।
ಎಂಥ ಸಿರಿಗಂಗಿ ಹಡದಾಳ॥

× × ×

ಹಾಸೀಧಾಸಿಗಿ ಬಿಟ್ಟು ಹಾದೀಗಿ ಮಲಗ್ಯಾರ।
ಸೂಸಗಾಳೀಗೆ ಬಳುಕೂವ। ರಾಯರಿಗಿ।
ಏಸು ಬಾರಿ ಕಾಲ ಒಡಿಯಾಲೆ॥

× × ×

ಬೀಸಲಾರದ ಹೋಗಿ ಬೀದ್ಯಾಗ ನಿಂತೇನ
ದೇಸಾಯಿ ಅಣ್ಣಾ ಕರದೋಯ್ಯೋ। [illegible]
ಕೂಸೆತ್ತಿ ಹೊತ್ತುಗಳದೇನ॥

× × ×

ಕೂಸನಾದರು ಎತ್ತಿ ಏಸ್ಟುದಿನ ಕಳೆದೆವ್ವ।
ಲೇಸ್ಹೋಗು ನಿನ್ನ ಒಗೆತನ। ಇದ್ದರ।
ಏಸೊಂದು ಬಣ್ಣ ಉಡಿಸೇನ॥

× × ×

ಹಣಚಿಬಟ್ಟಿನ ಕೈಯ ಒತ್ತಿಒಡಿಯಲಿ ಬ್ಯಾಡ
ನೆತ್ತರಿಳದೀತು ಬೆರಳೀಗಿ। ನನರಾಯ
ಅತ್ತಿ ಬೈದಾಳು ಕೈಬೀಡೋ॥

ಸಂಗ್ರಹ

"ಪಥಿಕ" ಪರಿವಾರದಿಂದ

ಅವನು ನಿಜ ಹೇಳಿದ್ದರೆ ?

[ಹಿಂದೇ ಪುಟದಿಂದ ಮುಂದೆ ಸಾಗಿದ್ದು]

ಅವನು ಕಾಳಪ್ಪನ ಹೆಂಡತಿಯನ್ನೇ ಕರೆದುಕೊಂಡು ಬಂದು-

"ಇವಳಾದರೂ ನಿನ್ನ ಹೆಂಡತಿ ಹೌದೋ ಅಲ್ಲವೋ!" ಎಂದು ಕೇಳಿದನು.

[illegible]

"ಹಿಂದಕ್ಕೆ ನಾನು ನಿಜವನ್ನು ಹೇಳಿದ್ದಕ್ಕೆ ಬಂಗಾರ ಹಾಗೂ ಬೆಳ್ಳಿಯ ಕೊಡಲಿಗಳನ್ನು ಬಹುಮಾನವಾಗಿ ಕೊಟ್ಟಿರಿ. ಈ ಪ್ರಸಂಗದಲ್ಲಿಯೂ ನಾನು ನಿಜ ಹೇಳಿದ್ದರೆ ನೀವು ಈ ನಟಿಯನ್ನು, ವೇಶ್ಯೆಯನ್ನು ನನ್ನ ಕೊರಳಿಗೆ ಕಟ್ಟುತ್ತಿದ್ದಿರಿ. ಆಗ ನಾನೇನು ಮಾಡಲು ಸಾಧ್ಯವಿತ್ತು? [illegible]

[illegible]

ಪತ್ರಿಕೋದ್ಯಮ, ಪತ್ರಿಕೋದ್ಯಮಿಗಳು ಮತ್ತು ಅವರ ಸುತ್ತು ಮುತ್ತಲಿನ ಪ್ರಪಂಚವನ್ನು ಚಿತ್ರಿಸುವ ಒಂದು ಕಾಲ್ಪನಿಕ ಕಾದಂಬರಿ

ಸಣ್ಣಪ್ಪ ಸತ್ತಾಗ

ಲೇಖಕರು :

ಶ್ರೀ ಪ. ಲೋ. ಬಂಕಾಪುರ

ಈ ಕಾದಂಬರಿಯ ಯಾವುದೇ ಪಾತ್ರ ಇಲ್ಲವೇ ಘಟನೆಯು ಯಾವುದೇ ಸತ್ತ ಜೀವಂತ ಇಲ್ಲವೆ ಮುಂದೆ ಹುಟ್ಟಬಹುದಾದ ವ್ಯಕ್ತಿಗೆ ಸಂಬಂಧಿಸಿಲ್ಲ. ಈ ಕಥೆಯಲ್ಲಿಯ ಇಂಥವ್ಯಕ್ತಿ ತಾನೇ ಎಂದು ಯಾರೂ ತಾವು ಇತಿಹಾಸ ಪುರುಷರಂತೆ ವರ್ತಿಸಬಾರದು.

೧. ಸಣ್ಣಪ್ಪನ ಸಾವು

"ಗಿರಿರಾಯರೇ, ಗುರೂಜಿ ಕರೀತಾರ್ರೀ" ಎಂದು ವಿಶ್ವಂಭರ ಅವಸರವಸರವಾಗಿ ಹೇಳಿಹೋದ. ಗುರೂಜಿಯವರು ಹೀಗೆ ಕರೆಸಿಯೇ ಕರೆಸುತ್ತಾರೆಂದು ಗಿರಿ ಮೊದಲೇ ನಿರೀಕ್ಷಿಸಿಯೂ ಇದ್ದ. ಉದಾರ ಹೃದಯದ ದೊಡ್ಡ ಮನಸ್ಸಿನವರಾದ ಗುರೂಜಿ ಏನು ಹೇಳುತ್ತಾರೆಂಬುದನ್ನು ಅವನು ತಿಳಿದೂ ಇದ್ದ.

ಬೆಳಗಿನಿಂದಲೇ ಸುದ್ದಿ ನಗರವನ್ನೆಲ್ಲ ವ್ಯಾಪಿಸಿತ್ತು. ರಾತ್ರಿ ತನ್ನ ದಿನಪತ್ರಿಕೆಯ ಮೊದಲ ಪುಟಕ್ಕಾಗಿ ಕೆಲಸಮಾಡಿ ಬೇಗ್ಗೆ ಬಂದು ಮಲಗಿದ್ದ 'ಸುದಿನ' ಪತ್ರಿಕೆಯ ಸಹಾಯಕ ಸಂಪಾದಕ+ ಭಾಷಾಂತರಕಾರ + ಉಪಸಂಪಾದಕ ಗಿರಿಗೆ ಮಾತ್ರ ಅದು ತಡವಾಗಿ ತಿಳಿದಿತ್ತು. ಗಿರಿ ಗಂಟೆಗೆ ಎದ್ದುದೇ ಅದಕ್ಕೆ ಕಾರಣ.

ಗಿರಿ ಎಂಟು ತಾಸು ನಿದ್ದೆಯನ್ನು ಹೇಗಾದರೂ ತೆಗೆದೇ ತೀರಬೇಕೆಂಬ ಹಟಗಾರ. ಆದರೆ ಅವನು ಮತ್ತೆ ಮಲಗುವುದಕ್ಕೆ ಅವನನ್ನು ಎಬ್ಬಿಸಿದ್ದ ಸಿದ್ದಣ್ಣ ಅವಕಾಶ ಕೊಡಲಿಲ್ಲ. ಗಿರಿ ಕಣ್ಣು ಬಿಚ್ಚುತ್ತಲೇ ಸಿದ್ದಣ್ಣ ಹೇಳಿದ: "ಆಶ್ಚರ್ಯಕರ ಸುದ್ದಿ. ನಂಬಿದರೆ ನಂಬು, ಬಿಟ್ಟರೆ ಬಿಡು. + "ಪ್ರಸಂಗ" ಪತ್ರಿಕೆಯ ಸಂಪಾದಕ ಶಾನುಭೋಗರ ಸಣ್ಣಪ್ಪ ಹೃದಯ ವಿಕಾರದಿಂದ ನಿಧನ ಹೊಂದಿದ."

ಸುದ್ದಿ ಕೇಳಿ ಗಿರಿ ಕಣ್ಣುಜ್ಜಿಕೊಂಡ. ಮರಳಿ ನಿದ್ದೆಗೆ ಎಳಸುತ್ತಿದ್ದ ಅವನ ಮನಸ್ಸು ನಿದ್ದೆಯ ವಿಚಾರವನ್ನೇ ಮರೆತು ಬಿಟ್ಟಿತು. ಬಹಳ ಮಾತಿನವನಲ್ಲದ ಅವನು "ಹೌದೇ?" ಎಂಬ ಒಂದೇ ಒಂದು ಪ್ರಶ್ನೆ ಮಾಡಿ ಸಿದ್ದಣ್ಣನ ಸಮ್ಮತಿಯ ಹುಂಕಾರದಿಂದ ವಿಚಾರ ಮಗ್ನನಾದ.

ಸಿದ್ದಣ್ಣ ಬುಸ್ಸ ಹುಡುಗಾಟಿಯವನಲ್ಲವಾದ್ದರಿಂದ ಗಿರಿ ಆತನ ಮಾತುಗಳನ್ನೆಲ್ಲ ಸಂಪೂರ್ಣವಾಗಿ ನಂಬುತ್ತಿದ್ದ.

ಸಣ್ಣಪ್ಪ ಸತ್ತ ಸುದ್ದಿ ಗಿರಿಗೆ ದುಃಖವನ್ನು ಉಂಟುಮಾಡಲಿಲ್ಲ; ತನ್ನನ್ನು ಪೀಡಿಸಿದ ಒಂದು ಅನಿಷ್ಟ ತೊಲಗಿತೆಂಬ ಸಮಾಧಾನವೂ ಅವನಿಗೆ ಆಗಲಿಲ್ಲ. [illegible]

[illegible]

“ಹೌದಪ್ಪ; ಹಾರ್ಡಿಯ ತತ್ವದವನಾದ ನೀನು ಎಲ್ಲರೂ ಸಾಯಲಿಕ್ಕೇ ಹುಟ್ಟಿದ್ದಾರೆ ಎಂದು ಈಗ ಹೇಳಬೇಡ. ಆದರೆ ಸಣ್ಣಪ್ಪನಿಗೆ ಏನಾಗಿತ್ತು? ಪಾಪ! ಇನ್ನೂ ಹರೆಯದ ಪ್ರಾಣಿ, ಹುಡುಗ” ಎಂದು ಗಿರಿ ಸಾವಿನ ಕಾರಣವನ್ನು ವಿಚಾರಿಸಿದ.

[illegible]

[illegible]

ಮುರಿಸಿ ಕಾಗದ ತೆಗೆಸಿದ್ದನಂತೆ; ಬ್ಯಾಂಕಿನವರಿಗೆ ಆ ಸುದ್ದಿ ಮುಟ್ಟಿದೆ ಎಂದೂ ಯಾರೋ ಹೇಳಿದರು. ಇಂದು ಬೆಳಿಗ್ಗೆ ಏಕಾಏಕಿ ಅವನ ಹೃದಯಸ್ತಂಭನವಾಯಿತೆಂದು ಅವನ ಡಾಕ್ಟರ ಕಾಮತರು ಹೇಳಿದ್ದಾರೆ. ಊರಲ್ಲೆಲ್ಲ ಅವನು ವಿಷ ತೆಗೆದುಕೊಂಡಿದ್ದಾನೆ ಎಂದು ಗುಜು ಗುಜು ಇದೆ. ಕಾರಣ ಏನೋ, ಸತ್ತದ್ದು ಮಾತ್ರ ನಿಜ. ನಾನು ಅವನ ಮನೆಗೂ ಹೋಗಿ ಬಂದೆ.”

ಕಥೆ ಮುಗಿಯುವ ಹೊತ್ತಿಗೆ ಜನರು ಅಲ್ಲಸಲ್ಲದ ಸುದ್ದಿ ಹುಟ್ಟಿಸುವ ಬಗ್ಗೆ ಗಿರಿಗೆ ಸಿಟ್ಟು ಬಂದಿತ್ತು; “ವಿಷ ತೆಗೆದುಕೊಂಡ ಎನ್ನುವ ಕಥೆ ಸುಳ್ಳು; ಸಣ್ಣಪ್ಪ ಈ ಮಾನ ಮರ್ಯಾದೆಗಳನ್ನು ಲೆಕ್ಕಿಸದ, ಬಂದದ್ದೆಲ್ಲವನ್ನೂ ಧೈರ್ಯವಾಗಿ—ಈ ಶಬ್ದ ಬೇಡವೆನಿಸಿದರೆ ನಾಚಿಕೆಯಿಲ್ಲದೆ ಎನ್ನು—ಎದುರಿಸಬಲ್ಲ ನೀರಾನೆಯ ಚರ್ಮದ ಪ್ರಾಣಿ ಎಂಬದು ನನ್ನಂತೆ ನಿನಗೂ ಗೊತ್ತಿದೆ ಸಿದ್ದಣ್ಣ! ಎಂದಾಗ ಅವನ ಹೃದಯಸ್ತಂಭನವಾದದ್ದೇ ನಿಜ. ಅವನಂಥ ಕೊಣಪ ಹಾಗೂ ಸವಿಲುಗಚ್ಚೆಯ ಅನಿಯಮಿತ ಪ್ರಾಣಿಗಳಿಗೆಲ್ಲ ಅದು ಸಹಜವೇ ಇದೆ” ಎಂದು ಗಿರಿ ಸ್ವಲ್ಪ ಜೋರಾಗಿಯೇ ಮಾತಾಡಿದ.

ಗಿರಿಯ ಈ ಸ್ವಭಾವ ಸಿದ್ದಣ್ಣನಿಗೆ ಗೊತ್ತು. ಅವನೂ ಸ್ವತಃ ತನ್ನ ವೈರಿಗಳ ಬಗ್ಗೆ ಸತ್ಯವನ್ನೇ ಆಡುವ ಧೈರ್ಯಶೀಲನಾಗಿದ್ದ. ಈ ಪ್ರಸಂಗದಲ್ಲಿ ಹೆಚ್ಚಿಗೆ ಮಾತು ಬೆಳೆಸುವುದು ಅವನಿಗೆ ಬೇಕಾಗಿರಲಿಲ್ಲ. ಸತ್ತ ಸಣ್ಣಪ್ಪನ ಬಗ್ಗೆ ಸಂತಾಪದ ನಾಲ್ಕು ಮಾತುಗಳನ್ನಾಡಿ ಗಿರಿಯನ್ನು ಸ್ನಾನಕ್ಕೆಬ್ಬಿಸಿ ಹೋಗಿ ಬಿಟ್ಟ. ಗಿರಿ ಅರೆಮನಸ್ಸಿನಿಂದ ಅನ್ಯ ಮನಸ್ಕನಾಗಿ ಸ್ನಾನ ಊಟಾದಿಗಳ ಶಾಸ್ತ್ರ ಮುಗಿಸಿ ಆಫೀಸಿಗೆ ಬಂದಿದ್ದ.

ಸಣ್ಣಪ್ಪ ಹೇಗೇ ಇರಲಿ, ಏನೇ ಇರಲಿ, ನಾಡಿನ ಒಬ್ಬ ‘ಪ್ರಸಿದ್ಧ’ ಮನುಷ್ಯನಾಗಿದ್ದ. ಪತ್ರಿಕೋದ್ಯಮಿಯಾದ ಅವನಿಗೆ ಯಾರು ಬೇಕಾದವರನ್ನು ಹೀನಾಮಾನವಾಗಿ ಬೈಯುವ ಲೆಕ್ಕಣಿಕೆ ಇತ್ತು. ಅವನ ಹಿಂದೆ ಓಡಾಡುತ್ತ ಕರ್ನಾಟಕದ ಪ್ರಸಿದ್ಧ ಲೇಖಕರೆನಿಸಿಕೊಳ್ಳಲು ಹಂಬಲಿಸುತ್ತಿದ್ದ ನಾಲ್ಕೆಂಟು ಹುಡುಗರು ಅವನ ಬಾಲಾಗಸಿಗಳಾಗಿದ್ದರು.

ಈ ಜನರ ಹಾಗೂ ಆ ಲೆಕ್ಕಣಿಕೆಯ ಬಲದಿಂದ ಸಣ್ಣಪ್ಪ ಸಾವಿರಾರು ಜನರ ನಾಲಗೆಯ ಮೇಲೆ ಯಾವಾಗಲೂ ಕುಣಿಯುತ್ತ ಬಂದಿದ್ದ. ಅಂಥವನೊಬ್ಬ ಸತ್ತಾಗ ಅವನ ಬಗ್ಗೆ ಏನಾದರೂ ಪ್ರಕಟಿಸಬೇಕಾದುದು ದಿನ ಪತ್ರಿಕೆಗಳ ಒಂದು ಕರ್ತವ್ಯ-ಪ್ರಾಯಶಃ ಕರ್ಮ.

ಇನ್ನು ಮುಂದೆ ‘ಪಥಿಕ’ ದಲ್ಲಿ ಪ್ರತಿ ತಿಂಗಳೂ ಧಾರಾವಾಹಿಯಾಗಿ ಪ್ರಕಟವಾಗಲಿರುವ ಈ ಕಾದಂಬರಿಯ ಲೇಖಕ ಶ್ರೀ ಬಂಕಾಪುರರು ಕನ್ನಡಿಗರಿಗೆ ಪರಿಚಿತರೇ. ‘ನವಯುಗ’ ದಿನಪತ್ರಿಕೆಯ ಸಹಾಯಕ ಸಂಪಾದಕರಾಗಿರುವ ಅವರು ನಾಲ್ಕಾರು ಜನಾದರಣೀಯ ದಿನ, ವಾರ, ಹಾಗೂ ಮಾಸ ಪತ್ರಿಕೆ ನಡೆಸಿದವರು. ‘ಪಥಿಕ’ ಕ್ಕಾಗಿ ಅವರು ಕಾದಂಬರಿ ಕ್ಷೇತ್ರಕ್ಕೂ ಇಳಿದಿದ್ದಾರೆ. ಉತ್ತರ ಕರ್ನಾಟಕದ ಪತ್ರಿಕಾ ರಂಗದಲ್ಲಿ ಕಳೆದ. ೨೦ ವರ್ಷಗಳಿಂದ ಯಥಾ ಶಕ್ತಿ ಪಾತ್ರವನ್ನಾಡಿರುವ ಅವರು ತಮ್ಮ ಈ ಕಾದಂಬರಿಯಲ್ಲಿ ಪತ್ರಿಕೋದ್ಯಮದಲ್ಲಿಯ ಟೊಳ್ಳು-ಗಟ್ಟಿಗಳೆರಡನ್ನೂ ಚಿತ್ರಿಸಿದ್ದು ನಮ್ಮ ವಾಚಕರಿಗೆ ರುಚಿಸಬಹುದೆಂದು ನಂಬಿದ್ದೇವೆ. ಓದುಗರು ತಮ್ಮ ಅಭಿಪ್ರಾಯಗಳನ್ನು ಅವಶ್ಯ ತಿಳಿಸಬೇಕು.

—ಸಂ.

ಆ ಕರ್ಮವನ್ನು ಮುಗಿಸಲು 'ಸುದಿನ' ಪತ್ರಿಕೆಯ ಸಂಚಾಲಕ–ಸಂಪಾದಕ ಗುರೂಜಿಯವರು ಗಿರಿಯನ್ನು ಕರೆಸಿದ್ದರು. ಸಣ್ಣಪ್ಪನ ಕುತ್ಸಿತ ಮನೋವೃತ್ತಿಯನ್ನು ಸಣ್ಣತನವನ್ನು ಪ್ರತಿವಾರ ಕಾಣುತ್ತಿದ್ದ ಗುರೂಜಿಯವರು "ಸುದಿನ"ದಲ್ಲಿ ಸಣ್ಣಪ್ಪನನ್ನು ಕಡೆಗಣಿಸುತ್ತಿದ್ದರಷ್ಟೇ. [illegible]

[illegible]

ಮೇಲೆ, ಸತ್ತ ಸಣ್ಣಪ್ಪನ ಚಿಕ್ಕದೊಂದು ಹೊಸ ಬ್ಲಾಕೂ ಇದ್ದಿತು. ಅದು ಅಂದು ಪ್ರಕಟಣೆಗೆ ಕೊಡಲಿಕ್ಕಾಗಿ ಎಂಬುವನ್ನು ಗಿರಿಗೆ ಯಾರೂ ಹೇಳಬೇಕಾಗಿರಲಿಲ್ಲ. ತನ್ನ ಸಂಪಾದಕ ಗುರೂಜಿಯವರ ಹೃದಯವನ್ನು ಅರಿತಿದ್ದ ಗಿರಿಗೆ ಅವರು ಏನು ಹೇಳ [illegible] ಇದ್ದಿತಾದರೂ, [illegible] ಎಂದು ಅವನು ಬಗೆ [illegible] ವರ್ಷಗಳಿಂದ [illegible] "ಸುದಿನ" ಪತ್ರಿಕೆಯ [illegible] ಅಂಥದು [illegible] ಸತ್ತ ಸುದ್ದಿ ಬ್ಲಾಕ [illegible] ಗಿರಿಗೆ [illegible] ಬ್ಲಾಕನ್ನು ಅವನು

ಫರ್ನಿಚರ್ಸ್

● [illegible]

● [illegible]

[illegible]

ಹುಬ್ಬಳ್ಳಿ ಫರ್ನಿಚರ್ಸ್

[illegible] ಹುಬ್ಬಳ್ಳಿ

[illegible]

ಕೈಗೆತ್ತಿಕೊಂಡು ದಿಟ್ಟಿಸಿ ನೋಡಿದ. ಬ್ಲಾಕು ಸಣ್ಣಪ್ಪನದೇ ಆಗಿತ್ತು.

"ಬಂದಿರಾ?"—ಗುರೂಜಿ ಕೇಳಿದರು; 'ಸುದ್ದಿ ನಿಮ್ಮ ಕಿವಿಗೂ ಬಿದ್ದಿದೆಯಲ್ಲ? ಸರಿ ಈ ಬ್ಲಾಕಿನೊಂದಿಗೆ ಒಂದು, ಅಥವಾ ಮುಕ್ಕಾಲು ಕಾಲಂ ಸುದ್ದಿ ಕೊಡಿರಿ. ಮೇಲೆ ಒಂದು ಚಿಕ್ಕ ಸಂಪಾದಕೀಯವನ್ನೂ ಬರೆಯಿರಿ. ಪಾಪ! ಇನ್ನೂ ಸಣ್ಣ ಹುಡುಗ ಎಳೆ ವಯಸ್ಸಿನಲ್ಲೇ ಸತ್ತು ಹೋದ'' ಅವರ ಕಣ್ಣುಗಳು ಒದ್ದೆಯಾಗಿದ್ದವು.

ಗಿರಿಗೆ ಮಾತ್ರ ಈ ಮಾತುಗಳನ್ನು ಕೇಳಿದಾಗ ತಾನು ಗುರೂಜಿಯವರ ಎದುರಿಗೇ ನಿಂತಿರುವನೆಂಬ ಪ್ರಜ್ಞೆ ಹಾರಿಹೋಗಿತ್ತು. ಸಣ್ಣಪ್ಪ ಗುರೂಜಿಯವರಿಗೆ ಮಾಡಿದ ಅವಿಶ್ರಾಂತ ಅವಮಾನ, ನಾಡಿನ ರಾಜಕಾರಣಕ್ಕೆ ಹಾಗೂ ಜನಜೀವನಕ್ಕೆ ಹಚ್ಚಿದ ಬೇಗೆ–ಇವುಗಳೆಲ್ಲ ಅವನ ಕಣ್ಣು ಮುಂದೆ ತಾಂಡವವಾಡತೊಡಗಿದವು. ಪತ್ರಿಕಾಕರ್ತ ಹೇಗಿರಬಾರದು ಎಂಬುದಕ್ಕೆ ಒಂದು ಉದಾಹರಣೆಯಾಗಿದ್ದ ಸಣ್ಣಪ್ಪನ ಬಗ್ಗೆ ಗುರೂಜಿ ಫೋಟೋ ಸಹಿತ ಸುದ್ದಿ ಕೊಡುವುದಕ್ಕೆ ಹೇಳಿದ್ದು ಸಾಲದೆ, ಸಂಪಾದಕೀಯವನ್ನೂ ಬರೆಯಲು ಹೇಳಿದ್ದನ್ನು ಕೇಳಿ ಅವರ ಮೇಲೆಯೇ ಸಿಟ್ಟು ಬಂದಿತು ಗಿರಿಗೆ.

"ಸಂಪಾದಕೀಯ ಬರೆಯುವುದು ನನ್ನಿಂದ ಸಾಧ್ಯವಿಲ್ಲ'' ಎಂದು ಅವನು ಧಿಕ್ಕಾರದ ಸ್ವರದಲ್ಲಿಯೇ ಹೇಳಿದ.

"ಏಕೆ ಆಗುವುದಿಲ್ಲ ?"

"ಸಣ್ಣಪ್ಪ ಏನಿದ್ದ? ಹೇಗಿದ್ದ?-ಇದೆಲ್ಲ ನಿಮಗೆ ಗೊತ್ತಿದೆ''

> ಜನರ ಸ್ವಭಾವವು ಭಿನ್ನ ಭಿನ್ನವಾಗಿರುತ್ತದೆ. ತನ್ನ ಸ್ವಭಾವಕ್ಕೆ ಅನುಗುಣವಾದ ಕೆಲಸದಲ್ಲಿ ಪ್ರತಿಯೊಬ್ಬನೂ ನಿರತನಾದರೆ ಅವನಿಗೂ ಶ್ರೇಯಸ್ಸು, ಸಮಾಜಕ್ಕೂ ಶ್ರೇಯಸ್ಸು, ಇದು ಒಳ್ಳೆಯ ಸಮಾಜದ ಲಕ್ಷಣ. — ಪ್ಲೇಟೋ

"ಹೌದು. ಮುಂದೆ?"

"ಸಣ್ಣಪ್ಪ ನಿಮಗೆ, ನಿಮ್ಮಂಥ ಸಜ್ಜನರಿಗೆ, ಸಮಾಜಕ್ಕೆ, ನಾಡಿಗೆ ಹಾಗೂ ಪತ್ರಿಕಾ ಪ್ರಪಂಚಕ್ಕೆ ಎಷ್ಟೊಂದು ಅನ್ಯಾಯ ಮಾಡಿರುವನೆಂಬದೂ ನಿಮಗೆ ಗೊತ್ತಿದೆ."

"ಹೌದು. ಮುಂದೆ?" ಮಂದಸ್ಮಿತರಾಗಿ ಕೇಳಿದರು ಗುರೂಜಿ.

" ಮುಂದೆ, ಮುಂದೆ-ಎಂದರೆ ಏನು ಹೇಳಲಿ ಗುರೂಜಿ? ಸ್ವತಃ ನನಗೆ ಅವನಿಂದ ಎಂಥ ಅನ್ಯಾಯವಾಗಿದೆ ಎಂಬುದನ್ನೂ ನಿಮಗೆ ಮತ್ತೊಮ್ಮೆ ಹೇಳಲೇ?"

"ಹೌದು. ನೀವು ಇದೀಗ ಮುಖ್ಯ ವಿಷಯಕ್ಕೆ ಬರುತ್ತಿದ್ದೀರಿ. ಮುಂದೆ?''

" ಇಂಥ ಒಬ್ಬ ಚಾಂಡಾಲನ ಬಗ್ಗೆ, ಅವನ ಅಂಗಾಲಿನಿಂದ ತಲೆನೂದಲವರೆಗಿನ ಅಂತರಂಗವನ್ನೆಲ್ಲ ತಿಳಿದ ನಾನು ಸಂಪಾದಕೀಯ ಬರೆಯಬೇಕೆ? ಅಂಥ ಸಂಪಾದಕೀಯ ಬರೆದರೆ ಜನವೇನೆಂದಾರು? ಸತ್ತವನ ಮೇಲೆ ದ್ವೇಷಕಾರುವುದು ವಿಹಿತವಾದೀತೆ?''

" ಸರ್ವಥಾ ವಿಹಿತವಾಗಲಾರದು. ಆದರೆ ಸಣ್ಣಪ್ಪನ ಮೇಲೆ 'ಸುದಿನ'ಕ್ಕೆ ದ್ವೇಷವಿದೆಯೋ? ನನಗೆ ದ್ವೇಷವಿದೆಯೇ? ಸ್ವತಃ ನಿಮಗೆ ದ್ವೇಷವಿದೆಯೇ?"

"ಇಲ್ಲ"

"ಸರಿ. ಹಾಗಾದರೆ ದ್ವೇಷ ಎಂಬ ಶಬ್ದವೇಕೆ ಬಂತು ನಿಮ್ಮ ಬಾಯಿಂದ?"

"ಅವನ ಬಗ್ಗೆ ಸತ್ಯವನ್ನೇ ಬರೆದರೂ ಅದು ದ್ವೇಷಕಾರುವದಕ್ಕಿಂತ ಉಗ್ರವಾಗುವುದು. ಅವನು ಮನುಷ್ಯನಂಥ ಒಂದು ಪ್ರಾಣಿಯಾಗಿದ್ದನಾಗಲೀ ಮನುಷ್ಯನಾಗಿರಲಿಲ್ಲ. ಅದನ್ನೆಲ್ಲ ಹೇಗೆ ಬರೆಯುವದು ಗುರೂಜಿ?"

"ಹೀಗೋ? ಆಗಲಿ, ನಿಮ್ಮ ಮಾತನ್ನೇ ಒಪ್ಪೋಣ. ಸತ್ತವನ ಬಗ್ಗೆ ಕೆಟ್ಟ ಮಾತುಗಳನ್ನಾಡಬಾರದು, ಸತ್ತವನು ಮಾಡಿದ ಕೆಟ್ಟದ್ದನ್ನೆಲ್ಲ [illegible]"

"ಹೌದು"

"ಅವನು ಮಾಡಿದ ಒಳ್ಳೆಯದನ್ನೇ ಬರೆದು ಬಿಡಿ"

[illegible]

"ಅದನ್ನು ನಾನು ಒಪ್ಪುತ್ತೇನೆ."

"ಅದಿರಲಿ, ಸಣ್ಣಪ್ಪ ಆರೇ ಆರು ತಿಂಗಳ ಅವಧಿಯಲ್ಲಿ ತನ್ನ ಪತ್ರಿಕೆಗೆ ಆರೆಂಟು ಸಾವಿರ ಪ್ರತಿಗಳ ಪ್ರಸರಣವನ್ನು ಪಡೆದ. ಅವನ ಈ ಸಾಹಸವನ್ನು ಒಪ್ಪುತ್ತೀರಾ?"

"ಅದರ ಗುಟ್ಟು ನನಗೆ ಗೊತ್ತಿದೆ. ಆದರೆ ಅಷ್ಟು ಪ್ರತಿಗಳ ಮುದ್ರಣ ಮಾಡುತ್ತಿದ್ದುದು ಮಾತ್ರ ಸುಳ್ಳಲ್ಲ."

"ಅರ್ಥಾತ್, ಅಂಕಿ ಒಪ್ಪಿದಂತೇ ಆಯಿತು. ವಿದೇಶಕ್ಕೆ ಹೋಗಿ ಪತ್ರಿಕಾ [illegible] ಬಂದ [illegible] ಕೆಲವೇ ಕೆಲವರಲ್ಲಿ ಸಣ್ಣಪ್ಪ

[illegible]

ನದೊಂದು ವೈಶಿಷ್ಟ್ಯ ವಿತ್ತೆಂಬುದನ್ನು ನೀವು ಬಲ್ಲಿರಾ?''

"ನಾನು ಬಲ್ಲೆ ಗುರೂಜಿ. ಆದರೆ ಆ ವೈಶಿಷ್ಟ್ಯದ ಗೂಢ ನಿಮಗೆ ತಿಳಿದಿಲ್ಲ. ಆದರೂ ಹೇಳುವದಕ್ಕೂ ಒಂದು ಒಳ್ಳೆಯ ಗುಣವಿದೆ ಎನ್ನೋಣ"

''ನಾಲ್ಕನೆಯದಾಗಿ, ಸಣ್ಣಪ್ಪ, ನನಗೆ ತಿಳಿದ ಮಟ್ಟಿಗೆ, ಅವಿಶ್ರಾಂತ ಕೆಲಸಗಾರ, ದೇಹದ ಪರಿವೆಯಿಲ್ಲದೆ ದುಡಿಯುವ ಪ್ರಾಣಿ ಎಂದು ಅನೇಕರು ಅವನನ್ನು ಹೊಗಳುತ್ತಾರೆ. ನೀವು ಕೇಳಿದ್ದಿರಷ್ಟೇ?"

"ಕೇಳಿದ್ದಷ್ಟೇ ಅಲ್ಲ ಆ ನಾಟಕದ ನಿಗೂಢವನ್ನೂ ಬಲ್ಲೆ. ಆಗಲಿ ಸತ್ತವನ ಬಗ್ಗೆ ಹೇಳಲು ಅದೂ ಒಂದು ಒಳ್ಳೆಯ ಮಾತಿದೆ"

"ಇದೆಲ್ಲಕ್ಕಿಂತ ಹೆಚ್ಚಾಗಿ ಸಣ್ಣಪ್ಪನ ಬಗ್ಗೆ ನಾವು ಸಂಪಾದಕಿಯವನ್ನೇ ಪ್ರಕಟಿಸಲು ಇನ್ನು ಒಂದು ಕಾರಣವಿದೆ. ಅವನು ನಮ್ಮ ಪತ್ರಿಕೆಯ ಕಚೇರಿಯಲ್ಲೂ ಸೇವಕನಾಗಿದ್ದ. ಎರಡು ವರ್ಷ ಈ ಪತ್ರಿಕೆಯ ಸಂಪಾದಕನೆಂದು ಅವನನ್ನು ನೇಮಿಸಿದ್ದೆವೆಂಬುದನ್ನು ನೀವು ಬಲ್ಲಿರಿ ಇದನ್ನು ಸೇರಿಸಿ ಸ್ವಲ್ಪ ಹೊಗಳಿ ಬರೆಯಿರಿ."

"ಗುರೂಜಿ, ಕ್ಷಮಿಸಬೇಕು. ಸಣ್ಣಪ್ಪನಿಂದ 'ಸುದಿನ'ಕ್ಕೆ ಏನೇನು ಅನ್ಯಾಯವಾಗಿದೆ, 'ಸುದಿನ'ದ ಬೆನ್ನ ಬಲವಾಗಿ ನಿಂತಿರುವವರಲ್ಲಿ ಎಂಥೆಂಥ ಜಗಳ ಹಚ್ಚಿದ, ಇದನ್ನು ನಾನು ಬಲ್ಲೆ. ಈಗ ಈ ಸತ್ಯವನ್ನು ಮರೆಮಾಚಿ ಅವನನ್ನು ಏನೆಂದು ಹೊಗಳಲಿ?"

> ಪತ್ರಿಕೆಗಳನ್ನು ಯಾರು ನಡೆಸುತ್ತಾರೋ ಅವರ ಗುಣದಂತೆ ಪತ್ರಿಕೆ ಒಳ್ಳೆಯದೋ ಕೆಟ್ಟದ್ದೋ ಇರುತ್ತದೆ. ಬೀಸುವ ಗಿರಣಿಯಲ್ಲಿ ಯಾವುದನ್ನು ಹಾಕಿದರೂ ಅದನ್ನು ಹಿಟ್ಟು ಮಾಡಿಯೇ ಚೆಲ್ಲುತ್ತಿದೆ. ಅದರಲ್ಲಿ ವಿಷಪೂರಿತ ಕಾಳು ಹಾಕಿದರೂ, ಅದು ಊಟಕ್ಕೆ ಹಿಟ್ಟನ್ನು ಕೊಡುತ್ತದೆ; ಆದರೆ ಆ ರೊಟ್ಟಿಯಲ್ಲಿ ಸಾವು ಇರುವುದು.
>
> — ಬ್ರಿಯಾಂಟ

"ಒಬ್ಬನನ್ನು ಅವನಿಂದ ಸಮಾಜಕ್ಕೆ ಎಳ್ಳಷ್ಟಾದರೂ ಸೇವೆ ಸಲ್ಲಿದರೆ ಪ್ರಶಂಶೆ ಮಾಡುವುದರಲ್ಲಿ ಯಾವ ತಪ್ಪೂ ಇಲ್ಲ. ಸಣ್ಣಪ್ಪನಿಂದ ಇನ್ನೇನೂ ಆಗದಿದ್ದರೂ ಕೆಲ ಜನರಲ್ಲಿ ಓದುವ ಅಭಿರುಚಿಯಾದರೂ ಬೆಳೆಯಿತು, ಸಾಕು. ಸತ್ತಮೇಲೆ ಯಾವನನ್ನೂ ತೆಗಳಬಾರದು. ಅವನಲ್ಲಿ ಇದ್ದ ಒಳ್ಳೆಯದನ್ನೇ ಎತ್ತಿ ಸತ್ಯಕ್ಕೆ ಚ್ಯುತಿ ಬಾರದಂತೆ ಹೊಗಳಿದರೆ ಸಾಕು. ಅಷ್ಟು ಮಾಡಿ ಚಿಕ್ಕದೊಂದು ಸಂಪಾದಕೀಯ ಮುಗಿಸಿರಿ"

ಗಿರಿಗೆ 'ಆಗಲಿ' ಎನ್ನದೆ ವಿಧಿಯಿರಲಿಲ್ಲ. ಗುರೂಜಿಯವರ ಕೋಣೆಯಿಂದ ಹೊರಬಿದ್ದು ತನ್ನ ಟೇಬಲ್ಲಿಗೆ ಬಂದು ಕುಳಿತ.

೩. ಒಂದು ಸಂತಾಪಕೀಯ

ಗಿರಿ ಸಣ್ಣಪ್ಪನ ಬಗ್ಗೆ ಸಂಪಾದಕೀಯವನ್ನು ಬರೆಯಲು ಪ್ರಾರಂಭಿಸಿದ. ಅವನ ವಾಕ್ಯಗಳು ಒಂದೊಂದಾಗಿ ಮುಂದೆ ಸಾಗಿದವು.

"ನಗರದ ವೃತ್ತಿ ಬಂಧುಗಳಲ್ಲಿ ಒಬ್ಬರಾಗಿದ್ದ ಶ್ರೀ. ಶಾನುಭೋಗ ಸಣ್ಣಪ್ಪನವರು

ಮರಣಹೊಂದಿದರೆಂದು ನಮ್ಮ ಓದುಗರಿಗೆ ಬರೆಯಲು ದುಃಖವಾಗುತ್ತದೆ. ಇನ್ನೂ ಎಳೆವಯಸ್ಸಿನ ಸಣ್ಣಪ್ಪ ಸತ್ತರೆಂದು ಹೇಳಿದರೆ ಯಾರೂ ನಂಬಲಿಕ್ಕಿಲ್ಲ. ಆದರೂ ಅದು ಘೋರ ಸತ್ಯವಾಗಿದೆ. ಸಣ್ಣಪ್ಪನಂಥ ಎಳೆ ವಯಸ್ಸಿನವರ ಸಾಯುವುದೂ ಇಂದಿನ ಕಾಲವೈಚಿತ್ರ್ಯವಾಗಿದೆ.....”

ಗಿರಿ ತಲೆ ತುರಿಸಿಕೊಂಡು ಮತ್ತೆ ಪ್ರಾರಂಭಿಸಿದ:

“ಸಣ್ಣಪ್ಪನವರ [illegible]”

ಗಿರಿ ತಾನು ಬರೆದದ್ದನ್ನು ಓದಿ ಒಮ್ಮೆ ತಾನೇ ಮನಸ್ಸಿನಲ್ಲಿ ನಕ್ಕು ಬಿಟ್ಟ. ಮತ್ತೆ ಮುಂದೆ ಸಾಗಿದ:

“ದಿವಂಗತ ಸಣ್ಣಪ್ಪನವರ ಲೆಕ್ಕಣಿಕೆಯಲ್ಲಿ ಅವರ ಶಿಷ್ಯರು ಹೇಳುತ್ತಿದ್ದಂತೆ “ಓಳವಿತ್ತು, ಓಟವಿತ್ತು, ಬಿರುಸಿತ್ತು” [illegible] ಸಣ್ಣಪ್ಪನವರಿಗೆ [illegible]”

[illegible]

([illegible])

ಗ್ಯಾರಂಟಿಯ ಗಡಿಯಾರಗಳು



[illegible]

ನಕ್ಷತ್ರ ಸಂದರ್ಶನ

ಮೀನಾ ಕುಮಾರಿ

[ಪತ್ರಿಕ ಪ್ರತಿನಿಧಿಯಿಂದ]

“ಮದುವೆಯಾಗಿ ನಾಲ್ಕೈದು ವರುಷಗಳಾಗಿದ್ದರೂ ನೀವು ಈ ವರೆಗೆ ಮೀನಾ ‘ಕುಮಾರಿ’ ಎಂದೇಕೆ ಬರೆದುಕೊಳ್ಳುತ್ತೀರಿ ?”

—ಬಾಂದ್ರಾದಂಥ ಪ್ರಶಾಂತ ವಾತಾವರಣದ ಸ್ಥಾನದಲ್ಲಿ ವಾಸಿಸುತ್ತಿರುವ ಹಿಂದೀ ಚಿತ್ರರಂಗದ ನಟಿ ಮೀನಾ ಕುಮಾರಿಯವರನ್ನು ಭೆಟ್ಟಿಯಾದಾಗ ನಾನು ಮೊದಲು ಕೇಳಿದ ಪ್ರಶ್ನೆಯಿದು.

ನನ್ನ ಪ್ರಶ್ನೆಯನ್ನು ಕೇಳಿ ಸತಿ-ಪತಿಗಳಿಬ್ಬರೂ (ಮೀನಾ ಕುಮಾರಿಯವರ ಜೊತೆಗೆ ಅವರ ಪತಿ ಶ್ರೀ. ಕಮಾಲ ಅಮ್ರೋಹಿಯವರೂ ಇದ್ದರು) ನನ್ನ ಮುಖವನ್ನೇ ನೋಡತೊಡಗಿದರು. ಒಂದೆರಡು ನಿಮಿಷಗಳ ನಂತರ—

“ನಾನು ಈ ರೀತಿ ಕೇಳಬಾರದಾಗಿತ್ತೇನೋ ! ಆದರೆ ನಮ್ಮ ಓದುಗರು ಇದನ್ನು ಕೇಳಿದ್ದಕ್ಕೆ ನಾನು ಕೇಳಬೇಕಾಯಿತು ಅಷ್ಟೇ” ಎಂದೆ, ನಾನು.

“ಹಾಗೇನು ಇಲ್ಲ” ಕಮಾಲರೆಂದರು “ನೀವು ಕೇಳಿದ ಪ್ರಶ್ನೆಯೇ ವಿಚಿತ್ರವಾಗಿದೆ. ಇಂಥ ಪ್ರಶ್ನೆಯನ್ನು ಈ ವರೆಗೆ ಯಾರೂ ಕೇಳಿರಲಿಲ್ಲ. ಅದಕ್ಕಾಗಿ ನಾನು ವಿಚಾರದೊಳಗೆ ಬಿದ್ದಿದ್ದೆ.”

“ನೀವು ಬೇಬಿ ಸುಲೋಚನಾಳನ್ನು ಭೆಟ್ಟಿಯಾಗಿದ್ದೀರಾ?” ಮೀನಾಕುಮಾರಿಯವರು ಮಧ್ಯದಲ್ಲಿಯೇ ಪ್ರಶ್ನಿಸಿದರು.

“ನೀವು ಕೇಳಿದ ಮಾತಿನ ಅರ್ಥ ನನಗೆ ತಿಳಿಯಿತು. ನೀವು ಈ ರೀತಿ ಹೇಳಬಹುದೆಂದೂ ನನಗನಿಸಿತ್ತು. ಆದರೆ ಇತ್ತೀಚೆಗೆ ಅವರು ಕೇವಲ ‘ಸುಲೋಚನಾ’ ಎಂದಿಷ್ಟೇ ಬರೆದುಕೊಳ್ಳುತ್ತಾರೆ” ಎಂದೆ ನಾನು.

ದಂಪತಿಗಳು ನಗತೊಡಗಿದರು ಕೊನೆಗೆ ಕಮಾಲರೇ—

“ಹೌದು, ಹೆಸರಿನ ಬಗ್ಗೆ ನಿಜಕ್ಕೂ ನಾವು ವಿಚಾರ ಮಾಡಿರಲಿಲ್ಲ. ಈ ಬಗ್ಗೆ ನಾವು ಮುಂದೆ ಅವಶ್ಯವಾಗಿ ವಿಚಾರ ಮಾಡುತ್ತೇನೆ.” ಎಂದರು.

ಮೀನಾ ಕುಮಾರಿಯವರಿಗೆ ಕೇಳಿದ ಪ್ರಶ್ನೆಗಳಿಗೆಲ್ಲ ಕಮಾಲರೇ ಉತ್ತರವೀಯುತ್ತಿದ್ದುದನ್ನು ಕಂಡು ‘ನಾನು ಭೆಟ್ಟಿಯಾಗಲು ಬಂದದ್ದು ಮೀನಾಕುಮಾರಿಗೋ ಇಲ್ಲವೆ ಕಮಾಲರಿಗೋ’ ಎಂದುಕೊಂಡೆ.

ಅನಂತರ ದಂಪತಿಗಳುರ ಪರಸ್ಪರ ಅರ್ಥ ಅಂಗದಂತಿರುವ ಅವರ ಸಾಮರಸ್ಯವನ್ನು ಪರಿಶೀಲಿಸಿ ಯಾರು ಉತ್ತರಿಸಿದರೂ ಸರಿಯೇ ಎಂಬ ನಿರ್ಧಾರಕ್ಕೆ ಬಂದೆ.

"ನೀವು "ದಾಮಿನಿ"ದ ನಂತರ ಮತ್ತೆ ಚಿತ್ರಗಳನ್ನೇಕೆ ತೆಗೆಯಲಿಲ್ಲ !" ಎಂದೆ ನಾನು.

"ಅಂಥ ಚಿತ್ರಗಳನ್ನು [illegible] [illegible]

[illegible]

ಯಾವುದು? ಎಂದಾಗ ನಮ್ಮ ಸ್ವಂತದ ಚಿತ್ರಗಳಿಗೆ ನಾನು ಅಭಿಪ್ರಾಯ ಕೊಡ ಬಲ್ಲೆ; ಇತರರ ಚಿತ್ರಗಳಲ್ಲಿ ಅಭಿನಯಿಸಿ ದಾಗ ಅವರ ಹೇಳಿಕೆಯಂತೆ ನಡೆಯಬೇ ಕಾಗುತ್ತದೆ. ಅದಕ್ಕಾಗಿ ಅಂಥ ಚಿತ್ರಗಳ ಬಗ್ಗೆ ನೀವು ನಿಮ್ಮ ಅಭಿಪ್ರಾಯವನ್ನು ಕೇಳಬೇಕೇ ವಿನಾ ನಾನು ಹೇಗೆ ಹೇಳಲಿ? [illegible] 'ಕುಮಾರ' [illegible]

[illegible] ಚಿತ್ರಗಳನ್ನು ತೆಗೆ [illegible] ಹೇಳಿದರು.

●

[illegible]

[illegible]

ನಾರದರ ಸಾಕ್ಷಿನುಡಿ

ಕನ್ನಡದ ಪವಾಡ

ಕನ್ನಡ ಪತ್ರಿಕೆಗಳೆಂದರೆ ಮುಂಬ ಯಿಯ ಚಿತ್ರ ನಿರ್ಮಾಪಕರು, ಹಂಚಿಕೆ ಗಾರರು ಕಣ್ಣೇ ತೆರೆಯುತ್ತಿರಲಿಲ್ಲ ಅದು ಯಾವುದೋ 'ಮದ್ರಾಸೀ' ಭಾಷೆ. ನಮಗೂ ಅದಕ್ಕೂ ಸಂಬಂಧವೇ ಇಲ್ಲವೆನ್ನುವಂತೆ ವರ್ತಿಸುತ್ತಿದ್ದರು. ಇದು ನನಗೆ ಕಳೆದ ಏಳೆಂಟು ವರ್ಷಗಳಿಂದ ಕಂಡುಂಡ ಅನುಭವ. ಆದರೆ ಮೊನ್ನೆ ಮುಂಬಯಿಗೆ ಹೋದಾಗ ಮಾತ್ರ ಅವರ ದಿಕ್ಕು ಬದಲಾಯಿಸಿದೆ ಯೆಂಬುದು ಗೊತ್ತಾಗಿ ಆನಂದವಾಯಿತು. ಅವರ ಈ ರೀತಿಯ ಪರಿವರ್ತನೆಗೆ ಶೀಘ್ರದಲ್ಲಿ ರಚಿತವಾಗಲಿರುವ "ಕನ್ನಡರಾಜ್ಯ"ದ ಜೊತೆಗೆ ಮೇಲಿಂದ ಮೇಲೆ ಹೊರಬೀಳುತ್ತಿರುವ (ಅವು ಎಂಥವೇ ಇರಲಿ) ಕನ್ನಡ ಚಿತ್ರಗಳೂ ಕಾರಣವಾಗಿವೆ. ಪಂಜಾಬಿ-ಗುಜರಾತಿ ನಿರ್ಮಾಪಕರಂತೂ ಇರಲಿ; ವ್ಹಿ. ಶಾಂತಾರಾಮರಂಥ ಕಟ್ಟಾ ಅಭಿಮಾನಿಗಳೂ ಕನ್ನಡ ಪತ್ರಿಕೆಯವರೊಂದಿಗೆ ಪಹಕರಿಸತೊಡಗಿದ್ದಾರೆಂದರೆ ಪವಾಡವಲ್ಲದೆ ಮತ್ತೇನು?

ಶಾಂತಾರಾಮ - ಜಯಶ್ರೀ

"ವೇಣಿ" (ಗುಜರಾತಿ) ಚಲಚಿತ್ರ ವಾರ ಪತ್ರಿಕೆಯ ಸಂಪಾದಕ ಶ್ರೀ ಬದರಿ ಕಾಂಚವಾಲಾರು ಶ್ರೀ. ಶಾಂತಾರಾಮರಿಗಾಗಿಯೇ "ವೇಣಿ" ಪತ್ರಿಕೆಯನ್ನು ಮರಾಠಿಯಲ್ಲಿ ಹೊರಡಿಸಿದರೆಂಬುದು ಬಹಳಷ್ಟು ಜನ ಕನ್ನಡಿಗರಿಗೆ ಗೊತ್ತಿಲ್ಲವಾದರೂ ಸಂಗತಿಮಾತ್ರ ನಿಜ. ಹಿಂದೊಮ್ಮೆ ಶಾಂತಾರಾಮರು ಹೊಸತಾಗಿ "ಸಂಧ್ಯಾ"ಪತ್ರರಾದಾಗ ಮರಾಠಿ ಅವತರಣಿಕೆಯ 'ವೇಣಿ' ಪತ್ರಿಕೆಯು "ಶಾಂತಾರಾಮರು ಜಯಶ್ರೀಯನ್ನು ಮದುವೆಯಾದಾಗ ಅವರ ಮೊದಲ ಪತ್ನಿ ವಿಮಲಾದೇವಿಯವರಿಗೆ ಎಂಥ ಪ್ರಸಂಗ ಬಂದಿದ್ದಿತೋ ಅಂಥದೇ ಈಗ ಜಯಶ್ರೀಗೆ ಬಂದಿದೆ. ಮುಂದೆ ಅದು ಸಂಧ್ಯಾಳಿಗೂ ಬರಲಿಕ್ಕಿಲ್ಲವೆಂದು ಹೇಳಲು ಯಾರಿಗೆ ಸಾಧ್ಯವಿದೆ" ಎಂದು ಬರೆದಿತ್ತು.

ಇಂದು ಅಂಥ ಪರಿಸ್ಥಿತಿ ಕಣ್ಣಿಗೆ ಕಾಣುವಂತೆ ಇರದಿದ್ದರೂ ನೂತನ ನಟಿ ನಂದಾಳ ಬಗ್ಗೆ ಮುಂಬಯಿಯಲ್ಲಿ ಗುಜು-ಗುಜು ನಡೆದಿರುವದು ಮಾತ್ರ ನಿಜ. ಅದು ಆ ರೀತಿಯಾಗಿದ್ದರೆ ಶಾಂತಾರಾಮ-ಜಯಶ್ರೀಯವರು ಪರಸ್ಪರರ ಮೇಲೆ ದೋಷಗಳನ್ನು ಹೊರಿಸಿ ಕೋರ್ಟಿನವರೆಗೂ ಹೋಗಿದ್ದರು. ಆಗಲೂ 'ವೇಣಿ'ಯ ಸಂಪಾದಕ ಬದರಿ ಕಾಂಚವಾಲರು ಅವರ ಮಧ್ಯ ಪ್ರವೇಶಿಸಿ ತಮ್ಮದೊಂದು 'ಛಕ್ಕಾ' ಒಗೆದಿದ್ದರ ಪರಿಣಾಮವಾಗಿ ಅವರೂ ಕೋರ್ಟ ಕಟ್ಟೆಯ

ನ್ನೇರಬೇಕಾಗಿದೆ. 'ಗಂಡ–ಹೆಂಡಿರ ಜಗಳ ಉಂಡು ಮಲಗುವ ತನಕ' ಎಂಬಂತೆ ಜಯಶ್ರೀ–ಶಾಂತಾರಾಮರಲ್ಲಿ ಸಂಧಾನ ಮಾಡಿಸಲು ಪ್ರಯತ್ನಗಳು ನಡೆದಿದ್ದು ಯಶಸ್ವಿಯಾಗುವ ಚಿಹ್ನೆಗಳೂ ತೋರ ತೊಡಗಿವೆ.

ಕುಂದೀದಳಗೆ ಮುಕ್ತ 'ಟೊಪ್ಪಿಗೆ'

ತೆರೆಯ ಮೇಲೆ ನಟಿ ಕುಂದೀದಳನ್ನು ನೋಡಿದವರು, ಅವಳು ನಿಜಜೀವನದಲ್ಲೂ ಅದೇ ರೀತಿ ಇರಬಹುದೆಂದು ಭಾವಿಸುವದು ಸ್ವಾಭಾವಿಕವಿದೆ. [illegible]

[illegible]

'ಬೋಗಸ್ ಚೆಕ್' ಕೊಟ್ಟಿದ್ದರ ಪರಿಣಾಮವಾಗಿ ಈ ಮೊದಲೊಮ್ಮೆ 'ಟೊಪ್ಪಿಗೆ' ಬಿದ್ದ ಅವಳು ಕಾಯಿದೆಯ ಮೊರೆಹೊಕ್ಕು ಉಳಿದುಕೊಂಡಿದ್ದಾಳೆ.

ಮಧುಬಾಲಾ ಅಫಗಾನಿಸ್ತಾನಕ್ಕೆ ?

ತನ್ನ ಸರಿ ಸಮಾನರು ಚಿತ್ರರಂಗದಲ್ಲಿ ಯಾರೂ ಇಲ್ಲವೆಂದು ಹಾರಾಡಿದ ನಟಿ [illegible] ಪಾಕಿಸ್ತಾನ [illegible]

[illegible]

[illegible]

ಚಿತ್ರ ವಿಮರ್ಶೆ

ಮುತ್ತೈದೆ ಭಾಗ್ಯ

ಹಾಸ್ಯ ಪ್ರಧಾನ ಸಾಮಾಜಿಕ ಚಿತ್ರ

'ಕನ್ಯಾದಾನ' ಚಿತ್ರದಿಂದ ಕನ್ನಡ ಚಿತ್ರರಂಗದ ತಯಾರಿಕಾ ಕ್ಷೇತ್ರದೊಳಗೆ ಕಾಲಿರಿಸಿ ಅಪೂರ್ವ ಯಶಸ್ಸುಗಳಿಸಿದ ಬಿ. ವಿಠಲಾಚಾರ್ಯರು 'ಮುತ್ತೈದೆಭಾಗ್ಯ' ಚಿತ್ರದಿಂದ ಪ್ರಗತಿಪಥದಲ್ಲಿ ಒಂದು ಹೆಜ್ಜೆಯನ್ನು ಮುಂದೆ ಇರಿಸಿದ್ದಾರೆಂದು ಧಾರಾಳವಾಗಿ ಹೇಳಬಹುದು.

ಕನ್ನಡ ಮಹಿಳೆಯರು ತಮ್ಮ ಮುತ್ತೈದೆ ಭಾಗ್ಯವನ್ನು ಕಾಪಾಡಿಕೊಳ್ಳಲು ಎಂಥ ವಿಷಮ ಪರಿಸ್ಥಿತಿಯನ್ನೂ ಎದುರಿಸಬಲ್ಲರು ಎಂಬುದು ಈ ಚಿತ್ರಕತೆಯಾಗಿದ್ದು ಕಲಿತಂಥ ತರುಣ–ತರುಣಿಯರು ಪಾಶ್ಚಿಮಾತ್ಯ ಸಾಂಪ್ರದಾಯಕ್ಕೆ ಬಲಿಬಿದ್ದು ತಮ್ಮಲ್ಲಿಯ ಆದರ್ಶವನ್ನು ಯಾವರೀತಿ ಕಳೆದುಕೊಳ್ಳುವರು ಎಂಬುದರ ಸ್ಪಷ್ಟ ಚಿತ್ರಣವೂ ಇದರಲ್ಲಿದೆ. ಅಲ್ಲದೆ ದಾರಿತಪ್ಪಿದವರನ್ನು ಯಾವರೀತಿಯಲ್ಲಿ ಸರಿಯಾದ ಮಾರ್ಗಕ್ಕೆ ತರಬೇಕೆಂಬುದರ ಕನ್ನಡಿಯನ್ನೂ ಹಿಡಿಯಲಾಗಿದೆ.

ವಿದ್ಯಾವತಿಯ ಗಂಡ ಪಶುಪತಿಯ ಪಾತ್ರದಲ್ಲಿ ಕಲ್ಯಾಣಕುಮಾರನು ಉತ್ತಮ ಅಭಿನಯವನ್ನಿತ್ತು ಚಿತ್ರದ ಯಶಸ್ಸಿಗೂ ಕಾರಣನಾಗಿದ್ದಾನೆಂದು ಹೇಳಬೇಕು. ಕಲಿತ ತರುಣಿಯ ಪಾತ್ರದಲ್ಲಿ ಮೈನಾವತಿಯೂ ಚನ್ನಾಗಿದ್ದಾಳೆ. ರೇವತಿ, ರಮಾದೇವಿ ಹಾಗು ಜಯಶ್ರೀಯವರ ಅಭಿನಯಗಳು ಪಾತ್ರಕ್ಕೆತಕ್ಕಂತೆ ಚನ್ನಾಗಿವೆ. ಬಾಲಕೃಷ್ಣನೂ ಪರವಿಲ್ಲವೆನ್ನಬೇಕು. ಆದರೆ ಸಾಹಿತ್ಯ ಪಾಂಡಿತ್ಯದ ಜೊತೆಗೆ ಅಭಿನಯ ಪಾಂಡಿತ್ಯವನ್ನೂ ತೋರಿಸಲು ಹೊರಟ ಹುಣಸೂರರು ಮಾತ್ರ ಎಡವಿದ್ದಾರೆಂದು ಹೇಳದೆ ವಿಧಿಯಿಲ್ಲ.

ಕೆಲ ದೃಶ್ಯಗಳಲ್ಲಿಯ ಸಂಭಾಷಣೆಗಳು ಮೇರೆ ಮೀರಿವೆ. ದೃಶ್ಯಗಳ ಜೋಡಣೆ ಚನ್ನಾಗಿದ್ದು ಹಾಡುಗಳೂ ಮೆಲುಕು ಹಾಕುವಂತಿವೆ. ಚಿತ್ರ ಗ್ರಹಣ ಕೂಡ ಉನ್ನತ ಮಟ್ಟದ್ದಿದ್ದು ದಿಗ್ದರ್ಶನದಲ್ಲಿ ಶಿಥಿಲತೆಯು ಎಲ್ಲಿಯೂ ಕಂಡುಬರುವದಿಲ್ಲ.

ಸ್ತ್ರೀ ಸ್ವಾತಂತ್ರ್ಯವನ್ನು ಖಂಡಿಸುವದರ ಜೊತೆಗೆ ಕರ್ಣಾನಂದಕರ ಸಂಗೀತದಿಂದ ತಣಿಸುವ ಕನ್ನಡ 'ಮುತ್ತೈದೆ ಭಾಗ್ಯ' ಚಿತ್ರವು 'ನಗದವರಿಗೊಂದು ಸವಾಲು' ಹಾಕುವಂತೆಯೂ ಇದೆಯೆಂದು ಧಾರಾಳವಾಗಿ ಹೇಳಬಹುದು.

— ಅಮರ.

ಜನತೆಯ ವಿಶ್ವಾಸವೇ
ನಮ್ಮ ಸಂಪತ್ತು

ಬೆಳ್ಳಿ-ಬಂಗಾರದ ಎಲ್ಲ ತರದ ದಾಗೀನಗಳು, ಹಾಗೂ ವಿವಾಹ ಮುಂತಾದ ಶುಭ ಪ್ರಸಂಗಗಳಲ್ಲಿ ಕಾಣಿಕೆ ಕೊಡುವ ತರತರದ ಅತ್ಯಾಧುನಿಕ ಅಂದ ಚಂದದ ವಸ್ತುಗಳಿಗೆ ದಯವಿಟ್ಟು ನಮ್ಮ ಅಂಗಡಿಗೆ ಆಗಮಿಸಿರಿ.

ವೀರಭದ್ರಪ್ಪ ಮುದಿಯಪ್ಪ ಹೂಲಿ

ಸರಾಫ, ಜವಳಿಸಾಲ, ಹುಬ್ಬಳ್ಳಿ

ಬೆಳ್ಳಿ ಬಂಗಾರದ ಠೋಕ ಹಾಗೂ ಕಿರಕೋಳ ವ್ಯಾಪಾರಸ್ಥರು

ವಿದ್ಯಾರ್ಥಿಗಳ ಪುಟ

(ಎಸ್.ಎಸ್.ಸಿ.ಗೆ ಓದುವವರಿಗೆ ಮಾತ್ರ)

ಎಸ್. ಎಸ್. ಸಿ. ಪರೀಕ್ಷೆಯ ವಿಷಯಗಳು ಅನೇಕವಿದ್ದರೂ ಕೆಲವು ವಿಷಯಗಳನ್ನು ತೆಗೆದುಕೊಳ್ಳಬೇಕಲ್ಲದೆ, ಅವುಗಳಲ್ಲಿ ಪಾಸಾಗಲೂಬೇಕಾಗಿದೆ. ಅವುಗಳಲ್ಲಿ ಕನ್ನಡವೂ ಒಂದು.

ಕನ್ನಡ ವಿಷಯದ ಪ್ರಶ್ನೆಗಾಗಿದ್ದವು— ೧) ಪಠ್ಯಪುಸ್ತಕ—ಗದ್ಯ ಪದ್ಯ—[illegible] ಗಳು. ೨) ವ್ಯಾಕರಣ—ಪಠ್ಯ ಪುಸ್ತಕದ [illegible] ಗುಣಗಳು. ೩) ಪಠ್ಯೇತರ ವಿಷಯಭಾಗ—General [illegible] ಗಳು.

General ಭಾಗದಲ್ಲಿ

[illegible]

ಪಾಠವನ್ನೂ ಕುರಿತ ಸಂದರ್ಭದೊಡನೆ ಸ್ಪಷ್ಟೀಕರಣ ಪ್ರಶ್ನೆಗಳನ್ನು ಕೊಡುವದಿಲ್ಲ. ಮೇಲಿನ ಅಭ್ಯಾಸಕ್ರಮವನ್ನು ಗಮನದಲ್ಲಿಟ್ಟುಕೊಂಡು ವಿದ್ಯಾರ್ಥಿಗಳು ಅಭ್ಯಸಿಸಬೇಕು.

ನೀವು ಓದಬೇಕಾದ "ಶಿವಶರಣರ ವಚನಗಳು" ಪಾಠದಲ್ಲಿ ಬೇರೆ ಬೇರೆ ವಚನಗಳು ನಿಸ್ಸಾರ ಸಂಸಾರದ ಬಗೆಗೆ ಮುಕ್ತಿ ಸಾಧನೆಯ ಬಗೆಗೆ, ಕಾಯಕದ ಬಗೆಗೆ ದಿವ್ಯ ಕಲ್ಪನೆಯನ್ನು ತಂದು ಕೊಡುತ್ತವೆ. ವಚನಗಳು ಬಹಳ ಸುಲಭವಾಗಿ ಕಂಡರೂ ತುಂಬಾ ಪರಿಣಾಮಕಾರಿಯಾಗಿರುತ್ತವೆ. ವಚನಗಳನ್ನು ಗದ್ಯಗೀತೆಗಳೆಂದೇ ಹೇಳಬಹುದು. ಅವುಗಳನ್ನು [illegible] ಹಾಡಬಹುದು. [illegible]

[illegible]

ವಿಭೋಗ"ವಿದ್ದಂತೆ ಎಂದು ಹೇಳಿ ಸಂಸಾರಿಗಳ ಮನಸ್ಸನ್ನು ನಿತ್ಯತೆಯ ಕಡೆಗೆ ಕೂಡಲ ಸಂಗಮದೇವನೆಡೆಗೆ ಸೆಳೆಯಲು ಪ್ರಯತ್ನಿಸಿದ್ದಾರೆ. ಇದನರಿತು ನಿರ್ವಿಷಯಿಯಾಗಿ ನಿತ್ಯಮಯಿ ಪರಮಾತ್ಮನಲ್ಲಿ ಶರಣು ಹೋಗಲು ಶರಣರು ಭವಿಗಳಿಗೆ ಬೋಧಿಸಿದ್ದಾರೆ. ಜೀವನವನ್ನು ವ್ಯರ್ಥ ಕಳೆಕೊಳ್ಳದಿರಲು ಎಚ್ಚರಿಕೆಯನ್ನೂ ಕೊಟ್ಟಿದ್ದಾರೆ.

ಮನುಷ್ಯನು "ನಾನಾ ವರ್ಣದ ಸಂಸಾರದಿಂದ ಮುಕ್ತನಾಗುವ ಬಗೆ ಹೇಗೆ? ಮನುಷ್ಯನು ಪರಮಾತ್ಮನ ಕರುಣೆಯನ್ನು ಸಂಪಾದಿಸಬೇಕು. ಹಿಂದಿನ ಕರ್ಮಗಳನ್ನು ಮರೆತು ಸದ್ಯದ ಜೀವನದಲ್ಲಿ ಕೂಡಲ ಸಂಗಮ ದೇವನ ಕೃಪೆಗೆ ಪಾತ್ರನಾಗಬೇಕು. ಬಾಹ್ಯಾಡಂಬರಕೆ ಮನವ ಚಾಚದೆ ಅಂತರಂಗ ಆತ್ಮಶುದ್ಧಿಯನ್ನೂ ಮಾಡಿಕೊಳ್ಳುವದರಲ್ಲಿ ಈಶನ ಒಲುಮೆ ಇದೆ. "ತನುವಿನೊಳಗೆ ಹುಸಿತುಂಬಿ ಮನದೊಳಗೆ ವಿಷತುಂಬಿ" ಕೊಂಡು ಜೀವಿಸುವ ಮಾನವರ ಮೆಚ್ಚ ಕೂಡಲ ಸಂಗಮದೇವ ತನ್ನ ತಾನರಿಯುವದುಮೋಕ್ಷವೆಂದು ಸೂತ್ರರೂಪದಲ್ಲಿ ಅಲ್ಲಮಪ್ರಭುದೇವರು ಹೇಳಿದ್ದಾರೆ.

ಮಾನವನು ನಿಷ್ಕಾಮ ಕರ್ಮಿಯಾಗಬೇಕು. ಯಾವ ಕಾರ್ಯವೂ ಈಶನದು ಯಾವ ಕಾರ್ಯದ ಪ್ರತಿಫಲದ ಇಚ್ಛೆ ತನಗಿಲ್ಲವೆಂಬ ಭಾವನೆ ಇರಬೇಕು. ಕೈಕೊಂಡ ಕಾರ್ಯದಲ್ಲಿ ಶ್ರದ್ಧೆ ಭಕ್ತಿ ವಿಶ್ವಾಸಗಳಿರಬೇಕು. ನಿಷ್ಠೆಯಿಂದ ಮಾಡುವ ಕಾಯಕವು ಏನು ಬೇಕಾದುದನ್ನೂ ತಂದೊಡ್ಡಬಲ್ಲದು. "ಚಿತ್ತಶುದ್ಧದಲ್ಲಿ ಕಾಯಕವ ಮಾಡುವಲ್ಲಿ ಲಕ್ಷ್ಮಿ ತಾನಾಗಿಪ್ಪಳು" ಎಂದು ಹೇಳುತ್ತಾನೆ ಮಾರಯ್ಯ.

ಕಾಯಕವ ಮಾಡುವಲ್ಲಿ ಕಾಯಕದೊಡನೆ ಅನ್ಯೋನ್ಯತೆಯಿರಬೇಕು. ಕಾಯಕದಲ್ಲಿ ನಿರತನಾದಾಗ ಗುರು ದರ್ಶನ ಲಿಂಗಪೂಜೆಯನ್ನು ಮರೆಯಬೇಕು. ಅದು ನಿಜವಾದ ಕಾಯಕ. ಆ ಕಾಯಕದಲ್ಲಿ ಲಭಿಸುವ ಸುಖ ಆನಂದ ದಿವ್ಯವಾದವು. ಅದರಲ್ಲಿ ಪ್ರಪಂಚವನ್ನು ಮರೆತಾಗ ಸುಖವಿದೆ. ಆದುದರಿಂದ ಆಯ್ದಕ್ಕಿ ಮಾರಯ್ಯನವರು "ಕಾಯಕವೆ ಕೈಲಾಸ"ವಾದುದರಿಂದ ಕಾಯದಲ್ಲಿಯೆ ಅಮರೇಶ್ವರ ಲಿಂಗವು ಮೇಳೈಸಿ ಕೈಲಾಸ ಪ್ರಾಪ್ತವಾಗುವದೆಂದು ಅನುಭವ ಪೂರ್ಣವಾಗಿ ಹೇಳಿದ್ದಾರೆ.

ವಚನಗಳು ಹೀಗೆ ಸಂಸಾರ, ಕಾಯಕ, ಮುಕ್ತಿಯ ಬಗೆಗೆ ತುಂಬಾ ಅನುಭವ ಪೂರ್ಣವಾದ ವಿಚಾರಗಳನ್ನು ದಯಪಾಲಿಸುತ್ತವೆ. ವಚನಗಳ ಶೈಲಿ ಸುಲಲಿತ, ವಿಷಯ ಗಂಭೀರ, ವಿವರಣೆ ಸ್ವಚ್ಛ, ನೀರಿನ ಕೊಳದಂತೆ ತಿಳಿ. ಒಂದೊಂದು ವಚನವೂ ಒಂದೊಂದು ಅನುಭವಾಮೃತದ ಬಿಂದುವೆಂಬಂತಿದೆ. ಇಲ್ಲಿ ನಿಮಗೆ ಅಭ್ಯಾಸಕ್ಕೆ ಆಯ್ದುಕೊಂಡ ವಚನಗಳು ವಚನಾರ್ಣವದಿಂದ ಆಯ್ದುಕೊಂಡ ಆಣಿ ಮುತ್ತುಗಳಂತಿವೆ. ನೀವು ಸಾಧ್ಯವಾದ ಮಟ್ಟಿಗೆ ಸಂದರ್ಭಸಿಕಲ್ಲಿ ವಚನಗಳನ್ನು ಉದಾಹರಿಸಿ ಬರೆದರೆ ಉತ್ತರ ಹೆಚ್ಚು ಪರಿಣಾಮಕಾರಿಯಾಗುವದು.

ಈ ಸಂಚಿಕೆಯನ್ನು ಪೂರ್ಣ ಓದಿದಿರಷ್ಟೆ!

ನಿಮ್ಮ ನಾಲ್ಕಾಣೆ ಸಾರ್ಥಕವಾಯಿತೆ?

ಕನ್ನಡ ಆದರ್ಶ ಮಾಸಪತ್ರಿಕೆ

ಸಂಪಾದಕರು:

ಬಿ. ಶ್ರೀ. ಪಾಂಡುರಂಗರಾವ

ಕರ್ನಾಟಕ ವಿದ್ಯಾವರ್ಧಕ ಸಂಘ
ಧಾರವಾಡ

ಚ ೧೯೪೭

೪
ಆಣೆ

Grams :—"Meter"

N. RAMACHANDRA RAO & BROS.

BANGALORE CITY

Consult Us

FOR ANY THING IN BUILDING,

ELECTRICAL, SANITARY

AND

WATER SUPPLY LINES

WE are Direct Importers of :

ALL KINDS OF SANITARYWARE,

PLUMBING & ELECTRICAL GOODS

Shop & Show Rooms at :

54, AVENUE ROAD, BANGALORE.

ವಾಣಿಮಾರಾಟದ ಅಧಿಕೃತ ಪ್ರತಿನಿಧಿಗಳು.

೧. ಆರ್. ಎಸ್. ಸ್ವಾಮಿನಾಥನ್
ಜೈ ಪ್ರಕಾಶ್ ಸ್ಟೋರ್ಸ್, ಮೈಸೂರು.
೨. ಜಿ. ಎಸ್. ದೇಶಪಾಂಡೆ. ಬಿಜಾಪುರ.
೩. ಟಿ. ಎಸ್. ಹುಯಿಲಗೋಳ, ಗದಗ್.
೪. ಎಂ. ನಾಗಪ್ಪ ಶೆಟ್ಟಿ ಅಂಡ್ ಸನ್ಸ್,
ಶಿವಮೊಗ್ಗ.
೫. ಭಾರತ್ ಬುಕ್ ಡಿಪೋ. ಧಾರವಾಡ.
೬. ಎಚ್. ಆರ್. [illegible],
[illegible], [illegible].
೭. [illegible].
[illegible].
೮. [illegible],
[illegible].
೯. [illegible].
[illegible].
೧೦. [illegible].
೧೧. [illegible].
[illegible].
೧೨. [illegible].
೧೩. [illegible].
[illegible].
[illegible].
೧೪. [illegible].
೧೫. [illegible].
[illegible].
೧೬. [illegible].
೧೭. [illegible].
[illegible].

೧೮. ಡಿ. ಜಿ. ಜ್ಯೋಷಿ, ತಿಲಕ್‌ವಾಡಿ,
ಬೆಲ್‌ಗಾ[illegible]
೧೯. ಬಿ. ವೆಂಕಟರಾವ್,
ನ್ಯೂಸ್ ಏಜಂಟ್ಸ್, ಸಾ[illegible]
೨೦. ಎಚ್. ಎಸ್. ಶಿವರಾಮಯ್ಯ ಅಂ[illegible]
ಸನ್ಸ್, ಪುಸ್ತಕ ವ್ಯಾಪಾರಿಗಳು, ಹಾ[illegible]
೨೧. ಟಿ. ಎಸ್. ವೀರಪ್ಪ,
ನ್ಯೂಸ್ ಏಜಂಟ್ಸ್, ತರೀ[illegible]
೨೨. ಮಲನಾಡ್ ಸ್ಟೋರ್ಸ್, ಶೃಂಗೇರಿ.
೨೩. ಜಿ. ಗಿರಿಯಪ್ಪ ಜನರಲ್ ಮರ್ಚಂ[illegible]
ಹೊಸಪೇ[illegible]
೨೪. [illegible] ನ್ಯೂಸ್ ಏಜನ್ಸಿ, ಕೊಡ[illegible]
೨೫. ಶ್ರೀ ವಿಜಯ ಲಕ್ಷ್ಮೀ ಸ್ಟೋರ್ಸ್,
ದೇವನಹ[illegible]
೨೬. ಕೆ. [illegible], ನ್ಯೂಸ್ ಏಜಂ[illegible]
[illegible], ಬೆಂಗಳೂರು.
೨೭. [illegible].
[illegible].

[illegible]

[illegible]ದಾರರಲ್ಲಿ ಸೂಚ[illegible]

[illegible]



ಸಂಪುಟ ೫ ಮಾರ್ಚಿ ೧೯೪೭ ಸಂಚಿಕೆ ೩

ನಮ್ಮ ಹೊಣೆಗಾರಿಕೆ

ಭಾರತವನ್ನು [illegible] ಅಧಿಕಾರವನ್ನು ಭಾರತೀಯರಿಗೇ ಒಪ್ಪಿಸುವ ಕಾಲನಿಷ್ಕೃಷ್ಟವಾದ [illegible] ಹೇಳಿಕೆಯನ್ನು ಬ್ರಿಟಿಷ್ ಪ್ರಧಾನ ಮಂತ್ರಿಗಳಾದ [illegible] ಈಗ ಕೊಟ್ಟರೋ ಅದೇ ಹೇಳಿಕೆಯನ್ನು [illegible] ವರು ಈಗ ಒಂದು ವರ್ಷದ [illegible] ಕ್ಯಾಬಿನೆಟ್ ಮಂತ್ರಿತ್ರಯ ಸಂಧಾನಕ್ಕಾಗಿ ಭಾರತಕ್ಕೆ ಬಂದ ಸಂದರ್ಭದಲ್ಲಿ ಕೊಟ್ಟಿದ್ದರೆ ಎಷ್ಟೋ ಚೆನ್ನಾಗಿರುತ್ತಿತ್ತು. ಅದರಿಂದ ಬ್ರಿಟಿಷ್ ಸರ್ಕಾರದ [illegible] ಬರುತ್ತಿತ್ತು. ಹಾಗಾಗದಿದ್ದುದರಿಂದ ಕ್ಯಾಬಿನೆಟ್ ಮಂತ್ರಿತ್ರಯ [illegible] ವ್ಯರ್ಥವಾಯಿತು. ಭಾರತದ ಆಡಳಿತದ ಬಿಗಿ ತಪ್ಪಿ ಕಾರ್ಯದಕ್ಷತೆಗೆ [illegible] ರಾಜತಂತ್ರ ನಿಪುಣರ ಮಂತ್ರಿ ಮಂಡಲ ಕೇಂದ್ರ ಸರಕಾರದಲ್ಲಿದ್ದೂ ಅದು [illegible]ವಾಯಿತು.

ಜನ ಪ್ರಿಯರಾದ ಮಂತ್ರಿಗಳಿದ್ದೂ ಏನೂ ಪ್ರಯೋಜನವಾಗಲಿಲ್ಲ. "ರಾಜ್ಯಾಂಗ ಸಭೆಯಲ್ಲಿ ಭಾಗವಹಿಸದೆ ತಾತ್ಕಾಲಿಕ ಸರಕಾರದಲ್ಲಿರಲು ಯಾವ ರಾಜಕೀಯ ಸಂಗತಕ್ಕೂ ಹಕ್ಕಿಲ್ಲ' ವೆಂದು ಕ್ಯಾಬಿನೆಟ್ ಮಂತ್ರಿತ್ರಯ ಸ್ಪಷ್ಟವಾಗಿ ಹೇಳಿದರೂ ತಾತ್ಕಾಲಿಕ ಸರಕಾರವನ್ನು ಮಾತ್ರ ಪ್ರವೇಶಿಸಿ ಮುಸ್ಲೀಮ್ ಲೀಗ್ ರಾಜ್ಯಾಂಗ ಸಭೆಯಲ್ಲಿ ಭಾಗವಹಿಸದೆ ಸರಕಾರದ ಆಡಳಿತ ಸುಸೂತ್ರವಾಗಿ ನಡೆಯದಿರಲು ಎಷ್ಟು ಬೇಕೋ ಅಷ್ಟೂ

ಕಿರುಕೊಳಗಳನ್ನು ಕೊಟ್ಟು ಪುರೋಭಿವೃದ್ಧಿಯ ಮಾರ್ಗದಲ್ಲಿ ಕಂಟಕವಾಯಿತು. ಇಷ್ಟು ಉಪಟಲವನ್ನೂ ಸಹಿಸಿಕೊಂಡು ರಾಜ್ಯಾಡಳಿತ ನಿರ್ವಹಿಸುವ ದುರ್ವಿಧಿ ನಮ್ಮ ತಾತ್ಕಾಲಿಕ ಮಂತ್ರಿ ಮಂಡಲಕ್ಕೆ ಬಂದೊದಗಿತು. ಕಡೆಗೆ ಬ್ರಿಟಿಷ್ ಸರ್ಕಾರ ವಿಧಿಯಿಲ್ಲದೆ ಬಾಯಿಬಿಡಬೇಕಾಗಿ ಬಂತು. ಅದರ ಫಲವೇ ಮಿ|| ಅಟ್ಲಿ ೨೦-೨-೪೭ರಲ್ಲಿ ಹೊರಡಿಸಿದ ಹೇಳಿಕೆ.

ಈ ಹೇಳಿಕೆಯ ಪ್ರಕಾರ ಭಾರತದಲ್ಲಿ ಬ್ರಿಟಿಷ್ ಆಳ್ವಿಕೆಯು ೧೯೪೮ರ ಜೂನ್ ತಿಂಗಳಲ್ಲಿ ಕೊನೆಗೊಳ್ಳುತ್ತದೆ. ಅಂದಿನಿಂದ ಭಾರತದ ವಿಶಿಷ್ಟ ಆಡಳಿತವು ಭಾರತೀಯರ ಕೈಸೇರುತ್ತದೆ. ಭಾರತೀಯರು ಈ ಜವಾಬ್ದಾರಿಯನ್ನು ನಿರ್ವಹಿಸಲು ಈಗಿನಿಂದ ಸಿದ್ಧರಾಗಬೇಕು. ನಮ್ಮನಮ್ಮ ಒಳ ಜಗಳಗಳನ್ನು, ನೂರೆಂಟು ಪಂಗಡಗಳನ್ನು ಮರೆತು ಒಗ್ಗಟ್ಟಾಗಿ ಒಂದೇ ರಾಷ್ಟ್ರವಾಗಿ ಸಂಘಟಿತವಾಗಬೇಕು. ಇಲ್ಲದಿದ್ದರೆ ನಮ್ಮ ಬಾಳು ಪ್ರಪಂಚದ ಕಣ್ಣುಮುಂದೆ ನಗೆಪಾಟಲಾಗುವುದು. ಅದನ್ನೇ ಕುರಿತು ಅಮೇರಿಕದಲ್ಲಿರುವ ಆಲ್ ಇಂಡಿಯಾ ಲೀಗಿನ ಅಧ್ಯಕ್ಷರಾದ ಸರ್ದಾರ್ ಜೆ. ಜೆ. ಸಿಂಗರು ಹೀಗೆ ಹೇಳಿದ್ದಾರೆ:—

“ಈಗಲಾದರೂ ಭಾರತದ [illegible] ಈ ಎರಡು ರಾಜಕೀಯ ಪಕ್ಷಗಳು [illegible] ತಮ್ಮ ವ್ಯತ್ಯಾಸಗಳನ್ನು ಮರೆತು ರಾಷ್ಟ್ರದ ಕಲ್ಯಾಣದಲ್ಲಿ ಭಾಗವಹಿಸದಿದ್ದರೆ ನಮ್ಮ ಸ್ಥಿತಿ ಪ್ರಪಂಚದ ಮುಂದೆ ನಗೆ ಪಾಟಲಾಗುವುದು. [illegible]”

“[illegible] ಈ ಭೂಮಿಯ ಮೇಲಿರುವ [illegible]” ಎಂದು [illegible]

[illegible]

—[illegible]



ನಮ್ಮ ಸ್ವತಂತ್ರಭಾರತ ರೇಡಿಯೋ ಸ್ಟೇಷನ್ನಿನಿಂದ:-

ಬ್ರಾಡ್‌ಕಾಸ್ಟ್ ಮಾಡಿದವರು ‘ಜೈ ಹಿಂದ್’

“ರಾಜ್ಯಾಂಗ ಸಭೆಯನ್ನು ಮುಸ್ಲಿಂ ಲೀಗ್ ಸೇರಬೇಕು. ಭಾರತದ ರಾಜ್ಯಾಡಳಿತ ಸುಸುತ್ರವಾಗಿ ನಡೆಯಬೇಕು. ಭಾರತೀಯರು ಎಲ್ಲ ಜನಾಂಗಗಳಂತೆ ಸ್ವತಂತ್ರ ಜನಾಂಗವಾಗಿ ದೇಶದ ಸುಖ ಸಂಪತ್ತನ್ನು ಸೂರೆಗೊಳ್ಳಬೇಕು.”

ಈ ಮಹದಾಸೆಯಿಂದ ಪ್ರೇರಿತವಾಗಿ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಕಾರ್ಯನಿರ್ವಾಹಕ ಸಮಿತಿ ೪-೧-೪೭ರಲ್ಲಿ ದೆಹಲಿಯಲ್ಲಿ ರಾಷ್ಟ್ರಪತಿ ಆಚಾರ್ಯ ಕೃಪಲಾನಿಯವರ ಅಧ್ಯಕ್ಷತೆಯಲ್ಲಿ ಸೇರಿ ಬ್ರಿಟಿಷ್ ಸರಕಾರ ಘೋಷಿಸಿದ ೬-೧೨-೪೬ರ ಅರ್ಥ ವಿವರಣೆಯನ್ನು ಒಪ್ಪಿಕೊಂಡು ಮುಸ್ಲೀಮ್ ಲೀಗಿಗೆ ರಾಜ್ಯಾಂಗ ಸಭೆಯನ್ನು ಪ್ರವೇಶಿಸುವುದಕ್ಕೆ ಇನ್ನೊಂದು ಅವಕಾಶವನ್ನು ಕಲ್ಪಿಸಿಕೊಟ್ಟಿತು. ಕಾಂಗ್ರೆಸ್ಸಿನ ಈ ಹೃದಯ ವೈಶಾಲ್ಯವನ್ನು ದೇಶಕ್ಕೆ ದೇಶವೇ ಹೊಗಳಿತು. ಕಾಂಗ್ರೆಸ್ಸಿನ ಮಹಾತ್ಯಾಗವಿದೆಂದು ಎಲ್ಲರೂ ಮುಕ್ತಕಂಠದಿಂದ ಘೋಷಿಸಿದರು.

“ಬ್ರಿಟಿಷ್ ಮಂತ್ರಿ ಮಂಡಲದ ಯೋಜನೆಯನ್ನು ಭಂಗಗೊಳಿಸುವುದೇ ಉದ್ದೇಶ; ಭಾರತವನ್ನು ಖಂಡ ತುಂಡುಮಾಡಿ ಹಂಚಿಕೊಳ್ಳುವುದೇ ಮಹಾ ಸಂಕಲ್ಪ; ಇಲ್ಲ ಬ್ರಿಟಿಷ್ ಸರಕಾರ ಭಾರತವನ್ನು ಬಿಟ್ಟು ಕದಲದಂತೆ ಅದಕ್ಕೆ ಶಾಶ್ವತಸ್ಥಾನವನ್ನು ಭಾರತದಲ್ಲಿ ಸ್ಥಿರಪಡಿಸುವುದೆ ಪರಮ ಪವಿತ್ರ ಕರ್ತವ್ಯ.”

ಈ ಅಚಲ ಸಂಕಲ್ಪದಿಂದ ಉದ್ರೇಕ್ತರಾಗಿ ಮುಸ್ಲೀಮ್ ಲೀಗ್ ಕಾರ್ಯನಿರ್ವಾಹಕ ಸಮಿತಿ ೩೦-೧-೪೭ರಲ್ಲಿ ಕರಾಚಿಯಲ್ಲಿ ಜಿನ್ನಾ ಸಾಹೇಬರ ಅಧ್ಯಕ್ಷತೆಯಲ್ಲಿ ಸೇರಿ ಹೀಗೆ ತೀರ್ಮಾನಿಸಿತು. “ಕಾಂಗ್ರೆಸ್ ಪಕ್ಷವಲ್ಲದೆ ಸಿಖ್ ಜನರು, ನಿಮ್ನ ವರ್ಗದವರು ಈ ಯೋಜನೆಯನ್ನು ಅಂಗೀಕರಿಸಿಲ್ಲ. ಆದ್ದರಿಂದ ಮಂತ್ರಿ ನಿಯೋಗದ ಯೋಜನೆ ವಿಫಲವಾಯಿತೆಂದು ಸಾರ್ವಭೌಮ ಸರ್ಕಾರ ಘೋಷಿಸಲಿ. ಮುಸ್ಲೀಮ್ ಲೀಗ್ ತೀವ್ರ ವಿರೋಧ ಸೂಚಿಸಿ ಬಲವಾದ ಆಕ್ಷೇಪಣೆಗಳನ್ನು ಎತ್ತಿದರೂ ಸಹ ರಾಜ್ಯಾಂಗ ಸಭೆಗೆ ಚುನಾವಣೆ ನಡೆಸಿ, ಅನಂತರ ಸಭೆ ನಡೆಸ

ಲು ಅವಕಾಶ ಕೊಟ್ಟಿದ್ದು ಕ್ರಮಬಾಹಿರ, ಮತ್ತು ಅಪ್ರಯೋಜಕ. ಆದ್ದರಿಂದ ರಾಜ್ಯಾಂಗ ಸಭೆಯ ಕಾರ್ಯ ಕಲಾಪಗಳು ಮತ್ತು ತೀರ್ಮಾನಗಳು ಕ್ರಮ ಬದ್ಧವಾಗುವುದಿಲ್ಲ. ಈ ಕಾರಣದಿಂದ ರಾಜ್ಯಾಂಗ ರಚನೆ ಸಭೆಯನ್ನು ವಿಸರ್ಜಿಸಬೇಕು."

ಈ ತೀರ್ಮಾನವನ್ನು ಕೇಳಿ ಭಾರತದ ರಾಜಕೀಯ ಚಾಣಾಕ್ಷರೆಲ್ಲಾ ಮೂಗಿನ ಮೇಲೆ ಬೆರಳಿಟ್ಟುಕೊಂಡರು. "ಎಲಾ ಎಲಾ! ಇದೇನು ಬಂತು ಲೀಗಿಗೆ ವಿಪರೀತ ಬುದ್ಧಿ. ಬ್ರಿಟಿಷ್ ಸರಕಾರ ಘೋಷಿಸಿದ ೧೯೪೬ನೇ ಮೇ ತಿಂಗಳ ೧೬ನೇ ತಾರೀಖಿನ ಘೋಷಣೆಯನ್ನು ಸ್ವಾಗತಿಸಿದ ರಾಜಕೀಯ ಪಕ್ಷಗಳಲ್ಲಿ ಮೊದಲನೆಯದೇ ಮುಸ್ಲೀಮ್ ಲೀಗ್ [illegible]

[illegible]

[illegible]

ಬಿಟ್ಟಿತು. ಆದರಿಂದ ರೊಚ್ಚಿದ್ದ ದೇಶದ ಜನವೆಲ್ಲಾ ಕೇಳತೊಡಗಿತು, ಪ್ರಶ್ನಿಸಿತು. "ರಾಜ್ಯಾಂಗ ರಚನಾಸಭೆಯನ್ನು ಪ್ರವೇಶಿಸುವುದಿಲ್ಲವೆಂದು ತೀರ್ಮಾನಿಸಿದ ಮುಸ್ಲೀಮ್ ಲೀಗಿಗೆ ತಾತ್ಕಾಲಿಕ ಸರಕಾರದಲ್ಲಿರಲು ಹಕ್ಕಾದರೂ ಹೇಗಿದೆ." ಎಂದು. "ಲೀಗ್ ತಾತ್ಕಾಲಿಕ ಸರಕಾರದ ಮಂತ್ರಿ ಪಟ್ಟಕ್ಕೆ ಅಂಟಿಕೊಂಡು ಕೂರಬಾರದಿನ್ನು. ತಾತ್ಕಾಲಿಕ ಸರಕಾರದಿಂದ ಹೊರಬರುವುದು ಲೀಗಿಗೆ ಚೆನ್ನು" ಎಂದು ತಿಳುವಳಿಕಸ್ಥರೆಲ್ಲ ಆಡಿಕೊಳ್ಳತೊಡಗಿದರು. "ಕಾನ್‌ಸ್ಟಿಟ್ಯೂಯೆಂಟ್ ಅಸೆಂಬ್ಲಿಗೆ ಸೇರದೆ ತಾತ್ಕಾಲಿಕ ಸರಕಾರದಲ್ಲಿರುವ ಹಾಗಿಲ್ಲ" ವೆಂಬ ಬ್ರಿಟಿಷ್ ಕ್ಯಾಬಿನೆಟ್ ಹಂಚಿಕೆಯ ಮೂಲ ಉದ್ದೇಶ್ಯವನ್ನು ಕಾಂಗ್ರೆಸ್ ಸದಸ್ಯರು ವೈಸರಾಯ್ ಲಾರ್ಡ್ ವೇವೆಲ್ಲರ ಬೆಳಕಿಗೆ ತಂದರು.

"ಕಾನ್‌ಸ್ಟಿಟ್ಯೂಯೆಂಟ್ ಅಸೆಂಬ್ಲಿಗೆ ಸೇರಲು ಲೀಗ್ ನಿರಾಕರಿಸಿರುವುದರಿಂದ ತಾತ್ಕಾಲಿಕ ಸರಕಾರದಿಂದ ಲೀಗ್ ಸದಸ್ಯರನ್ನು [illegible]

ಹೇಬರು ಈ ಎರಡು ಪತ್ರಗಳನ್ನೂ ಲಂಡನ್ನಿಗೆ ಕಳುಹಿಸಿಕೊಟ್ಟರು.

ಭಾರತದ ೪೦ ಕೋಟಿ ಪ್ರಜೆಗಳೂ ಬ್ರಿಟಿಷ್ ಸಾರ್ವಭೌಮ ಸರಕಾರದಿಂದ ಏನು ಉತ್ತರ ಬರಲಿದೆಯೋ ಎಂದು ಪ್ರತಿಕ್ಷಣವನ್ನು ನಿರೀಕ್ಷಿಸುತ್ತಿದ್ದರು. 'ಏನೋ ಮಹತ್ತರವಾದ ಬದಲಾವಣೆಯಾಗಲಿದೆ.' ಎಂಬ ಉದ್ವೇಗ ಪ್ರತಿಯೊಬ್ಬರ ಮುಖದಲ್ಲಿಯೂ ಸಿಡಿದೆದ್ದು ಕಾಣುತ್ತಿತ್ತು. ಜನದ ನಿರೀಕ್ಷಣೆ ತಪ್ಪಾಗಲಿಲ್ಲ. ಬ್ರಿಟಿಷ್ ಸಾರ್ವಭೌಮ ಸರ್ಕಾರದ ಪ್ರಧಾನ ಮಂತ್ರಿಯವರಾದ ಮಿ॥ ಆಟ್ಲೆಯವರು ಹೌಸ್ ಆಫ್ ಕಾಮನ್ಸ್ ಸಭೆಯಲ್ಲಿ ಭಾರತದ ಬಗ್ಗೆ ಮಹತ್ಪೂರ್ವವಾದ ಹೇಳಿಕೆಯನ್ನು ಇದೇ ತಿಂಗಳು ೨೦ನೇ ತಾರೀಖು ಪ್ರಕಟಿಸಿದರು. ಆ ಹೇಳಿಕೆಯಲ್ಲಿ ಈ ಎರಡು ಅಂಶಗಳನ್ನು ಸ್ಪಷ್ಟಪಡಿಸಿದರು.

'ಜವಾಬ್ದಾರಿಯುತರಾದ ಭಾರತೀಯರಿಗೆ ೧೯೪೮ನೆಯ ಜೂನ್ ತಿಂಗಳ ವೇಳೆಗೆ ಅಧಿಕಾರ ವಹಿಸಿಕೊಡುವುದೇ ನಮ್ಮ ಮಹದಾಶಯ. ಆದರೆ ಆ ವೇಳೆಗೆ ಸರ್ವಸಮ್ಮತವಾದ ರಾಜ್ಯಾಂಗ ರೂಪುಗೊಳ್ಳದೆ ಹೋದರೆ ಮಾತ್ರ ಅಧಿಕಾರವನ್ನು ಯಾರಿಗೆ ವಹಿಸಿಕೊಡಬೇಕೆಂಬ ಬಗ್ಗೆ ಸಾರ್ವಭೌಮ ಸರಕಾರದವರು ಯೋಚಿಸಬೇಕಾಗುವುದು. ಯಾವುದಾದರೊಂದು ಬಗೆಯ ಕೇಂದ್ರ ಸರಕಾರಕ್ಕೆ ಅಧಿಕಾರ ವಹಿಸಿಕೊಡಬೇಕೆ? ಅಥವ ಹಲವು ಪ್ರಾಂತೀಯ ಸರಕಾರಗಳಿಗೂ ಅಧಿಕಾರ ವಹಿಸಿಕೊಡಬೇಕೆ? ಎಂಬುದನ್ನು ಯೋಚಿಸಬೇಕಾಗುವುದು. -ಇದನ್ನು ಭಾರತೀಯರ ಹಿತವನ್ನು ಗಮನಿಸಿ ಕೊಡಲಾಗುವುದು.'

"ದೇಶೀಯ ಸಂಸ್ಥಾನಗಳ ಮೇಲಿನ ಸಾರ್ವಭೌಮತ್ವವನ್ನಾಗಲೀ ಅಥವ ಅವುಗಳ ಬಗ್ಗೆ ಬ್ರಿಟಿಷ್ ಸರ್ಕಾರಕ್ಕಿರುವ ಕರ್ತವ್ಯವನ್ನಾಗಲಿ ಯಾರಿಗೂ ವಹಿಸಿಕೊಡುವುದಿಲ್ಲ. ಭಾರತೀಯರಿಗೆ ಪೂರ್ಣವಾಗಿ ಅಧಿಕಾರ ವಹಿಸಿಕೊಡುವವರೆಗೂ ಸಂಸ್ಥಾನಗಳ ಮೇಲೆ ಬ್ರಿಟಿಷ್ ಸಾರ್ವಭೌಮತ್ವ ಇರುತ್ತೆ. ಅಧಿಕಾರ ವಹಿಸಿಕೊಡುವ ಮುನ್ನ ಅಧಿಕಾರ ವಹಿಸಿಕೊಳ್ಳುವವರೊಡನೆ ಬ್ರಿಟಿಷ್ ಸರ್ಕಾರದವರು ಸಂಧಾನ ನಡೆಸುವರು."

ತಾತ್ಕಾಲಿಕ ಸರಕಾರದಲ್ಲಿ ಬದಲಾವಣೆಯಾಗುವುದೇನೋ ಎಂದು ಕುತೂಹಲದಿಂದ ಇದ್ದ ಜನಕ್ಕೆ ಆಶಾಭಂಗವಾಯಿತು. ಪ್ರಧಾನ ಮಂತ್ರಿಗಳು ತಮ್ಮ ಹೇಳಿಕೆಯಲ್ಲಿ ಈ ವಿಷಯದ ಪ್ರಸ್ತಾಪವನ್ನೇ ಎತ್ತಲಿಲ್ಲ. ಬ್ರಿಟಿಷರು ಇಂಡಿಯಾವನ್ನು ಬಿಟ್ಟು ಹೋಗುವ ಅವಧಿಯನ್ನು ನಿರೀಕ್ಷಿಸದಿದ್ದ ಜನ ಇದ್ದಕ್ಕಿದ್ದ ಹಾಗೆ ಪ್ರಧಾನ ಮಂತ್ರಿಗಳಿಂದ "ಬ್ರಿಟಿಷರು ೧೯೪೮ರ ಜೂನ್ ತಿಂಗಳ ಒಳಗೆ ತಮ್ಮ ವಜ್ರಹಿಡಿತವನ್ನು ಸಡಲಿಸಿ ಭಾರತೀಯರಿಗೇ ಅಧಿಕಾರ ಕೊಡುವರೆಂದುಕೇಳಿ ಆಶ್ಚರ್ಯದ ಪರಮಾವಧಿಯ ಹಂತವನ್ನು ಮುಟ್ಟಿ ತನ್ನ ಕಣ್ಣನ್ನೇ ನಂಬದಂತಾಯಿತು ಜೊತೆಗೆ ಲಾರ್ಡ್ ವೇವಲ್ ಸಾಹೇಬರು ಮಾರ್ಚಿ ತಿಂಗಳಲ್ಲಿ ವೈಸರಾಯ್ ಪದವಿಯಿಂದ ನಿವೃತ್ತರಾಗಿ ಅವರ ಸ್ಥಾನದಲ್ಲಿ ಅಡ್ಮಿರಲ್ ಲಾರ್ಡ್ ಲೂಯಿ ಮೌಂಟ್ ಬೇಟನ್ ಅವರು ಇಂಡಿಯಾದ ವೈಸರಾಯರಾಗುವರೆಂಬ ಸುದ್ದಿಯುಂತೂ ನಮ್ಮ ಜನಕ್ಕೆ

ಕಕಮಕ ಹಿಡಿಸಿತು.

ಜಿನ್ನಾ ಸಾಹೇಬರಂತೂ, ಈಹೇಳಿಕೆ ಅತಿ ಮಹತ್ವದ್ದು. ಸಾವಧಾನವಾಗಿ ಯೋಚಿಸ ಬೇಕು.'' ಎಂದು ಜಾರಿಕೊಂಡರು.

ಗಾಂಧೀಜಿಯು ಪ್ರಧಾನರ ಹೇಳಿಕೆಯನ್ನು ಓದಿಸಿ ಕೇಳಿ ಶ್ರೀಮದ್ಭಾಗವತ [illegible] ವಹಿಸಿದ್ದು ಈಗ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

'ಈ ಹೇಳಿಕೆಯು [illegible]'

'[illegible]'

[illegible]

ಕಲೆತು ಸಮಾಲೋಚಿಸಿ ಇತ್ಯರ್ಥ ಮಾಡಿಕೊಳ್ಳಕೂಡದೇಕೆ? ಇನ್ನು ಮುಂದೆ ಪರಕೀಯರ ಕೈವಾಡದ ಸೊಲ್ಲೇ ಇಲ್ಲ. ಹಿಂದೆ ಏನು ಹೋರಾಟವನ್ನು ಬ್ರಿಟಿಷರೊಡನೆ ನಾವು ನಡೆಸಿದೆವೋ ಅದು ಹಳೆಯ ಕಥೆಯಾಗಿ ಹೋಯಿತು. ಇನ್ನು ಮುಂದೆ ಬ್ರಿಟಿಷರೊಡನೆ ನಾವು ಸ್ನೇಹ ಸೌಹಾರ್ದವನ್ನು ಪರಸ್ಪರ ಕಲ್ಪಿಸಿಕೊಳ್ಳಬೇಕು.'

ಭವಿಷ್ಯ ತಿಳಿಯಬೇಕೇ ?
[illegible] ಮೂರು ಪ್ರಶ್ನೆ ಕೇಳಿ

[illegible]

ವ್ಯಕ್ತಿ ಚಿತ್ರ.

ಕವಿ ತಿಲಕ ದತ್ತರಾಮ

ಶ್ರೀ ಅ. ಸೋಗಾಲ, ಸಾತಾರ

ನಮ್ಮ ನಾಡಿನ ರಸಸಿದ್ಧ ಕವಿ ಬೇಂದ್ರೆ ಇದೀಗ ಐವತ್ತು ವರ್ಷಗಳನ್ನು ಮುಗಿಸಿ ಐವತ್ತೊಂದರ ಹೊಸ್ತಿಲಲ್ಲಿ ಪದಾರ್ಪಣ ಮಾಡಿದ ಸವಿ ನೆನಪಿಗೆ ಪ್ರೇಮ ಕಾಣಿಕೆಯಾಗಿ ಈ ಲೇಖನವನ್ನು ಈ ಶುಭಸಮಯದಲ್ಲಿ ಪ್ರಕಟಿಸಲಾಗಿದೆ. —ಸಂ.

ದಾರಿದ್ರ್ಯ ಪಂಕ—ಕವಿಕಮಲ

'ಕೆಸರಿನಲ್ಲಿ ಕಮಲ' ಅದರ ರೂಪಕ ಬೇಂದ್ರೆಯ ಜನ್ಮ. ಹುಟ್ಟಿದುದು ಧಾರವಾಡದಲ್ಲಿ' ಹದಿನೆಂಟುನೂರ ತೊಂಭತ್ತೇಳನೆಯ ವರುಷ; ಎರಡನೆಯ ತಿಂಗಳು; ಹದಿನೇಳನೆಯ ದಿನ, ಮೂಲತಃ ಮಹಾರಾಷ್ಟ್ರ• ಚಿತ್ಪಾವನ. ಮಹಾಭಾವದ ಒಡಲಿಗೆ ಮಹಾಭಾಷೆಯೊಂದು ಬೇಕಿತ್ತು. ಕವಿಗೆ ಕನ್ನಡ ದೊರಕಿತು. ಕನ್ನಡಕ್ಕೆ ಕವಿ ದೊರಕಿದನು.

ತಂದೆ ಹೋದಾಗ ಬೇಂದ್ರೆ ಬಾಲಕ. ತಾಯಿ, ಅಜ್ಜಿ, ಬಡತನದ ಮಹಾ ಕಷ್ಟ ಸಹಿಸಿ, ಶಿಕ್ಷಣವ ಮೆಟ್ಟಿಲು ಹತ್ತಿಸಿದರು. ಪ್ರಾಥಮಿಕ ಮಾಧ್ಯಮಿಕ ಶಿಕ್ಷಣ ಧಾರವಾಡದಲ್ಲಿ, ಉಚ್ಚ ಶಿಕ್ಷಣ ಪುಣೆಯ ಹೆಸರಾಂತ ಕಾಲೇಜಿನಲ್ಲಿ, ಹದವರಿಯುವ ತಾರುಣ್ಯದ ಈ ಜೀವನದಲ್ಲಿ ಕೆಲವು ಮರಾಠೀ ಭಾವಗೀತಗಳು ಅರಳಿದುವು.

ಅಭಿಜಾತ ಶಿಕ್ಷಕ

ಮಹಾರಾಷ್ಟ್ರದಲ್ಲಿ 'ಸಾನೆ ಗುರುಜಿ'-ಕನ್ನಡದಲ್ಲಿ ಬೇಂದ್ರೆ! ವಿನೋದದ ಈ ವಾಮನ ಮೂರ್ತಿ ಇದ್ದೆಡೆ, ಕಾವ್ಯಗಂಗೆಯ ಅವತಾರ: ಪೋಷಾಕು, 'ಗಮನಕ್ಕೆ ತಂದುಕೊಳ್ಳಲು ಯೋಗ್ಯವಲ್ಲದ' ವ್ಯಕ್ತಿಯದು. ಝಪಝಪ ನಡಿಗೆ, ಪಟಪಟ ನುಡಿ, ಅವಸರದ ಜೀವಿಯದು. ಆದರೂ ರವೀಂದ್ರ, ಅರವಿಂದರನ್ನು ಅರಗಿಸಿಕೊಂಡ ಈ ಜೀವ, ಸ್ಥಿತ ಪ್ರಜ್ಞ! ಶಾಂತತಾ ಮೂರ್ತಿ!

ಸರಳ, ಸ್ಪಷ್ಟವಕ್ತ, ಸಿಹಿಸ್ವಭಾವ. ಔಷಧಿಗೆ ಬೇಕೆಂದರೂ ಕೃತ್ರಿಮತೆ ದೊರೆಯದು.

ನಾಲಿಗೆಯ ತುದಿಯಲ್ಲಿ ವಿವೇಚನಾ ವಿಚಾರವಾಣಿ ನಲಿಯುವಳು. ಸಂಭಾಷಣೆಯೆಂದರೆ ವ್ಯಾಖ್ಯಾನ; ವ್ಯಾಖ್ಯಾನವೆಂದರೆ ಸಂಭಾಷಣೆ. ಕೋಟಿ ಕಲ್ಪನಾ ವರ್ಷ ಧಾರೆ-ಮಾತಿನಲ್ಲಿ! ವಾಣಿಯ ಕಿರಣ ಸ್ಪರ್ಶವಾದರೆ ಸಾಕು. ವಿಚಾರ ಧಾರೆಯ ಸಹಜಸ್ವರೂಪದ ರಂಗಿನ ಪುಷ್ಪ ಪಟಲ ಅರಳುವುದು. ನಿಗೂಢತೆಯ ಅಂತರಂಗದಿಂದ ಶಬ್ದ ಶಬ್ದದಲ್ಲೂ ಅಂತರಾತ್ಮದ-ಅಧ್ಯಾತ್ಮದ ಛಾಯ ಹರಡುವುದು. ಅನಂತತೆಯ ಮಂಗಳ ದರ್ಶನದಲ್ಲಿ ವಿಶ್ವ ಸತ್ಯ ಹೊರಹೊಮ್ಮುವುದು.

ತಪಸ್ಯ ಜೀವನ.

ಮಾಸ್ತರ. ಮಿತ್ರಮಂಡಳಿಯನ್ನು ಸ್ಥಾಪಿಸಿದ್ದರು. ಕನ್ನಡ ಭಾಷೆಯ ಗಾಢ ಅಭ್ಯಾಸ, ಭಾಷೆಯ ಪುನರುಜ್ಜೀವನ, ಸರ್ವಾಂಗೀನ ಸುಧಾರಣಾ, ಬಹುಮುಖ ಪ್ರಗತಿ-ಈ ಉದ್ದೇಶ್ಯದಿಂದ ಕಂಕಣ ಕೊಡುವುದು ಗೆಳೆಯರ ಉದ್ದೇಶ್ಯ! ಈಗ ಮೂವತ್ತು ವರ್ಷದಿಂದ ಅವ್ಯಾಹತವಾಗಿ ಸಾಗಿದೆ. ಆ ಕಾರ್ಯ! ಈ ಅಂತರದಲ್ಲಿ 'ಸ್ವಧರ್ಮ' 'ಜಯಕರ್ನಾಟಕ'ಗಳು ಹುಟ್ಟಿ ಸತ್ತವು. (ಜಯಕರ್ನಾಟಕ ಇದೆ.) [illegible]

ಕಾವ್ಯ [illegible]

[illegible]

ವಾಙ್ಮಯ ಗಗನದಲ್ಲಿ ಈ ಸ್ಫೂರ್ತಿ ಪಕ್ಷಿ ಹಾರದ ತಾವಿಲ್ಲ. ಕಲ್ಪನಾ 'ಗುಂಗೀ' ಮೂಸದ ಹೂವಿಲ್ಲ ಕನ್ನಡ ಸಾಹಿತ್ಯ ನಂದನದಲ್ಲಿ! ಕನ್ನಡ ಕಾವ್ಯಮಂದಿರದ ನಂದಾದೀಪ.

ಬಹುಮುಖಿ ಕವಿ ಬೇಂದ್ರೆ. ಬಾಲಕರ ಕವಿ, ತರುಣರ ಕವಿ, ಪ್ರೇಮಿಗಳ ಕವಿ, ಆಧ್ಯಾತ್ಮಿಕರ ಕವಿ, ದರಿದ್ರರ ಕವಿ, ಕ್ರಾಂತಿವೀರರ ಕವಿ ಜನತಾ ಕವಿ-ಬೇಂದ್ರೆ. ಈ ರಸ ಋಷಿಯ 'ಗಂಗಾವತರಣ'ದಲ್ಲಿ ಕಾವ್ಯ ಗೀತೆಯ ವಿಶ್ವರೂಪ ದರ್ಶನವಾಗುವುದು.

ವಾಮನ ತ್ರಿವಿಕ್ರಮ:—

[illegible]

ಸಣ್ಣ ಕತೆ.

ಪಶ್ಚಾತ್ತಾಪ

ಶ್ರೀಮತಿ ಹೆಚ್. ಎಸ್. ಸರೋಜ

> ಶ್ರೀಮತಿ ಹೆಚ್. ಎಸ್. ಸರೋಜ ಅವರು ಬೆಂಗಳೂರಿನ ಮಹಾರಾಣಿ ಕಾಲೇಜಿನಲ್ಲಿ ವಿದ್ಯಾರ್ಥಿನಿಲಯರಾಗಿದ್ದಾರೆ. ಮಹಾರಾಣಿ ಕಾಲೇಜಿನವರು ಈ ವರ್ಷ ನಡೆಸಿದ ಕರ್ಣಾಟಕ ಸಂಘದ ವಾರ್ಷಿಕೋತ್ಸವ ಸಂದರ್ಭದಲ್ಲಿ ಏರ್ಪಡಿಸಿದ್ದ ಸಣ್ಣ ಕತೆಗಳ ಮೇಲಾಟದಲ್ಲಿ ಈ ಕತೆಗೆ ದ್ವಿತೀಯ ಬಹುಮಾನ ಬಂದಿದೆ. ವಾಣಿಯ ಪರವಾಗಿ ಅವರನ್ನು ಅಭಿನಂದಿಸಿ ಅವರಿಂದ ಕನ್ನಡ ಸಾಹಿತ್ಯಕ್ಕೆ ಉತ್ತಮ ಸೇವೆ ಸಲ್ಲಲೆಂದು ಹಾರೈಸುತ್ತೇವೆ.
>
> —ಸಂ

"ಯಾರದು ?"

"ನಾನು, ಬುದ್ದೀ."

"ಓ, ಕೆಂಪನೇನೋ ?"

"ಹೌದು ಬುದ್ದೀ, ನಾನೇ."

"ನೆನ್ನೆ ದಿವಸದ ಪಂಚಾಯಿತಿಯಲ್ಲಿ ಏನು ತೀರ್ಮಾನವಾಯಿತೋ ?".

"ಅವಳಂದದ್ದೇನೊ ತಪ್ಪು; ಆದರೂ ನೀನು ಹೆಂಗಸಿನ ಮಾತು ಹಚ್ಚಿಕೊಂಡು ಹಿಂಗ್ಮಾಡೋದು ಸರಿಯಲ್ಲ..ಅಂತಾರೆ ಬುದ್ದಿ."

"ಹಾಗಾದರೆ ನಿನ್ನಿಷ್ಟ ಏನೂಂತ ಹೇಳದೀಯೋ ?"

"ಏನೇಳೋದು ಬುದ್ದಿ...."

"ಯಾಕೋ ಸುಮ್ಮನಾದೆ? ನನ್ನ ಮುಂದೆ ಹೇಳೋದಕ್ಕೆ ಹಿಂಜರಿಯಬೇಕೇನೋ ?

"....ಗಂಡಸಿನ ಮಾತ್ ಕಳೆದು, ಅವಮಾನ ಮಾಡಿ-ರೋ-ಹೆಂಗ್ಸನ್ನ ತಿರುಗಿ ಕಟ್ಕೊಳ್ಳೋದು ಎಲ್ಲಾರ ಉಂಟೆ ಬುದ್ಧಿ ?

"ಏ, ಹಾಗೆಲ್ಲ ಹೇಳ್ತಾರೇನೊ ? ಏನೋ ಕೋಪದಲ್ಲಿ ನೀನೂ ಎರಡು ಮಾತನಾಡಿದಿ. ಅವಳೂ ಆಡಿದಳು. ಅಷ್ಟಕ್ಕೆ ಹೀಗೆಲ್ಲಾ ಬಿಟ್ಟುಬಿಡುತ್ತಾರೇನೋ ? ಮೂರು ಮಕ್ಕಳ ತಂದೆಯಾಗಿ ಹೆಂಡತಿ ಮಕ್ಕಳನ್ನ ಹೀಗೆ ಎಷ್ಟು ಕಾಲ ಬಿಟ್ಟಿರುವುದಕ್ಕೆ ಬರುತ್ತದೆಯೋ ಹುಚ್ಚ ? ಹಾಗೆಲ್ಲ ಮಾಡಬಾರದು; ಪಂಚಾಯಿತರು ಹೇಳಿದ ಹಾಗೆ ಕೇಳು"

"ಅಂದೊಂದು ಮಾತು ಬಿಟ್ಟು ಏನೇಳಿದ್ರೂ ಮಾಡೋದಕ್ಕೆ ಸಿದ್ಧವಾಗಿದ್ದೀನಿ,

ನಿಮ್ಮ ಪಾದ.''

``ಹಾಗೆಲ್ಲಾ ಹಠಹಿಡಿಯುವುದಕ್ಕಿಂತೇನೋ ?'' ಎನ್ನುತ್ತ ರಾಯರು ಒಳಕ್ಕೆದ್ದು ಹೋದರು.

ಭೀಮರಾಯರು, ಅಮಲ್ದಾರರು. ರಸಿಕರು. ಹಳ್ಳಿಗರ ಜನಜೀವನದಲ್ಲಿ ಸಹಾನುಭೂತಿಯುಳ್ಳವರು. ಇವರಿಗೆ ಕೆಂಚನ ಪರಿಚಯವಾದದ್ದು ಈ ಊರಿಗೆ ಬಂದಮೇಲೆ, ಮೂರು ತಿಂಗಳ ಹಿಂದೆ. ``ಕ್ಯಾಂಪಿ''ನಲ್ಲಿ ಒಂದು ದಿನ ಸಂಜೆ ರಾಯರು ವಿಹಾರಾರ್ಥವಾಗಿ ಹೊರಟು ದಾರಿ ತಪ್ಪಿ [illegible]

[illegible]

ಕಷ್ಟಪಟ್ಟರೂ ಹತ್ತು ರೂಪಾಯಿ ಅಸಲಿಗೆ ತೀರಿಸುವುದೇ ಕಷ್ಟವಾಗಿತ್ತು; ಕೆಂಚನ ಕಣ್ಣು ಅರಳಿತು; ನಲವತ್ತು, ಹತ್ತು, ಐವತ್ತಾದ ಹಾಗಾಯಿತು. ``ಏಕೆ ಕೊಟ್ಟುಬಿಡಬಾರದು ?'' ಎನ್ನಿಸಿತು. ನಿಜ, ಸಾಲದ ಹೊರೆಯನ್ನು ಹೊತ್ತು ಜೀವಾವಧಿ ನರಳುವುದಕ್ಕಿಂತ ಮೇಲಲ್ಲವೇ ? ಮಕ್ಕಳಿಗೆ ಮಜ್ಜಿಗೆ, ಬೆಣ್ಣೆ, ಇಲ್ಲದಿದ್ದರೇನು ? ಕೆಂಚನು ಒಪ್ಪಿದ. ಬೆಟ್ಟನು ಎಲ್ಲವನ್ನೂ ಸಿದ್ಧವಾಗಿಯೇ ಬಂದಿದ್ದ. ಒಡನೆಯೇ ಹತ್ತು ರೂಪಾಯನ್ನು ಕೆಂಚನ ಕೈಗಿಟ್ಟು, ``ಇದೂ ತಗೊ, ಕೆಂಚಣ್ಣ. ನಿನ್ನ ಸಾಲವೂ ತೀರಿತು. ಹಸ ಒಪ್ಪಿಸಿಬಿಡು,'' ಎಂದು ಕೇಳಿದ. [illegible]

[illegible]

ಹೇಳಿ, ಅಮಲ್ದಾರರಲ್ಲಿಗೆ ಓಡಿದ. ಇವನೆಷ್ಟು ಬೇಗ ಬರಬಹುದೆಂದು ಊಹಿಸಿದ್ದನೋ ಅಷ್ಟು ಬೇಗ ಬರಲಾಗಲಿಲ್ಲ.

ಬೆಟ್ಟನು ಕಾದು ಸಾಕಾಯಿತು. ಮೆಲ್ಲಗೆ ಹೋಗುತ್ತಿದ್ದರೆ ಹಿಂದೆಯೇ ಕೆಂಚನು ಬರಬಹುದೆಂದು ಮುಂದಕ್ಕೆ ನಡೆದ. ಕೆಂಚನ ಮನೆಯೂ ಸಿಕ್ಕಿತು, ಆದರೆ ಅವನು ಮಾತ್ರ ಇನ್ನೂ ಬಂದಿಲ್ಲ. ಬಾಗಿಲಲ್ಲಿ ಕುಳಿತಿದ್ದ ಕೆಂಚನ ತಂದೆಯನ್ನೂ ಮಾತನಾಡಿಸಿದ. ತಾನು ಮಾಡಿದ್ದ ವ್ಯಾಪಾರದ ಮಾತೆತ್ತಿ ಹಸುವನ್ನು ಹೊಡೆದುಕೊಂಡು ಹೋಗಲು ಇಷ್ಟಪಟ್ಟ. ಹಸುವೇನೋ ಇನ್ನೂ ಮನೆಯಲ್ಲಿಯೇ ಇತ್ತು; ಕೆಂಚನು ಬಂದ ಮೇಲೆ ಮೇಯಿಸುವುದಕ್ಕೆ ಸಾಹೇಬರ ಬಂಗಲೆಗೆ ಹೊಡೆದುಕೊಂಡು ಹೋಗಬೇಕಿತ್ತು. ಬೆಟ್ಟ, ಕೆಂಚನ ತಂದೆ ಇಬ್ಬರೂ ಕೊಟ್ಟಿಗೆಗೆ ಹೋದರು. ಇವರು ಹಸುವನ್ನು ನೋಡುತ್ತಿದ್ದಾಗ ಬಾನೀಗೆ ಕಲಗಚ್ಚು ಸುರಿಯಲು ತಿಮ್ಮಮ್ಮನು ಅಲ್ಲಿಗೆ ಬಂದಳು. ಅದನ್ನು ನೋಡಿ ಬೆಟ್ಟನು ``ತಿಮ್ಮಮ್ಮ, ಇನ್ನು ಈ ಬಾನೀಗೆ ಕಲಗಚ್ಚು ಹೊರುವ ಕಷ್ಟ ತಪ್ಪಿತು. ಇನ್ನು ಈ ಹಸ ನನ್ನದು. ಹೊಡೆದುಕೊಂಡು ಹೋಗುವುದಕ್ಕೆ ಬಂದಿದೀನಿ'' ಅಂದ. ತಿಮ್ಮಮ್ಮನಿಗೆ ಸಿಡಿಲು ಬಡಿದಂತಾಯಿತು. ತನ್ನ ಪ್ರೀತಿಯ ಹಸುವನ್ನು ಕೊಟ್ಟುಬಿಡಲು ಅವಳ ಮನಸ್ಸು ಒಪ್ಪಲಿಲ್ಲ. ಕಡೆಗೆ ``ಹಸು, ನಮ್ಮಪ್ಪ ಕೊಟ್ಟದ್ದು. ಯಾರಿಗೇನು ಅಧಿಕಾರ ಇದನ್ನು ಮಾರಾಕೆ.'' ಎಂದುಬಿಟ್ಟಳು. ಬೆಟ್ಟನಿಗೆ ಕೈಗೆ ಬಂದ ತುತ್ತು ಬಾಯಿಗಿಲ್ಲವಲ್ಲಾ ಎಂದು ಸಂಕಟ. ಅವನೂ ಸ್ವಲ್ಪ ಬಿರುಸಿನಿಂದ ಮಾತನಾಡಿದ. ಹಸು ಮಾರಿಯಾಯಿತು, ಈಗ ಅದು ತನ್ನದು, ಎಂದ; ಸಾಲದ ಮಾತೆತ್ತಿ ಹೆದರಿಸಿದ. ಯಾವುದಕ್ಕೂ ತಿಮ್ಮಮ್ಮ ಜಗ್ಗಲಿಲ್ಲ. ಅವಳದು ಒಂದೇ ಉತ್ತರ: ಹಸು ತನ್ನದು, ಮತ್ಯಾರಿಗೂ ಅದನ್ನು ಮಾರುವ ಅಧಿಕಾರವಿಲ್ಲ.

ಕೆಂಚನು ಬರುವ ಹೊತ್ತಿಗೆ ಈ ರಗಳೆ ಇನ್ನೂ ನಡೆಯುತ್ತಿತ್ತು. ತಿಮ್ಮಮ್ಮ ಹಸುವನ್ನು ಮುಟ್ಟಗೊಡಿಸಲಿಲ್ಲ; ಬೆಟ್ಟ ಹೆದರಿಸುವುದೂ ತಪ್ಪಲಿಲ್ಲ. ಕೊನೆಗೆ ತಿಮ್ಮಮ್ಮನೇ ಗೆದ್ದಳು. ಆದರೇನು ? ಈ ಛಲದ ದುಷ್ಪರಿಣಾಮನ್ನು ಅವಳು ಅನುಭವಿಸಬೇಕಾಯಿತು. ಕೆಂಚನು ತನ್ನ ಕೋಪದಲ್ಲಿ ಹೆಂಡತಿ ಮಕ್ಕಳನ್ನು ಮನೆಯಿಂದ ದೂಡಿದನು. ನಿನ್ನೆ ಆದ ಪಂಚಾಯಿತಿ ಅದೇ ವಿಷಯವಾಗಿ.

ಕೆಂಚನು ಹೆಂಡತಿಯನ್ನು ಮನೆಯಿಂದ ತಳ್ಳಿ ಒಂದೂವರೆ ವರ್ಷವಾಯಿತು. ಈ ಮಧ್ಯೆ ಕೆಲವರು ಎರಡನೆ ಮದುವೆಗೆ ಒಪ್ಪಿಸಲು ಪ್ರಯತ್ನಪಟ್ಟರು. ಆದರೆ ಅದಕ್ಕೆ ಅವನ ಮನಸ್ಸು ಒಪ್ಪಲಿಲ್ಲ. ಪಂಚಾಯಿತರು ಮತ್ತೆ ಹೆಂಡತಿ ಮಕ್ಕಳನ್ನು ಮನೆಗೆ ಕರೆದಿಟ್ಟುಕೋ ಎಂದರು. ಹಾಗೆ ಮಾಡಿದರೆ ಜನಗಳೇನೆಂದುಕೊಂಡಾರು ಎಂಬ ನಾಚಿಕೆ. ತಾನೊಬ್ಬನೇ ಕುಳಿತಾಗ ಹೆಂಡತಿ ಮಕ್ಕಳ ನೆನಪು ಬಂದು, ಕಣ್ಣು ಹನಿಗೂಡುವುದು. ಆದರೆ ಮಾಡುವುದೇನು ? ಗಂಡಸಿಗೆ ತನ್ನದೇ ಕಡೆಯ ಮಾತೆಂಬ ದುರಭಿಮಾನವಿದೆಯಲ್ಲಾ ! ಒಂದು ದಿನ ಕೆಂಚನಿಗೆ ಜೀವನದಲ್ಲಿ ಜಿಗುಪ್ಸೆ ಹುಟ್ಟಿತು; ಏನೂ ಬೇಡವಾಯಿತು; ಬಾಳೆಲ್ಲ ಬರಿದು ಎನ್ನಿಸಿತು. ತಾನು ಯಾರಿಗೋಸ್ಕರವಾಗಿ ಉತ್ಸಾಹದಿಂದ ಕೆಲಸ ಮಾಡುತ್ತಿದ್ದನೋ, ಯಾರ ಏಳಿಗೆಯನ್ನು ಕಂ

ತು ಕನಸಿನ ಲೋಕವನ್ನು ಕಟ್ಟುತ್ತಿದ್ದನೋ ಅವರು ತನ್ನ ಪಾಲಿಗೆ ಇಲ್ಲದಾಗಿರುವಾಗ ಇನ್ನು ಬದುಕಿ ಫಲವೇನು? ಎನ್ನಿಸಿತು. ತನ್ನ ಚಿಂತೆಯ ಭರದಲ್ಲಿ ಆತ್ಮಹತ್ಯ ಮಾಡಿಕೊಳ್ಳುವುದೆಂದು ನಿರ್ಧರಿಸಿದನು. ಭಾವಶೂನ್ಯನಾಗಿ ಕೆರೆಯ ಮಾರ್ಗವಾಗಿ ಹೊರಟನು.

ಸೂರ್ಯನು ಮುಳುಗುತ್ತಿದ್ದಾನೆ. ಕೆರೆ ಏರಿಯ ಮೇಲೆ ಮನೆಗೆ ಹಿಂದಿರುಗುತ್ತಿರುವ ದನ ಕರುಗಳು ಹೋಗುತ್ತಿವೆ. ಅವೆಲ್ಲಾ ಕಣ್ಮರೆಯಾಗಿ ಹೋಗಲೆಂದು ಕಾಯುತ್ತ ಕಟ್ಟೆಯ ಮೇಲೆ ಕೇಶವನು ಕುಳಿತ್ತಿದ್ದಾನೆ. [illegible] ಪ್ರಕೃತಿ ಸೌಂದರ್ಯವು ಅವನ ಮನಸ್ಸನ್ನು ಕಲುಕಿತು. [illegible]

ಮಾತಾಡುವುದು ಕಾಣಿಸಿತು. ಆ ಮೇಲೆ ಏನೋ ಒದರಿಕೊಳ್ಳುವ ಶಬ್ದ. ಅದರಲ್ಲಿ ತನ್ನ ಹೆಸರು ಕೇಳಿಸಿದ ಹಾಗಾಯಿತು. ಕುತೂಹಲದಿಂದ ಆ ವ್ಯಕ್ತಿಯ ಕಡೆಗೆ ಬರುತ್ತಿದ್ದಳು. ಅಷ್ಟರಲ್ಲಿ ನೀರಿಗೆ ಒಂದು ಭಾರವಾದ ವಸ್ತುವು ಬಿದ್ದಂತೆ ಶಬ್ದ ಕೇಳಿಸಿತು. ತೂಬಿನ ಕಲ್ಲ ಮೇಲೆ ಆಗ ಯಾರೂ ಕಾಣಿಸಲಿಲ್ಲ. ಯಾಕೋ ಅವಳ ಎದೆ "ಡವ್" ಎಂದಿತು. ಗಟ್ಟಿಯಾಗಿ ಚೀರಿಬಿಟ್ಟಳು. ತಡವಾಗಿ ಅದೇ ಮನೆಗೆವಾಗಿ ಬರುತ್ತಿದ್ದ ಮೂವರು ದನ ಕಾಯುವವರು ಇವನ್ನು ಕೇಳಿ ಓಡಿ ಬಂ[illegible]

[illegible]

ರಾಷ್ಟ್ರೀಯ ಸೇವಾದಲ

(ಯುವಜನ ಚಳುವಳಿ)

ಶ್ರೀ "ಸೇವಾದಲ ಪ್ರೇಮಿ"

ಡಾ|| ನಾ. ಸು. ಹರ್ಡಿಕರ್
ಸೇವಾದಲದ ಮಹಾ ಪುರೋಹಿತರು

ಯಾವ ಪ್ರತಿಫಲದ ಆಸೆಯೂ ಇಲ್ಲದೆ ಸಂತೋಷದಿಂದ ಒಳ್ಳೆಯ ಕಾರ್ಯಕ್ಕಾಗಿ ಸೇವೆ ಸಲ್ಲಿಸಲು ಬರುವ ಪ್ರತಿಯೊಬ್ಬನಿಗೂ ಸ್ವಯಂಸೇವಕನೆಂದು ಹೆಸರು. ಈ ಸ್ವಯಂಸೇವಕರು ಮಾಡುವ ಕೆಲಸಗಳಿಗೆ ಸ್ವಯಂಸೇವೆ ಎಂದು ಹೆಸರು. ಈ ಪ್ರಪಂಚದಲ್ಲಿ ಅನೇಕ ವಿಧವಾದ ಕೆಲಸಗಳಿವೆ. ಈ ಎಲ್ಲಾ ಕೆಲಸಗಳನ್ನು ನಾನೇ ಮಾಡಿಕೊಳ್ಳುತ್ತೇನೆ ಅಥವ ಹಣ ಕೊಟ್ಟು ಮಾಡಿಸುತ್ತೇನೆ ಎಂದು ಹೇಳುವುದು ತಿಳಿಗೇಡಿತನ. ಒಂದು ಮನೆಗೆ ಬೆಂಕಿ ಬಿದ್ದರೆ ಸುತ್ತು ಮುತ್ತಲಿನ ಜನರೆಲ್ಲರೂ ಬಂದು ಬೆಂಕಿಯನ್ನು ಆರಿಸಲು ಪ್ರಯತ್ನಿಸುತ್ತಾರೆ. ಆಗ ಜನಗಳಲ್ಲಿ ಯಾವ ಜಾತಿ, ಮತ, ಭೇದಗಳಿರುವುದಿಲ್ಲ. ಇದು ಒಂದು ಸ್ವಯಂಸೇವೆಯೇ ಆಗಿರುವುದು. ಇಂತಹ ಕೆಲಸಗಳನ್ನೆಲ್ಲಾ ನಾನೇ ಅಥವ ಹಣದ ಸಹಾಯದಿಂದ ಮಾಡುತ್ತೇನೆಂಬುದು ಅಸಾಧ್ಯ. ಮನೆಗೆ ಬೆಂಕಿ ಬಿದ್ದಿರುವಾಗ ಕೂಲಿ ಜನರನ್ನು ಹುಡುಕಿ ತರಲು ಸಾಧ್ಯವೆ? ಈ ತರಹದ ಸ್ವಯಂ ಸೇವೆಯು ಕೇವಲ ಮನುಷ್ಯನಲ್ಲಿ ಮಾತ್ರವಲ್ಲದೆ ಪಶುಪಕ್ಷಿಗಳಲ್ಲೂ ಇರುವುದು.

ಅಲ್ಲದೆ ಯಾವ ರಾಷ್ಟ್ರವನ್ನು ತೆಗೆದುಕೊಂಡರೂ ಸಹ ಸ್ವಯಂಸೇವಕರಿಲ್ಲದೆ ಕಾರ್ಯವು ನಡೆಯುವುದಿಲ್ಲ. ಅದೇ ರೀತಿ ನಮ್ಮ ಭಾರತವಾದರೂ ಇಂದು ಪರರ ಅಧೀ

ನದಲ್ಲಿ ಇದೆ. ನಮಗೆ ಯಾವ ವಿಧವಾದ ರಾಜಕೀಯ ಸ್ವಾತಂತ್ರ್ಯವೂ ಇಲ್ಲ. ನಮಗೆ ಪೂರ್ಣ ಸ್ವಾತಂತ್ರ್ಯ ಬರುವವರೆಗೆ ಸುಖವಿಲ್ಲ, ಶಾಂತಿ ಇಲ್ಲ. ಈ ಪೂರ್ಣ ಸ್ವಾತಂತ್ರ್ಯಕ್ಕಾಗಿ ಭಾರತದ ಏಕೈಕ ರಾಷ್ಟ್ರೀಯ ಸಂಸ್ಥೆಯಾದ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಸುಮಾರು ೬೦ ವರ್ಷಗಳಿಂದ ಹೋರಾಡುತ್ತಿದೆ. ಅನೇಕ ರಾಷ್ಟ್ರಗಳು ತಮ್ಮ ರಾಜ್ಯ ವಿಸ್ತಾರಕ್ಕಾಗಿ ಹಿಂಸೆಯಿಂದ ಹೋರಾಡಿ ಅನೇಕ ಲಕ್ಷಾಂತರ ಜನರ ಕೊಲೆಗೆ ಕಾರಣರಾದರೆ ಇಂದು ನಾವು ನಮ್ಮ ದೇಶದ ಪೂರ್ಣ ಸ್ವಾತಂತ್ರ್ಯಕ್ಕಾಗಿ ಮಹಾತ್ಮ ಗಾಂಧಿಜೀಯವರ ನಾಯಕತ್ವದಲ್ಲಿ ಅಹಿಂಸಾ ತತ್ವದಿಂದ ಹೋರಾಡಬೇಕಾಗಿದೆ. ಈ ರೀತಿ ಅಹಿಂಸಾ ತತ್ವದಿಂದ ಹೋರಾಡುವ ಸ್ವಯಂಸೇವಕರ ಅವಶ್ಯಕತೆಯು ನಮ್ಮ ದೇಶಕ್ಕೆ ಅತ್ಯವಶ್ಯಕವಾಗಿದೆ. ಇಂತಹ ಸ್ವಯಂಸೇವಕರ ಒಂದು ಸಂಘಟನೆ ಅತ್ಯಾವಶ್ಯಕ. [illegible]

ಹಿಂದೂಸ್ಥಾನಿ ಸೇವಾದಲ

[illegible]

ಗ್ರಹ ಹೂಡಬೇಕೆಂದು ಮಹಾತ್ಮರು ಸೂಚಿಸಿದರು. ಹರತಾಳವು ಪ್ರಾರಂಭವಾಗಿ ದೆಹಲಿ, ಪಂಜಾಬ್, ಲಕ್ನೋ, ಸಂಯುಕ್ತಪ್ರಾಂತ್ಯ, ಮಧ್ಯಪ್ರಾಂತ್ಯ ಮೊದಲಾದ ಪ್ರದೇಶಗಳಿಗೆ ಹರಡಿತು. ಜುಮ್ಮಾ ಮಸೀದಿಯಲ್ಲಿ ಶ್ರೀ ಶ್ರದ್ಧಾನಂದರು ಉಪದೇಶ ಮಾಡಿದರು. ಈ ಆಕ್ಟನ್ನು ವಿರೋಧಿಸಲು ೧೯೧೯ನೆಯ ಏಪ್ರಿಲ್ ೧೩ನೇ ತಾ|| ಅಮೃತಸರದ "ಜಲಿಯನ್ ವಾಲಾ ಬಾಗ್" ಎಂಬಲ್ಲಿ ದೊಡ್ಡ ಸಭೆ ಸೇರಿದ್ದಿತು. ಮಾರ್ಷಲ್ ಲಾ ಜಾರಿಯಲ್ಲಿತ್ತು. ಜನ ಹೆದರಲಿಲ್ಲ. ಲಕ್ಷಾಂತರ ಜನ ಸೇರಿರುವಾಗ ಸರ್ಕಾರದವರು ದಬ್ಬಾಳಿಕೆ ನಡೆಸಿ ೧೬೦೦ ರೌಂಡ್ ಗುಂಡನ್ನು ಹಾರಿಸಿದರು. ಇದರ ಪರಿಣಾಮವಾಗಿ ೮೦೦ [illegible] ಸಾವಿರಾರು ಮಂದಿ ಗಾಯಗೊಂಡರು. ಇದನ್ನು ವಿರೋಧಿಸಲು ಮತ್ತು ಇಂತಹ ದಬ್ಬಾಳಿಕೆ [illegible]

ಆದರೆ ನಾಗಪುರದ ಒಂದು ಭಾಗವಾದ "ಸಿವಿಲ್ ಲೈನ್ಸ್" ಎಂಬಲ್ಲಿ ಮಾತ್ರ ಹೋಗಕೂಡದೆಂದರು. ಆದರೆ ಸ್ವಯಂಸೇವಕರು ಅಲ್ಲಿಗೆ ಹೋಗೇ ಹೋಗುತ್ತೇವೆಂದು ಹಟ ಹಿಡಿದರು. ೧೪೪ನೆ ಸೆಕ್ಷನ್ ಜಾರಿಗೆ ಬಂದಿತು. ಇದರಿಂದ ತಿಕ್ಕಾಟ ಪ್ರಾರಂಭವಾಯಿತು. ಇದು ಹಿಂದೂಸ್ಥಾನದ ಎಲ್ಲಾ ಭಾಗಕ್ಕೂ ಹರಡಿತು. ದೇಶದ ಅನೇಕ ಭಾಗಗಳಿಂದ ಸ್ವಯಂಸೇವಕರು ನಾಗಪುರಕ್ಕೆ ಹೊರಟರು. ಎಲ್ಲರೂ ದಸ್ತಗಿರಿಯಾದರು. ಇದಕ್ಕೆ "ನಾಗಪುರದ ಧ್ವಜ ಸತ್ಯಾಗ್ರಹ"ವೆಂದು ಹೆಸರಾಯಿತು. ಸುಮಾರು ಮೂರು ಸಾವಿರ ಮಂದಿ ಸೆರೆಮನೆಗೆ ಬಂದರು. ಬರಬರುತ್ತಾ ತರುಣರಲ್ಲಿ ಉತ್ಸಾಹ ಕಡಿಮೆ ಆಯಿತು. ಸೆರೆಮನೆಯಲ್ಲಿದ್ದ ಯುವಕರಿಗೆ ಅಲ್ಲಿಯ ಕಷ್ಟಗಳನ್ನು ಸಹಿಸಲು ಆಗಲಿಲ್ಲ. ಶಿಸ್ತು, ಸಂಘಟನೆ, ಇರಲಿಲ್ಲ. ಇದನ್ನು ಸೆರೆಮನೆಯಲ್ಲಿದ್ದ ನಾಯಕರು ತಿಳಿದುಕೊಂಡರು. ಸ್ವಲ್ಪ ದಿನಗಳ ನಂತರ ಎಲ್ಲರ ಬಿಡುಗಡೆಯಾಯಿತು. ದೆಹಲಿಯಲ್ಲಿ ಅಜಾದರ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ಸಿನ ಸಭೆ ಸೇರಿತು. ಆಗ ಕರ್ಣಾಟಕದ ನಾಯಕರೂ, ನಾಗಪುರದ ಸೆರೆಮನೆಯಲ್ಲಿದ್ದ ಯುವಕರ ದೋಷಗಳನ್ನು ಚೆನ್ನಾಗಿ ಅರಿತವರೂ ಆದ ಡಾಕ್ಟರ್ ನಾ. ಸು. ಹರ್ಡಿಕರ್‌ರವರು ಅಜಾದರಿಗೆ ನಾಗಪುರದಲ್ಲಿ ನಡೆದ ವಿಷಯವನ್ನು ತಿಳಿಸಿ ಇದಕ್ಕೆ ತರುಣರ ಸಂಘಟನೆ ಅವಶ್ಯಕವೆಂದು ತಿಳಿಸಿದರು. ನಂತರ ಇದರ ಸಲುವಾಗಿ ಒಂದು ಸಮಿತಿ ನಿರ್ಮಿತವಾಯಿತು. ಇದಕ್ಕೆ ಶ್ರೀ ಬಾಬಾ ಸಾಹೇಬ್ ದೇಶಮುಖ್‌ರವರು ಅಧ್ಯಕ್ಷರಾದರು. ಡಾ|| ನಾ. ಸು. ಹರ್ಡಿಕರ್‌ರವರು ಕಾರ್ಯದರ್ಶಿಗಳಾದರು. ಇದರ ಸಲುವಾಗಿ ದೇಶದ ಎಲ್ಲಾ ಭಾಗದ ಪ್ರತಿನಿಧಿಗಳೂ ಕಾಕಿನಾಡದಲ್ಲಿ ಪಂಡಿತ್ ಜವಾಹರಲಾಲ್ ನೆಹ್ರುರವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಈ ಕೆಳಗೆ ಕಂಡ ನಿರ್ಣಯವನ್ನು ಗೊತ್ತುಮಾಡಿದರು. "ಹಿಂದೂಸ್ಥಾನಿ ಸೇವಾದಲ'ವೆಂಬ ಹೆಸರಿನ ಒಂದು ಸ್ವಯಂಸೇವಕ ಸಂಘಟನಾ ಸಂಸ್ಥೆಯನ್ನು ಭಾರತ ದೇಶದ ಸಲುವಾಗಿ ನಿರ್ಮಿಸಲ್ಪಡಬೇಕೆಂದೂ, ಇದಕ್ಕೆ ಮಾರ್ಗದರ್ಶನ ಮಾಡಲು ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಕ್ರಮ ಕೈಗೆದುಕೊಳ್ಳಬೇಕೆಂದೂ, ಈ ಸಭೆಯು ಭಿನ್ನವಿಸುತ್ತದೆ." ಇದರಂತೆ ಸ್ವಲ್ಪ ದಿನಗಳ ನಂತರ ಮೌಲಾನ ಮಹಮ್ಮದ್ ಅಲಿಯವರ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ಸಿನ ಸಭೆ ಸೇರಿ ಮೇಲೆ ಹೇಳಿದ ನಿರ್ಣಯವನ್ನು ಸ್ವೀಕರಿಸಿತು. ನಂತರ "ಹಿಂದೂಸ್ಥಾನಿ ಸೇವಾದಲ" ಎಂಬ ಸಂಸ್ಥೆಯು ಪ್ರಾರಂಭವಾಯಿತು. ಮೌಲಾನಾ ಶೌಕತ್ ಅಲಿಯವರು ಅಧ್ಯಕ್ಷರಾದರು. ಡಾಕ್ಟರ್ ಹರ್ಡಿಕರ್ ಅವರು ಕಾರ್ಯದರ್ಶಿಗಳಾದರು. ಜನರ ಪ್ರೋತ್ಸಾಹದಿಂದ ಸೇವಾದಲ ದಿನೇ ದಿನೇ ಬೆಳೆಯುತ್ತಾ ಬಂದಿತು. ಡಾ| ಹರ್ಡಿಕರ್‌ರವರು ಸೇವಾದಲಕ್ಕಾಗಿ ರಾತ್ರಿ ಹಗಲೂ ದುಡಿಯುತ್ತಿದ್ದರು. ೧೯೨೩ರಲ್ಲಿ ಸೇವಾದಲವನ್ನು ಅವರ ವಶಕ್ಕೆ ಒಪ್ಪಿಸಲಾಯಿತು. ೧೯೨೪ರಲ್ಲಿ ಬೆಳಗಾಂನಲ್ಲಿ ಕಾಂಗ್ರೆಸ್ಸಿನ ಸಭೆ ಸೇರಿತು. ಸ್ವಯಂಸೇವಕರ ಪೂರ್ಣ ಜವಾಬ್ದಾರಿಯು ಸೇವಾದಲದ ಕೈಗೆ ಸಿಕ್ಕಿತು. ಸ್ವಯಂ

ಸೇವಕರನ್ನು ತರಪೇತು ಮಾಡಲು ದೇಶದ ನಾನಾ ಭಾಗಗಳಲ್ಲಿ ಶಿಕ್ಷಣ ಶಿಬಿರಗಳನ್ನು ತೆಗೆದರು. ಸುಮಾರು ೧೦೦೦ ಜನ ಸ್ವಯಂ ಸೇವಕರೂ, ೧೦೦ ಜನ ಸ್ವಯಂಸೇವಕಿಯರೂ ತಯಾರಾದರು. ಅಧಿವೇಶನದ ಕಾಲದಲ್ಲಿ ಅತ್ಯುತ್ತಮವಾಗಿ ಕೆಲಸ ಮಾಡಿದರು. ಭಾರತದ ನಾನಾ ಕಡೆಗಳಿಂದ ಬಂದಿದ್ದ ಪ್ರತಿನಿಧಿಗಳು ಇದನ್ನು ಕಂಡು ಬೆರಗಾದರು. [illegible]ರಲ್ಲಿ ಕಾಂಗ್ರೆಸ್ಸು [illegible] ದಲ್ಲಿ ತನ್ನ ಅಧಿವೇಶನವನ್ನು [illegible]. ಅಲ್ಲಿಯು [illegible] ಅಧಿವೇಶನದಲ್ಲಿ ಸೇವಾದಲವು [illegible] ಕಾರ್ಯವನ್ನು [illegible]. [illegible] ಸೇವಾದಲದ [illegible] ಡಾ॥ ಹಾರ್ಡೀಕರ್‌ [illegible]

[illegible]

ಯಲ್ಲಿ ಚರ್ಚೆಯಾಗಿ ಈ ಕೆಳಗೆ ಕಂಡ ಗೊತ್ತುವಳಿಯನ್ನು ಮಾಡಿದರು.—"ಹಿಂದೂಸ್ಥಾನಿ ಸೇವಾದಲವು ಇಂದಿನಿಂದ ಕಾಂಗ್ರೆಸ್ಸಿನ ಒಂದು ಭಾಗವಾಗಿಯೇ ಕೆಲಸ ಮಾಡಬೇಕು. ಈ ಕಾರ್ಯವನ್ನು ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಒಬ್ಬ ಸದಸ್ಯರ ಕೈಗೆ ಒಪ್ಪಿಸಬೇಕು." ಇದರಂತೆ ಪಂಡಿತ್ ಜವಹರಲಾಲ್ ನೆಹ್ರುರವರು ಸೇವಾದಲದ ಅಧಿಕಾರವನ್ನು [illegible]. ಡಾ॥ ಹಾರ್ಡೀಕರ್‌ರವರು ಮುಖ್ಯ ಕಾರ್ಯದರ್ಶಿಗಳಾದರು. [illegible] ಸತ್ಯಾಗ್ರಹದಲ್ಲಿ ಕಾಂಗ್ರೆಸ್ಸಿನಮೇಲೆ [illegible]

[illegible]

ಗಳಿಂದ ಹಿಂದೂಸ್ಥಾನಿ ಸೇವಾದಲವು "ರಾಷ್ಟ್ರಸೇವಾದಲ"ವೆಂಬ ಹೆಸರಿನಿಂದ ಪುನರುಜ್ಜೀವನವಾಯಿತು. ಭಾರತದ ಎಲ್ಲಾ ಕಡೆಗಳಲ್ಲಿಯೂ ಸೇವಾದಲದ ಶಾಖೆಗಳು ಪುನಃ ಪ್ರಾರಂಭವಾದುವು. ಕರ್ನಾಟಕದಲ್ಲಿ ಶ್ರೀ ಬುರ್ಲಿ ಬಿಂದುಮಾಧವ ಅವರು ನಾಯಕರಾಗಿದ್ದಾರೆ.

ರಾಷ್ಟ್ರ ಸೇವಾದಲದ ಧ್ಯೇಯಗಳು

ಭಾರತದ ತರುಣ ತರುಣಿಯರನ್ನು ಭಾರತೀಯತ್ವದ ತಳಹದಿಯ ಮೇಲೆ, ಜಾತಿ, ಕೋಮು ಮತ ಧರ್ಮ, ವರ್ಗಗಳ ಭೇದವಳಿಸಿ, ರಾಷ್ಟ್ರಸೇವೆಗಾಗಿ ಸಂಘಟಿಸಿ ಸ್ವಯಂ ಸೇವಕ ದಲವನ್ನು ನಿರ್ಮಿಸುವುದು.

ಈ ಸ್ವಯಂಸೇವಕರಲ್ಲಿ ರಾಷ್ಟ್ರೀಯ ಮತ್ತು ಸಾಮಾಜಿಕ ಕರ್ತವ್ಯದ ಅರಿವನ್ನು ಹುಟ್ಟಿಸುವುದು; ಶಾಂತ ಮತ್ತು ನ್ಯಾಯವಾದ ಮಾರ್ಗಗಳಿಂದ ರಾಷ್ಟ್ರದ ಪೂರ್ಣ ಸ್ವಾತಂತ್ರ್ಯಕ್ಕಾಗಿ ದುಡಿಯುವಂತೆ, ಅವರಿಗೆ ವ್ಯವಸ್ಥಿತ ಶಿಕ್ಷಣ ಕೊಟ್ಟು ಅವರು ಕರ್ತವ್ಯನಿಷ್ಠರೂ ಕಾರ್ಯದಕ್ಷರೂ ಸ್ವಾರ್ಥತ್ಯಾಗಿಗಳೂ ಶಿಸ್ತು ಸಂಘಟನೆಯಿಂದ ನಡೆಯುವಂಥವರೂ ಆಗುವಂತೆ ಮಾಡುವುದು.

ಯುವಜನಕ್ಕೆ ಬೌದ್ಧಿಕ, ಶಾರೀರಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ಶಿಕ್ಷಣವನ್ನು ಕೊಟ್ಟು ಭಾರತವನ್ನಾಳುವ ಕುಶಲಮತಿ ಜವಾಬ್ದಾರಿಯುತ ಪ್ರಜೆಗಳನ್ನಾಗಿ ಮಾಡುವುದು.

ವಿಶ್ವಕರ್ನಾಟಕ

(ಪ್ರಧಾನ ಸಂಪಾದಕರು, ತಾತಾಚಾರ್ಯ ಶರ್ಮನ್)

ಯುಗಾದಿ ಸಂಚಿಕೆ

ಬೆಲೆ ೧—೪—೦.

ಸುಮಾರು ೧೬೦ ಪುಟ

ಕರ್ನಾಟಕದ ಪ್ರತಿ ಮನೆಯಲ್ಲೂ ಶೋಭಿಸಬೇಕಾದ ಸುಂದರ ಸಂಚಿಕೆ.

ಸುಪ್ರಸಿದ್ಧ ಕಲೆಗಾರರ ಚಿತ್ರಗಳು

ವಿಶೇಷ ಲೇಖನಗಳು

ಕರ್ನಾಟಕದ ಹಿರಿಯ ಲೇಖಕರಾದ ಪ್ರೊ॥ ಅನಂತರಾಮಯ್ಯ, ಶ್ರೀ ಬೇಂದ್ರೆ, ಶ್ರೀ ಡಿ.ಎಲ್. ನರಸಿಂಹಾಚಾರ್; ಪ್ರೊ॥ಗೋಕಾಕ್, ಶ್ರೀ ತಿರುಮಲೆ ತಾತಾಚಾರ್ಯ ಶರ್ಮನ್, ಶ್ರೀ ದೇವುಡು ನರಸಿಂಹಾ ಶಾಸ್ತ್ರಿಗಳು, ಶ್ರೀ ನಾಡಿಗೇರ್ ಕೃಷ್ಣರಾಯರು, ಶ್ರೀಮತಿ ಭಾರತಿ ಮತ್ತಿತರ ಪ್ರಖ್ಯಾತ ಲೇಖಕರ ವಿಚಾರಪೂರ್ಣ ಲೇಖನಗಳು.

ಜಾಹಿರಾತುದಾರರಿಗೆ ಅತ್ಯುತ್ತಮ ಸಮಯ ಜಾಹಿರಾತು ವಿವರಗಳಿಗೆ:—

೮೫ ಬಳೇಪೇಟೆ **ಯೂನಿವರ್ಸಲ್ ಪಬ್ಲಿಕೇಷನ್ಸ್** ಬೆಂಗಳೂರು ನಗರ

● ಅರಳು ಕುಸುಮ ●

ಕುಸುಮದ ಗೊಂಚಲೆ
ನೀನರಳು,
ತುಂಬಿ ಬರಲಿದೆ ಬೇಗ ||ಪ||

೧

ಗಾಳಿಯರಥದಲಿ,
ಸುಳಿದು ಬರುತಿದೆ
ಬಹಳ ಚಲುವಿನ ತುಂಬೀ— ಕು

೨

ಅರಿಯದ ಗಾನಕೆ,
ತಾಳುವ [illegible]
ಓಡಿ ಬರುತಿದೆ ತುಂಬೀ—ಕು

೩

[illegible]

೪

ನಗುತಾ ನಲಿಯುತ
ನಾಚುವೆ [illegible]
[illegible] ತುಂಬೀ— ಕು

೫

[illegible]

೬

[illegible]

೭

[illegible]

೮

[illegible]

[illegible]

[illegible]

ಏಕಾಂಕ

ಗೆಳತಿಯ ಕಾಗದ

ಶ್ರೀ ಎಲ್. ಎಸ್. ಶೇಷಗಿರಿ ರಾವ್, ಬಿ. ಎ., (ಆನರ್ಸ್)

[ಕಚೇರಿಯ ದೊಡ್ಡ ನಡುಮನೆ. ಬಾಗಿಲು ತೆರೆಯುತ್ತಲೇ ತನ್ನ ಅಗಲ, ಉದ್ದಗಳಿಂದಲೇ ತಾನು ಹೆಡ್ ಗುಮಾಸ್ತೆಯ ಸ್ವತ್ತೆಂದು ತೋರಿಸುವ ದೊಡ್ಡ ಮೇಜು, ಅದರ ಪಕ್ಕದಲ್ಲಿ ಕುರ್ಚಿ, ಮೇಜಿನಮೇಲೆ ದೊಡ್ಡದೊಂದು 'ಟ್ರೇ'. ಮೇಜಿನಿಂದ ಸ್ವಲ್ಪ ದೂರದಲ್ಲಿ ನಾಲ್ಕು ಮೇಜುಗಳು, ಕುರ್ಚಿಗಳು. ಒಂದು ಮುಗ್ಗುಲಿಗೆ ಒಂದು ಮೇಜು, ಅದರ ಮೇಲೆ 'ಟೈಪ್‌ರೈಟರ್' ಒಂದು; ಅದರ ಬಳಿ ಒಂದು ಕುರ್ಚಿ. ತೆರೆಯೆದ್ದಾಗ ಗುಮಾಸ್ತೆ ರಂಗಣ್ಣ ಲಕ್ಕೋಟೆಯೊಂದನ್ನು ದಿಟ್ಟಿಸುತ್ತಿರುತ್ತಾನೆ; ಒಂದೆರಡು ನಿಮಿಷದ ನಂತರ ಗುಮಾಸ್ತೆ ಸುಬ್ಬಣ್ಣನ ಪ್ರವೇಶ]

ಸುಬ್ಬಣ್ಣ : [ರುಮಾಲು ತೆಗೆದಿಡುತ್ತ] ಥೂ ಹಾಳು ರಜಾ ದಿವ್ಸಾನೂ ಬರಬೇಕೂ ಅಂದ್ರೆ ಪ್ರಾಣ ಹೋಗುತ್ತೆ. ಸಾಹೇಬರ್ಗೇನು, ನಾಲ್ಕು ಗಂಟೆಗೆ ಕಾರಿನಲ್ಲಿ ಬಂದು ಇಪ್ಪತ್ತು ಕಾಗದಕ್ಕೆ 'ಸೈನ್' ಹಾಕಿ, ರಜಾ ದಿವಸ ಕೂಡ ಬದ್ದಿದ್ದೇಂತ ಕೀರ್ತಿ ಪಡೀತಾರೆ. ನಮಗೆ ತಾನೇ ಕಷ್ಟ!

ರಂಗಣ್ಣ : [ಮಾತನಾಡದೆ ಲಕ್ಕೋಟೆಯನ್ನೇ ದೃಷ್ಟಿಸುತ್ತಿರುವನು.]

ಸುಬ್ಬಣ್ಣ : [ತನ್ನ ಮೇಜಿನ ಧೂಳು ಒರೆಸಿ, ಕಾಗದಗಳ ಕಟ್ಟುಗಳನ್ನು ಜೋಡಿಸುತ್ತಾ] ಏನು ರಂಗಣ್ಣಾ ನಿದ್ದೆ ಬಂತೇನು? [ರಂಗಣ್ಣ ಸುಮ್ಮನಿರುವನು. ಸುಬ್ಬಣ್ಣ ಅವನ ಕಡೆ ನೋಡಿ] ಇದೇನು ರಂಗಣ್ಣಾ, ಈಶ್ವರ ಮನ್ಮಥನ್ನ ಸುಟ್ಟಹಾಗೆ ನೀನು ಕಾಗದ ಸುಡೋದಕ್ಕೆ ಪ್ರಯತ್ನಿಸುತ್ತಾ ಇದ್ದೀಯೇನು?

ರಂಗಣ್ಣ : ಇಲ್ಲ ಸುಬ್ಬಣ್ಣಾ....

ಸುಬ್ಬಣ್ಣ : ಏನು ಸಮಾಚಾರ ಹೇಳಯ್ಯಾ.

ರಂಗಣ್ಣ : ಏನಿಲ್ಲ ಸುಬ್ಬಣ್ಣಾ, ನಾಗರಾಜನಿಗೆ ಯಾವ್ದೋ ಕಾಗದ ಬಂದಿದೆ. ಕವರಿನ ಮೇಲೆ ಇರೋ ಬರವಣಿಗೇನ ಎಲ್ಲೋ ನೋಡಿದಹಾಗಿದೆ. ಅದಕ್ಕೆ ಜ್ಞಾಪಿಸ್ಕೋತಾ ಇದ್ದೆ.

ಸುಬ್ಬಣ್ಣ : ಯಾರೋ ಸ್ನೇಹಿತರೋ ನೆಂಟರೋ ಬರೆದಿರಬಹುದು, ಅದಕ್ಯಾಕೆ ಅಷ್ಟು ಯೋಚನೆ!

ರಂಗಣ್ಣ : ಅದಕ್ಕಲ್ಲ ಸುಬ್ಬಣ್ಣ, ಇದು ಅವನ ನೆಂಟರ್ದೂ ಯಾರ್ದೂ ಅಲ್ಲ. ಎಸ್. ಎಂ. ಅಂತ ಕವರಿನ ಮೇಲೆ 'ಸೈನ್' ಇದೆ. ಈ ಅಕ್ಷರ ನಾನು ಹಿಂದೆ ನೋಡಿದ ಹಾಗೆ ಜ್ಞಾಪ್ಕ. ಎಲ್ಲೀಂತ ಜ್ಞಾಪಿಸ್ಕೋತಾ ಇದ್ದೆ.

ಸುಬ್ಬಣ್ಣ : ನಾಗರಾಜ ಬಂದರೆ ಎಲ್ಲಾ ಗೊತ್ತಾಗತ್ತೆ; ಅದಕ್ಯಾಕೆ ವದ್ದಾಡ್ತಿ? ನಿಮ್ಮಿಬ್ಬರಿಗೂ ಗುರ್ತಿರೋ ಸ್ನೇಹಿತರು ಯಾರೋ ಬರೆದಿರಬಹುದು.

ರಂಗಣ್ಣ : ನಾಗರಾಜ ಇವತ್ತು ಬರೋದು ಎರಡು ಗಂಟೆಗೆ. ಅವರ ಮನೇಲಿ ಯಾ

ದ್ದೋ ತಿಥೀನೋ ಏನೋ ಇರ್ಬೇಕು.... ಅವನು ಬಂದ್ರೂ ಕೂಡ ಕಾಗ್ದ ಯಾರದೂ ಅಂತ ಹೇಳೋದು ಅನುಮಾನವೇ.

ಸುಬ್ಬಣ್ಣ : ಆದ್ಯಾಕೆ ರಂಗಣ್ಣ, ಕಾಗದದಲ್ಲಿರೋ ಗುಟ್ಟೆಲ್ಲಾ ಕೇಳ್ತೀಯೋನು ನೀನು? ಏನೋ ಬರೆಹ ಪರಿಚಯವಿದ್ದ ಹಾಗಿದೆಯಲ್ಲಾ ಅಂತ ಕಾಗದ ಬರೆಯೋರು ಯಾರು [illegible] ಅಂತ ಕೇಳ್ದೆ, ಅಷ್ಟೇ.

ರಂಗಣ್ಣ : ಅಲ್ಲ, ಯಾಕೇಂದ್ರೆ....

ಸುಬ್ಬಣ್ಣ : ಎಲ್ಲಿ, ಆ ಕಾಗದ ಇಲ್ಲಿ ಕೊಡು, ನೋಡೋಣ.

[ರಂಗಣ್ಣ ಸುಬ್ಬಣ್ಣನಿಗೆ ಲಕೋಟೆ ಕೊಡುವನು. ಸುಬ್ಬಣ್ಣ ಅದನ್ನು ನಿಧಾನವಾಗಿ ಪರೀಕ್ಷಿಸುವನು]

ಸುಬ್ಬಣ್ಣ : ಇದು.... [illegible] ರಂಗಣ್ಣಾ.

ರಂಗಣ್ಣ : [illegible] ಅನ್ನಿಸಿದ್ದು.

ಸುಬ್ಬಣ್ಣ : [illegible]

ರಂಗಣ್ಣ : [illegible] ಈಗ ಗೊತ್ತಾಯ್ತು.

ಸುಬ್ಬಣ್ಣ : [illegible]?

ರಂಗಣ್ಣ : [illegible] ಅಂತ.

ಸುಬ್ಬಣ್ಣ : [illegible]?

ರಂಗಣ್ಣ : [illegible]

[ಪ್ರವೇಶ : [illegible]]

ವೆಂಕಟೇ : [illegible]

ತ ನಡೀತಾ ಇದೆ ಹರಟೆ?

ಸುಬ್ಬಣ್ಣ : ಏನೂ ಇಲ್ಲ ಸಾರ್....

ವೆಂಕಟೇ : ಏನೂ ಇಲ್ದೆ ಮೇರಿ ಹೆಸರು ನೆನಸ್ಕೋತೀರಾ? ನೀವೇನು ಕ್ರಿಶ್ಚಿಯನ್ನೇ? ಹೇಳಿ ಪರವಾ ಇಲ್ಲ.

ರಂಗಣ್ಣ : ನಾಗ್ರಾಜನಿಗೆ, ಸಾರ್....ಯಾವ್ದೋ ಕಾಗ್ದ ಬಂದಿದೆ....ಅದರ ಮೇಲಿನ ಬರವಣಿಗೇನ ಎಲ್ಲೋ ನೋಡಿದಹಾಗಿದೇಂತ ನ್ಯಾಪಿಸ್ಕೋತಾ ಇದ್ವಿ.

ವೆಂಕಟೇ : ಯಾರದೋಂತ ನಿಶ್ಚಯ ಮಾಡಿದ್ರಿ?

ಸುಬ್ಬಣ್ಣ : ಯಾರೋ ಶ್ರೀಮತಿ ಮೇರಿ ಅಂತೆ, ಸಾರ್, ಇವರ್ದ.

ವೆಂಕಟೇ : ಮೇರಿ ಯಾರ್ರಿ?

ಸುಬ್ಬಣ್ಣ : [illegible] ಸಾರ್, ರಂಗಣ್ಣ [illegible]

[illegible]

ಸುಬ್ಬ : ನಾಗ್ರಾಜ ಅವರಿಗೇನಾದ್ರು ಕಾಗದ ಬರೀತಾನೇನೋ ರಂಗಣ್ಣ?

ರಂಗ : ನನ್ಗೆ ಸರಿಯಾಗಿ ಗೊತ್ತಿಲ್ಲಪ್ಪ ಯಾವಾಗ಼್ೋ ಒಂದ್ಸಲ 'ಅಯ್ಯೋ, ಮೇರೀಗೆ ಬರೆದ ಕಾಗದ ಪೋಸ್ಟ್ ಮಾಡೋದೇ ಮರೆತ್ಹೋಯ್ತು' ಅಂದಿದ್ದ. ನಾನ್ಯಾಕೆ ಹೆಚ್ಚು ಕೇಳ್ಬೇಕು ಅಂತ ಸುಮ್ನಾದೆ.

ವೆಂಕಟೇ : ನೋಡೋದಕ್ಕೆ ಹ್ಯಾಗಿದ್ದಾಳೆ ಅವಳು?

ರಂಗ : ಹ್ಯಾಗೆ ಅಂದರೆ ಹೇಳೋದು ಕಷ್ಟ ಸಾರ್....ಬಣ್ಣ ತೀರ ಬಿಳುಪೂ ಅಲ್ಲ.... ಕಣ್ಣು....ಹೀಗೇಂತ ಹೇಳಲಾರೆ ಸಾರ್.... ಆದರೆ ದೊಡ್ಡ ಕಣ್ಣುಗಳು....ಅವರು ನಕ್ಕಾಗ ಅರೆತೆರೆದ ತುಟಿ....ತಾವರೆ ಅರಳಿದ ಹಾಗೆ ಅಂತ....ನಾಗ್ರಾಜ ಒಂದ್ಸಲ ಅಂದಿದ್ದ.

ವೆಂಕಟೇ : (ಮತ್ತೆ ಅರ್ಥ ಪೂರ್ಣವಾಗಿ ಓಹೋ....

ಸುಬ್ಬ : ನಾಗ್ರಾಜ ಕತೇ, ಪದ್ಯ ಏನೇನೋ ಬರೀತಾನೆ, ಅಲ್ವೇನೋ?

ರಂಗ : ಹೂಂ.

ವೆಂಕಟೇ : ಆಕೆಗೆ ಮದುವೆಯಾಗಿದೆಯೇನ್ರಿ?

ರಂಗ : ಇಲ್ಲ ಸಾರ್.

ವೆಂಕಟೇ : ನಾಗ್ರಾಜನ್ಗೂ ಇನ್ನೂ ಮದುವೆ ಇಲ್ಲ, ಅಲ್ಲವೇನ್ರಿ?

(ಪ್ರವೇಶ ಟೈಪಿಸ್ಟ ಸೀತಾರಾಂ)

ಸೀತಾರಾಂ : ನಮಸ್ಕಾರ ಸಾರ್....ಯಾರ ಮದುವೇ ವಿಚಾರ ಸಾರ್ ಮಾತಾಡ್ತಿದ್ದೀರಿ?

ವೆಂಕಟೇ : ನಿಮ್ಮ ಮದುವೆ ವಿಚಾರ ಅಂತೂ ಅಲ್ಲ. (ಸೀತಾರಾಂ ಪೆಚ್ಚಾಗಿ ನಿಲ್ಲುವನು) ಯಾಕ್ರಿ ಹೀಗೆ ನಿಂತ್ಕೊಂಡ್ರಿ?

ಸೀತಾರಾಂ : ಇಲ್ಲ ಸಾರ್....

ವೆಂಕಟೇ : ಇಲ್ಲಾನೂ ಕಾಣೆ ಬೆಲ್ಲಾನೂ ಕಾಣೆ. ನಾಗ್ರಾಜನಿಗೆ ಮದುವೆ ಆಗಿದ್ಯೇ ಅಂತ ಕೇಳ್ತಾಇದ್ದೆ.

ವೆಂಕಟೇ : ಓಹೋ ನಿಮಗಿನ್ನೂ ವರದಿ ಒಪ್ಪಿಸ್ಬೇಕೋ? ಕೇಳಿ ಹಾಗಾದ್ರೆ. ಇವತ್ತು ನಾಗ್ರಾಜನಿಗೆ ಯಾವ್ದೋ ಕಾಗದ ಬಂದಿದೆ. ಆ ಕಾಗ್ದ ತುಮಕೂರಿನಲ್ಲಿರೋ ಮೇರಿ ಅನ್ನೋರು ಬರೆದಿದ್ದಾರೇ ಅಂತ ರಂಗಣ್ಣ ಹೇಳ್ತಾನೆ....

ಸೀತಾರಾ : ಮೇರಿ ಯಾರು ಸಾರ್?

ವೆಂಕಟೇ : ಹೇಳ್ತೀನಿ ತಾಳ್ರಿ, ಅಷ್ಟ್ಯಾಕೆ ಆತುರ? ಮೇರಿ ಅನ್ನೋಳು ನಾಗರಾಜನ ಕ್ಲಾಸ್‌ಮೇಟ್ ಅಂತೆ. ಅಷ್ಟು ಬಿಳುಪೂ ಅಲ್ಲ, ಅಷ್ಟು ಕಪ್ಪೂ ಅಲ್ಲ. ಕಣ್ಣು ಹೀಗೇ ಅಂತ ವರ್ಣಿಸೋದು ಕಷ್ಟ. ನಾಗರಾಜನಿಗಿಂತ ಎರಡುಮೂರು ವರ್ಷ ಚಿಕ್ಕೋಳು. ಅವಳು ತುಟಿ ತೆರೆದರೆ ತಾವರೆ ಅರಳಿದ ಹಾಗೆ ಅಂತ ನಾಗರಾಜ ಒಂದು ಸಲ ವರ್ಣಿಸಿದ್ದ. ಅವಳಿಗಿನ್ನೂ ಮದುವೆ ಇಲ್ಲ. ಅವಳಿಗೆ ನಾಗರಾಜ ಒಂದು ಕಾಗದ ಬರೆದಿದ್ದ ಅನ್ನೋದಕ್ಕೆ ಆಧಾರ ಇದೆ. ಗೊತ್ತಾಯ್ತೇ ಈಗ? ಅದಕ್ಕೆ ಕೇಳ್ತಾಇದ್ದೆ ಅವನಿಗೆ ಮದುವೆ ಆಗಿದೆಯೇ ಅಂತ.

ಸೀತಾ : ಇನ್ನೂ ಇಲ್ಲಾಂತ ಕಾಣುತ್ತೆ.

ರಂಗ : ಇನ್ನೂ ಇಲ್ಲ ಸಾರ್. ಮದುವೆ ಮಾಡಿಕೋ ಅಂತ ಮನೇಲಿ ಬಲವಂತ

(೩೨ನೇ ಪುಟ ನೋಡಿ)

ಮಾರ್ಚಿ-೧೯೪೭						
ಭಾನು,	ಸೋ,	ಮಂ,	ಬು,	ಗು,	ಶು,	ಶನಿ,
						೧
೨	೩	೪	೫	೬	೭	೮
೯	೧೦	೧೧	೧೨	೧೩	೧೪	೧೫
೧೬	೧೭	೧೮	೧೯	೨೦	೨೧	೨೨
೨೩	೨೪	೨೫	೨೬	೨೭	೨೮	೨೯
೩೦	೩೧					

ಈ ತಿಂಗಳಲ್ಲಿ ಪ್ರಾಮುಖ್ಯ ದಿನಗಳು

೫. ಗಾಂಧಿ-ಇರ್ವಿನ್ ಒಪ್ಪಂದವಾಯಿತು. ಕಾಂಗ್ರೆಸ್ ಕಾನೂನು ಭಂಗ ಕಾರ್ಯಕ್ರಮ ನಿಲ್ಲಿಸಬೇಕೆಂದೂ [illegible] ಸಮುದ್ರ ತೀರದಲ್ಲಿ ಉಪ್ಪು [illegible] ನವಾಯಿತು. (೧೯೩೧)

೮. [illegible] (೧೯೧೭)

೧೧. [illegible]

೧೨. [illegible] (೧೯೩೦)

೧೪. [illegible]

೨೨. [illegible]

[illegible]

೨೫. [illegible]

೨೬. [illegible]

೩೦. [illegible]

೩. [illegible]

೬. [illegible]

೨೭. [illegible]

೩೧. [illegible]

೩೦. [illegible]

ಶ್ರೀಮತಿ ಸುಬ್ಬುಲಕ್ಷ್ಮಿ
ಭಕ್ತ ಮೀರ ಚಿತ್ರದಲ್ಲಿ

ಕನ್ನಡದಲ್ಲಿ

ಕನ್ನಡ ಭಾಷೆ [illegible]

ಚಂದ್ರಹಾಸ.

ಚಲಚಿತ್ರ ಉದ್ಯಮದಲ್ಲಿ ಅನುಭವ ಗಳಿಸಿರುವ ಶಾಂತೀಶ ಪಟೇಲರು ಬೊಂಬಾಯಿಯಲ್ಲಿ ಸ್ಥಾಪಿಸಿರುವ ಸಂಪಾ ಪಿಕ್ಚರ್ಸ್ ಲಿಮಿಟೆಡ್ ಅವರು **ಚಂದ್ರಹಾಸ** ಚಿತ್ರದ ಪ್ರಾರಂಭೋತ್ಸವವನ್ನು ಬೊಂಬಾಯಿ ಸರ್ಕಾರದ ಮಂತ್ರಿಗಳಾದ ಶ್ರೀ ಎಂ. ಪಿ. ಪಾಟೀಲರ ನೇತೃತ್ವದಲ್ಲಿ ನಡೆಸಿದರು. [illegible] ಕನ್ನಡದಲ್ಲಿ [illegible] ಯೇ ಉತ್ತಮ [illegible]ಕಾರರೂ, ಅಭಿನಯಕಾರರೂ [illegible] ಚಿ. ಸದಾಶಿವಯ್ಯನವರ ಶಾಂ[illegible]ಕ ರಜತ ಪರದೆಯ ಮೇಲೆ ಬ[illegible]ಶಾಂತಿ ಸಾವಾಜಿಕ ಚಿತ್ರ. [illegible]ರ ಯ ಬಳಗವೆಲ್ಲವೂ ಹೊಸ[illegible]ಗಳೇ ಆಗಿರುವುವೆಂದು ಪಾತ್ರ[illegible] ತಕ್ಕಂಥವುಗಳೇ ಇರುವುದೆಂ[illegible]ಳಿಕೊಳ್ಳಲಾಗುತ್ತಿದೆ. ಈ ಚಿ[illegible] ವಿಶ್ವಕಲಾ ಫಿಲಮ್ಸ್‌ನ ವಿಶ್ವ[illegible]ಗಾಡೆ ನಿರ್ದೇಶಿಸಿದ್ಧಮಾಡಿಕೊಂಡಿದ್ದಾರೆ. ಎಂದು ವರ್ತಮಾನ.

ದೇವದಾಸಿ

ನಾಟಕ ಪ್ರಪಂಚದಲ್ಲಿ ಹೆಸರು ಗಳಿಸಿದ ದೇವದಾಸಿ ಚಿತ್ರರೂಪದಲ್ಲಿ ಬರಲಿರುವುದೆಂದು ಮತ್ತೆ ಸುದ್ದಿಗೆ ಪ್ರಾರಂಭವಾಗಿದೆ. ನವ ಜ್ಯೋತಿ ಸ್ಟುಡಿಯೋಸ್ ಭಾಗಸ್ಥರಾದ ಶ್ರೀ ಜಿ. ಆರ್. ರಾಮಯ್ಯನವರ ಸಹಕಾರದೊಂದಿಗೆ ಶ್ರೀ ಹಿರಿಯಣ್ಣಯ್ಯನವರು ಒಂದೆರಡು ತಿಂಗಳಲ್ಲಿ

[illegible]

ಕಲಾಮಂದಿರ [illegible] ಕಲಾಸ್ಥಾನ [illegible] ನೃತ್ಯಕಲಾ [illegible]

ಯೇ ಚಿತ್ರ ತಯಾರಿಕೆಯನ್ನು ಪ್ರಾರಂಭಿಸಲಿರುವರು.

° ° °

ಇಷ್ಟರ ವರೆಗೆ ಮುಂದೆ ತಯಾರಾಗಲಿರುವ ಚಿತ್ರಗಳ ವಿಷಯಗಳನ್ನು ಕೇಳಿದಿರಿ. ಈಗ ಕನ್ನಡದಲ್ಲಿ ಈವರೆಗೆ ಯಾವ ಯಾವ ಚಿತ್ರ ಎಷ್ಟರ ವರೆಗೆ ತಯಾರಾಗಿದೆ. ಎಂಬ ಸುದ್ದಿ ಕೇಳಿ.

ಮೈಸೂರಿನ ನವಜ್ಯೋತಿ ಸ್ಟುಡಿಯೋದಲ್ಲಿ ತಯಾರಾದ ಕೃಷ್ಣಲೀಲ ಇಗೋ ಈಗ ಬಂತು. ಆಗ ಬಂತು. ಎಂಬ ಸುದ್ದಿಯನ್ನೇ ಕೇಳುತ್ತಿದ್ದೀರಿ ಈ ವರೆಗೆ. ೧೬-೩-೪೭ರಿಂದ ಕರ್ನಾಟಕದ ನಾನಾ ಕೇಂದ್ರಗಳಲ್ಲಿ ಕೃಷ್ಣಲೀಲೆ ಪ್ರದರ್ಶಿತವಾಗುತ್ತಲಿದೆ. (ವಿಮರ್ಶೆ ಬೇರೆಕಡೆ ಕೊಟ್ಟಿದೆ) ಜನ ಕುತೂಹಲದಿಂದ ಚಿತ್ರವನ್ನು ನೋಡುತ್ತಿದ್ದಾರೆ.

ಕೃಷ್ಣಲೀಲೆಯಂತೆಯೇ ನವಜ್ಯೋತಿ ಸ್ಟುಡಿಯೋಸ್‌ನಲ್ಲಿ ತಯಾರಾದ ಚಿತ್ರ ಇನ್ನೊಂದು ಮಹಾನಂದ. ಈ ಚಿತ್ರವು ಆಗಲೇ ಮುಕ್ಕಾಲು ಭಾಗ ಮುಗಿದು ಪ್ರದರ್ಶನಕ್ಕೆ ಒಂದೆರಡು ತಿಂಗಳುಗಳಲ್ಲಿ ಸಿದ್ಧವಾಗುವುದಾಗಿ ವದಂತಿ.

ಶ್ರೀಮತಿ ವಸುಂಧರಾ ದೇವಿ.
ದೀಪಾವಳಿ ಚಿತ್ರದಲ್ಲಿ

ಕೃಷ್ಣಲೀಲಾ ಚಿತ್ರ ವಿಮರ್ಶೆ

ಕಂಸಲೀಲೆಯಿಂದ ಪ್ರಾರಂಭವಾಗಿ ಕಂಸ ವಧೆಯಲ್ಲಿ 'ಮುಕ್ತಾಯವಾದ ಕನ್ನಡ ವಾಕ್ಚಿತ್ರವಿದು ಕೃಷ್ಣಲೀಲೆ. ಜನಮನೋರಂಜನೆಯೇ ಮುಖ್ಯೋದ್ದೇಶ. ತಿವಿದು ತಿವಿದು ನಗಿಸುವ ಹಾಸ್ಯ, ಹೆಜ್ಜೆ ಹೆಜ್ಜೆಗೆ ಮಾಯಾ ಗಾರಡಿಯ ಇಂದ್ರಜಾಲ, ಆಗಾಗ್ಗೆ ದೇವತೆಗಳ ಪ್ರತ್ಯಕ್ಷ. ಅಳಿಸುವುದಕ್ಕೆ ಅಲ್ಲಲ್ಲಿ ಕಂಸನ ಅತಿಮಾನವ ಕ್ರೂರ ಕೃತ್ಯ, ಈ ಮೋಹಕ ಶಕ್ತಿಗಳನ್ನು ಮೈಗೂಡಿಸಿಕೊಂಡು ತಯಾರಾಗಿದೆ ಕೃಷ್ಣಲೀಲೆ. ಸಾಮಾನ್ಯ ಜನ ಇದಕ್ಕಿಂತ ಇನ್ನೇನು ತಾನೆ ಅಪೇಕ್ಷಿಸಿಯಾರು ನಮ್ಮ ಚಿತ್ರಗಳಲ್ಲಿ. ಆದರಿಂದ ಕೃಷ್ಣಲೀಲೆ ನಮ್ಮ ಜನಕ್ಕೆ ಹಿಡಿಸುವುದರಲ್ಲಿ ಸಂದೇಹವಿಲ್ಲ.

ದ್ವಾಪರಯುಗದ ಕತೆ, ಈ ಚಿತ್ರದಲ್ಲಿ ಅತ್ಯಾಧುನಿಕವಾಗಿ ನಿರೂಪವಾಗಿದೆ. ರಂಗ ನಿರ್ಮಾಣವಲ್ಲಾಗಲಿ, ಪಾತ್ರಗಳ ಉಡಿಗೆ ತೊಡಿಗೆಗಳಲ್ಲಿಯಾಗಲೀ, ದ್ವಾಪರ ಯುಗದ ಧೀರ ಗಾಂಭೀರ್ಯದ ಬದಲು ನವನಾಗರಿಕತೆಯೇ ತಾಂಡವಾಡುತ್ತಿದೆ. ಸ್ತ್ರೀ ಪಾತ್ರಗಳು ಅತ್ಯಾಧುನಿಕವಲ್ಲವೆನ್ನುವ ಎದೆಗಾರಿಕೆ ಯಾರಿಗಿದೆ? ಯಶೋಧೆಯ ಉಡಿಗೆ ತೊಡಿಗೆ, ವಾಸದ ಮನೆ, ಉಪಯೋಗಿಸುವ ತೊಟ್ಟಿಲು, ಮಂಚ, ಇತ್ಯಾದಿ ಅಧುನಿಕವಲ್ಲೂ ಆಧುನಿಕ. ಮುದಿಕಂಠಿಯ ವಿಧವೆ ತಾಯಿ ಈ ಶತಮಾನದ ಸಕ್ಕೇಶಿಯೇ ಹೊರತು ದ್ವಾಪರಯುಗಕ್ಕೆ ಖಂಡಿತ ಸೇರುವುದಿಲ್ಲ. ಪುರಾಣಿಕ ಚಿತ್ರಗಳ ನಿರ್ಮಾಣಕ್ಕೆ ಆ ಕಾಲದ ವಾತಾವರಣದ ಕಲ್ಪನೆ ಅತ್ಯಗತ್ಯ. ಬಹು ಮುಖ್ಯ. ಆದರೆ ಅದೆಲ್ಲ ಇಲ್ಲಿ ಲೋಪ.

ಕಂಸನಾಗಿ ಕೆಂಪರಾಜ್ ಚಿತ್ರಕ್ಕೆ ಕಳೆಕಟ್ಟಿಸಿದ್ದಾರೆ. ರಾಘವೇಂದ್ರ ರಾಯರು ವಾಸುದೇವನ ಪಾತ್ರವನ್ನು ಚೆನ್ನಾಗಿ ನಿರ್ವಹಿಸಿದ್ದಾರೆ. ಮರಿರಾಯರು ಮಿಂಚಿನಂತೆ ಮೂಡಿ ಫಳಾರನೆ ಮಿಂಚಿ ಮಾಯವಾದರೂ ನಗೆಯ ಮಿಂಚನ್ನು ಎಬ್ಬಿಸುತ್ತಾರೆ. ಅಕರ ಮಕರ ವಿಪರೀತಕ್ಕೆ ಮಾದರಿ. ಕೃಷ್ಣನಾಗಿ ಕುಮಾರಿ ಉಷಾ ಶೋಭಿಸಿದ್ದಾಳೆ. ಜೊತೆಯ ಸಹಪಾಠಿಗಳೂ ಪ್ರೇಕ್ಷಕರ ಸಹಾನುಭೂತಿಯನ್ನು ಗಳಿಸುತ್ತಾರೆ. ಸ್ತ್ರೀ ಪಾತ್ರಗಳ ಬಗ್ಗೆ ಮೌನವಾಗಿರುವುದು ಉಚಿತ. ವಿಷ್ಣು ಪಾತ್ರ ಅಭಿನಯದಿಂದ, ಪಾತ್ರಗಾಂಭೀರ್ಯದಿಂದ ರಸಹೀನ ಸತ್ವಹೀನ ಉಳಿದ ಪಾತ್ರಗಳು ತಮಗೆ ಹೇಳಿದಷ್ಟನ್ನು ಕೊಟ್ಟಷ್ಟನ್ನು ನಿರ್ವಹಿಸಿ ಕೃತಕೃತ್ಯರಾಗಿದ್ದಾರೆ.

ನವಜ್ಯೋತಿ ಸ್ಟುಡಿಯೋಸ್/ಮಹಾತ್ಮಾ ಪಿಕ್ಚರ್ಸ್ ಕನ್ನಡಿಗರ ಉತ್ಸಾಹದ ಅಭಿಮಾನದ ಕೆಚ್ಚು. ಈ ಇಬ್ಬರ ಮೊಟ್ಟ ಮೊದಲ ಸಾಹಸದ ಫಲವೇ ಕೃಷ್ಣಲೀಲೆ. ಕನ್ನಡಿಗರ ಪ್ರೋತ್ಸಾಹದ ಬಲವೇ ಈ ಇಬ್ಬರ ಉದ್ಯಮದ ಮುನ್ನಡೆಗೆ ಶಕ್ತಿ. ಆದರಿಂದ ಕನ್ನಡ ಜನವೆಲ್ಲ ಇವರಿಗೆ ತೆರೆದ ಹೃದಯದಿಂದ ಪ್ರೋತ್ಸಾಹಿಸಬೇಕು.

———

(೫೫ನೇ ಪುಟದಿಂದ)

ಮಾಡ್ತಾ ಇದ್ದಾರೆ...ಅಂದ ಹಾಗೆ ಒಂದ್ಸಲ ಅಂದಿದ್ದ ಸಾರ್ ಮೇರಿ ಹಾಗೆ ವಿದ್ಯಾವಂತಳಾಗಿರಬೇಕು, ಒಳ್ಳೆ ಸ್ವಭಾವದವಳಾಗಿರಬೇಕು, ನನ್ನ ಹೆಂಡ್ತಿ ಅಂತ.

ವೆಂಕಟೇ : (ಹೊಸ ಬೆಳಕು ಕಂಡವನಂತೆ) ಓಹೋ, ಹಾಗೋ ಸಮಾಚಾರ, ಸರಿ, ಸರಿ.

ಸೀತಾರಾಂ : " ಮೇರಿ, ಕುಮು[illegible] " ಅಂತ ಯಾರೋ ಕನ್ನಡದಲ್ಲಿ ಪದ್ಯಗಳು, ಲೇಖನಗಳು ಬರೀತಾರಲ್ಲ. ಅವರೇನ್ರಿ [illegible]?

ರಂಗ : ಹೌದು ಹೌದು, ಅವರೇ.

(ಸೀತಾರಾಂ ಲಕೋಟೆಯನ್ನು ತೆಗೆದುಕೊಳ್ಳುವನು)

ವೆಂಕಟೇ : ಆಕೆ ಕ್ರಿಶ್ಚಿಯನ್ [illegible]?

ರಂಗ : ಹೌದು ಸಾರ್, ಯಾಕೆ?

ವೆಂಕಟೇ : ಮತ್ತೆ ಕನ್ನಡದಲ್ಲಿ ಲೇಖನಗಳು ಬರೀತಾರೇ ಅಂತೀರಿ?

ರಂಗ : ಹೌದು ಸಾರ್, ಕನ್ನಡ ಅಂದರೆ ಪ್ರಾಣ ಅವರಿಗೆ. ಕ್ರಿಶ್ಚಿಯನ್ನಾದರೂ ಕನ್ನಡ ಬಹಳ ಸೊಗಸಾಗಿ ಬರೀತಾರೆ, ಸಾರ್. ಹೋದ ವರ್ಷ ಅವರು ತಮ್ಮ ಕಾಲೇಜ ಕರ್ನಾಟಕ ಸಂಘಕ್ಕೆ ಮಹಿಳಾ ವಿದ್ಯಾರ್ಥಿನಿಗಳ ಪರ ಕಾರ್ಯದರ್ಶಿಯಾಗಿದ್ರು...(ಸ್ವಲ್ಪ ತಡೆದು) ಆಗಲೇ ನಾಗರಾಜ [illegible] ಕಾರ್ಯದರ್ಶಿಯಾಗಿದ್ದ.

ವೆಂಕಟೇ : ಓಹೋ, [illegible]

ಜ ಬಹಳ ಸಪ್ಪೆ ಪ್ರಾಣಿ ಅಂದುಕೊಂಡಿದ್ದೆ. ಪರ್ವಾಗಿಲ್ಲ, ರಸಿಕತನ ಇದೆ-ರೊಮಾಟಿಕ್.

ರಂಗ : ಮೊದಲಿನಿಂದ ಅವರಿಬ್ಬರೇನೋ ಸ್ವಲ್ಪ ಅನ್ಯೋನ್ಯವಾಗೇ ಇದ್ರು ಸಾರ್. ಮೇರಿ [illegible] ಹೆಚ್ಚು ಮಾತಾಡ್ತೇ ಇದ್ದದ್ದು ನಾಗರಾಜನ ಹತ್ತಿರ ಬಹಳ ಮಾತನಾಡೋರು. ಇಬ್ಬರೂ ಕರ್ನಾಟಕ ಸಂಘದ ಕಾರ್ಯದರ್ಶಿಗಳಾದ ವರ್ಷ ಅಂತೂ ಬಹಳ ಮಾತುಕತೆ. ಎಷ್ಟೋ ಸಲ ನಾಗ್ರಾಜ ನನ್ನ ಹತ್ತಿರ ಹೇಳಿಕೊಂಡ್ರು. "ಆಕೆ ತುಂಬಾ ಬುದ್ಧಿವಂತಳು, ಬಹಳ ಕಷ್ಟಪಟ್ಟು ಓದ್ತಾಳೆ. ಚಿನ್ನದಂತಹ ಮನಸ್ಸು, [illegible]" ಅಂತ.

[illegible]

ಕಾಗದದ ಕೆಲವು ಪದಗಳು ಕಾಣುತ್ತೆ ಸಾರ್

ವೆಂಕಟೇ : ಎಲ್ಲಿ ಓದಿ ನೋಡೋಣ.

ಸೀತಾರಾಂ : (ಓದುವನು) 'ಗೆಳೆಯ ನಾಗರಾಜ್, ನಿಮ್ಮ ಕಾಗದ....ತೋರಿಸಿರುವ ವಿಶ್ವಾಸಕ್ಕಾಗಿ ನಾನು...ನನಗೆ ಕಾಲ ಕಳೆಯುವುದು ಕಷ್ಟ....ನನಗೆ ಬಹಳ ಬೇಸರವಾಗಿದೆ....ನಿಮಗೆ....ಸಂತೋಷವಾಯಿತು ....ನೀವು ಕೇಳಿದಂತೆ....ಆ ಫೋಟೋ ನನಗೆ ಬಹಳ ಪ್ರಿಯ....ಪ್ರೇಮಕ್ಕಾಗಿ ನಾನು ಕಳೆದ ದಿನ....ಸ್ಮಾರಕವಾಗಿದೆ ನನಗೆ ಅದು ಫೋಟೋ....ಹಿಂದಕ್ಕೆ ಕಳುಹಿಸಿಕೊಡಿ. ಅದಕ್ಕಾಗಿ....''ಅಷ್ಟೇ ಸಾರ್ ಕಾಣ್ಸೋದು.

ವೆಂಕಟೇ : ಓಹೋ ಬಹಳ ಸ್ವಾರಸ್ಯವಾಗಿದೆ ಕಾಗದ

ಸೀತಾರಾಂ: ಸಾರ್....

ವೆಂಕಟೇ: ಇನ್ನೇನ್ರಿ ?

ಸೀತಾರಾಂ; ಇದರಲ್ಲೊಂದು ಫೋಟೋ ಇದ್ದ ಹಾಗಿದೆ ಸಾರ್, 'ಬಾಕ್ಸ್ ಕ್ಯಾಮರಾದಲ್ಲಿ ಫೋಟೋ ತೆಗೆಯೊಲ್ಪೆ ಸಾರ್, ಆ ಸೈಜನದು.

ವೆಂಕಟೇ; ಫೋಟೋಕಾಣ್ಸತ್ತೇನ್ರೀ?

ಸೀತಾರಾಂ; ಇಲ್ಲಾಸಾರ್, ಕಾಗದದ ಮಧ್ಯೆ ಇಟ್ಟಿಟ್ಟಿದ್ದಾರೆ. ಆದರೆ ಫೋಟೋ ಇದೇ ಅಂತ ಕವರ್ನ ಕೈಲಿ ಹಿಡ್ಕೊಂಡು ಪರೀಕ್ಷೆ ಮಾಡಿದರೆ ಗೊತ್ತಾಗತ್ತೆ

ಸುಬ್ಬು; ಕಾಗದ ಓದೋದಕ್ಕೆ ಸಿಕ್ಕಿದ್ದರೆ!

ವೆಂಕಟೇ; ಓಹೋ ಏನ್ರಿ ನೀವೂ ರೊಮೇಟಿಕ್ ಅನ್ನಿ.

ಸುಬ್ಬು; ರೊಮೇಟಿಕ್ ಅಂತ ಅಲ್ಲ ಸಾರ್ ಅವ್ರ ಪ್ರೇಮಪತ್ರ ಹ್ಯಾಗಿದ್ಯೋ ನೋಡೋಣ ಅಂತ ಕುತೂಹಲ ಅಷ್ಟೆ.

ವೆಂಕಟೇ; ಕವರ್ನೇ ಒಡೆದ್ನೋಡ್ತೀರೋ ಹಾಗಾದ್ರೆ?

ರಂಗ: (ಗಾಬರಿಯಿಂದ) ಎಲ್ಲಾದ್ರೂ ಉಂಟೆ ಸಾರ್? ಆಮೇಲೆ.

ಸೀತಾರಾ: ಸಾರ್ ಈ ಕವರ್ನ ಸುಲಭವಾಗಿ ತೆಗಿದುಬಿಡಬಹುದು ಸಾರ್, ಕಾಗದ ಓದಿಬಿಟ್ಟು ತಿರುಗೀ ಕವರ್ನಲ್ಲಿ ಇಟ್ಟು ಅಂಟಿಸಿಬಿಡಬಹುದು

ರಂಗ; ಅಯ್ಯೋ ಬೇಡಿ ಸಾರ್, ಅಂಥಾ ಕೆಲ್ಸ ಯಾಕೆ?

(ಸ್ವಲ್ಪ ಹೊತ್ತು ಎಲ್ಲರೂ ಮೌನ)

ಸೀತಾರಾಂ; ಏನ್ಸಾರ್ ತೆಗೀಲೆ?

ವೆಂಕಟೇ; ಆಮೇಲೆ ನಾಗ್ರಾಜನಿಗೆ ಗೊತ್ತಾದ್ರೆ ?

ಸೀತಾರಾಂ; ಹ್ಯಾಗ್ಸಾರ್ ಗೊತ್ತಾಗುತ್ತೆ? ತಿರುಗೀ ಕವರ್ನ ಹಾಗೇ ಅಂಟಿಸ್ಬಿಡೋದು.

ವೆಂಕಟೇ; ಹಾಗೆ ಅಂಟ್ಸೋದಕ್ಕಾಗತ್ತೇನ್ರೀ ?

ಸೀತಾರಾಂ; ಅಲ್ಲಾ ಸಾರ್, ಅಷ್ಟು ಬರದೇ ಇದ್ರೆ ಸರ್ಕಾರದ ಕೆಲಸದಲ್ಲಿ ನಿಬಾಯ್ಸೋದಕ್ಕೆ ಆಗತ್ಯೇ?

ರಂಗ; ಸಾರ್, ಬೇಡ ಸಾರ್.

ಸೀತಾರಾಂ; ಅಯ್ಯೋ, ಅಷ್ಟು ಹೆದರ್ಕೊಂಡ್ರೆ ಹ್ಯಾಗೆ ಸಾರ್? ಈಗಿನ್ನೂ ಒಂದು ಘಂಟೆ. ನಾಗ್ರಾಜ ಬರೋದಕ್ಕೆ ಇನ್ನೂ ಒಂದು ಘಂಟೆ ಇದೆ. ಇನ್ನೊಂದು ಘಂಟೆ ಒಳಗೆ ಕಾಗದ ಓದಿ, ಫೋಟೋ ನೋಡಿ, ತಿರುಗಿ ಕವರ್ನ ಅಂಟ್ಸಾಕೋದು ಕಷ್ಟವೇ ಸಾರ್?

ವೆಂಕಟೇ: (ಕುತೂಹಲವನ್ನು ಕಷ್ಟದಿಂದ ತಡೆಯುತ್ತಾ) ನೋಡೀಪ್ಪಾ, ನನ್ನ ವಿಚಾರ ನಿಮಗೇ ತಿಳಿದಿದೆ. ನನ್ನ ಮನಸ್ಸು ತಪ್ಪು ಅಂತ ಹೇಳೋ ಕೆಲ್ಸ ನಾನು ಮಾಡೋನೇ ಅಲ್ಲ. ಹಾಗೆ ಆತ್ಮಸಾಕ್ಷಿಗೆ ವಿರೋಧವಾಗಿ ಕೆಲಸ ಮಾಡೋ ಹಾಗಿದ್ದಿದ್ದರೆ ನಾನು ಈ ಕೆಲಸದಲ್ಲೆ ಇನ್ನೂ [illegible] ಕೊಂಡು ಕೂತಿರ್ತಾ ಇರ್ಲಿಲ್ಲ [illegible]

[illegible]

ಯಿಂದ ತೆಗೆದು ಬೆಳಕಿಗೆ ಹಿಡಿದು ನೋಡುವನು. ಸೀತಾರಾಂ ಕಾಗದವನ್ನು ಬಿಚ್ಚುವನು]

ಸೀತಾರಾಂ: ಕಾಗದ ಓದಲೇ ಸಾರ್?

ವೆಂಕಟೇ: (ಸುಮ್ಮನಿರುವನು)

ಸೀತಾರಾಂ: (ಓದುವನು)

ತುಮಕೂರು.

ತಾ|......

"ಗೆಳೆಯ ನಾಗರಾಜ್,"

[illegible]

ನಾಗಲೆಂದೂ ಹಾರೈಸುತ್ತೇನೆ.

ವಿಶ್ವಾಸವಿರಲಿ. ನಮಸ್ಕಾರಗಳು.

ನಿಮ್ಮ ಸೋದರಿ,

'ಮೇರಿ'

(ಎಲ್ಲರೂ ಬೆಪ್ಪಾಗಿ ಪರಸ್ಪರರ ಮುಖಗಳನ್ನು ನೋಡಿಕೊಳ್ಳುವರು. ಸ್ವಲ್ಪ ಹೊತ್ತು ಮೌನ ನೆಲಸುವುದು, ಆಮೇಲೆ)

ವೆಂಕಟೇ: ಆ 'ನೆಗಟಿವ್' ಯಾವದ್ರಿ ರಂಗಣ್ಣ ?

ರಂಗಣ್ಣ: ಇದೂ ಸಾರ್.... ಮೇರಿ ನಾಗರಾಜ್ ಇಬ್ಬರೂ ಕಾರ್ಯದರ್ಶಿಗಳಾಗಿದ್ರಲ್ಲ ಆ ವರ್ಷ ಕರ್ನಾಟಕ ಸಂಘದ ವಾರ್ಷಿಕೋತ್ಸವವಾದಾಗ ಅಧ್ಯಕ್ಷರ್ನ, ಸಂಘದ ಅಧ್ಯಕ್ಷರು, ಕಾರ್ಯದರ್ಶಿಗಳು ಎಲ್ಲ ಸ್ವಾಗತಿಸುತ್ತಾ ಇರೋದ್ನ ಮಿಸ್ ಮೇರಿ ಸ್ನೇಹಿತರು 'ಸ್ನ್ಯಾಪ್ ಷಾಟ್' ತಗೊಂಡಿದ್ರು ಸಾರ್. ಅದರ ಪ್ರತಿ ಸಿಕ್ಕಲೇ ಇಲ್ಲ, ಸಂಪಾದಿಸ್ಬೇಕೂ ಅಂತ ಹೇಳ್ತಾ ಇದ್ದ ನಾಗ್ರಾಜ್. ಆ 'ನೆಗಟಿವ್' ಸಾರ್ ಇದು.

(ಪ್ರವೇಶ: ನಾಗರಾಜ್)

ನಾಗರಾಜ್: ನಮಸ್ಕಾರ ಸಾರ್ ಏನು 'ನೆಗಟಿವ್', 'ಪಾಸಿಟಿವ್' ಅಂತ ನಡೀತಾ ಇದೆ ಮಾತು?

(ಎಲ್ಲ ಬೆಚ್ಚಿಬಿದ್ದು ಗೋಡೆ ಕಡೆ ಮುಖ ತಿರುಗಿಸುವರು, ಸುಬ್ಬಣ್ಣ ವೆಂಕಟೇಶಯ್ಯ ಒಂದೂವರೆ ಘಂಟೆ ತೋರಿಸುತ್ತಿರುವ ಗಡಿಯಾರದ ಕಡೆ ನೋಡುವರು)

ವೆಂಕಟೇ: ಅಂ.... ಏನಂದ್ರಿ?.... ಏನಿಲ್ಲ, ಏನೋ ಮಾತಾಡ್ತಾ ಇದ್ವಿ ಅಷ್ಟೆ.

(ತೆರೆ)

ಜಿಲ್ಲಾ ಆರ್ಗನೈಸರ್‌ಗಳು ಬೇಕಾಗಿದ್ದಾರೆ

ಗ್ಯಾರಂಟಿ ಅವಶ್ಯಕ

ಉತ್ತಮ ಸಂಭಾವನೆ!

ಹೆಚ್ಚು ಕೆಲಸಕ್ಕೆ ಹೆಚ್ಚು ಸಂಭಾವನೆ !!!

ಇಂದೇ ಬರೆಯಿರಿ :

ಕರ್ನಾಟಕ ಅಂಡರ್ ರೈಟರ್ಸ್

ಪ್ರಧಾನ ಪ್ರತಿನಿಧಿಗಳು

ಇಂಡಿಯನ್ ಮ್ಯೂಚುಯಲ್ ಲೈಫ್ ಅಸೋಸಿಯೇಷನ್ ಲಿ., (ಮದರಾಸು)

ಬಸವನಗುಡಿ ಪೋಸ್ಟ್, ಬೆಂಗಳೂರು

◀ ಪ್ರತಿ ತೆಗೆ ▶

೧

ಎಂಥ ದುಷ್ಟೆಯು ನೀನು, ಬೆಳ್ಳಗಿದ್ದರೆ ಹಾಳೆ,
ಪ್ರೇಮದಾ ನಟನೆಯದು ದಿಟವೆಂದು ತಿಳಿದೆಯಾ,
ಸ್ವಾರ್ಥಿ ಪುರುಷನ ಮೋಸವನ್ನರಿಯೆಯಾ ನೀನು,
ಎಷ್ಟು ಮುಗ್ಧೆಯು ನೀನು, ನಿನಗಿಷ್ಟು ತಿಳಿಯದೆ....

೨

[illegible]
[illegible]
[illegible]
[illegible]....

೩

[illegible]
[illegible]
[illegible]
[illegible]...

೪

[illegible]
[illegible]
[illegible]
[illegible]

೫

[illegible]
[illegible]
[illegible]
[illegible]

೬

ಭೃಂಗವಾಶ್ರಯಿಸುವದೆ ಮಧುಹೀನ ಪುಷ್ಪವನು.
ವಿಟನುದ್ದಿಸುವನೇ ಶ್ವೇತ ವದನವನು.
ಮೋಹಿಸುವನೇ ಸೌಂದರ್ಯ ಹೀನೆಯನು.
ಆಲಿಂಗಿಸನೇ ಎಲುಬಿನಾ ಪಂಜರವನವನು.

೭

ನಿನ್ನಧರದಮೃತವ-ನ್ನೀಂಟಿದಾ ವಂಚಕನು,
ಮತ್ತೊಂದು ಮಧುಭರಿತ ಪುಷ್ಪವನು ಅರಸುಹನೀಗ
ಅವಗಾಗಿ ಕೊರಗುವೆಯಾ ಮತ್ತೆ ನೀನು.
ನಿನ್ನಲೇಸಿದೆ ಬರಲು ಅವನಿಗೀಗ.

೮

ಭಾನುವಿನ್ನಿಲ್ಲ ನೋಡು ಬಾಳ ಬಾನಿನಲಿ,
ದಟ್ಟವಾಗಿದೆ ಎಷ್ಟು ನೋಡು ತಿಮಿರ.
ಶೂನ್ಯತೆಯು ಕಾಣದೆ ಕ್ಷಣಕ್ಷಣಕು ಬಾಳಿನಲಿ.
ಬಾಳು ಹಾಳಾಯಿತೆ ಶೂನ್ಯ ಮನವಾಯಿತೆ!

೯

ದುಡುಕದಿರು ಹೋಗಿಲ್ಲ ಕಾರ್ಯ ಕೈ ಮಿಂಚಿ,
ಇನ್ನು ಗಂಡಸಿನ ಕಾಮಕ್ಕೆ ಬಲಿಯಾಗಬೇಡ.
ತೋಳ ಸೆರೆಯನು ಕಡಿದು ಜಗವ ನೋಡು.
ಕತ್ತಲೆಯ ಹರಿದ್ವಾಕಿ ಶ್ರೇಷ್ಠತೆಯನೇರು.

೧೦

ಸೋದರಿಯರಾಂಧತೆಯ ಪರಿಹರಿಸಲನುವಾಗು
ಕತ್ತಲಲಿ ನರಳುತಿರುವರು, ಬೆಳಕ ತೋರು.
ಕಾಮು ತಣಿಸುವುದೊಂದೆ, ಹೆಣ್ಣಿನ ಕಜ್ಜವಲ್ಲೆಂದು
ಜಗಕೆ ಸಾಕು.

ಶ್ರೀ 'ಶಾರದಾತನಯ'

ಹಸನ್ಮುಖ

ಶ್ರೀ ವಿ. ಜಿ. ಕೃಷ್ಣಮೂರ್ತಿ,

[illegible]

[illegible]

ಟೋಪಿ ಹಾಕುತ್ತಾರೆ; ಮುಖವನ್ನು ನೋಡಿ ಮರ್ಯಾದೆ ಮಾಡುತ್ತಾರೆ; ಕೊನೆಗೆ, ಮುಖವನ್ನು ನೋಡಿ ಮಂಗಳಾರತಿ ಮಾಡುತ್ತಾರೆ. ಕೆಲವರಿಗೆ ದೊಡ್ಡ ಮುಖಗಳೂ, ಇನ್ನಿತರರಿಗೆ— ಬಹುಮಟ್ಟಿಗೆ — ದೊಡ್ಡವಲ್ಲದ ಮುಖಗಳೂ ಇರುವ ಕಾರಣವೇ ಈ ವಿಶೇಷ ವರ್ತನೆಗಳು.

ನಮ್ಮ ಸಂಪ್ರದಾಯದಲ್ಲಿ ಈಗೀಗ ಮುಖಕ್ಕೆ ಸಂಬಂಧಪಟ್ಟ ಸ್ತುತಿಗಳಲ್ಲಿ ಕೆಲವು ಹರಿಯುವ ರೈಲಿನ ಚಕ್ರವು ಕಳಚಿ ಬಿದ್ದಂತೆ (—ಸರ್ವಜ್ಞ—) ಬಿದ್ದು ಮಂಗಮಾಯವಾಗಿ ಹೋಗಿ, ಮುಖ ಸ್ತುತಿಯು ನಿಘಂಟು ಬರಿಯ ಪಂಜರವಾಗವ ಸ್ಥಿತಿಯಲ್ಲಿದೆ: ಮೇಲೆ ಸೂಚಿಸಲಾಗಿರುವ "......ಮುಖಕ್ಕೆ ಮಂಗಳಾರತಿ'' ಎಂಬ ದಿವ್ಯ ಸ್ತುತಿಯು ಮನುಷ್ಯನ ಮುಖ್ಯ ಅಂಗವಾದ ರುಂಢದ ಮುಂಭಾದಲ್ಲಿರುವ ಮುಖಕ್ಕೆ ಮಂಗಳಾರತಿಯನ್ನು ಹಿಡಿಯುವುದಾಗಿದ್ದಿತು. ಈಗ ಅದಕ್ಕೆ ಪ್ರತಿಯಾಗಿ, ಅಲ್ಲದೆ ನಮ್ಮ ನಡೆ-ನುಡಿಗಳು ಮಾರ್ಪಟ್ಟು, 'ಡ್ಯಾಂ ಯುವರ್ ಫೇಸ್,' ಎಂದರೆ 'ಮುಖದ ಮುಂದೆ ಡಂಗುರ (?) ಹೊಡೆಯಿರಿ' ಎಂಬ ಸರ್ವ-ಸಾಧಾರಣವಾದ ಸ್ತುತಿಯು ಪ್ರಚಾರಕ್ಕೆ ಬಂದು ಹೋಗಿದೆ.

ಆರತಿಗೂ ಮುಖಕ್ಕೂ ಇರುವ ಬಾಂಧವ್ಯ ಗಂಡನಿಗೂ-ಹೆಂಡತಿಗೂ ಇರುವ ಬಾಂಧವ್ಯದಷ್ಟು: ಮುಖಗಳಿಲ್ಲದ ಪಕ್ಷದಲ್ಲಿ ನೀರಿನಲ್ಲಿ ಮಿಶ್ರವಾದ ಹರಿಶಿಣ, ಕುಂಕುಮ, ಅಲ್ಲದೆ ಅವುಗಳೊಡನೆ ಸೇರುವ ಮತ್ತು ಗೋಡೆಗಳಿಗೆ ಬಳಿಯಲು ಬಹುಕಾಲದಿಂ

ಇದು ಹಸನ್ಮುಖವೇ ?

ದಲೂ ಉಪಯೋಗಿಸುವ ಸುಣ್ಣ, ವೀಳ್ಯ, ಕರ್ಪೂರ ಇವುಗಳನ್ನು ಜವಾಯಿಸಿ ಹೋಂ ಲ್ಯಾಬೋರೇಟರಿಯಲ್ಲಿ 'ಆರತಿ' ಎನಿಸಿಕೊಳ್ಳುವುದಾದರೂ ಹೇಗೆ ? ಈ ಕಾರಣವಾಗಿ ಮುಖಗಳಿಗೆ ಆರತಿಯ ಅವಶ್ಯವು ಹೆಚ್ಚು. ಮುಖಗಳಲ್ಲಿ ಸರಾಸರಿ ತೊಂಬತ್ತು—ಒಂಬತ್ತು ಮುಖಗಳು ಮಂಗಳ-ಮಾಯ ಮುಖಗಳಾದ ಕಾರಣ ಅವುಗಳಿಗೆ ಮಂಗಳವಾದ ಆರತಿಯನ್ನು ಹಿಡಿಯಬೇಕು. ಈಗಿನ ನಮ್ಮ ಮಂಗಳಾಂಗಿಯರಿಗೆ ಅದು ಸಾಧ್ಯವಿಲ್ಲದ ಪಕ್ಷದಲ್ಲಿ, ಮಂಗಳಾಂಗರಾದರೂ ಈ ಕರ್ತವ್ಯವನ್ನು ನೆರವೇರಿಸಬೇಕು. ಆದರೆ, ಉಳಿದ ಇನ್ನೊಂದು ಮುಖವನ್ನು ಬಿಡುವಹಾಗಿಲ್ಲ; ಈ ಮುಖವು ವಿರಳವಾಗಿ

ಕಾಮ, ಕ್ರೋಧಾದಿ ವರ್ಗಗಳನ್ನು ಪದೇ-ಪದೇ' ಪ್ರಕಟಿಸುವ ದೆಸೆಯಿಂದ ಅದಕ್ಕೆ ಹೆಚ್ಚು ಮಂಗಳಾರತಿ ಮಾಡಿದರೆ ಅರತಿಯ ಉಷ್ಣದಿಂದ ಅದು ತನ್ನ ಸ್ವಾಭಾವಿಕವಾದ ಮತ್ತು ಮೇಲೆ ಹೇಳಿರುವ ಗುಣಗಳನ್ನು ತ್ಯಜಿಸಿ ಹಸನ್ಮುಖವಾದರೂ ಆಗಬಹುದು. 'ಆಗಬಹುದು' ಎಂಬುದರಲ್ಲಿ ಸಂದೇಹವೇ ಇಲ್ಲ.

[illegible]

ಈ ಕಾರಣದಿಂದಲೆ ನಾವು ಸಾಮಾನ್ಯ ಪ್ರಾಣಿಗಳಲ್ಲ; ಈ ಕಾರಣದಿಂದಲೇ ನಾವು ಬಾಲವಿಲ್ಲದ ಮನುಷ್ಯರು. ಹಸನ್ಮುಖವನ್ನು ಕಲ್ಪಿಸುವ ಸಂತೋಷವು ನಮ್ಮ ಒಳಗಿಲ್ಲ—ಹೊರಗಿಲ್ಲ; ಅದು ಈಶ್ವರನೊಡನೆ ನಾವು ಕಲ್ಪಿಸಿಕೊಳ್ಳುವ ಐಕ್ಯದಲ್ಲಿದೆ.

ಹಸನ್ಮುಖವು ಹಸುಮಗುವಿನ ಮುಖಕ್ಕೆ ಸಹಜ. ಅದರೆ ಒಂದು ಮಾತು: ಹಸನ್ಮುಖಗಳಲ್ಲಿ ಸಹಜವಾದುವು ಮತ್ತು ಕೃತಕವಾದುವು—ಈ ಎರಡು ಬಗೆಗಳಿವೆ. [illegible]

[illegible]

ಶರದಿರುಳು

ಎನ್ನರಸಿ ನೋಡಲ್ಲಿ ಚಂದ್ರಿಕಾ ಚಂದ್ರಿಮರ
ತಾರೆಗಳ ನೊಡಗೂಡಿ ಆಡುತಿಹರು.

ಅಗೊ ನೋಡು ಶರದೆ ಸುಂದರಿ ಮೋಡಗಳಲಿಣಿಕಿ
ಮಿಗೆ.ಹರುಷದಿಂ ನೋಡುತಿಹಳವರನು.

ಚಂದ್ರಿಕೆಯ ಉಲ್ಲಸದ ಸಿರಿಮೊಗವ ತೋರುವೆನು
ಬಾನಲ್ಲೆ ಎನ್ನ ಬಳಿ ನೀ ಬೇಗದಿ.

ನೀಲದಲಿ ತಾರೆಗಳ ನೊಡಗೂಡಿ ನಸುನಗುತ
ಬಿಳಿ ಮುಗಿಲ ಮಂದೆಗಳ ಲಾಡುತಿಹಳು.

ಹೊಸಪಸುರುಡಿಗೆಯ 'ನಾಡ ದೇವಿತಾ ನೋಡದೊ
ಮಿಗೆ ಹರುಷದಿ ಮಾರುತ ನೊಡಗೂಡಿ;

ಶರದಳ ನೋಡಲು ಪ್ರೇಮದೊಳರಳಿದ ಸುಮಗಳ
ಮುಡಿಯೊಳು ಮುಡಿಯುತ ನಲಿದಾಡುವಳು.

ಹೊನಲರಾಣಿಯು ತಾನು ಮಂಜುಳದ ನಾದದಲಿ
ಬನಸಿರಿಯ ರಾಜಿಸುತ ಕಡಲೊರಿಸಲು

ತವಕಿಸುತ ನಡೆದಿಹಳು ಶರದಯಾಮಿನಿಯಲ್ಲಿ
ತೋರುವೆನು ಬಾ—ರನ್ನೆ ಎನ್ನ ಬಳಿಗೆ

ಶ್ರೀ ರಾಘವೇಂದ್ರ.

ಸುಳ್ಳಿನ ಪುರಾಣ

ಶ್ರೀ ರಾಮಕೃಷ್ಣ ಕಟ್ಟೆ ಗಾಂಧಿಹಳ್ಳಿ

[illegible]

ಅವರು ಹಾಗೆ ಕಣ್ಣು ಬಿಡುವುದನ್ನು ಕಂಡರೆ ನಮಗಿಬ್ಬರಿಗೂ ಹಿಗ್ಗೆನಿಸುತ್ತಿತ್ತು.

ಹೀಗೆ ಒಂದು ದಿನ, ನನ್ನಾಕೆ, ಒಂದು ಕತೆ ಹೇಳಿ, ಎಂದಳು. ಲಿಲ್ಲಿ ಕಿಟ್ಟ ಇಬ್ಬರೂ ಇದ್ದರು. ನನಗೆ ಏನು ಹೇಳಲೆಂದೇ ತೋರ ಲಿಲ್ಲ. ಕೊನೆಗೆ ಒಂದು ಕತೆಗೆ ಅಡಿಗಟ್ಟು ಹಾಕಿದೆ—

'ಮಹಾ ಕೋಪಿಷ್ಟನಾದ ಸಗರ ಚಕ್ರವರ್ತಿಯ ಮಾತನ್ನು ಕೇಳಿ, ಆ ಅರುವತ್ತು ಸಾವಿರ ಮಕ್ಕಳು ಭೂಮಿಯನ್ನು ಬಗೆದು, ಪಾತಾಳ ಲೋಕವನ್ನು ಪ್ರವೇಶಿಸಿ, ಅಲ್ಲಿ ಪರ್ವತಕ್ಕೆ ಸಮನಾಗಿ ಭೂಮಿಯನ್ನು ಧರಿಸಿಕೊಂಡು ಇದ್ದ ವಿರೂಪಾಕ್ಷ ಎಂಬ ಆನೆಯನ್ನು ಕಂಡು ಆಶ್ಚರ್ಯಪಟ್ಟರು. ಆ ಆನೆಯು ಎಂದಿಗಾದರೂ ಒಂದು ಸಾರಿ ಅಮಾವಾಸ್ಯೆ, ಇಲ್ಲವೆ ಪೂರ್ಣಿಮೆಯ ಪರ್ವಕಾಲದಲ್ಲಿ ತನ್ನ ಶಿರಸ್ಸನ್ನು ಕೊಡಹಿದರೆ....ಆ ಸಮಯದಲ್ಲಿ ಭೂಕಂಪವಾಗುವುದು !.... ....ಅಂಥಾ ಆ....'

ಲಿಲ್ಲಿ ನಗೆಯ ಬುಗ್ಗೆಯನ್ನೇ ಹೊರಡಿಸಿದಳು. ಬಾಯಿಗೆ ತನ್ನ ಪುಟ್ಟ ಕೈಯನ್ನು ಮುಚ್ಚಿಕೊಂಡು ಕಿಲಕಿಲನೆ ನಗುತ್ತಿದ್ದಂತೆ, ಆಕೆಯ ಎರಡು ದುಂಡಗಿನ ಕಣ್ಣುಗಳು ನನ್ನನ್ನು ಅಣಕಿಸುವ ಹಾಗೆ ಅರಳಿ ಮಿನುಗುತ್ತಿದ್ದುವು. ನನ್ನಾಕೆಗೂ ನಗು ಬಂತು !

ಈ ಹುಡುಗಿ ನಗಬೇಕಾದರೆ, ನನ್ನ ಕತೆ ಅಷ್ಟು ಪುಕ್ಕಟೆಯಾಯಿತೇನು ? ಇದೇ ಕತೆಯನ್ನು ಓದಿ, ಬಾಯಿಪಾಠ ಮಾಡಿ, ನಾನು ಮೆಟ್ರಿಕ್ ಪಾಸು ಮಾಡಿದ್ದೆ. .ಇದು ಈ ಲಿಲ್ಲಿಗೆ ಹೇಗೆ ತಿಳಿಯಬೇಕು ? ನನಗೂ ನಗು ಬರುತ್ತಿತ್ತೋ ಏನೋ. ಆದರೆ ನಾನು ಬಹಳ ಹುರುಪಿಂದ ಈ ಕತೆ ತೊಡಗಿದ್ದೆ, ಪುಟ್ಟಮ್ಮಲ್ಲಿ ಲಿಲ್ಲಿ ನಕ್ಕದ್ದರಿಂದ ತುಸ ಸಿಟ್ಟು ಬರದೆ ಇದ್ದೀತೇ ? ಒಳಗೇ ನುಂಗಿಕೊಂಡೆ. ಇಲ್ಲವಾಗಿದ್ದರೆ ನನ್ನಾಕೆಯ ಕಣ್ಣೋಟವನ್ನು ಯಾರು ಇದಿರಿಸಬೇಕು ?

ನನ್ನ ಕಡೆಯಿಂದ ಕಿಟ್ಟು ಮಾತು ತೆಗೆದ: 'ನೀನು ಯಾಕೆ ನಗುತ್ತೀಯಾ ?' ಲಿಲ್ಲಿ ಮಾರ್ನುಡಿದಳು, 'ನೀನ್ಯಾಕೆ ನಗುತ್ತಿದ್ದಿ ಮೊನ್ನೆ ?'

'ಏನದು ಲಿಲ್ಲಿ ?' ಎಂದು ನನ್ನಾಕೆ ವಿಚಾರಿಸಿದಳು.

'ಆ...ಆ...ಗೊತ್ತಾಯ್ತು!...' ಕಿಟ್ಟು ಕಣ್ಣರಳಿಸಿದ.

'ನೀನೇ ಹೇಳು ಹಾಗಾದರೆ !...' ಲಿಲ್ಲಿ ಹೇಳಿದಳು. ನನ್ನಾಕೆಗೆ ಇದು ಸರಿಯೆನಿಸಲಿಲ್ಲ. ಲಿಲ್ಲಿಯ ಬಾಯಿಂದಲೇ ಕೇಳಬೇಕೆನಿಸಿತು. 'ಹೇಳಮ್ಮ, ನೀನೇ ಹೇಳು...ಅವರಿಗೂ ಕೇಳಬೇಕೆಂದಿದೆ...' ಎಂದು ನನ್ನಾಕೆಯೂ ನನ್ನ ಕಡೆ ನಿಂತು ಮಾತನಾಡಿದಳು. ಲಿಲ್ಲಿ ಹೇಳಿದಳು:

'ಮೊನ್ನೆ ನಮಗೆ ಕ್ಲಾಸ್ ಎಕ್ಸಾಮಿನೇಷನ್ ಇತ್ತು. ನಮ್ಮ ಮೇಸ್ಟ್ರು 'ಭೂಕಂಪ ಹೇಗೆ ಉಂಟಾಗುವುದು ?' ಎಂದು ಪ್ರಶ್ನೆ ಹಾಕಿದ್ದರು. ಅಮ್ಮ ಹೇಳಿದ ಒಂದು ಕತೆ ನೆನಪಿಗೆ ಬಂತು, ಸಾಲೆಯಲ್ಲಿ ಓದಿದ ನೆನಪು ಬರಲಿಲ್ಲ...ಹೀಗೇನೇ—ಯಾವುದೋ ಒಂದು ಪ್ರಾಣಿ ಇದೆಯಂತಪ್ಪ ! ಏನೋ ಅದರ ಹೆಸರು ಹೇಳಿದ್ದರು...ಅದರ ತಲೆಯ ಒಂದು ಕೊಂಬಿನ ತುದಿಗೆ ಈ ಭೂಮಿ ನಿಂತಿದೆಯಂತೆ. ಅದು ಹೊತ್ತು ದಣಿದಾಗ, ಒಂದು ಕೊಂಬಿನಿಂದ ಇನ್ನೊಂದು ಕೊಂಬಿಗೆ ಹಾರಿಸುತ್ತ

ದಂತೆ...ಆಗ ಭೂಮಿ ಗಡಗಡನೆ ನಡುಗಿ... ಭೂಕಂಪವಾಗುತ್ತದೆ ಎಂದು ಅಮ್ಮ ಹೇಳಿದ ಕತೆಯನ್ನೇ ಉತ್ತರ ಬರೆದೆ...ನಮ್ಮ ಮೇಸ್ಟ್ರು ಸುಮ್ಮನಿರುತ್ತಾರೇನು ?..ಹುಡುಗರ ಎದುರಲ್ಲಿ ನನ್ನ ನಾಟಕ ಮಾಡಿಬಿಟ್ಟರು!'

ಕಿಟ್ಟು ನಗುತ್ತಿದ್ದ.

'ನೋಡಿ !...ನೋಡಿ ! ಕಿಟ್ಟು ಈಗಲೂ ನಗುತ್ತಾ ಇದ್ದಾನೆ !...ಆಹೊತ್ತು ಕೂಡ ಹೀಗೇ !...ಇವರಿಗೆಲ್ಲ ಗಂಡು ಹುಡುಗರಿಗೆ ನಾಚಿಗೆ ಎಂಬುದೇ ಇಲ್ಲ! ಇವರು ಮಾತ್ರ ತಪ್ಪು ಮಾಡುವುದಿಲ್ಲವೇನು ?...'

ಕಿಟ್ಟು [illegible] ಕಿಲಾಡಿ! [illegible]

ಒಂದು ಕತೆ ನಿಮ್ಮದೂ ಆಯಿತು !...' ಲಿಲ್ಲಿ ಮಲ್ಲಿಗೆಮೊಗ್ಗು ಬಿಟ್ಟಂತೆ ನಗೆಯಾಡಿದಳು. ಆಕೆಯ ನಗೆಯ ಬಗೆಯಲ್ಲಿ ನನ್ನನ್ನು ಅಣಕಿಸುವ ಧೋರಣೆ ತೋರಿದಿತ್ತು ನಾನು ಹೇಳಿದೆ: 'ನಿನ್ನ ಮೇಸ್ಟ್ರು ಎಂಥವರಮ್ಮ!.... [illegible] ಇದ್ದಾರಲ್ಲೇ ಲಿಲ್ಲೀ ?...ಅವರಿಗೇನಪ್ಪ ಬೇಕು ಗೊತ್ತೇ ?...'

ಲಿಲ್ಲಿ ಮೆಲ್ಲಗೆ 'ಅವರು ಸರಿಯಾದುದನ್ನೇ ಹೇಳಿದರು.' ಎಂದಳು.

[illegible]

The General Stores

General Merchants & Commission Agents

[illegible]

Dealers in High Class Provisions & Stationaries

[illegible]

Proprietor [illegible] UPADHYA

ಗ್ರಂಥಾಂತರಂಗ

ಮೆರವಣಿಗೆ:- ಲೇಖಕರು :- ಶ್ರೀ ಗೋರೂರ್ ರಾಮಸ್ವಾಮಯ್ಯಂಗಾರ್. ಪ್ರಕಾಶಕರು :- ಸತ್ಯಶೋಧನ ಪುಸ್ತಕ ಭಂಡಾರ, ಕೋಟೆ, ಬೆಂಗಳೂರು. ಪುಟ. ಕಿರೀಟಾಕಾರ ೪+೭೯. ಬೆಲೆ ೮-೮.೦

ಹಳ್ಳಿಯ ಚಿತ್ರಗಳು, ನಮ್ಮ ಊರಿನ ರಸಿಕರು, ಬೈಲಹಳ್ಳಿ ಸರ್ವೆ, ಗರುಡಗಂಬದ ದಾಸಯ್ಯ, ಇತ್ಯಾದಿ ಪುಸ್ತಕಗಳಲ್ಲಿ ಈವರೆಗೆ ನಮ್ಮ ಕಣ್ಣಿಗೆ ಕಾಣದಿದ್ದ, ಕಂಡಿದ್ದರೂ ಅಷ್ಟಾಗಿ ನಮ್ಮ ಗಮನವನ್ನು ಸೆಳೆಯದಿದ್ದ ಹಳ್ಳಿಯ ಗೆಣೆಯರನೇಕರು ಜಮಾಯಿಸಿ ನಡೆಸಿರುವ 'ಮೆರವಣಿಗೆ'ಯೇ ಈ ಬೃಹದಾಕಾರದ ಪುಸ್ತಕ. ಜೊತೆಗೆ, ಸಕಲ ಸದ್ಗುಣ(?)ಗಳ ಆಕರವಾಗಿ ನಾಗರಿಕತೆಯ ಮಾದರಿ ತಾನೇ ಎಂದು ಬೀಗಿ ಮೆರೆವ ಪಟ್ಟಣದ ರಸಿಕರೂ ಮೆರವಣಿಗೆಯಲ್ಲಿ ಸೇರಿ ಪುಸ್ತಕದ ಘನತೆಯನ್ನು ಇನ್ನಷ್ಟು ಹೆಚ್ಚಿಸಿದ್ದಾರೆ. ಇಷ್ಟು ಸಾಲದೆಂಬಂತೆ ಅಮಲ್ದಾರರು, ಸಬ್ ಡಿವಿಜನ್ ಸಾಹೇಬರು, ಜಿಲ್ಲಾಧಿಕಾರಿಗಳು, ಮಂತ್ರಿಗಳು,ಶಾಲೆಯ ಇನ್ಸ್‌ಪೆಕ್ಟರ್,' ಪೋಲೀಸ್ ಇನ್ಸ್‌ಪೆಕ್ಟರ್ ಇತ್ಯಾದಿ, ಇತ್ಯಾದಿ. ಸರಕಾರದ ಅಧಿಕಾರಿ ವರ್ಗವೂ ಮೆರವಣಿಗೆಯಲ್ಲಿ ಭಾಗವಹಿಸಿದಮೇಲೆ ಕೇಳಬೇಕೇ! ಆರ್ಥಿಕ, ಸಾಮಾಜಿಕ, ರಾಜಕೀಯ, ಬೆರೆತು, ದೇಶಭಕ್ತಿಯ ಕಾವೇರಿ ಮೆರವಣಿಗೆಗೆ ಶಕ್ತಿ ಬಂದಿದೆ: ಕಳೆ ಏರಿದೆ.

ನಮ್ಮ ರಾಷ್ಟ್ರದ ಜೀವನಾಡಿ ಯಾವುದೋ, ನಮ್ಮ ಜನದ ನಿತ್ಯಜೀವನದ ಬಾಳುಸಿರು ಯಾವುದೋ. ನಮ್ಮ ಸಂಸ್ಕೃತಿಯ ಬೆನ್ನೆಲುಬು ಯಾವುದೋ ಆ ಒಂದು ಹಳ್ಳಿ ಹಿಂದೊಮ್ಮೆ ಹೇಗೆ ಬಾಳಿತು: ಈಗ ಹೇಗೆ ಅರೆಜೀವ ಕೊರೆಜೀವವಾಗಿ ಬಾಳುತ್ತಿದೆ; ಅದು ಮತ್ತೆ ಚೈತನ್ಯಯುತವಾಗಿ ಉಳಿಯಬೇಕಾದರೆ ಏನು ಮಾಡಬೇಕು; ಎನ್ನುವುದನ್ನು ಕಲಾತ್ಮಕವಾಗಿ ಹೇಳಲೋಸುಗ ಮಲ್ಲಿಗೆ ಹಳ್ಳಿಯೆಂಬ ಒಂದು ಹಳ್ಳಿಯನ್ನು ಕಟ್ಟಿ, ಅದಕ್ಕೆ ಜೀವ ಕೊಟ್ಟು, ಅಲ್ಲಿ ಹಲವಾರು ವ್ಯಕ್ತಿಗಳನ್ನು ಚಲಿಸುವಂತೆ ಮಾಡಿ ಅವರ ಮೆರವಣಿಗೆಯನ್ನೇ ನೆಡೆಸಿದ್ದಾರೆ ಲೇಖಕರು. ರಾಜಕೀಯ ಜಾಗೃತಿಯ ಬಿರುಗಾಳಿ ದೇಶಾದ್ಯಂತ ಬೀಸಿತು. ಎಲ್ಲೆಲ್ಲೂ ನವಚೈತನ್ಯ ಮೂಡಿತು. ಹಳ್ಳಿಯೇನು, ಪಟ್ಟಣವೇನು, ನಾಡಿಗೆ ನಾಡೇ ದೇಶದ ಕರೆಗೆ ಓಕೊಟ್ಟಿತು. ಮಲ್ಲಿಗೆ ಹಳ್ಳಿಯೂ ದೇಶದ ಕರೆಗೆ ಸಿದ್ಧವಾಯಿತು. ಹಳ್ಳಿಯ ಜನ ದೇಶದ ಹೋರಾಟದಲ್ಲಿ ಭಾಗವಹಿಸಿತು. ಸುಧಾರಣೆಯಲ್ಲಿ ಆಸಕ್ತಿ ವಹಿಸಿತು. ಅದರಿಂದ

ರಕ್ತವನ್ನು ಬಿಸಿಮಾಡುವಂಥ ರಾಜಕೀಯ ಘಟನೆಗಳು ನಡೆದುವು. ರಕ್ತದ ಕೋಡಿ ಹರಿಯಿತು. ಹೆಚ್ಚು ಹೇಳಬೇಕು? ಭಾರತ ವರ್ಷವು ನಡೆಸಿದ ೧೫೦ ವರ್ಷಗಳ ರಾಜಕೀಯ ಹೋರಾಟದ ಸಂಕ್ಷಿಪ್ತ ಇತಿಹಾಸವೇ ಮಲ್ಲಿಗೆ ಹಳ್ಳಿ ನಡೆಸಿದ ಹೋರಾಟವಲ್ಲವೆ. ಮೆರವಣಿಗೆಗೆ ಪ್ರಾಮುಖ್ಯತೆ ಇದರಿಂದ. ನಮ್ಮ ರಾಜಕೀಯ ಇತಿಹಾಸ ತಿಳಿಯಬೇಕೆನ್ನುವವರಿಗೆ ಇದು ಕೈಪಿಡಿಯಂತಿರುವುದು ಧಾರಾಳವಾಗಿ ಹೇಳಬಹುದು.

ಮಲ್ಲಿಗೆ ಹಳ್ಳಿಯ [illegible]

[illegible] ವ ಮಲ್ಲಿಗೆ ಹಳ್ಳಿಯ ಉದ್ಧಾರಕ್ಕೆ ಕೆಲವು ತರುಣರು ಪಟ್ಟ ಪಾಡು ಇಲ್ಲಿದೆ.

ಗ್ರಾಮಜೀವನವನ್ನು ರಸವತ್ತಾಗಿ ಚಿತ್ರಿಸುವುದರಲ್ಲಿ ನಿಪುಣರಾದ, ಹಾಸ್ಯವನ್ನು ಇತಿಮಿತಿಯುಳ್ಳರೀತಿ ಸಹಜವಾಗಿ ಪ್ರತಿಪಾದಿಸುವುದರಲ್ಲಿ ಸಿದ್ಧಹಸ್ತರಾದ ಶ್ರೀ ಗೊರೂರ್ ರಾಮಸ್ವಾಮಿಅಯ್ಯಂಗಾರ್ ಅವರೇ 'ಮೆರವಣಿಗೆ'ಯನ್ನು ಹೊರಡಿಸಿರುವರೆಂದಮೇಲೆ ಕೇಳುವುದಿನ್ನೇನು. ಎಂಟುನೂರು ಪುಟಗಳಷ್ಟು ಬೃಹದಾಕಾರವಾಗಿ ಬೆಳೆದಿರುವ ಮೆರವಣಿಗೆಯಲ್ಲಿ ಕಣ್ಣಿಗೆ ಕಟ್ಟುವಂತೆ ಎದ್ದು ಕಾಣುವ ವಿವಿಧ ಮನೋವೃತ್ತಿಯ ವ್ಯಕ್ತಿಗಳು, [illegible]

[illegible] ಗಿ ಜಾನಕಮ್ಮನಂಥ ಅನುಭವಿ ಜೀವಿಯಿಂದ ಬುದ್ಧಿ ಕಲಿತ ಕನ್ನಡ ತಿಳಿಯದ ಹಿಂದೀ ಪ್ರೂರ್ತಿ ಬರದ ರಾಷ್ಟ್ರಭಾಷಾ ಉದ್ಧಾರಕಳಾದ ಕನಕಲತೆ; ಮಂತ್ರದ ಕಟ್ಟನ್ನು ಆಳ ಹೆಗಲಮೇಲೆ ಹೊರಿಸಿಕೊಂಡು ಊರೂರು ತಿರುಗುವ ವಿಶಿಷ್ಟಾದ್ವೈತಧ್ವಜ; ಓದುಗರನ್ನು ನಗೆಗಡಲಿನಲ್ಲಿ ತೇಲಿಸಿ ಮುಳುಗಿಸಿ ಆನಂದ ಪಡಿಸುವುದಕ್ಕೆ ಸಿದ್ಧವಾಗಿರುವ ಅನೇಕಾನೇಕ ಹಾಸ್ಯಗಾರರಲ್ಲಿ ಕೆಲವು ಪ್ರಮುಖ ವ್ಯಕ್ತಿಗಳು. ಇಂಥವರು ನೂರಾರು 'ಮೆರವಣಿಗೆಯಲ್ಲಿ. ಇವರೆಲ್ಲರೊಂದಿಗೆ ತುಂಟುಹುಡುಗನಾಗಿ, ಆಮೇಲೆ ವಿದ್ಯಾರ್ಥಿಗಳಲ್ಲಿ ಅಪ್ರತಿಮ ಪುಂಡನಾಗಿ, ತರುವಾಯ ಆಂಜನೇಯ ಸಮಾಜದ ಸೂತ್ರಧಾರನಾಗಿ, ಅನಂತರ ಪದವೀಧರನಾಗಿ, ಆದಾದ ಮೇಲೆ ರಾಜಕೀಯ ಹೋರಾಟದಲ್ಲಿ ಭಾಗ ವಹಿಸಿ ಸೆರೆವಾಸ ಅನುಭವಿಸಿ ಮಲ್ಲಿಗೆ ಹಳ್ಳಿಗೆ ಹಿಂದಿರುಗಿದ ಸುಧಾರಕನಾಗಿ, ಕಡೆಗೆ ಮತ್ತೊಮ್ಮೆ ಗಾಳಿಅರ ಚಳುವಳಿಯಲ್ಲಿ ಗಣ್ಯ ವ್ಯಕ್ತಿಯಾಗಿ ಹೀಗೆ ಮೆರವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದಾನೆ ಸುದರ್ಶನ. ಸುದರ್ಶನ ನಿಮಿತ್ತ ಮಾತ್ರ. ಅವನ ಹೆಸರನ್ನು ಮುಂದಿಟ್ಟುಕೊಂಡು ನಮ್ಮ ದೇಶದ ನೂರೈವತ್ತು ವರ್ಷಗಳ ರಾಜಕೀಯ ಜೀವನವನ್ನು ಹೋರಾಟವನ್ನೂ ವಿವರಿಸಿದ್ದಾರೆ ಮೆರವಣಿಗೆಯಲ್ಲಿ. ನಾವು ಗಮನಿಸಬೇಕಾದುದು ಈ ಅಂಶವನ್ನು. [ವಿಸ್ತಾರ. ಭಯದಿಂದ ಅನೇಕ ಮುಖ್ಯಾಂಶಗಳನ್ನು ಹೇಳಿಲ್ಲ.]

ಮೆರವಣಿಗೆ ಗಾತ್ರದಿಂದ, ವಿಸ್ತಾರದಿಂದ, ಪುಟಗಳ ಅಧ್ಯಾಯಗಳ ಸಂಖ್ಯೆಯಿಂದ, ಓದುಗರಿಗೆ ಇದು ಕಾದಂಬರಿಯೆಂಬಭ್ರಮೆಯನ್ನು ತರುತ್ತದೆ. ಆದರೆ ಇದು ಕಾದಂಬರಿಯಲ್ಲ. ಮಲ್ಲಿಗೆ ಹಳ್ಳಿಯಹೆಸರನ್ನು ಸೂಚ್ಯವಾಗಿಟ್ಟುಕೊಂಡು ಅದರ ಸುತ್ತ ಹಲವಾರು ವ್ಯಕ್ತಿಗಳನ್ನು ಓಡಾಡಿಸಿ ಅವರ ಚಿತ್ರ ಕಣ್ಣಿಗೆ ಕಟ್ಟುವಂತೆ ವ್ಯಕ್ತಿತ್ವ ಮನಕ್ಕೆ ನಾಟುವಂತೆ ವಿವರಿಸಿದ್ದಾರೆ. ಸಣ್ಣ ಕತೆಯ ತಂತ್ರ, ಕಾದಂಬರಿಯ ಜಾಡು, ಹರಟೆಯ ಸುಳಿವು, ನಗೆಯ ಬಗೆ, ಪ್ರಬಂಧದ ರೀತಿ, ವ್ಯಕ್ತಿ ಚಿತ್ರದ ಸಂಪ್ರದಾಯ ಈ ಎಲ್ಲ ಬಗೆಗಳು ಸೇರಿಕೊಂಡು ನವನವೀನವಾಗಿದೆ ಮೆರವಣಿಗೆ. ಕೊಂಡಿಗೆಕೊಂಡಿ ಸೇರಿಯೂಬೆಸಿಗೆ ತಪ್ಪಿದಂತೆ ಒಬ್ಬರಿಗೊಬ್ಬರಿಗೆ ಸಂಬಂಧವಿಲ್ಲ. ಆದರೂ ಎಲ್ಲರೂ ಹತ್ತಿರದವರೇ. ಎಷ್ಟೆಂದರೂ ಮೆರವಣಿಗೆ ತಾನೆ!

ಸ್ವತಂತ್ರದ ಕರೆಗೆ 'ಓ' ಕೊಟ್ಟು ದೇಶ ಸ್ವಾತಂತ್ರ್ಯ ಹೋರಾಟಕ್ಕೆ ಸಿದ್ಧವಾಗುತ್ತಿರುವ ಈ ಕಾಲದಲ್ಲಿ, ಹಿಂದೊಮ್ಮೆ ನಮ್ಮ ಜನ ಬಾಳಿದ ಸೊಗದ ಬಾಳ್ವೆಯನ್ನು ನಮ್ಮ ಸ್ವಾತಿ ಪಥಕ್ಕೆ ತಂದು, ಅದೇ ಜನ ಇಂದು ಅಧೋಗತಿಗೆ ಇಳಿದಿರುವ ಜೀವನ ಮಟ್ಟವನ್ನು ನಮಗೆ ಪರಿಚಯ ಮಾಡಿಕೊಟ್ಟು, ಅದಕ್ಕೆ ಚಿಕಿತ್ಸೆಯನ್ನು ಸ್ಥೂಲವಾಗಿ ವಿವೇಚಿಸಿ ಮಲ್ಲಿಗೇ ಹಳ್ಳಿಯೆಂಬ ಒಂದು ಸಣ್ಣ ಕಲ್ಪನಾ ಜಗತ್ತಿನಿಂದ ನಮ್ಮ ಜನದ ನಿಜವಾದ ಮೆರವಣಿಗೆಯನ್ನು ಹೊರಡಿಸಿ ಪ್ರದರ್ಶಿಸಿರುವುದಕ್ಕೆ ಶ್ರೀ ಗೋರೂರು ಅವರಿಗೆಕನ್ನಡಿಗರು ಕೃತಜ್ಞರಾಗಿರಬೇಕಾಗಿದೆ. ಕೃತಜ್ಞತಾ ಪ್ರದರ್ಶನ ಮೆರವಣಿಗೆಗೆ ತೋರಿಸುವ ಸ್ವಾಗತವನ್ನವಲಂಬಿಸಿದೆ.

ಬಿ. ಶ್ರೀ. ಪಾ.

ರಕ್ತವನ್ನು ಬಸಿವನಾಡುವಂತ ರಾಜಕೀಯ ಘಟನೆಗಳು ನಡೆದುವು. ರಕ್ತದ ಕೋಡಿ ಹರಿಯಿತು. ಹೆಚ್ಚು ಹೇಳಲೇನು? ಭಾರತ ವರ್ಷವು ನಡೆಸಿದ ೧೫೦ ವರ್ಷಗಳ ರಾಜಕೀಯ ಹೋರಾಟದ ಸಂಕ್ಷಿಪ್ತ ಇತಿಹಾಸವೇ ಮಲ್ಲಿಗೆ ಹಳ್ಳಿ ನಡೆಸಿದ ಹೋರಾಟದಲ್ಲಿದೆ. ಮೆರವಣಿಗೆಗೆ ಪ್ರಾಮುಖ್ಯತೆ ಇದರಿಂದ. ನಮ್ಮ ರಾಜಕೀಯ ಇತಿಹಾಸ ತಿಳಿಯಬೇಕೆನ್ನುವವರಿಗೆ ಇದು [illegible] ಧಾರಾಳವಾಗಿ ಹೇಳಬಹುದು.

ಮಲ್ಲಿಗೆ ಹಳ್ಳಿಯ ಒಂದು [illegible] ಚಿತ್ರ ಮೆರವಣಿಗೆಯಲ್ಲಿ [illegible]

ವ ಮಲ್ಲಿಗೆ ಹಳ್ಳಿಯ ಉದ್ಧಾರಕ್ಕೆ ಕೆಲವು ತರುಣರು ಪಟ್ಟ ಪಾಡು ಇಲ್ಲಿದೆ.

ಗ್ರಾಮಜೀವನವನ್ನು ರಸವತ್ತಾಗಿ ಚಿತ್ರಿಸುವುದರಲ್ಲಿ ನಿಪುಣರಾದ, ಹಾಸ್ಯವನ್ನು ಇತಿಮಿತಿಯನ್ನರಿತು ಸಹಜವಾಗಿ ಪ್ರತಿಪಾದಿಸುವುದರಲ್ಲಿ ಸಿದ್ಧಹಸ್ತರಾದ ಶ್ರೀ ಗೊರೂರ್ ರಾಮಸ್ವಾಮಯ್ಯಂಗಾರ್ ಅವರೇ 'ಮೆರವಣಿಗೆ'ಯನ್ನು ಹೊರಡಿಸಿರುವರೆಂದಮೇಲೆ ಕೇಳುವುದಿನ್ನೇನು. ಎಂಟುನೂರು ಪುಟಗಳಷ್ಟು ಬೃಹದಾಕಾರವಾಗಿ ಬೆಳೆದಿರುವ ಮೆರವಣಿಗೆಯಲ್ಲಿ ಕಣ್ಣಿಗೆ ಕಟ್ಟುವಂತೆ ಎದ್ದು ಕಾ [illegible]

ಗಿ ಜಾನಕಮ್ಮನಂಥ ಅನುಭವಿ ಜೀವಿಯಿಂದ ಬುದ್ಧಿ ಕಲಿತ ಕನ್ನಡ ತಿಳಿಯದ ಹಿಂದೀ ಪ್ರೊಫೆಸರ್ ಬರದ ರಾಷ್ಟ್ರಭಾಷಾ ಉದ್ಧಾರಕಳಾದ ಕನಕಲತೆ; ಮಂತ್ರದ ಕಟ್ಟನ್ನು ಆಳ ಹೆಗಲಮೇಲೆ ಹೊರಿಸಿಕೊಂಡು ಊರೂರು ತಿರುಗುವ ವಿಶಿಷ್ಟಾದ್ವೈತಧ್ವಜ; ಓದುಗರನ್ನು ನಗೆಗಡಲಿನಲ್ಲಿ ತೇಲಿಸಿ ಮುಳುಗಿಸಿ ಆನಂದ ಪಡಿಸುವುದಕ್ಕೆ ಸಿದ್ಧನಾಗಿರುವ ಅನೇಕಾನೇಕ ಹಾಸ್ಯಗಾರರಲ್ಲಿ ಕೆಲವು ಪ್ರಮುಖ ವ್ಯಕ್ತಿಗಳು. ಇಂಥವರು ನೂರಾರು 'ಮೆರವಣಿಗೆ'ಯಲ್ಲಿ. ಇವರೆಲ್ಲರೊಂದಿಗೆ ತುಂಟುಹುಡುಗನಾಗಿ, ಆಮೇಲೆ ವಿದ್ಯಾರ್ಥಿಗಳಲ್ಲಿ ಅಪ್ರತಿಮ ಪುಂಡನಾಗಿ, ತರುವಾಯ ಆಂಜನೇಯ ಸಮಾಜದ ಸೂತ್ರಧಾರನಾಗಿ, ಅನಂತರ ಪದವೀಧರನಾಗಿ, ಆದಾದ ಮೇಲೆ ರಾಜಕೀಯ ಹೋರಾಟದಲ್ಲಿ ಭಾಗ ವಹಿಸಿ ಸೆರೆವಾಸ ಅನುಭವಿಸಿ ಮಲ್ಲಿಗೆ ಹಳ್ಳಿಗೆ ಹಿಂದಿರುಗಿದ ಸುಧಾರಕನಾಗಿ, ಕಡೆಗೆ ಮತ್ತೊಮ್ಮೆ ೧೯೪೨ರ ಚಳುವಳಿಯಲ್ಲಿ ಗಣ್ಯ ವ್ಯಕ್ತಿಯಾಗಿ ಹೀಗೆ ಮೆರವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದಾನೆ ಸುದರ್ಶನ. ಸುದರ್ಶನ ನಿಮಿತ್ತ ಮಾತ್ರ. ಅವನ ಹೆಸರನ್ನು ಮುಂದಿಟ್ಟುಕೊಂಡು ನಮ್ಮ ದೇಶದ ನೂರೈವತ್ತು ವರ್ಷಗಳ ರಾಜಕೀಯ ಜೀವನವನ್ನು ಹೋರಾಟವನ್ನೂ ವಿವರಿಸಿದ್ದಾರೆ ಮೆರವಣಿಗೆಯಲ್ಲಿ. ನಾವು ಗಮನಿಸಬೇಕಾದುದು ಈ ಅಂಶವನ್ನು. [ವಿಸ್ತಾರ ಭಯದಿಂದ ಅನೇಕ ಮುಖ್ಯಾಂಶಗಳನ್ನು ಹೇಳಿಲ್ಲ.]

ಮೆರವಣಿಗೆ ಗಾತ್ರದಿಂದ, ವಿಸ್ತಾರದಿಂದ, ಪುಟಗಳ ಅಧ್ಯಾಯಗಳ ಸಂಖ್ಯೆಯಿಂದ, ಓದುಗರಿಗೆ ಇದು ಕಾದಂಬರಿಯೆಂಬ ಭ್ರಮೆಯನ್ನು ತರುತ್ತದೆ. ಆದರೆ ಇದು ಕಾದಂಬರಿಯಲ್ಲ. ಮಲ್ಲಿಗೆ ಹಳ್ಳಿಯ ಹೆಸರನ್ನು ಸೂಚ್ಯವಾಗಿಟ್ಟುಕೊಂಡು ಅದರ ಸುತ್ತ ಹಲವಾರು ವ್ಯಕ್ತಿಗಳನ್ನು ಓಡಾಡಿಸಿ ಅವರ ಚಿತ್ರ ಕಣ್ಣಿಗೆ ಕಟ್ಟುವಂತೆ ವ್ಯಕ್ತಿತ್ವ ಮನಕ್ಕೆ ನಾಟುವಂತೆ ವಿವರಿಸಿದ್ದಾರೆ. ಸಣ್ಣ ಕತೆಯ ತಂತ್ರ, ಕಾದಂಬರಿಯ ಜಾಡು, ಹರಟೆಯ ಸುಳಿವು, ನಗೆಯ ಬಗೆ, ಪ್ರಬಂಧದ ರೀತಿ, ವ್ಯಕ್ತಿ ಚಿತ್ರದ ಸಂಪ್ರದಾಯ ಈ ಎಲ್ಲ ಬಗೆಗಳು ಸೇರಿಕೊಂಡು ನವನವೀನವಾಗಿದೆ ಮೆರವಣಿಗೆ. ಕೊಂಡಿಗೆ ಕೊಂಡಿ ಸೇರಿಯೂ ಬೆಸಿಗೆ ತಪ್ಪಿದಂತೆ ಒಬ್ಬರಿಗೊಬ್ಬರಿಗೆ ಸಂಬಂಧವಿಲ್ಲ. ಆದರೂ ಎಲ್ಲರೂ ಹತ್ತಿರದವರೇ. ಎಷ್ಟೆಂದರೂ ಮೆರವಣಿಗೆ ತಾನೆ!

ಸ್ವತಂತ್ರದ ಕರೆಗೆ 'ಓ' ಕೊಟ್ಟು ದೇಶ ಸ್ವಾತಂತ್ರ್ಯ ಹೋರಾಟಕ್ಕೆ ಸಿದ್ಧವಾಗುತ್ತಿರುವ ಈ ಕಾಲದಲ್ಲಿ, ಹಿಂದೊಮ್ಮೆ ನಮ್ಮ ಜನ ಬಾಳಿದ ಸೊಗದ ಬಾಳ್ವೆಯನ್ನು ನಮ್ಮ ಸ್ಮೃತಿ ಪಥಕ್ಕೆ ತಂದು, ಅದೇ ಜನ ಇಂದು ಅಧೋಗತಿಗೆ ಇಳಿದಿರುವ ಜೀವನ ಮಟ್ಟವನ್ನು ನಮಗೆ ಪರಿಚಯ ಮಾಡಿಕೊಟ್ಟು, ಅದಕ್ಕೆ ಚಿಕಿತ್ಸೆಯನ್ನು ಸ್ಥೂಲವಾಗಿ ವಿವೇಚಿಸಿ ಮಲ್ಲಿಗೇ ಹಳ್ಳಿಯೆಂಬ ಒಂದು ಸಣ್ಣ ಕಲ್ಪನಾ ಜಗತ್ತಿನಿಂದ ನಮ್ಮ ಜನವ ನಿಜವಾದ ಮೆರವಣಿಗೆಯನ್ನು ಹೊರಡಿಸಿ ಪ್ರದರ್ಶಿಸಿರುವುದಕ್ಕೆ ಶ್ರೀ ಗೊರೂರು ಅವರಿಗೆ ಕನ್ನಡಿಗರು ಕೃತಜ್ಞರಾಗಿರಬೇಕಾಗಿದೆ. ಕೃತಜ್ಞತಾ ಪ್ರದರ್ಶನ ಮೆರವಣಿಗೆಗೆ ತೋರಿಸುವ ಸ್ವಾಗತವನ್ನವಲಂಬಿಸಿದೆ.

ಬಿ. ಶ್ರೀ. ಪಾ.

ಶ್ರೀ ಗುರು ಸಾರ್ವಭೌಮ:—

ಲೇಖಕರು: ಶ್ರೀ ಜೆ. ಎಸ್. ಕೃಷ್ಣರಾವ್. ಪರಿಮಳ ಸಾಹಿತ್ಯಮಂದಿರ, ಚಾಮರಾಜಪೇಟೆ, ಬೆಂಗಳೂರು ನಗರ. ಕಿರೀಟಾಕಾರ ೧/೮ ೧೪೪. ಬೆಲೆ ೧—೮—೦.

'ದೇವರೆಂದರೆ [illegible] ... [illegible]

[illegible]

...ಸಾಂಕ. ಕಿರೀಟಾಕಾರ ೧/೪ ೧೦೦ ಪುಟಗಳು ೦—೮—೦

ಹುಬ್ಬಳ್ಳಿಯಿಂದ ಈವರೆಗೆ ಹುಬ್ಬಳ್ಳಿ ಗೆಜೆಟ್ ಎಂಬ ಹೆಸರಿನಿಂದ ಹೊರಡುತ್ತಿದ್ದ ವಾರಪತ್ರಿಕೆಯು ಜೈಹಿಂದ್ ಎಂಬ ಹೆಸರನ್ನು ತಳೆದ ಒಂದೆರಡು ತಿಂಗಳಲ್ಲಿಯೇ ಈ ಉತ್ತಮ ವಿಶೇಷಾಂಕವನ್ನು ಕೊಟ್ಟುದಕ್ಕೆ ನಾವು ಸಂಪಾದಕರಿಗೆ ಎಷ್ಟು ಕೃತಜ್ಞರಾಗಿದ್ದರೂ ಸಾಲದು.

ಈ ವಿಶೇಷಾಂಕದ ಹೆಚ್ಚಳಿಕೆಯೆಂದರೆ [illegible] ... [illegible]

ನಿಮ್ಮ ಮಾಸ ಭವಿಷ್ಯ

ಮಾರ್ಚಿ ೧೯೪೭

ಮೇಷ:—

ಶಾರೀರಕ-ಮಾನಸಿಕ ತಾಪತ್ರಯವು ಸರ್ವೇ ಸಾಧಾರಣ. ಅಪಾಯಗಳಿಗೂ ಶೀತಾಸ್ಪದಕ್ಕೂ ಹೆಚ್ಚು ನಿಗಾ ಕೊಡಿ. ಅಸ್ವಸ್ಥತೆಯು ಕರುಳಿಗೆ ಹೆಚ್ಚು ಸೂಚಿಸುವುದು. ಪ್ರವಾಸಗಳನ್ನು ಆದಷ್ಟು ತ್ಯಜಿಸಿರಿ. ಆರ್ಥಿಕ ಸ್ಥಿತಿಯು ಬಹುಮಟ್ಟಿಗೆ ಸುಧಾರಿಸುವುದು. ಲೇವಾದೇವಿಗಳಲ್ಲಿ ಜಯವಿಲ್ಲ. ಸ್ಥಿರಸ್ವತ್ತುಗಳ ಬಂಡವಾಳದ ಸಮಸ್ಯೆ ಒಟ್ಟಿನಲ್ಲಿ ಸುಖವಿಲ್ಲ. ವಿಚಾರಗೆಟ್ಟ ವ್ಯವಹಾರಗಳಿಗೆ ;ಪ್ರಯೋಜನವಿಲ್ಲದಿದ್ದರೂ ಮೊದಲರ್ಧ ಭಾಗದಲ್ಲಿ ನಿರ್ಧರಿಸಿ. ನೌಕರರಿಗೆ ಪ್ರಗತಿ. ನಿಮಗೆ ವಿರುದ್ಧವಾಗಿರುವ ವಾಗ್ವಾದ ಜಗಳ ಯಾರಲ್ಲೂ ಎಂಥ ಸಂದರ್ಭದಲ್ಲಾದರೂ ತ್ಯಜಿಸಿರಿ. ವ್ಯಾಪಾರ ಮಾಡಲು ದಾರಿಯಿದೆ. ಸಂಸಾರ ಸಾಂಘಿಕ ವರ್ಗಗಳಲ್ಲಿ ಅಸ್ಪಷ್ಟ. ಲೇಖನಗಳು ಮುಂದುವರೆಯಲಾರವು. ೧೩,೧೪,೧೫, ಎಚ್ಚರಿಕೆಯಿಂದಿರಿ. ೨,೩,೧೨,೧೮-೨೦ ಶುಭ ದಿವಸಗಳು.

ವೃಷಭ:—

ಹರಿತವಾದ ಆಯುಧಗಳ ಮೂಲಕದ ಭಯಗಳ ಬಗ್ಗೆ ಹುಷಾರಿರಲಿ. ಅಲ್ಪ ಸ್ವಲ್ಪ ಆರೋಗ್ಯ-ಮಾನಸಿಕ ತೊಂದರೆಗಳುಂಟು. ಆರ್ಥಿಕ ಸ್ಥಿತಿಯು ಚೆನ್ನಾಗಿರದು; ಕಡೆಯರ್ಧ ಭಾಗದಲ್ಲಿ ಸುಧಾರಿಸಿದರೂ ಕೊನೆಯಲ್ಲಿ ಸಮತ್ವ. ವ್ಯವಹಾರಗಳಿಗೇನೇನೂ ಚೆನ್ನಾಗಿಲ್ಲ. ಎಲ್ಲೋ ಸ್ವಲ್ಪ ತೊಂದರೆಗಳಿದ್ದರೂ ನೌಕರರಿಗೆ ಚೆನ್ನಾಗಿದೆ. ವ್ಯಾಪಾರದಲ್ಲಿ ಹೆಚ್ಚು ಶ್ರದ್ಧೆ ಚಟುವಟಿಕೆ ತೋರಿಸಿದರೂ, ಯೋಚಿಸಿದಷ್ಟು ಫಲವಿಲ್ಲ. ಪ್ರಯಾಣಗಳು ತೊಂದರೆ ಕಷ್ಟವಾಗಿ ಪರಿಣಮಿಸುವುವು. ಸಂಸಾರ ಸಾಂಘಿಕ ವಾತಾವರಣದಲ್ಲಿ ಯಶಸ್ಸು. ಲೇಖನಗಳು, ಧಾರ್ಮಿಕ ಕಾರ್ಯಗಳು ಎಣಿಸಿದಷ್ಟಿಲ್ಲ. ೧೫,೧೬,೧೭, ಎಚ್ಚರಿಕೆಯಿಂದಿರಿ. ೨,೪,೧೨,೧೩,೧೮-೨೦, ೨೨,೨೩ ಶುಭ ದಿವಸಗಳು. ೬,೯,೧೬,೨೧,೨೬,೩೦ ಅಶುಭ ದಿವಸಗಳು.

ಮಿಥುನ.

ಆರೋಗ್ಯವು ಚೆನ್ನಾಗಿದ್ದರೂ, ಮನಸ್ಸು ಚಂಚಲತ್ವದಿಂದ ಕೂಡುವುದು. ಹಿಂದಿನ ಮಾನಕ್ಕಿಂತಲೂ ಆರ್ಥಿಕ ಸ್ಥಿತಿಯು ಬ...

ವು. ಸಂಸಾರ ಸಾಂಘಿಕ ವಾತಾವರಣದಲ್ಲಿ ಯಶಸ್ಸು. ಕಡೇ ಪಕ್ಷದಲ್ಲಿ ಖರ್ಚು ಹೆಚ್ಚು. ಆಗಲೂ ಬುದ್ಧಿವಂತರಾದರೆ ಒಳ್ಳೆಯವಕ್ಕೇ ಉಪಯೋಗವಾಗುವುದು. ೨೪,೨೫,೨೬, ಎಚ್ಚರಿಕೆಯಿಂದಿರಿ.

೨,೪,೧೨,೧೩,೧೮,೧೯,೨೦,೨೨,೨೩,೩೧, ಶುಭದಿನಗಳು.

೬,೯,೧೭,೨೧,೨೭,೩೦ ಅಶುಭ ದಿನಗಳು.

ತುಲಾ:-

ಆರೋಗ್ಯವು ಕೆಡದಿದ್ದರೂ ಮನಸ್ಸು ಶಾಂತಿಯಿಲ್ಲದೆ ಅಸ್ವಸ್ಥತೆಯನ್ನು ಸೂಚಿಸುವುದು. ಮೊದಲ ಭಾಗದಲ್ಲೇ ಮಕ್ಕಳ ಆರೋಗ್ಯವು ಕೆಡಬಹುದು. ಗೆಳೆಯರು ಬಂಧುಗಳಲ್ಲಿ ವೈಮನಸ್ಸು. ಆರ್ಥಿಕ ಸ್ಥಿತಿಯು ಅಭಿವೃದ್ಧಿ ತೋರದಿದ್ದರೂ ಒಂದೇ ಮಟ್ಟದಲ್ಲಿರುವುದು. ಸ್ಥಿರವಾದ ಲೇವಾದೇವಿ, ಬಂಡವಾಳದ ಸಮಸ್ಯೆಯು ಯಶಸ್ಸಿನಿಂದ ಕೂಡಿದ್ದರೂ, ಮುಂದಕ್ಕೆ ತಳ್ಳುವುದು. ವ್ಯವಹಾರಗಳಿಗೆ ದೂರವಾಗಿರಿ. ಲಘು ಪ್ರಯಾಣಗಳಿಗುತ್ತಮ. ವ್ಯಾಪಾರ ಉದ್ಯೋಗಗಳು ಒಟ್ಟಿನಲ್ಲಿ ಸರಾಸರಿ ತೋರಿದರೂ, ಕಡೆಯಲ್ಲಿ ಅಭಿವೃದ್ಧಿಯಾಗುವುದು. ನೌಕರರಿಗೆ ಕಡೆಯವಾರ ಚೆನ್ನಾಗಿದೆ, ಖರ್ಚು ಬಾಬಿನ ಸಮಸ್ಯೆಗಳು ತಲೆದೋರುವುವು. ೨೭,೨೮,೨೯ ಎಚ್ಚರಿಕೆಯಿಂದಿರಿ.

೨,೩,೧೨,೧೮,೧೯,೨೨,೨೩ ಶುಭ ದಿನಗಳು. ೪,೬,೯,೧೭,೨೧,೨೭,೨೮,೩೦,೩೧ ಅಶುಭ ದಿನಗಳು.

ವೃಶ್ಚಿಕ:—

ಮಾನಸಿಕ ಶಾಂತಿಯಿರದು. ಸಾಧಾರಣ ಜ್ವರ, ಅಜೀರ್ಣ, ರಕ್ತ ಸಂಬಂಧದ ಖಾಯಿಲೆಗಳೂ ತಲೆ ದೋರಬಹುದು. ಆರ್ಥಿಕ ಸ್ಥಿತಿಯು ಚೆನ್ನಾಗಿಲ್ಲ. ಮುಖ್ಯವಾದ ಬಂಡವಾಳದ ಸಮಸ್ಯೆಗಳಿದ್ದರೆ ತ್ಯಜಿಸಿರಿ. ವ್ಯವಹಾರಗಳಲ್ಲಿ ಎಲ್ಲೋ ಸ್ವಲ್ಪ ಲಾಭ. ಸಂಸಾರ ಸಾಂಘಿಕ ವರ್ಗಗಳಲ್ಲಿ ನಿರೀಕ್ಷಿಸಿದಷ್ಟು ಫಲವಿಲ್ಲ. ಪತ್ನಿಯ ಆರೋಗ್ಯವೂ ಚೆನ್ನಾಗಿರದು. ವ್ಯಾಪಾರ ಉದ್ಯೋಗಗಳಲ್ಲಿ ತೊಂದರೆ ಕಷ್ಟನಷ್ಟಗಳು ತೋರಿದರೂ, ಕಡೆಯಲ್ಲಿ ಬದಲಾವಣೆ ಹೊಂದುವುವು. 'ಕೈಕೆಸರಾದರೆ ಬಾಯಿ ಮೊಸರು,' ಅಂದ ಹಾಗೆ ಆದಾಯ. ಸುಲಭವಾದ ಮಾರ್ಗವಿದ್ದರೂ ತೊಂದರೆಗಳನ್ನನುಭವಿಸಬೇಕು ಸೇವಕರು, ಲೇಖನಗಳು ಸುಗಮವಾಗಿ ನೆರವೇರುವುವು. ಪ್ರವಾಸಗಳನ್ನು ತ್ಯಜಿಸಿರಿ. ೨೯, ೩೦,೩೧, ಎಚ್ಚರಿಕೆಯಿಂದಿರಿ.

೨,೩,೧೨,೧೩,೧೮,೨೦,೨೨,೨೩ ಶುಭದಿನಗಳು. ೪,೬,೯,೧೭,೨೧,೨೭,೩೧ ಅಶುಭದಿನಗಳು.

ಧನಸ್ಸು:—

ನಿಮ್ಮ ಆರೋಗ್ಯವು ಚೆನ್ನಾಗಿದ್ದರೂ, ಪತ್ನಿಯ ಆರೋಗ್ಯಕ್ಕೆ ನಿಗಾ ಕೊಡಿ. ಹಿಂದಿನ ತಿಂಗಳಿಗಿಂತಲೂ ಈ ಮಾಸ ಕಷ್ಟದಾಯಕ. ಆರ್ಥಿಕ ಸ್ಥಿತಿಯು ಒಳ್ಳೇ ಭರದಲ್ಲಿರುವುದು. ಲೇವಾದೇವಿ ಬಂಡವಾಳದ ಸಮಸ್ಯೆ ಚೆನ್ನಾಗಿ ನೆರವೇರುವುದು. ವ್ಯವಹಾರಗಳಿಗೆ ಮಾತ್ರ ಚೆನ್ನಾಗಿಲ್ಲ. ಸಂಸಾರ ಸಾಂಘಿಕ ವಾತಾವರಣದಲ್ಲಿ ಅಷ್ಟು ಯಶಸ್ಸು ಎಂದು ಹೇಳಲಾಗುವುದಿಲ್ಲ. ಮನಸ್ತಾಪ, ಜಗಳ ಆದಷ್ಟು ತಡೆಯಿರಿ. ಕೋರ್ಟು ವ್ಯವಹಾರ

ಮುಟ್ಟಿಗೆ ಸುಧಾರಿಸುವುದು. ಲೇವಾದೇವಿ ಬಂಡವಾಳದ ಸಮಸ್ಯೆಯನ್ನು ಇನ್ನೂ ಮುಂದಕ್ಕೆ ತಳ್ಳುವುದು ಉತ್ತಮ. ಹುಷಾರಿನಿಂದ ವ್ಯವಹಾರಗಳನ್ನು ಹೂಡಿದರೆ ಸ್ವಲ್ಪ ಲಾಭದಾಯಕ. ನೌಕರರ ಕಾರ್ಯಗಳು ಫಲಕಾರಿಯಾಗುವುವು. ಸಂಸಾರ ಸಾಂಘಿಕ ಪಾಲುಗಾರಿಕೆಯಲ್ಲಿ ಯಶಸ್ಸು. ವ್ಯಾಪಾರ ಚೆನ್ನಾಗಿದ್ದರೂ ಪ್ರತಿಫಲ ಕಡಿಮೆ. ಖರ್ಚು ಬಾಬುಗಳಲ್ಲಿ ಎಚ್ಚರಿಕೆ. ಪ್ರವಾಸಗಳಿಗೆ ಚೆನ್ನಾಗಿಲ್ಲ. ೧೮,೧೯,೨೦ ಎಚ್ಚರಿಕೆಯಿಂದಿರಿ.

೨,೩,೧೨,೧೩,೨೨,೨೩ ಶುಭ ದಿನಗಳು.

೪,೬,೭,೯,೧೭,೨೪,೨೭,೩೦,೩೧ ಅಶುಭ ದಿನಗಳು.

ಕಟಕ

ಮೊದಲರ್ಧ ಭಾಗದಲ್ಲೇ ಎಲ್ಲಾ ಕೆಲಸಗಳನ್ನು ಮುಗಿಸಿರಿ. ನಿಮ್ಮ ಆರೋಗ್ಯವು ಎಲ್ಲೋ ಸ್ವಲ್ಪ ಸುಧಾರಿಸಿದ್ದರೂ ಪತ್ನಿಯ ಆರೋಗ್ಯವು [illegible]

[illegible]

ಸಿಂಹ

[illegible] ಸಿಕ ತೊಂದರೆಗಳಿಂದ ಶಾಂತಿಯಿರದು. ಆರ್ಥಿಕ ಸ್ಥಿತಿಯು ಚೆನ್ನಾಗಿರದು. ಬಂಡವಾಳ ಲೇವಾದೇವಿಗಳಲ್ಲಿ ಹುಷಾರಿನಿಂದ ವರ್ತಿಸಿರಿ: ಜಾಮೀನು ಪಡೆಯುವುದು ಒಳ್ಳೆಯದಲ್ಲ. ಸಂಸಾರದಲ್ಲಿ ವೈಮನಸ್ಸು: ಪತ್ನಿಯ ಅಸ್ವಸ್ಥತೆ, ಲೇಖನ, ಧಾರ್ಮಿಕ, ಪಾರಮಾರ್ಥಿಕಗಳಲ್ಲಿ ಮುಂದುವರಿಯುವುದು. ಪ್ರತಿಯೊಂದು ಮೆಟ್ಟಿಲಲ್ಲೂ ತೊಂದರೆ. ವ್ಯಾಪಾರದ ಬಡಾವಣೆಯು ಸ್ವಲ್ಪ. ಮೇಲಧಿಕಾರಿಗಳ ಅಸಂತೋಷ, ಸಹೋದ್ಯೋಗಿಗಳ ಕಿತ್ತಾಟದಿಂದ ಎಚ್ಚರಿಕೆ. ಒಟ್ಟಿನಲ್ಲಿ ಬಂಧುಗಳಿಂದ ತೊಂದರೆ, ಕಷ್ಟವಾದ ಪ್ರವಾಸ, ಮಿತ್ರರಲ್ಲಿ ತಪ್ಪು ಭಾವನೆ, ತಪ್ಪು ತಿಳುವಳಿಕೆ ಉಂಟಾಗುವುದು. ೨೨, ೨೩, ೨೪ ಎಚ್ಚರಿಕೆಯಿಂದಿರಿ.

೨,೬,೧೨,೧೮,೨೦ ಶುಭ ದಿನಗಳು.

೪,೬,೯,೧೭,೨೧, ೨೭, ೩೦, ೩೧ ಅಶುಭ ದಿನಗಳು.

ಕನ್ಯಾ

ಮೊದಲರ್ಧಭಾಗದಲ್ಲಿ ಹಿಂದಿನ ಮಾಸಕ್ಕಿಂತ ಚೆನ್ನಾಗಿದೆ. ಆರೋಗ್ಯವು ಅಲ್ಲಿಯವರೆಗೆ ಚೆನ್ನಾಗಿರುವುದು. ಆರ್ಥಿಕ ಸ್ಥಿತಿಯು ಸುಧಾರಿಸುವುದು: [illegible] ವ್ಯಾಪಾರ [illegible] ವು. ಸಂಸಾರ ಸಾಂಘಿಕ ವಾತಾವರಣದಲ್ಲಿ ಯಶಸ್ಸು. ಕಡೇ ಪಕ್ಷದಲ್ಲಿ ಖರ್ಚು ಹೆಚ್ಚು. ಆಗಲೂ ಬುದ್ಧಿವಂತರಾದರೆ ಒಳ್ಳೆಯವಕ್ಕೇ ಉಪಯೋಗವಾಗುವುದು. ೨೪,೨೫,೨೬, ಎಚ್ಚರಿಕೆಯಿಂದಿರಿ.

೨,೪,೧೨,೧೩,೧೮,೧೯,೨೦,೨೨,೨೩,೩೧, ಶುಭದಿನಗಳು.

೬,೯,೧೭,೨೧,೨೭,೩೦ ಅಶುಭ ದಿನಗಳು.

ತುಲಾ:-

ಆರೋಗ್ಯವು ಕೆಡದಿದ್ದರೂ ಮನಸ್ಸು ಶಾಂತಿಯಿಲ್ಲದೆ ಅಸ್ವಸ್ಥತೆಯನ್ನು ಸೂಚಿಸುವುದು. ಮೊದಲ ಭಾಗದಲ್ಲೇ ಮಕ್ಕಳ ಆರೋಗ್ಯವು ಕೆಡಬಹುದು. ಗೆಳೆಯರು ಬಂಧುಗಳಲ್ಲಿ ವೈಮನಸ್ಸು. ಆರ್ಥಿಕ ಸ್ಥಿತಿಯು ಅಭಿವೃದ್ಧಿ ತೋರದಿದ್ದರೂ ಒಂದೇ ಮಟ್ಟದಲ್ಲಿರುವುದು. ಸ್ಥಿರವಾದ ಲೇವಾದೇವಿ, ಬಂಡವಾಳದ ಸಮಸ್ಯೆಯು ಯಶಸ್ಸಿನಿಂದ ಕೂಡಿದ್ದರೂ, ಮುಂದಕ್ಕೆ ತಳ್ಳುವುದು. ವ್ಯವಹಾರಗಳಿಗೆ ದೂರವಾಗಿರಿ. ಲಘು ಪ್ರಯಾಣಗಳಿಗುತ್ತಮ. ವ್ಯಾಪಾರ ಉದ್ಯೋಗಗಳು ಒಟ್ಟಿನಲ್ಲಿ ಸರಾಸರಿ ತೋರಿದರೂ, ಕಡೆಯಲ್ಲಿ ಅಭಿವೃದ್ಧಿಯಾಗುವುದು. ನೌಕರರಿಗೆ ಕಡೆಯವಾರ ಚೆನ್ನಾಗಿದೆ, ಖರ್ಚು ಬಾಬಿನ ಸಮಸ್ಯೆಗಳು ತಲೆದೋರುವುವು. ೨೭,೨೮,೨೯ ಎಚ್ಚರಿಕೆಯಿಂದಿರಿ.

೨,೩,೧೨,೧೮,೧೯,೨೨,೨೩ ಶುಭ ದಿನಗಳು.

೪,೬,೯,೧೭,೨೧,೨೭,೨೮,೩೦,೩೧ ಅಶುಭ ದಿನಗಳು.

ವೃಶ್ಚಿಕ:—

ಮಾನಸಿಕ ಶಾಂತಿಯಿರದು. ಸಾಧಾರಣ ಜ್ವರ, ಅಜೀರ್ಣ, ರಕ್ತ ಸಂಬಂಧದ ಖಾಯಿಲೆಗಳೂ ತಲೆ ದೋರಬಹುದು. ಆರ್ಥಿಕ ಸ್ಥಿತಿಯು ಚೆನ್ನಾಗಿಲ್ಲ. ಮುಖ್ಯವಾದ ಬಂಡವಾಳದ ಸಮಸ್ಯೆಗಳಿದ್ದರೆ ತ್ಯಜಿಸಿರಿ. ವ್ಯವಹಾರಗಳಲ್ಲಿ ಎಲ್ಲೋ ಸ್ವಲ್ಪ ಲಾಭ. ಸಂಸಾರ ಸಾಂಘಿಕ ವರ್ಗಗಳಲ್ಲಿ ನಿರೀಕ್ಷಿಸಿದಷ್ಟು ಫಲವಿಲ್ಲ. ಪತ್ನಿಯ ಆರೋಗ್ಯವೂ ಚೆನ್ನಾಗಿರದು. ವ್ಯಾಪಾರ ಉದ್ಯೋಗಗಳಲ್ಲಿ ತೊಂದರೆ ಕಷ್ಟನಷ್ಟಗಳು ತೋರಿದರೂ, ಕಡೆಯಲ್ಲಿ ಬದಲಾವಣೆ ಹೊಂದುವುವು. 'ಕೈಕೆಸರಾದರೆ ಬಾಯಿ ಮೊಸರು,' ಅಂದ ಹಾಗೆ ಆದಾಯ. ಸುಲಭವಾದ ಮಾರ್ಗವಿದ್ದರೂ ತೊಂದರೆಗಳನ್ನನುಭವಿಸಬೇಕು. ಸೇವಕರು, ಲೇಖನಗಳು ಸುಗಮವಾಗಿ ನೆರವೇರುವುವು. ಪ್ರವಾಸಗಳನ್ನು ತ್ಯಜಿಸಿರಿ. ೨೯, ೩೦,೩೧, ಎಚ್ಚರಿಕೆಯಿಂದಿರಿ.

೨,೩,೧೨,೧೩,೧೮,೨೦,೨೨,೨೩ ಶುಭದಿನಗಳು. ೪,೬,೯,೧೭,೨೧,೨೭,೩೧ ಅಶುಭದಿನಗಳು.

ಧನಸ್ಸು:—

ನಿಮ್ಮ ಆರೋಗ್ಯವು ಚೆನ್ನಾಗಿದ್ದರೂ, ಪತ್ನಿಯ ಆರೋಗ್ಯಕ್ಕೆ ನಿಗಾ ಕೊಡಿ. ಹಿಂದಿನ ತಿಂಗಳಿಗಿಂತಲೂ ಈ ಮಾಸ ಕಷ್ಟದಾಯಕ. ಆರ್ಥಿಕ ಸ್ಥಿತಿಯು ಒಳ್ಳೇ ಭರದಲ್ಲಿರುವುದು. ಲೇವಾದೇವಿ ಬಂಡವಾಳದ ಸಮಸ್ಯೆ ಚೆನ್ನಾಗಿ ನೆರವೇರುವುದು. ವ್ಯವಹಾರಗಳಿಗೆ ಮಾತ್ರ ಚೆನ್ನಾಗಿಲ್ಲ. ಸಂಸಾರ ಸಾಂಘಿಕ ವಾತಾವರಣದಲ್ಲಿ ಅಷ್ಟು ಯಶಸ್ಸು ಎಂದು ಹೇಳಲಾಗುವುದಿಲ್ಲ. ಮನಸ್ತಾಪ, ಜಗಳ ಆದಷ್ಟು ತಡೆಯಿರಿ. ಕೋರ್ಟು ವ್ಯವಹಾರಗ

ಮಟ್ಟಿಗೆ ಸುಧಾರಿಸುವುದು. ಲೇವಾದೇವಿ ಬಂಡವಾಳದ ಸಮಸ್ಯೆಯನ್ನು ಇನ್ನೂ ಮುಂದಕ್ಕೆ ತಳ್ಳುವುದು ಉತ್ತಮ. ಹುಷಾರಿನಿಂದ ವ್ಯವಹಾರಗಳನ್ನು ಹೂಡಿದರೆ ಸ್ವಲ್ಪ ಲಾಭದಾಯಕ. ನೌಕರರ ಕಾರ್ಯಗಳು ಫಲರೂಪವಾಗುವುವು. ಸಂಸಾರ ಸಾಂಘಿಕ ಪಾಲುಗಾರಿಕೆಯಲ್ಲಿ ಯಶಸ್ಸು. ವ್ಯಾಪಾರ ಚೆನ್ನಾಗಿದ್ದರೂ ಪ್ರತಿಫಲ ಕಡಿಮೆ. ಖರ್ಚಿನ ಬಾಬುಗಳಲ್ಲಿ ಎಚ್ಚರಿಕೆ. ಪ್ರವಾಸಗಳಿಗೆ ಚೆನ್ನಾಗಿಲ್ಲ. [illegible] ಎಚ್ಚರಿಕೆಯಿಂದಿರಿ.

[illegible] ಶುಭ ದಿನಗಳು.

[illegible] ಅಶುಭ ದಿನಗಳು.

ಕಟಕ

[illegible]

ಸಿಂಹ

[illegible]

ಸಿಕ ತೊಂದರೆಗಳಿಂದ ಶಾಂತಿಯಿರದು. ಆರ್ಥಿಕ ಸ್ಥಿತಿಯು ಚೆನ್ನಾಗಿರದು. ಬಂಡವಾಳ ಲೇವಾದೇವಿಗಳಲ್ಲಿ ಹುಷಾರಿನಿಂದ ವರ್ತಿಸಿರಿ: ಜಾಮೀನು ಪಡೆಯುವುದು ಒಳ್ಳೆಯದಲ್ಲ. ಸಂಸಾರದಲ್ಲಿ ವೈಮನಸ್ಸು: ಪತ್ನಿಯ ಅಸ್ವಸ್ಥತೆ, ಲೇಖನ, ಧಾರ್ಮಿಕ, ಪಾರಮಾರ್ಥಿಕಗಳಲ್ಲಿ ಮುಂದುವರಿಯುವುದು. ಪ್ರತಿಯೊಂದು ಮೆಟ್ಟಿಲಲ್ಲೂ ತೊಂದರೆ. ವ್ಯಾಪಾರದ ಬಡಾವಣೆಯು ಸ್ವಲ್ಪ. ಮೇಲಧಿಕಾರಿಗಳ ಅಸಂತೋಷ, ಸಹೋದ್ಯೋಗಿಗಳ ಕುತ್ಸಿತ್ಸದಿಂದ ಎಚ್ಚರಿಕೆ. ಒಟ್ಟಿನಲ್ಲಿ ಬಂಧುಗಳಿಂದ ತೊಂದರೆ, ಕಷ್ಟವಾದ ಪ್ರವಾಸ, ಮಿತ್ರರಲ್ಲಿ ಕಳ್ಳಭಾವನೆ, ತಪ್ಪು ತಿಳವಳಿಕೆ ಕಾಣಿಸುವುವು. [illegible] ಎಚ್ಚರಿಕೆಯಿಂದಿರಿ.

[illegible] ಶುಭ ದಿನಗಳು.

[illegible] ಅಶುಭ ದಿನಗಳು.

ಕನ್ಯಾ

[illegible]

[illegible]

ತುಲಾ:-

[illegible]

[illegible] ಶುಭ ದಿನಗಳು.

[illegible] ಅಶುಭ [illegible]

[illegible]

ಧನಸ್ಸು:-

[illegible]

ಈ ಸಲದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು,

ಸುಪ್ರಸಿದ್ಧ ಕತೆಗಾರರು, ಉತ್ತಮ ನಾಟಕಕಾರರು, ಮಹಾ ವಾಗ್ಮಿಗಳು ಭಾಸ ಕಾಳಿದಾಸ ಮೊದಲಾದ ಮಹಾ ಕವಿಗಳನ್ನು ಕುರಿತು ಅಧಿಕಾರವಾಣಿಯಿಂದ ಮಾತನಾಡಬಲ್ಲಂಥ ಶ್ರೇಷ್ಠ ಪಂಡಿತರು, ಎಲ್ಲಕ್ಕೂ ಮಿಗಿಲಾಗಿ ಸರಳ ಹೃದಯರು, ಸದ್ಗುಣ ಸಂಪನ್ನರು, ಆದ ಶ್ರೀ ಸಿ. ಕೆ. ವೆಂಗಟರಾಮಯ್ಯ ಎಂ. ಎ., ಎಲ್. ಎಲ್. ಬಿ. ಅವರೇ ಈ ಸಲ ಹರಪನ ಹಳ್ಳಿಯಲ್ಲಿ ಇದೇ ವರ್ಷದ ಏಪ್ರಿಲ್ ಕಡೆಯ ವಾರದಲ್ಲಿ ನಡೆಯಲಿರುವ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಬಹುಮತದಿಂದ ಆರಿಸಿ ಬಂದಿದ್ದಾರೆ. ಅವರಿಗೆ ಸುಸ್ವಾಗತ.

ತಿಳಿನಗೆಯ ಮಾಸಪತ್ರಿಕೆ

ಮಯೂರ

ಬಿಡಿ ಪತ್ರಿಕೆ ೦-೩-೦
ವಾರ್ಷಿಕ ೨-೮-೦

ಇಂದೇ ಚಂದಾದಾರರಾಗಿರಿ.

ಏಜೆಂಟರಿಲ್ಲದೆಡೆ ಏಜೆಂಟರು ಬೇಕು.

ಮಯೂರ ಪಬ್ಲಿಕೇಷನ್ಸ್

೫೫|೧, ಮಾವಳ್ಳಿ, ಬೆಂಗಳೂರು ನಗರ.

ಸಾದರ ಸ್ವೀಕಾರ.

೧. ಛಾಯಾ ವಿಶೇಷ ಸಂಚಿಕೆ.
೨. ಮದ್ರಾಸು ಸಮಾಚಾರ, ಪಕ್ಷಪತ್ರಿಕೆ. ಮದರಾಸ್,
೩. ನಾಗರಿಕ, ವಾರಪತ್ರಿಕೆ. ಕಲ್ಬುರ್ಗಿ.

—

ಹೊದಿಕೆ ಚಿತ್ರ:—ಕಮಲಾ ನೆಹರು, ಸಿ. ಕೆ. ವೆಂಕಟರಾಮಯ್ಯನವರ ಪಡಿಯಚ್ಚುಗಳು ವಿಶ್ವಕರ್ಣಾಟಕದ ಕೃಪೆಯಿಂದ, ಡಾ॥ ನಾ. ಸು. ಹರ್ಡೀಕರ್. ಪಡಿಯಚ್ಚು ಪೌರವಾಣಿಯ ಕೃಪೆಯಿಂದ

ದಿವ್ಯಜ್ಯೋತಿ

ಬ್ರಹ್ಮವಿದ್ಯಾ ಸಮಾಜ ಮತ್ತು ಜಗದ್ಗುರುಸೇವಾ ಸಂಘಗಳ
ಕರ್ನಾಟಕ ಶಾಖೆಯಿಂದ ಹೊರಡುವ
ಮಾಸಪತ್ರಿಕೆ

ಸಂಪಾದಕ:—ಕೆ. ವೆಂಕಟರಾಮಯ್ಯ

Vol. II] ಮೇ 1929 [Nos. 8.
[New Series]

ವಿಷಯ ಸೂಚಿಕೆ

- ಜೀವಮಾನ (ಚೇತನ) ನದಿಯ ಪ್ರವಾಹ ೧.
- ಭಾವಿನಾಡಿನವರ ಬಿನ್ನಹ ೯.
- ಕರ್ನಾಟಕ ಥಿಯಸಾಫಿಕಲ್ ಫೆಡರೇಷನ್ ೧೯.
- ಶಾಂತಿ ೨೬.
- Order of the Star in the East 30.
- Karnataka Star Conference Hassan. 33.

ಕಾರ್ಯಾಲಯ:—
ಕೃಷ್ಣರಾಜೇಂದ್ರ ರೋಡ್, ಬಸವನಗುಡಿ, ಬೆಂಗಳೂರು.
ವಾರ್ಷಿಕ ಚಂದಾ ಹಾಸಲು ಸಹಿತ ೧ ರೂಪಾಯಿ.

V. S. Press, Bangalore City.

THE THEOSOPHICAL SOCIETY

ಬ್ರಹ್ಮವಿದ್ಯಾ ಸಮಾಜ

ಈ ಸಮಾಜದವರು ಸತ್ಯಾನ್ವೇಷಣಪರರಾಗಿ ಮಾನವಕೋಟಿಗೆ ಆಧ್ಯಾತ್ಮಿಕ ಮಾರ್ಗವನ್ನು ತೋರಿಸುವ [illegible] ಲೋಕದಲ್ಲಿ ಅಧರ್ಮಪ್ರವೃತ್ತಿಯನ್ನು ನೀಗಿಸಿ, ಧರ್ಮಪ್ರವೃತ್ತಿಯನ್ನು ಹೆಚ್ಚುಮಾಡಲು ಪ್ರಯತ್ನಿಸುವರು.

ಈ ಸಮಾಜದ ಮುಖ್ಯೋದ್ದೇಶಗಳೇನೆಂದರೆ:—

೧. ಮನುಷ್ಯವರ್ಗದಲ್ಲಿ [illegible] ಜಾತಿ, ಮತ, ಲಿಂಗ, [illegible] ಭೇದಗಳನ್ನು ಗಣಿಸದೆ [illegible] ಭ್ರಾತೃಭಾವವನ್ನುಂಟು ಮಾಡುವುದು.

೨. [illegible]

೩. [illegible]

[illegible]

Joint Secretary,
Karnataka Theosophical Federation
[illegible] BANGALORE.

ದಿವ್ಯಜ್ಯೋತಿ

[Vol. II New Series | ಮೇ 1929 | [Nos. 8.

ಜೀವಮಾನ (ಚೇತನ) ನದಿಯ ಪ್ರವಾಹ

THE RIVER OF LIFE

(BY MR. J. KRISHNAMURTI)

ಜೀವಮಾನದ ಗತಿಯನ್ನು ಒಂದು ನದಿಯ ಪ್ರವಾಹಕ್ಕೆ ಹೋಲಿಸಬಹುದು. ಅಪಾರವಾದ ಸಮುದ್ರವನ್ನು ಸೇರಬೇಕೆಂಬ ಕುತೂಹಲದಿಂದ ಸಮೀಪದ ದಾರಿಯನ್ನು ಹುಡುಕಿಕೊಂಡು ವೇಗವಾಗಿ ಹರಿಯುತ್ತಿರುವ ನದಿಯ ಪ್ರವಾಹದಲ್ಲಿ ಅನೇಕವೇಳೆ ಅಲ್ಲಲ್ಲಿ ನಿಂತ ನೀರಿನ ಹಳ್ಳಗಳು ಏರ್ಪಡುವುವಷ್ಟೆ. ಅವು ಪುನಃ ಮುಂದಿನ ವರ್ಷಾಕಾಲದಲ್ಲಿ ಮಳೆಯುಬಂದು, ಅದನ್ನು ಕೊಚ್ಚಿತಂದು ನದಿಯ ಮುಖ್ಯ ಪ್ರವಾಹದಲ್ಲಿ ಸೇರಿಸುವವರೆಗೂ ಆ ನಿಂತನೀರು ಅಲ್ಲಿಯೇ ನಿಂತಲ್ಲಿಯೇ ನಿಂತಿರುವುದು. ಜೀವಮಾನದ ಗತಿಯು ನನಗೆ ಆ ನದಿಯ ಪ್ರವಾಹದಂತೆ ಕಾಣುವುದು. ನೀವು ಏರ್ಪಡಿಸಿಕೊಂಡಿರುವ ನಿರ್ಜೀವವಾದ ನಂಬಿಕೆಗಳು, ನಿಮ್ಮ ಕರ್ಮಗಳು, ಮಾನವನ ಅಭ್ಯುದಯಕ್ಕೆ ಅನವಶ್ಯಕವಾದ ನೀವು ಮಾಡುವ ಕೆಲಸಗಳು ಇವೆಲ್ಲವೂ ಪ್ರವಾಹದ ಪಕ್ಕದಲ್ಲಿರುವ ನಿಂತ ನೀರಿನ ಹಳ್ಳಗಳಂತೆ ಸೇರುವುವು. ಅಂತಹ ನಿಂತ ನೀರಿನ ಹಳ್ಳಗಳಲ್ಲಿ ಜೀವಿಸುತ್ತಿರುವುದಕ್ಕಿಂತಲೂ, ಜೀವಮಾನದ ಪ್ರವಾಹದಲ್ಲಿಳಿದು, ಮೋಕ್ಷಾನಂದ ಸಾಗರದ ಕಡೆಗೆ ಈಜ

ಕೊಂಡು ಹೋಗುವುದು ಹೆಚ್ಚು ಸುಲಭವಾದುದೆಂದೂ, ಹೆಚ್ಚು ತ್ವರೆಯುಳ್ಳದೆಂದೂ ನಾನು ಸ್ಥಿರಗೊಳಿಸಿ ಕೊಂಡಿರುವೆನು.

ಬೇಟೆಗಾರನು ಕಾಡಿನಲ್ಲಿ ಸ್ವತಂತ್ರವಾಗಿ ಸ್ವೇಚ್ಛೆಯಿಂದ ಇರುವ ಮೃಗವನ್ನು ಹಿಡಿದುತಂದು, ಪಂಜರದಲ್ಲಿಟ್ಟು, ಪಳಗಿಸಿ, ಸಾಧುಗೊಳಿಸಿ, ಅದರಿಂದ ತಾನು ಅದರ ಅಭಿವೃದ್ಧಿಗೆ ಸಹಾಯಮಾಡಿದಂತೆ ನೆನೆಸ ಬಹುದು. ಪಂಜರದ ಒಳಗಡೆಯಲ್ಲಿ ಅದು ಎಷ್ಟೇ ತಿರುಗುತ್ತಿದ್ದರೂ ಅದು ಸೆರೆಯ ಗೂಡಿನ ಬಂಧನದಲ್ಲಿದ್ದುಕೊಂಡು ಅಲ್ಲಿಯೇ ಸುತ್ತಾಡಿಕೊಂಡು ಇರುವುದು. ಅದು ಎಷ್ಟು ತಿರುಗಿದರೂ ಪಂಜರದೊಳಗೆಯೇ ಸುತ್ತುತ್ತಿರುವುದು. ನಿಶ್ಚಿತ ಲಕ್ಷ್ಯವನ್ನು ನೋಡದೆಯೆ, ಸುಮ್ಮನೆ ಕಣ್ಣುಮುಚ್ಚಿಕೊಂಡು ಪರ್ಯಟಿಸುವುದು ನಿರರ್ಥಕವು. ಜೀವಮಾನದ ಉದ್ದೇಶವನ್ನು ಅರಿಯದೆ ವರ್ತಿಸುವ ಮನುಷ್ಯನು ಪಂಜರದಲ್ಲಿನ ಮೃಗದಂತೆ ಸಿಕ್ಕಿಬಿದ್ದಿರುವನು.

ಲೋಕದಲ್ಲಿ ಅನೇಕ ಜನರು ತಮ್ಮ ಸುತ್ತಲು [illegible]

ವೇಗವಾದ ಚೇತನ (ಜೀವಮಾನದ) ಪ್ರವಾಹದಲ್ಲಿ ನೀವು ಈಜಿ ಆನಂದ ಸಮುದ್ರವನ್ನು ಸೇರಬೇಕೆಂದು ಎಳೆಸುವುದಾದರೆ, ನಿಮ್ಮ ಜೀವನವನ್ನು ನಂಬಿಗೆಗಳ ಬಂಧನಕ್ಕೆ ಸಿಕ್ಕಿಸದಿರಿ ; ಸರಿಯಾದ ವಿಚಾರಕ್ಕೆ ಒಳಗೊಳಿಸಿರಿ. ಉದಾರಚರಿತರಾಗಬೇಕೆಂದು ಬಯಸಿ, ಪ್ರಮಾಣಗಳನ್ನು ನಂಬಬೇಕೆಂದು ಯಾವಾಗ ಏರ್ಪಡಿಸಿಕೊಳ್ಳುವಿರೋ ಆಗ ನಿಮ್ಮ ಜೀವಮಾನವು ತೊಡಕುಗಳಿಗೆ ಸಿಕ್ಕಿಬೀಳುವುದು. ಏಕೆಂದರೆ ಆಗ ನೀವು ಕೆಲವು ಹೊರ ನಿಯಮಗಳನ್ನು ಅನುಸರಿಸಲೇ ಬೇಕಾಗುವುದು. ಕೆಲವು ಕರ್ಮಗಳನ್ನು ಮಾಡಿಯೇ ತೀರಬೇಕಾಗುವುದು, ಕೆಲವು ದೇವರುಗಳನ್ನು ಪೂಜಿಸಲೇಬೇಕಾಗುವುದು. ಮತ್ತು ಅವುಗಳ ಆಜ್ಞಾನುಸಾರ ನಡೆಸಲೇ ಬೇಕಾಗುವುದು. ಉದಾಹರಣೆಯಾಗಿ ನಿರ್ವಾಣವನ್ನಾಗಲಿ ಸ್ವರ್ಗವನ್ನಾಗಲಿ ತೆಗೆದುಕೊಳ್ಳೋಣ. ಅದನ್ನು ನೀವು ಹೊಂದಬೇಕಾದರೆ ನೀವು ಕೆಲವು ಕೆಲಸಗಳನ್ನು ಮಾಡಬೇಕೆಂಬುವುದು, ಅಥವ ಕೆಲವು ಕೆಲಸಗಳನ್ನು ಮಾಡಕೂಡದೆಂಬುವುದು ಕಡ್ಡಾಯವಾಗುವುದು. ಶುದ್ಧವಾಗಿ ನಿಮಗೆ ಏನೂ ತಿಳಿಯದಿರುವ ಯಾವುದೋ ಒಂದರಲ್ಲಿ ನಂಬಿಗೆಯನ್ನು ಹುಟ್ಟಿಸಿಕೊಂಡು, ಬಳಿಕ ಆ ಬರಿಯ ನಂಬಿಗೆಯನ್ನೇ ಆಧಾರಮಾಡಿಕೊಂಡು, ಅದರ ಮೇಲೆ ಎಲ್ಲಕೆಲಸಗಳನ್ನೂ ಮಾಡತೊಡಗುವಿರಿ. ಹಾಗೆ ಬರಿಯ ನಂಬಿಗೆಯನ್ನು ಆಧಾರಮಾಡಿಕೊಂಡು ವರ್ತಿಸದೆ, ಉದಾರಚರಿತರಾಗಿ ನೀವು ವರ್ತಿಸಿದಲ್ಲಿ ನಿಸ್ಸಂಶಯವಾಗಿಯೂ ನೀವು ನಿಮ್ಮ ಸ್ವರ್ಗ ಅಥವಾ ನಿರ್ವಾಣವನ್ನು ಏರ್ಪಡಿಸಿಕೊಳ್ಳುವಿರಿ. ಸಿದ್ಧಾಂತಗಳನ್ನೂ ನಂಬಿಗೆಗಳನ್ನೂ ಹೆಚ್ಚು ಮಾಡಿಕೊಳ್ಳುವುದಕ್ಕಿಂತಲೂ; ಜೀವನೋದ್ದೇಶವನ್ನು ಸಫಲಕಾರಿಯಾಗುವಂತೆ ಮಾಡತಕ್ಕದ್ದು ನಿಜವಾಗಿಯೂ ಹೆಚ್ಚು ಮುಖ್ಯವಾದದ್ದು.

ಲೋಕದಲ್ಲಿ ಜನರೆಲ್ಲರೂ ಬಯಸುವುದೇನು? ಆನಂದವನ್ನು. ಎಂತಹ ಆನಂದ? ಯಾವುದೊಂದು ಪ್ರಮಾಣದ ಮೇಲೂ ಆಧಾರವಾಗಿ ನಿಲ್ಲದಿರುವ ಆನಂದವು. ಯಾವ ಪ್ರಮಾಣವು? ದೇವತಾ ಪ್ರಮಾಣ ಅಥವಾ ಶಾಸ್ತ್ರ ಪ್ರಮಾಣ. ಅವರು ಆನಂದವನ್ನು ನೆಟ್ಟಗೆ ಸಾಕ್ಷಾತ್ತಾಗಿ ಹುಡುಕದೆ, ನಂಬಿಗೆಗೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಡುವರು. ಆದ್ದರಿಂದ ಅವರು ನಿಜವಾದ ದಾರಿತಪ್ಪಿ ಅಡ್ಡದಾರಿಗಳಲ್ಲಿರುವ ದೇವಸ್ಥಾನಗಳಲ್ಲಿ

ಹೋಗಿ ಸಿಕ್ಕಿಕೊಂಡಿರುವರು. ನೀವು ಒಂದು ಬೆಟ್ಟವನ್ನು ಹತ್ತಬೇಕೆಂದು ಬಯಸಿ ಹೊರಟರೆ, ದಾರಿಯಲ್ಲಿ ಅನೇಕ ವಿಶ್ರಾಂತಿ ಸ್ಥಾನಗಳಿರುವುದನ್ನು ಕಾಣಬಹುದು. ಅದರಲ್ಲಿ ಒಂದೊಂದರಲ್ಲೂ ನೀವು ಶ್ರದ್ಧಾಭಕ್ತಿಯಿಂದ ನಿಮ್ಮ ಭಕ್ತಿವಿಶೇಷವನ್ನು ತೋರಿಸಿ, ಬಳಿಕ ನೀವು ಮುಂದರಿಯಬೇಕೆಂಬ ಒಂದೊಂದು ದೇವತಾವಿಶೇಷವಿರುವುದು. ಅಲ್ಲಿನ ಅರ್ಚಕರು ನೀವು ಹೀಗೆ ಮಾಡಲೇ ಬೇಕು, ಆ ದಾರಿಯಲ್ಲೇ ನಡೆಯಬೇಕು ಎಂದು ವಿಧಾಯಕ ಮಾಡುವರು. ಭಗ್ನಾವಶದಿಂದಲೋ, ಇಲ್ಲವೆ ದುಃಖಾನುಭವದಿಂದ ಸಾಕಾಗಿಯೋ ಆ ಗುಡಿಯನ್ನು ಬಿಟ್ಟು ಹೊರಬರುವ ಸಂದರ್ಭ ಒದಗಬಹುದು. ಆದರೆ ಆ ಗುಡಿಯನ್ನು ಬಿಟ್ಟು ಹೊರಗೆ ಬಂದೊಡನೆಯೇ ಮುಂದಿನ ಗುಡಿ ಸಿಗುವುದು. ಅದರಲ್ಲಿ ಪ್ರವೇಶಿಸುವಿರಿ. ಹೀಗೆಯೇ ನಡೆದು ಹೋಗುತ್ತಿರುವುದು. ಏಕೆಂದರೆ ಜೀವಿತವನ್ನು ತಿಳಿವು ಮತ್ತು ಆಲೋಚನೆಗಳಿಗೆ [illegible]. ಹಾಗೆ ಮಾಡದೆ ಜೀವನವನ್ನು ಆಲೋಚನೆ ಮತ್ತು ತಿಳಿವಳಿಕೆಗಳಿಗೆ ಅಧೀನ ಪಡಿಸಿದ್ದಾದರೆ ಮೋಕ್ಷವನ್ನು [illegible].

[illegible]

ಬೆಳಕಿಗೆ ಇದಿರಾಗಿ ಹೊರ ಹೊರಡುವಂತೆ, ಪ್ರತಿಯೊಬ್ಬ ಮನುಷ್ಯನಲ್ಲಿಯೂ ಸ್ವಾತಂತ್ರ್ಯವನ್ನೂ ಮೋಕ್ಷವನ್ನೂ ಹೊಂದಬೇಕೆಂಬ ಆಶೆಯು ಅವರನ್ನು ಮುಂದಳ್ಳುವುದಾದರೆ, ಅವರು ತಮ್ಮನ್ನು ಬಳಸಿಕೊಂಡಿರುವ ಅಡ್ಡಿಗಳೆಲ್ಲವನ್ನೂ ಒಡೆದುಕೊಂಡು ಹೊರಬರುವರು.

ಅನೇಕ ಜನರು ಮತಗಳಲ್ಲೂ ಸಂಘ ಸಮಾಜಗಳಲ್ಲೂ ಸೇರುವರು. ಏಕೆಂದರೆ ಅವರು ಅವುಗಳನ್ನು ತಮ್ಮ ಅನುಮಾನಗಳೆಲ್ಲವನ್ನೂ ತೂಗುಹಾಕುವ ಗೂಟಗಳನ್ನಾಗಿ ಏರ್ಪಡಿಸಿಕೊಳ್ಳಲು ಅನುಕೂಲವಾಗಿರುವುವು. ಜೀವಮಾನದ ಅನುಭವದಲ್ಲಿಳಿದು ಅದನ್ನು ಸಾಕ್ಷಾತ್ತಾಗಿ ತಿಳಿಯುವುದರಿಂದ ಬಂಧ ವಿಮೋಚನೆಯು ಆಗುವುದೇ ವಿನಹ, ಜೀವಮಾನದ ಅನುಭವಕ್ಕೆ ಹೆದರಿ, ಅದರಿಂದ ತಪ್ಪಿಸಿಕೊಂಡು ಓಡಿಹೋಗುವುದರಿಂದ ಅಲ್ಲ. ಜನರು ತಮ್ಮ ಅಭಿಪ್ರಾಯಗಳನ್ನು ತಮ್ಮ ಸ್ವಾಧೀನದಲ್ಲಿ ಇಟ್ಟುಕೊಂಡು, ತಾವು ಅವುಗಳ ಯಜಮಾನರಾಗಿಲ್ಲವು. ಅದರಿಂದ ಅವರು ತಮ್ಮ ಅಭಿಪ್ರಾಯಗಳಿಗೆ ಕಟ್ಟುಬಿದ್ದು ತಮ್ಮನ್ನು ಅದಕ್ಕೆ ಯಜ್ಞವಾಗಿ ಅರ್ಪಿಸಿಕೊಳ್ಳುವರು. ಸ್ವಾತಂತ್ರ್ಯದಕಡೆಗೂ, ಜೀವಮಾನದ ಅನುಭವಕ್ಕೂ ನಮ್ಮನ್ನು ಕೊಂಡೊಯ್ಯದ ಅಭಿಪ್ರಾಯಗಳನ್ನು ಉಂಟಾಗಿ ಫಲವೇನು? ನೀತಿಯಿಂದ ಜೀವಮಾನವನ್ನು ಬಂಧಿಸಿರುವಂತೆಯೇ ಅಭಿಪ್ರಾಯಗಳಿಂದಲೂ ಬಂಧಿಸಿ ಕೊಳ್ಳಬಹುದು. ಜೀವಮಾನ (Life) ಪ್ರವಾಹವು ಯಾವಾಗಲೂ ಮುಂದರಿಯುತ್ತಲೇ ಇರುವುದು. ನೀತಿಯಾದರೋ ನಿಂತನೀರಿನ ಹಳ್ಳದಂತೆ ಇದ್ದಲ್ಲೇ ಇರುವುದು. ನೀತಿಯು ಜೀವಮಾನ ಪ್ರವಾಹದೊಡನೆ ಮುಂದರಿಯಬೇಕಾದರೆ, ಅದು ಬದಲಾವಣೆ ಹೊಂದುತ್ತಲೇ ಇರಬೇಕು; ಆದರೆ ನಾವೇನೋ ಸಾವಿರಾರು ವರ್ಷಗಳ ಹಿಂದಿನ ಕಾಲಕ್ಕೆ ಸರಿಯಾಗಿದ್ದ ನೀತಿಯನ್ನೇ ಈಗಲೂ ಹಾಗೆಯೇ ಅನುಸರಿಸುತ್ತಿರುವೆವು. ಅದನ್ನೇ ಈಗಿನ ಹೊಸ ವಿದ್ಯಮಾನಗಳಲ್ಲಿಯೂ ಅನ್ವಯಿಸುತ್ತಿರುವೆವು. ಅದರಿಂದ ಅನೇಕ ಬಗೆಯ ಕಷ್ಟಗಳನ್ನು ಉಂಟುಮಾಡಿಕೊಳ್ಳುತ್ತಿರುವೆವು. ಪ್ರತಿದಿನವೂ ಆಯಾ ಸಮಯಕ್ಕೆ ತಕ್ಕ ಹೊಸ ಸಂಪ್ರದಾಯಗಳನ್ನು ಏರ್ಪಡಿಸಿಕೊಂಡು, ಬದುಕಿನ ವಿದ್ಯಮಾನಗಳನ್ನು ಅದಕ್ಕೆ ತಕ್ಕಂತೆ ಬದಲಾಯಿಸಿಕೊಳ್ಳುವುದನ್ನು ಬಿಟ್ಟು ಓಬೀರಾಯನ ಕಾಲದ ಗತಶತಾಬ್ದಗಳ ಸಂಪ್ರದಾಯಗಳನ್ನೇ ಈಗಲೂ ಅನುಸರಿಸುತ್ತಿರುವೆವು.

ನಾನಾದರೋ, ಬಂಧವನ್ನು ಬಿಡಿಸಿಕೊಂಡು ಮುಕ್ತನಾಗಿರುವದರಿಂದ, ಎಲ್ಲರೂ ಹಾಗೆ ಮುಕ್ತರಾಗಿ ನಿತ್ಯಾನಂದ ಹೊಂದಲು ಸಹಾಯ ಮಾಡಬೇಕೆಂದು ಬಯಸುವೆನು. ಆದರೆ ಮೋಕ್ಷ ಹೊಂದಲು ಇಂತಿಂಥದನ್ನು ಹೀಗೀಗೆ ಮಾಡಬೇಕೆಂದು ನಾನು ನಿಯಮಿಸಿ ಕೊಡುವದಾದರೆ ಹಾಗೆ ಮಾತ್ರವೇ ಅವರು ಈಗ ನಡೆಯುವರು. ಮುಂದೆ ಅದೇ ಅವರ ಬೆಳವಣಿಗೆಗೆ ಅಡ್ಡಿಯಾಗುವುದು. ಆದ್ದರಿಂದ ತಕ್ಕ ಗಮನಕೊಟ್ಟು, ನೀನೇ ಸ್ವಯಂಪರೀಕ್ಷಿಸಿ, ಅವಶ್ಯಕನುಗುಣವಾಗಿ ನಿನ್ನನ್ನು ನೀನು ತಿದ್ದುಕೊಂಡು ಬೆಳೆ. ಅದೇ ನಿಜವಾಗಿಯೂ ಪರಮ ಸರಳಮಾರ್ಗವು. ಮಿಕ್ಕವೆಲ್ಲವೂ ತೊಡಕಿನ ಮಾರ್ಗಗಳು.

[illegible]

ಭೂಮಿಯಲ್ಲಿ ಸುಖದುಃಖದ ಮಧ್ಯದಲ್ಲಿಯೇ ಹುಟ್ಟಬೇಕು. ಅನೇಕ ಹಗಲು ರಾತ್ರಿಗಳ ಚಳಿ ಗಾಳಿ ಮಳೆ ಬಿಸಲು ಬೆಳಕುಗಳ ಕಾದ್ಯಾಟದಿಂದ ಹುಟ್ಟಬೇಕಲ್ಲವೆ? ಅದರಂತೆಯೇ ನಿನ್ನ ನಿಜವಾದ ಆನಂದವೂ ಸಹ ನಿನ್ನ ಅನೇಕ ಅನುಭವಗಳ ಫಲವಾಗಿ ನಿನ್ನಲ್ಲಿಯೇ ಹುಟ್ಟಬೇಕು.

ಅನೇಕ ಜನರು ತಮ್ಮ ತಮ್ಮ ಆಶೆ ಅನುರಾಗ ಕಾಮ ಕ್ರೋಧ ಪದ್ಧತಿ ಸಂಪ್ರದಾಯಗಳಿಂದ ಕಟ್ಟು ಬಿದ್ದಿರುವರು. ಅವುಗಳಿಂದ ಅವರು ಬಂಧಿಸಲ್ಪಟ್ಟಿರುವುದರಿಂದ ಅವರಿಗೆ ಸ್ವಾತಂತ್ರ್ಯವಿಲ್ಲವು. ಯಾರಾದರೆ ಹೊರ ಪ್ರಮಾಣಗಳ ನೆರಳಿನ ಆಸರೆಯಲ್ಲಿ ಜೀವಿಸುತ್ತಿರುವರೋ ಅವರು ನಿರ್ಮಲವಾದ ನಿಜವಾದ ಶುದ್ಧ ಆಕಾಶವನ್ನಾಗಲೀ, ಅದರಲ್ಲಿರುವ ಸುಂದರವಾದ ದಿವ್ಯ ನಕ್ಷತ್ರಗಳನ್ನಾಗಲೀ ಕಂಡರಿಯರು. ನಿರುಪದ್ರವಾದ ಆಕಾಶದಲ್ಲಿ ಬೀಸುವ ದಿವ್ಯವಾದ ಮಂದಮಾರುತದ ಆನಂದವನ್ನೂ ಅವರು ಸುಖಿಸಲಾರರು.

ಪುನಃ ಎಂದಿಗೂ ಬಂಧನಕ್ಕೊಳಗಾಗದ ಮತ್ತು ಇಕ್ಕಟ್ಟುಗಳಲ್ಲಿ ಸಿಕ್ಕದ ಸ್ವಾತಂತ್ರ್ಯವೆಂಬ ನಿರ್ಮಲಾಕಾಶವನ್ನು ನಾನು ಮುಟ್ಟಿರುವೆನು. ಇತರರೂ ಸಹ ಅಂತಹ ಬಂಧ ರಹಿತವಾದ ಮೋಕ್ಷ ಸಾಮ್ರಾಜ್ಯವೆಂಬ ಆಕಾಶವನ್ನು ಹೊಂದಲು ಅವರನ್ನು ಹುರಿಗೊಳಿಸುವೆನು. ಆದರೆ ಪ್ರತಿಯೊಬ್ಬನೂ ಅದನ್ನು ತನ್ನ ದಾರಿಯಲ್ಲಿ ತಾನು ತಾನೇ ಕಂಡುಕೊಳ್ಳಬೇಕು. ಅದೇ ಅವನಿಗೆ ನಿಜವಾದ ನೆಟ್ಟಗಿರುವ ಸಮೀಪ ಮಾರ್ಗವು. ಜನರು ಸ್ವಾತಂತ್ರ್ಯವನ್ನು ಬಯಸಿ ಅನೇಕಾನೇಕ ದಾರಿಗಳಲ್ಲಿ ತಿರುಗಬಹುದು. ಆದರೆ ಕಟ್ಟಕಡೆಗೆ ಅವರೊಳಗೆ ಅಡಗಿರುವ ಜೀವಶಕ್ತಿಯು ಅವರನ್ನು ಜೀವಿನ ನಿಜವಾದ ಮಾರ್ಗಕ್ಕೆ ಹೇಗಾದರೂ ಬಲಾತ್ಕರಿಸಿ ತಂದೇ ತರುವುದು.

(೧೯೩೯ ನೇ ಏಪ್ರೆಲ್ ಆನಂದದಿಂದ)

ಕೆ. ನರಹರಿ

ಪರಿವರ್ತಕ.

Adversity is as a furnace through which every one must pass. Great struggles, great sorrows and great ecstasies unfold the Truth in its sublimity, in its simplicity. To welcome adversity—not thrust upon you by another—you must invite doubt. If doubt unconsciously insinuates itself into your heart, it will not purify it. You can only purify it by deliberately inviting doubt.

—LIFE IN FREEDOM.

You must grow wings, new wings every day, to fly to that height; and you can only grow new wings if you are all the time soaring, expanding, growing, struggling. That means you must change every day; you must throw off all those things which clog, which bind, which restrain, which do not give you absolute freedom, which bind you to the illusions of life. That is the only way to grow, to have fresh energies, fresh delights. And only with new wings can you soar into the heights.

—THE KINGDOM OF HAPPINESS.

ಭಾವಿನಾಡಿನವರ ಬಿನ್ನಹ

ಶುದ್ಧವಾದ ಸಾಂಘಿಕ ಪರಿಸ್ಥಿತಿಗಳು

ಪ್ರಿಯರೇ! ಇಂದಿನವರೆಗೂ ಪರಿಷ್ಕಾರವಾಗದೆ ನಿಮ್ಮ ಮಾನವ ಕೋಟಿಗೆ ಕಳಂಕವನ್ನುಂಟುಮಾಡುತ್ತಿರುವ ಸಾಂಘಿಕ ಸಮಸ್ಯೆಗಳು ಅನೇಕವಿರುವುವು. ಮಸಲಾ, ಸಾಹುಕಾರ್—ಕೂಲಿಯವರಿಗೂ, ಸಂಪದ್ದಾರಿದ್ರ್ಯಗಳಿಗೂ, ಹೆಂಗಸರು—ಮಕ್ಕಳ ಯೋಗಕ್ಷೇಮಕ್ಕೂ, ರೋಗಿಗಳ ಮತ್ತು ಮುದುಕರ ಅನಾಥಸ್ಥಿತಿಗೂ, ಕೂಲಿ ಮತ್ತು ಕೂಲಿಯ ಕಾಲನಿರ್ಣಯಕ್ಕೂ, ಅಮಿತ ಕೆಲಸ-ಕೆಲಸ ದೊರೆಯದೇ ಇರುವುದಕ್ಕೂ ಅನೀತಿ ಮತ್ತು ಆಚರಣೆಯಲ್ಲಿಲ್ಲದ ಪರೋಪಕಾರ ಬುದ್ಧಿಗೂ, ಅಪರಾಧ ದಾನಗಳಿಗೂ, ರೋಗಾರೋಗ್ಯಗಳಿಗೂ, ಸಾಗುಬಂಜರುಗಳಿಗೂ, ಕೆಲವರಿಗೆ ಮಾತ್ರ ಅಧಿಕಾರವೂ ಅನೇಕರು ಅವರ ಗುಲಾಮರಾಗಿರುವಿಕೆಗೂ, ನಂಬಿಕೆ ನಿಧಿಗಳು ಮತ್ತು ಅವುಗಳ ಅಭಾವಕ್ಕೂ, ದ್ರವ್ಯ ಮತ್ತು ಧನ ಶೂನ್ಯತೆಗೂ ಸಂಬಂಧಿಸಿದ ಸಮಸ್ಯೆಗಳು ತೀವ್ರತರಗಳಾಗಿ ನೆಲೆಗೊಂಡಿರುವುವು.

ಮಾನವ ನಾಗರೀಕತೆಯೆಂಬ ದಿವ್ಯೋದ್ಯಾನದಲ್ಲಿ ಈ ಸಮಸ್ಯೆಗಳು ಕಳೆಗಳಂತೆ ಬೆಳೆದಿರುವುವು. ಆದರೆ, ಇವು ಶಾಶ್ವತಗಳೆಂದು ತಿಳಿಯುವುದು ತಪ್ಪು. ಆಗಾಗ್ಗೆ ಕಿತ್ತು ಹಾಕದೇ ಹೋದುದರಿಂದ ಇವು ಬೆಳೆದು ಬಂದಿರುವುವು. ಇವುಗಳ ದೆಸೆಯಿಂದ, ಆ ಉದ್ಯಾನದಲ್ಲಿ ದಿವ್ಯ ಕಿರಣಗಳಿಂದ ಪ್ರಯೋಜನ ಪಡಬೇಕಾಗಿದ್ದ ಸಸಿಗಳು ಸಹಿತ ಉಸುರಾಡದೇ ಸತ್ತು ಹೋಗಿರುವುವು. ಈ ಕಳೆಗಳು ಬಹು ಸುಲಭವಾಗಿ ವೃದ್ಧಿಯಾಗುವುವು. ಈಗಾಗಲೇ ಅವು ಕಿತ್ತುಹಾಕಲು ಸಾಧ್ಯವಾಗದಷ್ಟು ಸಾಂದ್ರವಾಗಿ ಬೆಳೆದಿರುವುವು. ಅವುಗಳ ನೆರಳಿನ ದೆಸೆಯಿಂದ ಉಂಟಾಗುವ ಛಳಿಯನ್ನು ಸಹಿತ ನೀವು ಸಹಿಸಲಾರದೇ ಇರುವಿರಿ. ಬೆಳಕಿಗಾಗಿ ಹಂಬಲಿಸುತ್ತಾ ದೊಡ್ಡ ದೊಡ್ಡ ಕಳೆಗಳನ್ನಾದರೂ ಕತ್ತರಿಸಿ ಸೂರ್ಯ ರಶ್ಮಿಯನ್ನು ಹಾಯಿಸಬೇಕೆಂದು ಯತ್ನಿಸುತ್ತಿರುವಿರಿ. ಹೆಚ್ಚಾಗಿ ಬೆಳಕೂ ಉಷ್ಣವೂ

ಬೇಕೆಂದು ನೀವು ಒಳ್ಳೇ ಸಸಿಗಳನ್ನೇ ಕತ್ತರಿಸುವಿರೇನೋ? ಈ ವಿಷಯದಲ್ಲಿ ತುಂಬಾ ಜಾಗರೂಕರಾಗಿ ಇರಿ.

ಕಳೆಗಳ ಬೇರುಗಳು ಸ್ವಲ್ಪವಿದ್ದರೂ ಪುನಃ ಚಿಗುರುವುವು. ಕಳೆಗಳನ್ನು ಮೇಲೆ ಮೇಲೆ ಕತ್ತರಿಸಿದರೆ ಉಪಯೋಗವಿಲ್ಲ. ಬೇರು ಸಹಿತ ಕಿತ್ತು ಹಾಕಬೇಕು. ಸ್ವಾರ್ಥತೆಗಳೇ ನಿಜವಾದ ಕಳೆಗಳು. ಇತರರಲ್ಲಿರುವ ಸ್ವಾರ್ಥತೆಗಳು ಮಾತ್ರವೇ ಅಲ್ಲ, ನಿಮ್ಮಲ್ಲಿರುವ ಸ್ವಾರ್ಥತೆಗಳು ಸಹಿತ ಹೋಗಬೇಕು.

ನಿಮ್ಮ ವಶಕ್ಕೆ ಕೊಟ್ಟಿರುವ ಚಿಕ್ಕ ಕ್ಷೇತ್ರವನ್ನು ಚೆನ್ನಾಗಿ ಪರಿಶುದ್ಧಿ ಮಾಡಿರಿ. ನಿಮ್ಮ ನೆರೆಹೊರೆಯವರ ಕ್ಷೇತ್ರಗಳನ್ನು ಶುದ್ಧಿಪಡಿಸುವುದು ಬಹುಕಷ್ಟ. ಆ ಕಾರ್ಯವನ್ನು ನೀವು ಮಾಡಬೇಕೆಂಬ ನಿರೀಕ್ಷಣೆಯೂ ಇಲ್ಲ. ನಿಮ್ಮ ಕ್ಷೇತ್ರದಲ್ಲಿ ಬೆಳೆದಿರುವ ಕಳೆಗಳನ್ನು ಮೊದಲು ಕಿತ್ತು ಹಾಕಿರಿ. ನೀವು ಹಾಗೆ ಕಿತ್ತು ಹಾಕಿದರೆ ನಿಮ್ಮ ಉದ್ಯಾನದಲ್ಲಿ ಬೀಳುವ ಬೆಳಕಿನಿಂದ ಕಳೆಗಳ ಸ್ಥಾನದಲ್ಲಿ ಬೆಳೆಯುವ ಪ್ರೇಮವೆಂಬ ಎಳೆಯ ಸಸಿಗಳ ಮತ್ತು ಪರಿಶುದ್ಧತೆಯೆಂಬ ಹೂಗಿಡದ ವೃಕ್ಷಗಳ ಮನೋಹರತ್ವವನ್ನು ಇತರರೂ ಅನುಭವಿಸುವರು.

[illegible]

[illegible]

ಒಂದೊಂದು ಸಮಸ್ಯೆಗೂ ನಾವು ಬೇರೆ ಬೇರೆ ಪರಿಹಾರವನ್ನು ಬೋಧಿಸುವುದಿಲ್ಲ. ನಿಮ್ಮ ನಾಗರೀಕತೆಯೆಂಬ ಮಂದಿರವು ಶಿಥಿಲವಾಗಿ ಬೀಳಲು ಕದಲುತ್ತಿರುವುದು. ಆ ಮಂದಿರದಲ್ಲಿ ಅಲ್ಲಲ್ಲಿ ಸೋರುತ್ತಿರುವ ಸ್ಥಳಗಳನ್ನು ಮುಚ್ಚುವುದು ಹೇಗೆ, ಮಾಲಿನ್ಯದಿಂದ ವಿಕಾರವಾಗಿರುವ ಪ್ರದೇಶಗಳಿಗೆ ಬಣ್ಣವನ್ನು ಹಚ್ಚಿ ನೋಡಲು ರಮ್ಯವಾಗಿರುವಂತೆ ಮಾಡುವುದು ಹೇಗೆ? ಎಂಬ ವಿಷಯಗಳನ್ನು ನಾವು ಬೋಧಿಸುವುದಿಲ್ಲ.

ನಿಮ್ಮ ಕೈಲಾದ ಮಟ್ಟಿಗೂ ಆ ಮಂದಿರವನ್ನು ಚೆನ್ನಾಗಿಟ್ಟುಕೊಳ್ಳಿರಿ. ಹೊಸ ಕಟ್ಟಡವು ಸಿದ್ಧವಾಗುವವರೆಗೂ ಅದರಲ್ಲಿಯೇ ವಾಸಮಾಡಿಕೊಂಡಿರಿ. ಪರಂತು, ನೂತನ ಮಂದಿರವನ್ನು ನಿರ್ಮಿಸಲು ಎಲ್ಲರೂ ಸೇರಿ ಯತ್ನ ಮಾಡಿರಿ. ಸುಸ್ಥಿರವಾಗಿ ನಿಲ್ಲುವ ಅಸಂಗವೆಂಬ ಮಂದಿರಕ್ಕೆ ಅಸ್ತಿಭಾರವನ್ನು ಹಾಕಿರಿ. ಸುತ್ತಲೂ ಪ್ರೇಮವೆಂಬ ಗೋಡೆಗಳನ್ನು ಕಟ್ಟಿರಿ. "ಕೇವಲ ಪಾರಿಶುದ್ಧತೆ" ಎಂಬ ವರ್ಣದಿಂದ ಅದನ್ನಲಂಕರಿಸಿರಿ. ಸೌಭ್ರಾತೃತ್ವಾನಂದಗಳೆಂಬ ಮನೋಹರವಾದ ಸಾಮಾನುಗಳನ್ನು ಎಲ್ಲರ ಮನೆಗಳಲ್ಲಿಯೂ ತುಂಬಿಸಿಡಿರಿ.

ಆಗ ನಿಮ್ಮ ಸಾಂಘಿಕ ಸಮಸ್ಯೆಗಳು ನಿರರ್ಥಕಗಳಾಗಿ ಪರಿಣಮಿಸಿ ತಮಗೆ ತಾವೇ ನಾಶವಾಗುವುವು.

ಅವಶ್ಯಕವಿದ್ದರೆ, ನಿಮ್ಮ ಪುರಾತನ ಮಂದಿರವನ್ನು (ನಾಗರೀಕತೆ) ನಿಮ್ಮ ಪೂರ್ಣ ಮೌಢ್ಯಗಳನ್ನು ಪ್ರದರ್ಶಿಸುವ ವಸ್ತು ಪ್ರದರ್ಶನ ಶಾಲೆಯನ್ನಾಗಿ ಇಟ್ಟುಕೊಳ್ಳಿರಿ. ನೂತನ ಮಂದಿರ ನಿರ್ಮಾಣಕ್ಕೆ ನೀವು ಸಹಾಯ ಮಾಡಿದರೆ, ಪ್ರಪಂಚವನ್ನು ಹೊಸನಾಡಿನವರಿಗಾಗಿ ಸಿದ್ಧಪಡಿಸುತ್ತಿರುವವರ ಬೃಂದಕ್ಕೆ ನೀವು ಸೇರುವುದಾದರೆ, ಪುರಾತನ ಮಂದಿರದಲ್ಲಿ ವಾಸಿಸಲು ಇಷ್ಟಪಡಲಾರಿರಿ, ಅವಶ್ಯಕವೂ ಇಲ್ಲ.

ಅಜ್ಞರಿಗೆ ಸಮಸ್ಯೆಗಳು ಯಾವಾಗಲೂ ಇರುವುವು. ಮಾನವ ಪ್ರವರ್ಧಮಾನವನ್ನು ನಡೆಯಿಸುತ್ತಿರುವ ಮಹನೀಯರಿಗೂ ಶೈಶವಾವಸ್ಥೆಯಲ್ಲಿರುವ ಮಾನವ ಜಾತಿಯ ಬೋಧಕರಿಗೂ ನಿಮ್ಮ ಸಾಂಘಿಕ ಸಮಸ್ಯೆಗಳು ಸುತರಾಂ ಇರುವುದಿಲ್ಲ. ಅವುಗಳನ್ನೆಲ್ಲಾ ಒಂದೇ ಬಾರಿಗೆ ಅವರು ಪರಿಷ್ಕರಿಸಿಕೊಂಡಿರುವರು.

ಹಾಗಾದರೆ, ಅವರು ದಯಮಾಡಿಸಿ ನಿಮ್ಮ ಸಮಸ್ಯೆಗಳನ್ನು ಪರಿಷ್ಕರಿಸಲು ಏಕೆ ಸಹಾಯ ಮಾಡಬಾರದೆಂದು ನೀವು ಕೇಳಬಹುದು. ಪಾಠಶಾಲೆಯಲ್ಲಿ ಲೆಕ್ಕಗಳನ್ನು ಕಲಿಯುತ್ತಿರುವ ಹುಡುಗನಿಗೆ ಉಪಾಧ್ಯಾಯನು ಸುಲಭವಾದ ಚಿಕ್ಕ ಚಿಕ್ಕ ಲೆಕ್ಕಗಳನ್ನು ಸ್ವಂತವಾಗಿ ಮಾಡಲು ಬಿಡದೆ ತಾನು ಮಾಡಿಕೊಡುತ್ತಾ ಹೋದರೆ ಹುಡುಗನಲ್ಲಿರುವ ಶಕ್ತಿ ವೃದ್ಧಿಯಾದೀತೇ? ಸ್ವಂತವಾಗಿ ಲೆಕ್ಕಗಳನ್ನು ಮಾಡಲು ಯತ್ನಿಸುವ ಹುಡುಗರನ್ನು ನೋಡಿ ಉಪಾಧ್ಯಾಯರು ಸಂತೋಷದಿಂದ ಪ್ರೀತಿಸುವರಲ್ಲದೆ ಅವರಿಗೆ ಕಠಿಣತರವಾದ ಲೆಕ್ಕಗಳನ್ನು ಕಲಿಸುತ್ತಾ ಮೇಲಿನ ತರಗತಿಗೆ ಹಾಕಿ ಕೊನೆಗೆ ಪಟ್ಟ ಪರೀಕ್ಷೆಯಲ್ಲಿ ತೇರ್ಗಡೆಯಾಗುವಂತೆ ಸಹಾಯ ಮಾಡುವರು.

ನಿಮ್ಮ ನಾಡಿನ ಗುರುಗಳು ಸಹಿತ ಹಾಗೆಯೇ ನಿಮ್ಮ ಸಮಸ್ಯೆಗಳನ್ನು ಪರಿಷ್ಕರಿಸದೆ ನಿಮಗೆ ಬಿಡುವರು. ನೀವು ಆ ಸಮಸ್ಯೆಗಳನ್ನು ಪರಿಷ್ಕರಿಸಿಕೊಳ್ಳುವುದರಲ್ಲಿ ನಿಮ್ಮಲ್ಲಿನ ಶಕ್ತಿಗಳು ವೃದ್ಧಿಯಾಗುವುವು. ಗುರುಗಳ ಸಹಾಯವಿಲ್ಲದೆಯೇ ನೀವು ನಿಮ್ಮ ಸಮಸ್ಯೆಗಳನ್ನು ಪರಿಷ್ಕರಿಸಿಕೊಳ್ಳಬೇಕು.

[illegible]

[illegible]

[illegible]

ಷವಾಗಿ ಶಿಕ್ಷಣೆಗೆ ಒಳಪಡತಕ್ಕವರು ನಮ್ಮ ನಾಡಿಗೆ ಪ್ರಜೆಗಳಾಗಲು ಅರ್ಹರಾಗಿರುವರು. ಅಂತಹವರಿಗೆ ಸಹಾಯ ಮಾಡುವುದಕ್ಕಾಗಿಯೂ, ಅವರ ವೃದ್ಧಿಯನ್ನು ತ್ವರೆಪಡಿಸುವುದಕ್ಕಾಗಿಯೂ ನಾವು ಬಂದಿರುವೆವು. ನಾವು ಸೂಚನೆಯು ಮಾತ್ರವೇ ಕೊಡುವೆವಾದರೂ ಅದರಲ್ಲಿ ಸರ್ವ ಸಮಸ್ಯೆಗಳ ಪರಿಷ್ಕಾರಕ್ಕೆ ಸಾಧನೆಯಾದ ಬೀಗದ ಕೈ ಇರುವುದು.

ನಿಮ್ಮ ಸಮಸ್ಯೆಗಳೊಡನೆ ಹೊಡೆದಾಡುತ್ತಾ ಪರಿಷ್ಕರಿಸಲು ಆತುರರಾಗಿರುವ ಸೋದರರೇ ಕೇಳಿರಿ, ನಿಮ್ಮ ಹೃದಯ ಮಂದಿರವನ್ನು ತೆರೆದು ಸರ್ವ ಸಮಸ್ಯೆಗಳನ್ನು ಪರಿಷ್ಕರಿಸಲು ಪ್ರಸ್ತುತ ಸಹಾಯ ಮಾಡಬಲ್ಲ ಬೀಗದ ಕೈ ಆವುದೆಂದರೆ—ಪ್ರೇಮವೇ. ಆ ಬೀಗದ ಕೈಯನ್ನು ತೆಗೆದುಕೊಳ್ಳಿರಿ. ಕೇವಲ ಪರಿಶುದ್ಧತ್ವದಿಂದ ವಿನಾ ಆ ಬೀಗದ ಕೈ ಕೆಲಸ ಮಾಡಲಾರದು. ಎಲ್ಲಾ ಸಮಸ್ಯೆಗಳಿಗೂ ಪ್ರೇಮವು ಒಂದೇ ಬೀಗದ ಕೈಯೆಂದು ಕೊಂಡು ಕೊಳ್ಳುವವರೆಗೂ ನೀವು ಕಲಿಯಬೇಕಾದ ಪಾಠಗಳನ್ನು ಕಲಿಯದೆಯೂ, ಉತ್ತೀರ್ಣರಾಗದೆಯೂ ಇರುವಿರಿ.

ಜನ್ಮ ಜನ್ಮದಲ್ಲಿ ನೀವು ಕಲಿಯಬೇಕಾದ ಪಾಠಗಳನ್ನು ಕಲಿಯದಿದ್ದರೆ ನಿಮ್ಮನ್ನು ಒಬ್ಬ ಉಪಾಧ್ಯಾಯನಿಗೆ ಒಪ್ಪಿಸುವುದು ನಿಶ್ಚಯ, ಆ ಉಪಾಧ್ಯಾಯನು ಬಲಾಢ್ಯನಾಗಿಯೂ, ತಾಳ್ಮೆಯುಳ್ಳವನಾಗಿಯೂ, ಕ್ಷಮಾನ್ವಿತನಾಗಿಯೂ, ದಯಾಪರನಾಗಿಯೂ, ನೀವು ಅತಿಶಯಕರ ಸುಖವನ್ನು ಹೊಂದುತ್ತಾ ಹೊಸನಾಡಿಗೆ ಸೇರುವುದಕ್ಕೆ ಸಹಾಯಮಾಡುವವನಾಗಿಯೂ, ನಿಮ್ಮ ಲೋಕಗಳನ್ನೂ, ಶಕ್ತಿಗಳನ್ನೂ ತಿಳಿದವನಾಗಿಯೂ ಇರುವ ಪ್ರಯುಕ್ತ ನಿಮಗೆ ಶಿಕ್ಷಣೆಯನ್ನು ಕೊಡಲು ಒಪ್ಪಿಕೊಳ್ಳುವನು. ಅವನ ಶಿಕ್ಷಣೆಯ ನಿಧಾನವು ನಿಮಗೆ ನಚ್ಚದೇ ಇರಬಹುದು. ಆದರೆ, ಅದರಿಂದ ನಿಮಗೆ ಹೆಚ್ಚು ಪ್ರಯೋಜನವಾಗುವುದರಲ್ಲಿ ಸಂದೇಹವಿಲ್ಲ. ಆ ಉಪಾಧ್ಯಾಯನಾರೆಂದರೇ: "ಯಾತನೆ"

ಯಾತನೆಗಿಂತಲೂ ಉತ್ತಮತರ ಉಪಾಧ್ಯಾಯನು ಸರ್ವಥಾ ದೊರೆಯಲಾರನು. ಅವನಿಂದುಂಟಾಗುವ ಫಲಗಳು ಎಂದಿಗೂ ನಿರರ್ಥಕವಾಗಲಾರವು. ನಿಮ್ಮಲ್ಲಿ ದಯಾ ಪ್ರೀತಿಗಳು ಮತ್ತಾವ ವಿಧದಲ್ಲಿ ಹುಟ್ಟದಿದ್ದ

ರೂ ಯಾತನೆಯಿಂದ ತಪ್ಪದೇ ಹುಟ್ಟುವವು. ಪರರ ಕಷ್ಟಗಳನ್ನು ತಿಳಿಯಲು ಯಾತನೆಯು ಸಹಾಯಮಾಡುವುದು. ಇತರರು ಕಷ್ಟಪಡುತ್ತಿದ್ದರೆ ನಿಮ್ಮ ಹೃದಯದಲ್ಲಿ ಮರುಕವನ್ನುಂಟುಮಾಡಿ ತನ್ಮೂಲಕ ಪ್ರೇಮಬೀಜವು ಅಂಕುರಿಸುವಂತೆ ಮಾಡುವುದು. ಈ ಪ್ರೇಮಬೀಜವು ತಕ್ಷಣವೇ ಬೆಳೆಯದಿದ್ದರೂ ಕಲ್ಲಿನಂತೆ ಕಠಿಣವಾಗಿರುವ ಪ್ರದೇಶಗಳನ್ನು ಹೊಕ್ಕು ಒಡೆದುಕೊಂಡು ಮೇಲಕ್ಕೇಳಬೇಕಾಗುವುದು. ಅಂತಹ ಕಠಿಣ ಪ್ರದೇಶಗಳನ್ನು ಯಾತನೆಯು ಮೃದುವಾಗಿ ಮಾಡಿ ಪ್ರೇಮಬೀಜದ ವೃದ್ಧಿಗೆ ಸಹಾಯ ಮಾಡುವುದು.

ಮನುಷ್ಯನಲ್ಲಿರುವ [illegible] ಈ ಉಪಾಧ್ಯಾಯನು [illegible] ನಿಮ್ಮ ಜತೆಯಲ್ಲಿಯೇ ಇದ್ದು [illegible] ನಿಜಾತ್ಮನಲ್ಲಿ [illegible]

[illegible]

[illegible]

ನೋಡಲ್ಪಡದೆ ಇರುವಂತಹದು, ಅಲ್ಲಿಗೆ ಹೋದನಂತರ ಅದೆಲ್ಲವೂ ನಿಮ್ಮ ಸ್ವತ್ತಾಗುವುದು.

ನಿಮ್ಮ ಕಡೆ ಬರುತ್ತಿರುವ ಹೆಜ್ಜೆಗಳ ಸಪ್ಪಳವನ್ನೂ, ನಿಮ್ಮನ್ನು ಕರೆಯುತ್ತಿರುವ ಸಂತೋಷಧ್ವನಿಗಳನ್ನೂ ಕಿವಿಕೊಟ್ಟು ಕೇಳಿರಿ? ಅವು ಆತ್ಮಸಂದರ್ಶನ ಲಾಭವನ್ನು ಹೊಂದಿದವರ ಶಬ್ದಗಳು, ನಿಮ್ಮನ್ನು ಪ್ರೋತ್ಸಾಹಿಸಿ ಸಂತೋಷಗೊಳಿಸುವುದಕ್ಕಾಗಿಯೂ, ತಮ್ಮ ಆನಂದವನ್ನು ನಿಮ್ಮೊಡನೆ ಪಾಲ್ಗೊಳ್ಳುವುದಕ್ಕಾಗಿಯೂ ಅವರು ಹಿಂತಿರುಗಿ ಬರುತ್ತಿರುವರು. ಅವರು ನೂತನ ಯುಗದ ಜ್ಯೋತಿಯನ್ನು ದರ್ಶಿಸಿರುವರು. ಅದನ್ನು ಇತರರೊಡನೆ ಪಾಲ್ಗೊಂಡಾಗಲೇ ನಿಜವಾದ ಆನಂದವುಂಟಾಗುವುದು

ಆನಂದವೆಂಬ ಪರ್ವತ ಸೀಮೆಗೆ ಮತ್ತೊಂದು ದಾರಿ ಇರುವುದು. ಅದು ಬಹು ದೂರದ ದಾರಿ. ಬೇಸರಿಕೆಯನ್ನುಂಟುಮಾಡುವುದು. ಸರ್ವದಾ ಕವಿದಿರುವ ಮಂಜಿನ ಗಡ್ಡೆಗಳಿಂದ ಕೂಡಿದ ಪ್ರದೇಶಗಳ ಮೂಲಕ ಹತ್ತಿ ಹೋಗಬೇಕಾದ ಸುತ್ತು ಮಾರ್ಗವಾಗಿರುವುದು. ಪ್ರಾಣಿಸಂಚಾರವಿಲ್ಲದ ಮಾರ್ಗವಾಗಿರುವುದರಿಂದ ಬಹಳ ಅಪಾಯಗಳಿಗೆ ಈಡಾಗಿರುವುದು. ದೊಡ್ಡ ದೊಡ್ಡ ಮಂಜಿನ ಹಲೆಗಳು ದಾರಿಯಲ್ಲೆಲ್ಲಾ ವ್ಯಾಪಿಸಿಕೊಂಡಿರುವ ಪ್ರಯುಕ್ತ ತುಂಬಾ ಭಯಕ್ಕೂ ಕೆಲ ಸಂದರ್ಭಗಳಲ್ಲಿ ಮರಣಕ್ಕೂ ಕಾರಣವಾಗಿರುವುದು. ಅಲ್ಲಿ ದಾರಿತಪ್ಪಿ ಹೋಗುವುದು ಬಹು ಸುಲಭ.

ಕೆಲವರು ಆ ಮಾರ್ಗದಲ್ಲಿ ಹೊರಟು ನಾಶವಾಗುವುದುಂಟು. ಒಂದು ವೇಳೆ ಬದುಕಿದರೆ, ಹಿಂತಿರುಗಿ ಬಂದು ಪುನಃ ಸುರಂಗ ಮಾರ್ಗದಲ್ಲಿ ಹೊರಡುವರು. ಯಾತನೆಯೆಂಬ ಸುರಂಗದಲ್ಲಿ ನಡೆಯದೆ ಯಾವ ಪ್ರಾಣಿಯೂ ಗಮ್ಯಸ್ಥಾನವನ್ನು ಇಲ್ಲಿಯವರೆಗೆ ಹೊಂದಲಿಲ್ಲ.

ಎಲ್ಲವೂ ಒಳ್ಳೆಯದೆ ! ಪ್ರಾಪ್ತವಾಗುವ ವಿದ್ಯಮಾನಗಳೆಲ್ಲವೂ ಸರ್ವರ ಕ್ಷೇಮಕ್ಕೆಂತಲೇ ತಿಳಿಯಬೇಕು. ಪರಂತು, ಆ ವಿದ್ಯಮಾನಗಳನ್ನು ಇನ್ನೂ ಉತ್ತಮತರವಾಗಿ ಮಾಡಿಕೊಳ್ಳಬಹುದೆಂಬ ಸಂಗತಿಯನ್ನು ಮರೆಯಬಾರದು.

ಸರ್ವ ಶಕ್ತನಾದ ಭಗವಂತನು ದಯಾ ಸ್ವರೂಪನು. ಆತನಿಂದ ಪ್ರೇಮ ಪೂರ್ವಕವಾಗಿ ಆಳಲ್ಪಡುತ್ತಿರುವ ಈ ಜಗತ್ತಿನಲ್ಲಿ ಅನ್ಯಾಯವೆಂಬುದೇ ಅಸಂಭವವೆಂದು ನಿಮಗೆ ಇನ್ನೂ ಬೋಧೆಯಾಗಲಿಲ್ಲವೇ? ಮಹಾ ಸಂಕಟವಾದರೂ ಅಥವಾ ಅಲ್ಪಕಷ್ಟವಾದರೂ ನಿಮ್ಮಿಂದಲೇ ಉಂಟುಮಾಡಲ್ಪಡುವುದೆಂದು ತಿಳಿಯಬೇಕು. ಹಗೆಯನ್ನು ತೀರಿಸಿಕೊಳ್ಳುವ ಸ್ವಭಾವವುಳ್ಳ ದೈವದಕಾಟವಲ್ಲ. ಸ್ವಯಂಕೃತ ಕರ್ಮದ ಫಲವು. ಜನ್ಮದಿಂದ ಕಲಿಯಬೇಕಾದ ಪಾಠಗಳನ್ನು ಕಲಿಯುವುದಿಲ್ಲವೆಂದು ನೀವು ಮುಷ್ಕರ ಹಿಡಿದುದರಿಂದುಂಟಾದ ಫಲವು. ಆತ್ಮನಿಗೆ ವಿರೋಧವಾಗಿ ಅಹಂಭಾವಾಭಿವೃದ್ಧಿಯನ್ನು ಮಾಡಿಕೊಂಡುದರಿಂದುಂಟಾದ ಫಲವು.

ಜಗತ್ತಿನಲ್ಲಿ ಯಾವುದೂ ಅನ್ಯಾಯವಿಲ್ಲ. ತಾವು ಮಾಡಿಕೊಂಡಿರುವ ಸುಕೃತ ದುಷ್ಕೃತಗಳ ಫಲಗಳನ್ನು ಪ್ರಾಣಿಗಳು ಅನುಭವಿಸುತ್ತಿರುವರೆಂದು ನಿಮಗೆ [illegible] ನಂಬುತ್ತೇನೆ. ಪರರು ಕಷ್ಟದಲ್ಲಿರುವಾಗ ನೀವು ಈ ತಿಳುವಳಿಕೆಯನ್ನು ಧಾರಾಳವಾಗಿ ಉಪಯೋಗಿಸುವಿರಿ. ನೀವೇ ಅಂತಹ ಕಷ್ಟಕ್ಕೆ ಗುರಿಯಾದಾಗ ಮಾತ್ರ ಆ ತಿಳುವಳಿಕೆ ಮಾಯವಾಗುವುದು! [illegible]

[illegible]

[illegible]

ಪರಿಹರಿಸಲು ನೀವು ಕೈಲಾದಮಟ್ಟಿಗೂ ಯತ್ನಿಸಲೇಬೇಕು. ಇಲ್ಲವಾದರೆ ಸರ್ವವೂ ಮಂಗಳಕರವಾಗಿರಲಾರದು.

ದಯಾಸೌಭ್ರಾತೃತ್ವಗಳನ್ನು ಕಲಿಯದೇ ಹಿಂದಿನ ಪಾಠಗಳನ್ನೇ ಪುನಃ ಪುನಃ ಆವರ್ತನಮಾಡುತ್ತಿದ್ದರೆ ನಿಮಗೆ ಸರ್ವಮಂಗಳವಾಗಲಾರದು.

ಬಾಹ್ಯಸ್ಥಿತಿಗಳು ಆಂತರಿಕ ಗುಣಗಳ ಪ್ರತಿಬಿಂಬಗಳು. ಇದು ಒಬ್ಬ ಮನುಷ್ಯನಿಗಲ್ಲದೆ ಜನಾಂಗಕ್ಕೆ ಸಹಿತ ಅನ್ವಯಿಸುವುದು. ಈ ನಿಮ್ಮ ಮಿಥ್ಯಾ ಪ್ರಪಂಚದಲ್ಲಿ ಪ್ರತಿಬಿಂಬಗಳಾಗಿರುವ ಸಾಂಘಿಕ ಪರಿಸ್ಥಿತಿಗಳನ್ನು ಒಂದು ದರ್ಪಣದ ಮೇಲೆ ಚಿತ್ರಿಸಿ, ಬಣ್ಣ ಹಾಕಿ ಪುನರ್ನಿರ್ಮಾಣ ಮಾಡಬೇಕೆಂದು ಯತ್ನಿಸುತ್ತಿರುವಿರಿ. ಆ ಪರಿಸ್ಥಿತಿಗಳಿಗೆ ಮೂಲವಾಗಿರುವ ನಿಮ್ಮ ಆಂತರಿಕ ಗುಣಗಳನ್ನು ಸರಿಪಡಿಸಿಕೊಂಡರೆ ತಾವಾಗಿಯೇ ಆ ಪರಿಸ್ಥಿತಿಗಳು ಸರಿಹೋಗುವವೆಂದು ತಿಳಿಯಲಾಪಿರಾ? ಉತ್ತಮತರ ಸ್ಥಿತಿಗೆ ಬದಲಾವಣೆ ಆಗಬೇಕಾದರೆ ನಿಮ್ಮ ಅಂತರಂಗದಿಂದ ಆರಂಭವಾಗಬೇಕು. ಮೊದಲು ನಿಮ್ಮನ್ನು ನೀವು ಶುದ್ಧಿಮಾಡಿಕೊಂಡರೆ ಬಾಹ್ಯ ಸ್ಥಿತಿಗಳು ಶುದ್ಧವಾಗುವುವು.

ಇದು ಸ್ವಾರ್ಥಯುಕ್ತವಾದ ಮಾರ್ಗವೆಂದು ತಿಳಿಯಬೇಡಿರಿ. ಅಭಿಮಾನ ಸಹಿತವಾದ ಮಾರ್ಗವೆಂದೆಣಿಸಬೇಡಿರಿ. ನೀವು ಕೃತ ಕೃತ್ಯರಾಗಬೇಕಾದರೆ ಅಹಂಕಾರ, ಮಮಕಾರಗಳನ್ನು ಬಿಡಬೇಕು. ಹೀಗಿರುವಲ್ಲಿ ಸ್ವಾರ್ಥತೆಗೆ ಅವಕಾಶವೆಲ್ಲಿರುವುದು?

ನಿಮ್ಮನ್ನು ನೀವು ಶುದ್ಧಿಪಡಿಸಿಕೊಂಡಹಾಗೆಲ್ಲಾ ದೇಹಾಭಿಮಾನವು ಹೋಗಿ ಆತ್ಮಾಭಿಮಾನವು ಉಂಟಾಗುವುದು. ಸರ್ವರೊಡನೆ ಏಕೀಭವಿಸುವ ಸ್ಥಿತಿಗೆ ನೀವು ಹೋಗುವಿರಿ. ಆ ಸ್ಥಿತಿಗೆ ಹೋದನಂತರ ನೀವು ಸರ್ವರನ್ನು ಪ್ರೇಮಿಸದೆ, ಸರ್ವರಿಗೂ ಸಹಾಯಮಾಡದೆ, ಇರಲು ಸಾಧ್ಯವಿಲ್ಲ. ಮಸಮಸಕಾಗಿ ಉರಿಯುತ್ತಿರುವ ಒಂದು ಮಂದಿರದ ದೀಪಕ್ಕೆ ಹೊಸಹೊಸದಾಗಿ ಒಂದೊಂದು ದೀಪವನ್ನು ತಂದು ಸೇರಿಸುತ್ತಾ ಹೋದರೆ ಹೇಗೆ ಹೆಚ್ಚು ಬೆಳಕುಂಟಾಗುವುದೋ ಹಾಗೆಯೇ ನೀವು ಒಬ್ಬೊಬ್ಬರು ಪರಿಪೂರ್ಣವಾಗುವುದರಿಂದ ಮಾನವ ಕೋಟಿಯ ಪರಿಪೂರ್ಣತೆಗೆ ಸಹಾಯವಾಗುವುದು.

ವಿಕಾಸಕ್ರಮದಲ್ಲಿಯೂ, ಪಾರಮಾರ್ಥಿಕಾಭಿವೃದ್ಧಿಯಲ್ಲಿಯೂ, ಮೇಧಾಶಕ್ತಿಯಲ್ಲಿಯೂ, ದೇಹಬಲದಲ್ಲಿಯೂ, ಆರೋಗ್ಯದಲ್ಲಿಯೂ, ಒಂದು ವಿಷಯ ಸಮರ್ಥತೆಯಲ್ಲಿಯೂ, ಸ್ವತ್ತುಗಳಲ್ಲಿಯೂ ಮನುಷ್ಯರಿಗೆ ಭೇದವು ಇದ್ದೇ ಇರುವುದು.

ಹೊಸನಾಡಿನಲ್ಲಿ ಪರಸ್ಪರ ಪ್ರೇಮ, ತಿಳುವಳಿಕೆಗಳಿರುವುದರಿಂದ ಒಬ್ಬರ ಯಾತನೆಗೆ ಮತ್ತೊಬ್ಬರು ಕಾರಣವಾಗಲಾರರು. ತನ್ನನ್ನೂ, ತನಗಿರುವುದನ್ನೂ ಇತರರಿಗೆ ಅರ್ಪಿಸಲು ಪ್ರತಿಯೊಬ್ಬನೂ ಸಂತೋಷವಾಗಿರುವನು. ದಾರಿದ್ರ್ಯ ದುಃಖವೂ, ಧನವನ್ನು ಸ್ವಾರ್ಥಕ್ಕಾಗಿ ಉಪಯೋಗಿಸಿಕೊಳ್ಳುವ ಪಾಪವೂ ಸುತರಾಂ ಇರುವುದಿಲ್ಲ.

ನಿಮ್ಮ ಪ್ರಶ್ನೆಯಲ್ಲಿ ನಮಗೆ ಬೇರೆಯೇ ಕಾಣಿಸದು. ಹೃದಯಭಾವಗಳೇ ನಮಗೆ ಗಣ್ಯವಾದವುಗಳು. ಕೋಟ್ಯಾನು ಕೋಟಿ ದ್ರವ್ಯದಿಂದಲೂ ಪ್ರಪಂಚದ ಯಾವ ಸಂಪತ್ತಿನಿಂದಲೂ ನೀವು ನಮ್ಮನ್ನು ರಕ್ಷಿಸಲಾರಿರಿ. ಪರಿಶುದ್ಧಾಂತಃಕರಣವೂ, [illegible] ಅಕ್ಕ ಪ್ರಕಾಶವೂ ಎಲ್ಲಿರುವುದೋ ಅಲ್ಲಿಗೆ ನಾವು [illegible] ನಿಶ್ಚಯ.

ಆಗೋ! ಹೊಸನಾಡು ಪ್ರಕಾಶವಾಗುತ್ತಿರುವುದು! ನಮ್ಮ ಮನುಷ್ಯರೆಲ್ಲರನ್ನೂ [illegible] ಪೂರ್ಣವಾಗಿ ಪರಿಷ್ಕರಿಸಬಲ್ಲ ಅಗಾಧಶಕ್ತಿ [illegible]

[illegible] ಪರಿಷ್ಕರಿಸಿಕೊಳ್ಳ [illegible] ಪ್ರಪಂಚವೆಲ್ಲಾ ಹೊಸನಾಡಾಗುವುದು. ಆಗ ನಿಮ್ಮ ಮನುಷ್ಯರೆಲ್ಲರೂ [illegible] ವಾಗುವವು.

[illegible]

[illegible]

ಕರ್ಣಾಟಕ ಥಿಯಸಾಫಿಕಲ್ ಫೆಡರೇಷನ್

1928—29 ನೇ ಸಾಲಿನ ರಿಪೋರ್ಟು

ಸೋದರರೆ,

ಈ ನಮ್ಮ ೨೦ ನೆ ಸಮ್ಮೇಳನಕ್ಕೆ ಯಗ್ಜಿಕ್ಯೂಟಿವ್ ಕಮಿಟಿಯ ಪರವಾಗಿ ತಮ್ಮಗಳಿಗೆಲ್ಲ ಸುಖಾಗಮನವನ್ನು ಬಯಸುತ್ತೇನೆ.

ನಮಗೆ ಅಟಾನಮಿ ದೊರೆತ ೩೦ ತಿಂಗಳುಗಳಲ್ಲಿ ನಿದ್ರಾವಸ್ಥೆಯಲ್ಲಿದ್ದ ಕೆಲವು ಲಾಡ್ಜ್‌ಗಳು ಪುನರುಜ್ಜೀವಿತವಾಗಿರುವವಲ್ಲದೆ ಮೆಂಬರುಗಳ ಸಂಖ್ಯೆಯು ಹೆಚ್ಚಿರುವದು ಸಂತೋಷವಾದ ಸಂಗತಿ. ಆದರೆ ಕಾನಕಾನಹಳ್ಳಿ, ಕೋಲಾರ, ಹೊಳೇನರಸೀಪುರದ ಲಾಡ್ಜ್‌ಗಳು ಮತ್ತು ಗ್ರಾಮ ಸೆಂಟರ್ ಇನ್ನೂ ನಿದ್ರಾವಸ್ಥೆಯಲ್ಲಿರುವದು ವ್ಯಸನಕರವಾಗಿದೆ.

೨. ನಾವು ಹಾಸನದಲ್ಲಿ ಈ ರೀತಿ ಸೇರಿರುವದು ಇದೆ ಎರಡನೆ ಸಲ. ಇಲ್ಲಿಗೆ ಮುಖ್ಯ ಆಧಾರವಾಗಿದ್ದ ನಮ್ಮ ಸಹೋದರರಾದ ಮ|| ಶ್ರೀನಿವಾಸರಾಯರು ದಿವಂಗತರಾದ ವಿಚಾರವು ನಮ್ಮಗಳಿಗೆಲ್ಲ ವ್ಯಸನವನ್ನುಂಟು ಮಾಡುತ್ತದೆ. ಆದರೂ ಅವರು ಪ್ರಾರಂಭಿಸಿದ ಕೆಲಸವನ್ನು ಇಲ್ಲಿ ಈಗ ಇರುವ ಮೆಂಬರುಗಳು ನಡಿಸಿಕೊಂಡು ಬರುತ್ತಿರುವದು ಸ್ತೋತ್ರಾರ್ಹವಾಗಿದೆ.

೩. ನಿದ್ರಾವಸ್ಥೆಯಲ್ಲಿದ್ದ ಆನೆಕಲ್ಲು, ರಾಬರ್ಟ್ಸನ್‌ಪೇಟೆ, ದಾವಣಗೆರೆ ಮತ್ತು ನಂಜನಗೂಡು ಲಾಡ್ಜ್‌ಗಳ ವಿಚಾರದಲ್ಲಿ ನಮ್ಮ ಪ್ರಯತ್ನಗಳೆಲ್ಲವೂ ಅಸಾರ್ಥಕವಾಗಿ ಅವುಗಳನ್ನು ವಜಮಾಡಬೇಕಾಯಿತು. ಮಲ್ಲೇಶ್ವರ ಮತ್ತು ಮುಳಬಾಗಿಲು ಪುನಃ ಚಟವಟಕೆ ಸ್ಥಿತಿಗೆ ಬಂದವು. ಶ್ರೀರಾಂಪುರ ಸೆಂಟರು ಕಳೆದ ಜುಲೈ ತಿಂಗಳಿನಲ್ಲಿ ಒಂದು ಲಾಡ್ಜ್ ಆಯಿತು. ಅಲ್ಲಿ ೧೨ ಜನ ಮೆಂಬರುಗಳಿದ್ದಾರೆ. ೪ ಹಾಲಿಯಿರುವ ಲಾಡ್ಜ್‌ಗಳು ಮತ್ತು ಸೆಂಟರುಗಳು.

(೧) ಸೆಂಟ್ರಲ್ ಗ್ರೂಪ್ (ಬೆಂಗಳೂರು ಮತ್ತು ತುಮಕೂರು ಡಿಸ್ಟ್ರಿಕ್ಟುಗಳು ಸೇರಿ)

೧. ಬೆಂಗಳೂರು ಸಿಟಿ, ೨. ಮಲ್ಲೇಶ್ವರ, ೩. ಚನ್ನಪಟ್ಣ, ೪. ಕ್ಲೋಸ್ಪೇಟೆ, ೫. ದೊಡ್ಡಬಳ್ಳಾಪುರ, ೬. ತ್ಯಾಮಗೊಂಡ್ಲು, ೭. ಕುಣಿಗಲು, ೮. ತುಮಕೂರು, ೯. ಚಿಕ್ಕನಾಯ್ಕನಹಳ್ಳಿ ಮತ್ತು ೧೦. ನಿದ್ರಾವಸ್ಥೆಯಲ್ಲಿರುವ ಕಾಕಾನಹಳ್ಳಿ.

(೧) ಈಸ್ಟರ್ನ್‌ಗ್ರೂಪ್ (ಕಂಟೋನ್ಮೆಂಟ್ ಮತ್ತು ಕೋಲಾರ ಡಿ||)

೧. ಕಂಟೋನ್ಮೆಂಟ್, ೨. ಉಕ್ಕಡವಾಳ್ಯ, ೩. ಮಾಲೂರು, ೪. ಬೌರಿಂಗಪೇಟೆ, ೫. ಮುಳಬಾಗಲು, ೬. ಚಿಂತಾಮಣಿ, ೭. ಶಿಡ್ಲಘಟ್ಟ, ೮. ಚಿಕ್ಕಬಳ್ಳಾಪುರ ಮತ್ತು ೯. ನಿದ್ರಾವಸ್ಥೆಯಲ್ಲಿರುವ ಕೋಲಾರ.

(೨) ವೆಸ್ಟರ್ನ್‌ಗ್ರೂಪ್ (ಹಾಸನ, ಕಡೂರು ಮತ್ತು ಶಿವಮೊಗ್ಗ ಡಿ|| ಗಳು.

೧. ಹಾಸನ, ೨. ಬೇಲೂರು, ೩. ಚಿಕ್ಕಮಗಳೂರು, ೪. ಶಿವಮೊಗ್ಗ ಮತ್ತು ನಿದ್ರಾವಸ್ಥೆಯಲ್ಲಿರುವ ಹೊಳೇನರಸೀಪುರ ಮತ್ತು ಗ್ರಾಮ-

(೩) ನಾರ್ತರ್ನ್‌ಗ್ರೂಪ್ (ಚಿತ್ರದುರ್ಗದ ಡಿ||)

೧. ಚಿತ್ರದುರ್ಗ, ೨. ಮೊಳಕಾಲ್ಮೂರು, ೩. ಶ್ರೀರಾಂಪುರ ಮತ್ತು ೪ ಹಿರಿಯೂರು.

(೪) ಸದರ್ನ್‌ಗ್ರೂಪ್ (ಮೈಸೂರು ಡಿ|| ಮತ್ತು ಕೊಳ್ಳೆಗಾಲ)

೧. ಮೈಸೂರು, ೨. ಚಾಮರಾಜನಗರ, ೩. ಕೊಳ್ಳೇಗಾಲ ಮತ್ತು ೪. ಮಡಿಕೇರಿ.

[illegible]

[illegible]

ಬಹಳ ಕಡಿಮೆಯಾಗಿವೆ. ಮೊದಲಿನ ಎರಡರಲ್ಲಿಯೂ ಡಿಸ್ಟ್ರಿಕ್ಟಿಗೆ ಒಂದೊಂದು ಮಾತ್ರ ಇವೆ. ಇದನ್ನು ಜಾಸ್ತಿಮಾಡುವ ವಿಷಯದಲ್ಲಿ ನಮ್ಮ ಸಹೋದರರು ಬಹಳ ಮುತುವರ್ಜಿ ವಹಿಸಬೇಕಾಗಿದೆ.

೬. ಕೆಲವು ಲಾಡ್ಜ್‌ಗಳು ವಿನಹ ಬಾಕಿಯವುಗಳಲ್ಲೆಲ್ಲ ಕ್ರಮವಾಗಿ ಮೀಟಿಂಗುಗಳು ನಡೆಸಲ್ಪಡುತ್ತಿವೆ.

ಕ್ಲೋಸ್‌ಪೇಟೆ, ದೊಡ್ಡಬಳ್ಳಾಪುರ, ಚಿಂತಾಮಣಿ ಇವುಗಳಲ್ಲಿ ಪ್ರತಿವಾರವೂ ಭಜನೆ ಮತ್ತು ಸಂತೋಷಕೂಟಗಳು ನಡೆಸಲ್ಪಡುತ್ತಿವೆ. ಶಿಡ್ಲಘಟ್ಟ ಮತ್ತು ಕೊಳ್ಳೇಗಾಲದಲ್ಲಿ ಬಡವರ ಮಕ್ಕಳಿಗೂ ಮತ್ತು ನಿಮ್ನಜಾತಿಯವರಿಗೂ ರಾತ್ರೆ ಸ್ಕೂಲುಗಳು ನಡೆಸಲ್ಪಡುತ್ತಾ ಇವೆ. ಬೇಲೂರಿನಲ್ಲಿ ಬಡವರಿಗೆ ಔಷಧಿಗಳನ್ನು ಕೊಡುತ್ತಾ ಇದೆ. ಬೆಂಗಳೂರು ಸಿಟಿ, ಕಂಟೋನ್ಮೆಂಟ್ ಮತ್ತು ಮೈಸೂರು ಸೊಸೈಟಿಗಳವರು ಅನೇಕ ಬಗೆಯಲ್ಲಿ ಸೇವೆಗಳನ್ನು ಮಾಡುತ್ತಿದ್ದಾರೆ.

ಭಾರತ ಸಮಾಜ ಪೂಜೆಯು ಬೆಂಗಳೂರು ಸಿಟಿ ಮತ್ತು ಚಿಕ್ಕನಾಯಕನಹಳ್ಳಿಯಲ್ಲಿ ಕ್ರಮವಾಗಿ ನಡೆಯುತ್ತಾ ಇದೆ. ಈಚಿಗೆ ಮೈಸೂರಿನಲ್ಲಿಯೂ ನಡೆಯುತ್ತಿದೆ. ನಮ್ಮ ಸಹೋದರರಾದ ಮ|| ಸೂರ್ಯನಾರಯಣ ಪಂಡಿತರು ತಮ್ಮ ಮನೆಯನ್ನು ಪೂರ್ತಿಯಾಗಿ ಸೊಸೈಟಿ ಉಪಯೋಗಕ್ಕಾಗಿ ಮೈಸೂರಿನಲ್ಲಿ ಬಿಟ್ಟು ಕೊಟ್ಟಿರುವದು ಬಹಳ ಸ್ತೋತ್ರಾರ್ಹವಾಗಿದೆ. ಇದರಿಂದ ಮೈಸೂರಿನಲ್ಲಿ ಕಟ್ಟಡವಿಲ್ಲದೆಯಿದ್ದ ಕೊರತೆಯು ನಿವಾರಣೆಯಾಗಿ ಕೆಲಸಗಳು ಕ್ರಮವಾಗಿ ನಡೆಯಲು ಅನುಕೂಲವಾಗಿದೆ.

ಶಿಡ್ಲಘಟ್ಟ ಮತ್ತು ಚಿಕ್ಕನಾಯಕನಹಳ್ಳಿಯಲ್ಲಿ ಬಲವಾದ ಸ್ತ್ರೀ ಶಾಖೆಗಳು ಇದ್ದು ಶ್ಲಾಘ್ಯವಾದ ಕೆಲಸಗಳು ನಡೆಯುತ್ತಿವೆ.

ಬೆಂಗಳೂರಿನಲ್ಲಿರುವ ೪ ಮೆಸಾನಿಕ್ ಲಾಡ್ಜ್‌ಗಳಲ್ಲಿಯೂ ಕೆಲಸಗಳು ತೃಪ್ತಿಕರವಾಗಿ ನಡೆಯುತ್ತಿವೆ.

ಕಂಟೋನ್ಮೆಂಟಿನಲ್ಲಿ Women's Indian Association (ಭಾರತ ಮಹಿಳೆಯರ ಮಂಡಲಿ) ಉಪಶಾಖೆಯೊಂದು ಇದೆ. ನಮ್ಮ ಕಂಟೋನ್ಮೆಂಟ್ ಸಹೋದರರು ತುಂಬ ಸಹಾಯ ಮಾಡುತ್ತಿದ್ದಾರೆ, ತ್ಯಾಮ

ಗೊಂಡ್ಲು, ಬೌರಿಂಗ್‌ಪೇಟೆ ಮತ್ತು ಚಿಂತಾಮಣಿಯಲ್ಲಿಯೂ ಶಾಖೆಗಳನ್ನು ಏರ್ಪಡಿಸಲು ತರದೂರು ನಡೆಯುತ್ತಾ ಇದೆ.

ಬೆಂಗಳೂರಿನಲ್ಲಿ ಇರುವ ಯುವಕ ಸಂಘವು ಚನ್ನಾಗಿ ಕೆಲಸಮಾಡುತ್ತಿರುವಂತೆ ತಿಳಿದು ಬರುತ್ತದೆ. ಇತರ ಕಡೆಗಳಲ್ಲಿಯೂ ನಮ್ಮ ಸಹೋದರರು ಯುವಕರ ಅಭಿವೃದ್ಧಿಗೆ ಅನುಕೂಲಮಾಡಿ ಕೊಟ್ಟರೆಂದು ಕೋರಿದೆ.

೭. ದೇಶಸೇವೆಗಾಗಿ ಬೆಂಗಳೂರು ಮತ್ತು ಮೈಸೂರು ಲಾಡ್ಜ್‌ಗಳು ಏನೂ ಇನ್ನೂ ಯೋಜನೆ ಮಾಡದೆ ಇರುವದು ವಿಷಾದಕರವಾಗಿದೆ. ವಿದ್ಯಾವಂತರಾಗಿ ಪುಸ್ತಕಗಳನ್ನು ಓದಿ ತಿಳಿದುಕೊಳ್ಳುವದಾಗಿಂತ ಇತರರಿಗೆ ನಮ್ಮ ಸಹಾಯವು ಅವಶ್ಯಕವಾದದ್ದೆಂಬುವದನ್ನು ನಮ್ಮಲ್ಲಿ ಪ್ರತಿ ಒಬ್ಬರೂ ಜ್ಞಾಪಕದಲ್ಲಿಡಬೇಕಾಗಿದೆ.

೮. [illegible]

[illegible]

೯. [illegible]

[illegible]

೧೦. ಕಳೆದ ಫೆಡರೇಷನ್ನಿನಲ್ಲಿ ತೀರ್ಮಾನಿಸಿದ್ದಂತೆ 'ಬ್ರಹ್ಮವಿದ್ಯಾ' ಮತ್ತು "ತಾರಕೋದಯ'' ಎರಡನ್ನೂ ಒಟ್ಟು ಸೇರಿಸಿ ''ದಿವ್ಯ ಜ್ಯೋತಿ'' ಎಂಬ ಹೆಸರಿನಿಂದ ಮಾಸಪತ್ರಿಕೆಯನ್ನು ಹೊರಡಿಸುತ್ತಾ ಇದೆ. ಕನ್ನಡದಲ್ಲಿ ಇದೊಂದೆ ಪತ್ರಿಕೆಯಾಗಿದ್ದರೂ ಕೂಡ ಅದಕ್ಕೆ ಸರಿಯಾದ ಪ್ರೋತ್ಸಾಹವಿಲ್ಲದಿರುವದು ವಿಷಾದಕರವಾಗಿದೆ.

೧೧. ಕಂಟೋನ್ಮೆಂಟಿನಲ್ಲಿ ೨೮ ನೇ ಏಪ್ರಿಲ್‌ನಲ್ಲಿ ಒಂದು ಕಮ್ಯೂನಲ್ ಕೂಟವು ಒಂದು ವಾರದವರೆಗೆ ಜರುಗಿತು.

ಕಳೆದ ಸಾಲಿನಲ್ಲಿ ನಮ್ಮ ಫೆಡರೇಷನ್ ಚಿತ್ರದುರ್ಗದಲ್ಲಿ ನಡೆಯಿತು.

೨೦-೫-೨೮ ರಲ್ಲಿ ಕೃಷ್ಣರಾಜ ಸಾಗರದಲ್ಲಿ ಒಂದು ಡಿಸ್ಟ್ರಿಕ್ಟ್ ಕಾನ್‌ಫರೆನ್ಸ್ ಜರುಗಿತು.

೧೧-೬-೨೮ ರಿಂದ ೧೫-೬-೨೮ ರವರೆಗೆ ಮೈಸೂರಿನಲ್ಲಿ ಒಂದು ಕ್ಯಾಂಪ್ ಏರ್ಪಾಡಾಗಿತ್ತು.

೨-೧೨-೨೮ ರಲ್ಲಿ ಈಸ್ಟರ್ನ್ ಗ್ರೂಪ್ ಕಾನ್‌ಫರೆನ್ಸ್ ಬೌರಿಂಗ್‌ಪೇಟೆಯಲ್ಲಿ ಜರುಗಿತು.

೩-೬-೨೮ ರಲ್ಲಿ ಕ್ಲೋಸ್‌ಪೇಟೆಯಲ್ಲಿ ಒಂದು ಡಿಸ್ಟ್ರಿಕ್ಟ್ ಗ್ರೂಪ್ ಇ. ಎಸ್. ಕಾನ್‌ಫರೆನ್ಸ್ ಮತ್ತು ೭-೭-೨೮ ರಲ್ಲಿ ಬೆಂಗಳೂರಿನಲ್ಲಿ ನಮ್ಮ ಫೆಡರೇಷನ್ ಇ. ಎಸ್. ಕಾನ್‌ಫರೆನ್ಸ್ ಸಹ ಜರುಗಿದವು.

ಇವುಗಳಲ್ಲೆಲ್ಲಾ (೨ ವಿನಹ) ಬ್ರ|| ಶ್ರೀ|| ಟಿ. ರಾಮಚಂದ್ರರಾಯರವರು ಅಧ್ಯಕ್ಷತೆಯನ್ನು ವಹಿಸಿದ್ದರು.

ಕೇರಳ ಫೆಡರೇಷನ್ನಿನಲ್ಲಿರುವಂತೆ ನಮ್ಮಲ್ಲಿಯೂ ಪ್ರತಿವರ್ಷವೂ ಒಂದು ಟಿ. ಎಸ್. ಕ್ಯಾಂಪ್ ಏರ್ಪಾಡು ಮಾಡುವದು ನನಗೆ ಸೂಕ್ತ ತೋರುತ್ತದೆ.

೧೨. ಈಸ್ಟರ್ನ್ ಗ್ರೂಪ್ ಸೆಕ್ರೆಟರಿ ಮೆ|| ಸೀತಾಪತಿರಾಯರು ಕೋಲಾರ ಮತ್ತು ಚಿಂತಾಮಣಿಗೆ ಒಂದೊಂದು ಸಲ ದಯಮಾಡಿದ್ದರು.

ರಾಬರ್ಟಸನ್‍ಪೇಟೆ ಲಾಡ್ಜುಗಳನ್ನು ಅಲ್ಲಿನ ಮೆಂಬರುಗಳ ಉದಾಸೀನಭಾವದಿಂದ ಪುನರುಜ್ಜೀವನ ಮಾಡಲಾಗಲಿಲ್ಲವೆಂದು ಅವರು ತಿಳಿಸಿರುತ್ತಾರೆ.

ವೆಸ್ಟರ್ನ್ ಗ್ರೂಪ್ ಸೆಕ್ರೆಟರಿ ಮ|| ಆರ್. ಸೂರಪ್ಪನವರು ತಮ್ಮ ದೇಹಸ್ಥಿತಿ ಸರಿಯಾಗಿಲ್ಲದೆ ಇದ್ದರೂ ಹೊಳೆನರಸೀಪುರ ಗ್ರಾಮ ಮತ್ತು ಹಾಸನಕ್ಕೆ ಹೋಗಿದ್ದರು.

ನಾರ್ದರ್ನ್ ಗ್ರೂಪ್ ಸೆಕ್ರೆಟರಿಗಳಾದ ಮ|| ಮಾಧವರಾಯರು ಮೊಳಕಾಲ್ಮೂರು ಮತ್ತು ದಾವಣಗೆರೆಗೆ ಹೋಗಿದ್ದರು.

ಸದರ್ನ್ ಗ್ರೂಪ್ ಸೆಕ್ರೆಟರಿ ಮ|| ವೆಂಕಣ್ಣಭಟ್ಟರು ಚಾಮರಾಜನಗರ, ನಂಜನಗೂಡು ಮತ್ತು ಕೃಷ್ಣರಾಜಸಾಗರಕ್ಕೆ ಹೋಗಿ ಉಪನ್ಯಾಸಗಳನ್ನು ಮಾಡಿದರು.

ಇವರಿಬ್ಬರು ತಮ್ಮ ಗ್ರೂಪಿನ ನಿಮಿತ್ತ ಇತರ ಕಡೆಗಳಿಗೆ ಹೋಗಲು ಆಗಲಿಲ್ಲ.

ಸೆಂಟ್ರಲ್ ಗ್ರೂಪ್ ಸೆಕ್ರೆಟರಿ ಮ|| [illegible] ಚನ್ನಪಟ್ಟಣ ಮತ್ತು [illegible] ಹೋಗಿದ್ದರು. [illegible] ನಿಮಿತ್ತ [illegible] ಆಗಲಿಲ್ಲ.

[illegible]

[illegible]

೧೫. ಪಬ್ಲಿಕ್ ಪರ್ಪೋಸಸ್ ಫಂಡಿಗಾಗಿ ೧೪೧೬ ರೂಪಾಯಿಗಳು ಮಾತ್ರ ವಸೂಲಾಯಿತು. ಮೆಂಬರುಗಳೆಲ್ಲರೂ ಈ ವಿಚಾರದಲ್ಲಿ ಪೂರ್ಣಗಮನ ಕೊಡುತ್ತಾರೆಂದು ನಂಬಿದೆ.

೧೬. ಜಮಾಖರ್ಚು-೯-೧-೪-೨೮ ರಲ್ಲಿ ನಮ್ಮಲ್ಲಿ ಶಿಲ್ಕು ೬೩೮-೦-೧ ಇತ್ತು. ಈ ಸಾಲಿನಲ್ಲಿ ೨೦೦೧-೧-೧೦ ಜಮಾ ಬಂದು ಜುಮ್ಲಾ ೨೬೩೯-೧-೧೧ ಆಯಿತು. ಈ ಪೈಕಿ ಶಿಲ್ಕು ನಿಂತಿತು. ನಮ್ಮಲ್ಲಿ ಕೆಲಸ ಮಾಡುತ್ತಿರುವವರೆಲ್ಲರೂ ಸಂಬಳ ತೆಗೆದು ಕೊಳ್ಳದೆ ಕೆಲಸ ಮಾಡುತ್ತಿರುವದೇ ಈ ಉತ್ತಮ ಸ್ಥಿತಿಗೆ ಕಾರಣವಾಗಿದೆ. ಇದಕ್ಕಾಗಿ ಅವರೆಲ್ಲರಿಗೂ ನಾವು ಕೃತಜ್ಞರಾಗಿದ್ದೇವೆ.

೧೭. ಈ ಸಾಲಿನಲ್ಲಿ ನಡೆದ ಬಹಳ ಮುಖ್ಯವಾದ ವಿಷಯವೇನಂದರೆ, ಡಾ|| ಆನಿಬೆಸೆಂಟರವರು ಪುನಹ ಪ್ರೆಸಿಡೆಂಟರಾಗಿ ಚುನಾಯಿಸಲ್ಪಟ್ಟರು.

೧೮. ಈ ಸಾಲಿನಲ್ಲಿ ೩ ಸಲ ಕೌನ್ಸಿಲ್ ಮೀಟಿಂಗ್ ನಡೆಯಿತು.

ಜಾಯಿಂಟ್ ಸೆಕ್ರೆಟರಿ ಮ|| ಚೌಡೈಯ್ಯನವರು ಮತ್ತು ಟ್ರೆಜರರ್ ಮ|| ಕೃಷ್ಣರಾಯರು ಬೆಂಗಳೂರು ಬಿಟ್ಟು ಹೊರಟು ಹೋಗಬೇಕಾಗಿ ಬಂದ ಕಾರಣ ಅವರ ಸ್ಥಾನಗಳಲ್ಲಿ ಮ|| ಲಕ್ಷ್ಮೀನರಸೈಯ್ಯನವರು ಮತ್ತು ಮ|| ನಂಜುಂಡ ಮೊದಲಿಯಾರ್ರು ಚುನಾಯಿಸಲ್ಪಟ್ಟರು.

ಲಾಡ್ಜ್ ಸೆಕ್ರೆಟರಿಗಳಿಂದ ಈ ಸಾಲಿನಲ್ಲಿ ಸಾವಕಾಶವಿಲ್ಲದೆ ಕಾಗದಗಳಿಗೆ ಜವಾಬು ಬಂದು ಕೆಲಸಗಳು ಜಾಗ್ರತೆಯಾಗಿ ನಡೆದು ಬಂದಿರುವುದು ಸ್ತೋತ್ರಾರ್ಹವಾಗಿದೆ.

ಯನ್. ಪಿ. ಸುಬ್ರಹ್ಮಣ್ಯಯ್ಯರ್,
ಫೆಡರೇಷನ್ ಸೆಕ್ರೆಟರಿ.

ಶಾಂತಿ

ಬಾಹ್ಯ ಪ್ರಪಂಚದಲ್ಲಿ ನಿಲುಗಡೆ ಇಲ್ಲದ ಗದ್ದಲವೂ ಹೋರಾಟವೂ ತೋರುತ್ತಿರುವುದು. ಹೀಗಿದ್ದರೂ ಸೃಷ್ಟಿಯಲ್ಲಿ ಚರಾಚರ ವಸ್ತುಗಳ ಸಾರಭೂತವಾದ ಅಂತರ್ಯಾಮಿಯಾದರೋ ಅಚಲ ಶಾಂತತೆಯಿಂದಿರುವುದು. ಇದೇ ಪರಮಚೇತನ ಸ್ವಸ್ಥಾನ. ವಸ್ತು ಸಮುದಾಯದಲ್ಲೆಲ್ಲಾ ಇದು ನೆಲೆಸಿರುವಂತೆಯೇ ಮನುಷ್ಯನಲ್ಲಿಯೂ ಗರ್ಭೀಕೃತವಾಗಿರುವುದು. ಹೊರಗಿನ ನಾಮರೂಪ ವ್ಯತ್ಯಾಸಗಳ ಬಲೆಗೆ ಸಿಲುಕದೆ ಇರುವ ಈ ಶಾಂತಿನಿಲಯವು ಮಹಾಸಾಗರದ ಅಲ್ಲಕಲ್ಲೋಲ ಮಾಡುವ ಬಿರುಗಾಳಿಗಳ ಭಯಂಕರವಾದ ಅಲೆಗಳು ಸೋಕದೆ ಇರುವ ಪಾತಾಳ ಗಂಗೆಯಂತೆ, ಸಮಸ್ತ ವಿಧದ ಕಷ್ಟದುಃಖಗಳಿಗೆ ದೂರವಾಗಿರುವುದು. ಈ ಪರಮ ಶ್ರೇಷ್ಠ ಸ್ಥಾನ ಸೇರಿದರೆ ಮಾತ್ರವೇ ಮನುಷ್ಯನು ಶಾಂತಿಯನ್ನು ಪಡೆಯುವನು.

ಲೋಕದಲ್ಲಿ ನಮಗೆ ಗೋಚರವಾಗುವ ಅಸೂಯೆ, ಗರ್ವ, ಕಾಮ ಕ್ರೋಧವೇ ಮೊದಲಾದ [illegible] ಶಕ್ತಿಗಳು ಅಬ್ಬರ ಮಾಡುತ್ತಾ [illegible] ಅವೆಲ್ಲವೂ [illegible] ನಾನಾ [illegible]

[illegible]

ಕಾರ್ಯಗಳನ್ನೆಲ್ಲಾ ಅಣಿಯಾಗಿ ಮಾಡುತ್ತಾ ಬಾಯಿಯಲ್ಲಿ ಶಾಂತಿಃ ! ಶಾಂತಿಃ !! ಶಾಂತಿಃ !!! ಎಂದು ತುಟಿಗಳನ್ನು ಮಾತ್ರ ಕುಣಿಸುತ್ತಾರೆ. ದೇಹೇಂದ್ರಿಯಗಳ ಇಚ್ಛೆಯು ನೆರವೇರಿದಾಗ ನಮಗುಂಟಾಗುವ ತೃಪ್ತಿಯೂ ಸಮಾಧಾನವೂ ಶಾಂತಿಗೆ ಎಷ್ಟೋ ದೂರವಾದವುಗಳು, ಇವು ಅಶಾಶ್ವತವಾದವು. ನಮಗುಂಟಾದ ಸಮಾಧಾನಕ್ಕೆ ಕಾರಣರೂಪವಾದ ಸ್ಥಿತಿಗತಿಗಳು ಬದಲಾಯಿಸಿ ಹೋದರೆ ಸಮಾಧಾನವೂ ಮಾಯವಾಗುವುದು. ನಿಜವಾದ ಶಾಂತಿಯಾದರೋ ಯಾವಾಗಲೂ ಏಕರೀತಿಯಾಗಿದ್ದು ವ್ಯತ್ಯಾಸ ಹೊಂದುವುದಿಲ್ಲ. ಆತ್ಮನಿಗ್ರಹವು ಶಾಂತಿಗೆ ತುಂಬಾ ಸಹಕಾರಿ.

ಆದ್ದರಿಂದ ಪ್ರಪಂಚದಲ್ಲಿನ " ಜನ್ಮ ದುಃಖ ಜರಾದುಃಖ " ವೆಂಬ ದುಃಖ ಸಮಸ್ತಗಳಿಗೂ ದೂರವಾಗಿರುತ್ತಾ ಅವುಗಳಲ್ಲಿ ಮಿಳಿತನಾಗದೆ ಇರಬೇಕೆನ್ನುವ ಪ್ರತಿ ಮನುಷ್ಯನೂ ಆತ್ಮನಿಗ್ರಹ ಮಾಡಿಯೇ ತೀರಬೇಕು. ದೇಹೇಂದ್ರಿಯ ಶಕ್ತಿಗಳನ್ನು ಪೂರ್ಣವಾಗಿಯೂ ಮನಸ್ಸಿನ ವಶದಲ್ಲಿಟ್ಟು, ಮನಸ್ಸನ್ನು ಬುದ್ಧಿಯ ಸ್ವಾಧೀನಮಾಡಿ, ಶ್ರೇಷ್ಠವಾದ ಆ ಬುದ್ಧಿಯನ್ನು ಜೀವಾತ್ಮನ ಕೈಯಲ್ಲಿಡುವುದಾದರೆ ಆತ್ಮ ಸಾಕ್ಷಾತ್ಕಾರವಾಗಿ ಶಾಂತಿ ನೆಲೆಯು ಗೋಚರ ಪಡುವುದು. ಯಾವನಾಗಲಿ ಶಾಂತಾಮಯಿಯಾಗಬೇಕಾದರೆ ಈ ಮಾರ್ಗವಲ್ಲದೆ ಬೇರೊಂದಿಲ್ಲ. ಈ ಮಾರ್ಗವನ್ನು ಮಾತ್ರ ಪ್ರವೇಶಿಸಲೊಲ್ಲದೆ ಹಗಲಿರುಳು ಪ್ರಾರ್ಥನೆ ಮಾಡಿದರೂ ಗೂಡೆಗಟ್ಲೆ ಹೂವನ್ನು ಪೂಜೆಮಾಡಿದರೂ ಈ ಧ್ಯೇಯವನ್ನು ಪಡೆಯಲಾಗುವುದಿಲ್ಲ. ಅಂಥ ಮನುಷ್ಯನಿಗೆ ಯಾವ ದೇವನಾಗಲಿ ಏನೂ ಸಹಾಯ ಮಾಡಲಾರನು.

ಈ ಕಾರಣದಿಂದ ಒಂದು ಕ್ಷಣಕಾಲ ಮಾತ್ರವಾದರೂ ಇಂದ್ರಿಯಗಳ ಎಳೆತಕ್ಕೆ ಸಿಕ್ಕದೆ, ಮನೋ ವ್ಯಾಪಾರವನ್ನು ನಿಲ್ಲಿಸಿ, ಸಮಾಧಾನಚಿತ್ತದಿಂದ ಮೌನವಾಗಿರುವುದನ್ನೂ ಧ್ಯಾನ ಪರಾಯಣರಾಗಿರುವುದನ್ನೂ ಎಲ್ಲರೂ ಅಭ್ಯಾಸ ಮಾಡಬೇಕು. ಇದರಿಂದ ಸತ್ಯಮಾರ್ಗವು ಗೋಚರವಾಗಿ ಸತ್ಯವಸ್ತುವಿನ ನಿಜತ್ವವು ತೋರಬರುವುದು. ಸತ್ಯವಸ್ತುವಿನ ಸ್ಥಾನವೂ ಶಾಂತಿದಾಯಕವೂ ಆದ ಈ ಕೇಂದ್ರವನ್ನು ಬಿಟ್ಟರೆ ಮನುಷ್ಯನಿಗೆ ನಿಲುಗಡೆಯ ಸ್ಥಾನವು ಬೇರೊಂದಿಲ್ಲ. ಅರೆ ಘಳಿಗೆಯಾಗಲಿ, ಒಪ್ಪ

ತ್ತಾಗಲಿ, ಒಂದು ದಿನವಾಗಲಿ ಈ ಸ್ಥಾನವನ್ನು ಸೇರಿ ಅಲ್ಲಿರಲು ಯತ್ನಿಸುವುದಾದರೆ ಸರ್ವದಾ ಅಲ್ಲಿರಲು ಶಕ್ಯವಾಗುವುದು.

ಕಷ್ಟದುಃಖಗಳೂ, ಭಯವ್ಯಾಕುಲಗಳೂ ಕೀಳುಪ್ರಕೃತಿಗಳಾದ ದೇಹೇಂದ್ರಿಯ ಮನಸ್ಸುಗಳ ವ್ಯಾಪಾರಗಳೆಂದು ನಾವು ಅರಿಯಬೇಕು. ಯಾರಾಗಲಿ ಈತೆರನಾದ ವ್ಯಾಪಾರಗಳಲ್ಲಿಯೇ ತೇಲಿ ಮುಳುಗಿ ದುಃಖಭಾಜನರಾಗಬಹುದು; ಇಲ್ಲವೇ, ಇವುಗಳನ್ನು ದೂರಮಾಡಿ ಸಮಾಧಾನಚಿತ್ತರಾಗಿ ಸುಖಿಗಳಾಗಬಹುದು. ನಮಗೆ ಪ್ರತಿಯಾಗಿ ಮತ್ತಾರೂ ಕಷ್ಟನಷ್ಟಗಳನ್ನು ದುಃಖಾಲಾಪಗಳನ್ನು ಬಿಡುವುದಾಗಲಿ, ಶಾಂತಿ ಮಾರ್ಗವನ್ನು ಪ್ರವೇಶಿಸುವುದಾಗಲಿ, ಆಗಲಾರದು. ಲೋಕದಲ್ಲಿ ಹಿಂದೆ ಆಗಿಹೋದ ಮುಕ್ತ [illegible] ಗುರುಗಳೆಲ್ಲರೂ ಸತ್ಯಪ್ರಧಾನವಾದ ಮಾರ್ಗದಲ್ಲಿ ತಾವು ನಡೆದು ಹೋಗಿ ಆ ಮಾರ್ಗವೊಂದನ್ನು ನಮಗೆ ತೋರಿಸಬಲ್ಲರೇ ವಿನಾ ನಮಗಾಗಿ, ನಮಗೆ ಪ್ರತಿಯಾಗಿ, ಯಾರೂ ನಡೆಯಲಾಗುವುದಿಲ್ಲ. ನಮ್ಮಲ್ಲಿ ಪ್ರತಿಯೊಬ್ಬರೂ ಆ ಮಾರ್ಗದಲ್ಲಿ ಹೆಜ್ಜೆ ಹಾಕಲೇ ಬೇಕು. [illegible] ಶಾಂತತೆಯನ್ನು [illegible] ಕಾರ್ಯಗಳನ್ನು [illegible] ಕಾರ್ಯದಲ್ಲಿ [illegible]

[illegible]

ಬೇಕು. ಪರಹಿತವನ್ನು ಯೋಚಿಸುತ್ತಾ ಆ ಕಾರ್ಯದಲ್ಲಿ ಯತ್ನಮಾಡುವುದಾದರೆ ದುಃಖವು ದೂರವಾದಂತೆಯೇ ಸರಿ.

ಮನುಷ್ಯರೆಲ್ಲರೂ ದೈವಶಕ್ತಿ, ಮಾನುಷಶಕ್ತಿ, ಮೃಗಶಕ್ತಿಗಳಿಂದ ಕೂಡಿದಾರೆ. ಬಾಲಜೀವರಾಗಿರುವಾಗ ದೈವ ಮಾನುಷ ಶಕ್ತಿಗಳು ಮಾಲಿನ್ಯ ಹೊಂದಿ ಮೃಗಶಕ್ತಿಯೇ ಅಧಿಕವಾಗಿ ತಾನೇ ತಾನಾಗಿ ವ್ಯಕ್ತಗೊಳ್ಳುತ್ತಿರುವುದು. ಜನ್ಮಾಂತರಗಳು ಕಳೆದು ದುಃಖಾನುಭವವು ಹೆಚ್ಚಿ ವಿವೇಕಜ್ಞಾನವು ತಲೆದೋರಿದಂತೆಲ್ಲಾ ಮೃಗಸ್ವಭಾವವು ಮಾಯವಾಗಿ ಮಾನುಷಶಕ್ತಿಯು ಬಲಪಡುವುದು. ಪುರುಷನು ಶುದ್ಧಾಂತಃಕರಣವುಳ್ಳವನಾಗಿ ದೇಹೇಂದ್ರಿಯ ಮನಸ್ಸುಗಳನ್ನು ನಿಗ್ರಹಿಸಿದರೆ ದೈವಸ್ವಭಾವವು ಅತಿಶಯದಿಂದ ವ್ಯಕ್ತಗೊಂಡು ಕ್ರಮೇಣ ಪರಿಪೂರ್ಣತೆಯನ್ನು ಹೊಂದಲು ಸಾಧಕವಾಗುವುದು.

ಆದ್ದರಿಂದ ಮೃಗಸ್ವಭಾವವನ್ನು ಬಿಡಬೇಕು. ಅನುಭವ ಜ್ಞಾನವನ್ನು ಪಡೆಯಬೇಕು. ಶುದ್ಧಾಂತಃಕರಣವನ್ನು ಹೊಂದಲು ಬಾಧಕವಾದ ಸ್ವಾರ್ಥತೆಯ ಕಂಟಲೆಯನ್ನು ಕತ್ತರಿಸಿ ಪ್ರೇಮೆಯೆಂಬ ಪರಿಮಳಕುಸುಮವನ್ನು ನೋಡಬೇಕು. ಪ್ರೇಮೆಯು ಅಮೂಲ್ಯರತ್ನದಂತಿರುವುದು. ಇದಿಲ್ಲದಿದ್ದರೆ ಅಸಾಧ್ಯವಾಗಿಯೂ ಅಶಕ್ಯವಾಗಿಯೂ ಕಾಣುವ ಕಾರ್ಯಗಳನ್ನು ಇದೊಂದೇ ಸಾಧ್ಯವಾಗಿಯೂ ಶಕ್ಯವಾಗಿಯೂ ಮಾಡುವುದು. ಇದರ ಮಹಿಮೆಯಿಂದ ದುಃಖವು ದೂರವಾಗುವುದು, ಸ್ವರ್ಗವು ಸಮೀಪಿಸುವುದು; ನಾಮರೂಪಗಳೆಂಬ ಮಾಯಾವರಣದ ಹೊದಿಕೆಗಳಾದ ಪ್ರಪಂಚಿಕ ಭಾವಗಳು ಸೋಕಲಾರವು, ದೈವಸೃಷ್ಟಿಯಲ್ಲಿ ಎಲ್ಲವನ್ನೂ ಸಮದೃಷ್ಟಿಯಿಂದ ನೋಡಬಹುದಾದ ದಿವ್ಯದೃಷ್ಟಿಯು ನಮ್ಮದಾಗುವುದು. ಹೆಚ್ಚು ಹೇಳಲೇಕೆ, ನಾವು ಮುಕ್ತಿ ಸಾಮ್ರಾಜ್ಯವನ್ನೇ ಸೇರಬಹುದು

'ಗುರುಪ್ರಸಾದ'

ORDER OF THE STAR IN THE EAST

KARNATAKA DIVISION

Report for the Year 1928—29

Membership—

According to the new list of members received from the Indian Head Quarters there are at present 575 members in this Division distributed as follows:—

Bangalore District	288
Mysore "	57
Hassan "	11
Chitaldroog "	43
Tumkur "	76
Kolar "	81
Hospet (Bellary Dist.)	19
Total	*575*

This number includes boys and girls also as no distinction is now maintained between older and younger members as was used to be done formerly.

Groups—

There are 24 Groups in the Division. The Groups that were existing at Chikmagalur, Mulbagal and [illegible] are not included in the list as the Members there have not renewed their membership and consequently their names do not appear in the new lists of members and Groups. It is hoped they will be revived soon.

There are no Groups formed yet at the following places though there are some members there. The members in these places are requested to take steps to form Groups in the respective localities:—

Belur, Tiptur, [illegible], Malur and Sri Rampur.

A new Group consisting of Adi-Karnataka Members was formed at [illegible], [illegible] Taluk, during the year. Its formation was mainly due to the efforts of

Br. K. T. Ramaswamy of Bangalore who has been doing there valuable work for the betterment of those people.

Activities—

I have not much of Group activity to report as I have no information from the Groups. But I think it may be said that there is not as much activity and enthusiasm as one would wish, considering the presence of the World-Teacher in our midst and the urgent need there is to spread His message.

The last sesstion of the Karnataka Star Conference was held at Bangalore in July last, Bro. T. Ramachandra Rao Garu presiding. A Sale bazaar was held on the occasion, the net proceeds of which together with the collection made for the self offering month *viz* Rs 56/5 was remitted to Adyar.

Members' Camps were held at Bangalore, Mysore and Closepet.

A school, named Vasanta Models School, is conducted by some of our Members at Bangalore where an attempt is made to embody new ideals in Education.

Publications—

1000 Copies of Krishnajis' "Message to India" were printed and distributed. Bro. Asundi Bhima Rao of the Hospet Group got printed a Kanarese pamphlet containing information about our Order. A translation of "Who brings the Truth?" has been printed and and published. The books "Life the Goal" and "Let Understanding be the Law" are translated but are not published for want of funds. Many chapters from "The Kingdom of Happiness" are translated and published in the journal and the rest are being translated. Arrangements are also made for the translation of some other books of Krishnaji, such as "By what Authority" and "Life the Goal." But their publication means money and it is hoped that some arrangement will be made in this Conference to finance it, as it is the

best and the only way to spread Krishnajis' teachings among the non-English-knowing public.

Divya-Jyoti

The Star Kanarese organ, "Taraka Sandesha" was amalgamated with the T. S. Journal "Brahna Vidya," the combined organ being issued under the name of "Divya-Jyoti." Important speeches and pronouncements of Krishnaji are translated and published in the journal regularly besides other matter. There was a delay in the issue of some numbers due mainly to Printers. But it is now brought up to date and every endeavour will be made to avoid such delays hereafter though so long as we have not our own press we cannot have our own way in this respect.

General

I am glad to state that Bro. D. Srinivasiengar has been appointed Organising Secretary of the Order of the Star in this Division. His accession will, no doubt, be of great help to our movement here.

Our future work

Apart from each member assimilating and embodying Krishnaji's teachings in his own life which is also the best method of propaganda, but which is of course the concern of each individual for himself, I think we can usefully carry on the following activities collectively:—

(1) Holding of frequent Star Camps by Groups and Districts.

(2) Vernacular publication of Krishnaji's books.

(3) Printing and distribution of small leaflets both in English and Vernacular.

Conclusion

In conclusion, let us, brothers, bestir ourselves and do all we can in the coming year to spread our ideas.

K. VENKATARAMAIAH,
Divisional Secretary.

KARNATAKA STAR CONFERENCE, HASSAN

Proceedings of the Business Meeting held on 4-5-1929

There were about 40 members from different parts of the Karnataka Division present, the number of members attending the Conference itself being 70.

Dewan Bahadur Rajadharma Pravina K. S. Chandrasekhara Aiyar presided.

The Divisional Secretary read a brief report of the work of the Division for the year 1928-29 which, after some discussion, was adopted.

The following persons were appointed members of the divisional Council for the year 1929-30:—

President—Bro. K. S. Chandrasekara Aiyar
Vice-President—N. P. Subrahmanya Aiyar
Secretary (Ex. officio)—K. Venkataramaiah
Assist, Secretary, S. Lakshminarasaiah

Other Members

Bro. D. Srinivasiengar
" K. Shankaranarayana Rao
" K. Kamalamma

The appeal for funds by the Indian Star Head-Quarters and also the necessity of having a Divisional fund to meet postage, Travelling expenses and other contingencies of the Division was considered and the following resolution was passed unanimously.

Resolved that each Star Member of the Division be required to pay annually a sum of not less than Re. 1/- four-fifths of which be remitted to the Indian section and

remainder kept for divisional purposes. The Group should make up collectively for any member or members that may be unable to pay.

Resolved that the Executive Committee be empowered to appoint District Secretary for the current year.

The necessity of organizing frequent local Star Camps was discussed and the suggestion was recommended to the Groups to be worked up.

The Star and Publication Committee was reminded to take the necessary steps to collect funds and to publish Kanarese translations of Krishnaji's works as early as possible.

The next Conference was resolved to be held at Chintamani together with the Karnataka T. S. Federation as done at Hassan.

K. Venkataramiah,
Divisional Secretary.

ORDER OF THE STAR

ಜಗದ್ಗುರು ಸೇವಾ ಸಂಘ

ಅಧ್ಯಕ್ಷರು:

ಜೆ. ಕೃಷ್ಣಮೂರ್ತಿ

ಉದ್ದೇಶಗಳು :

೧. ಜಗದ್ಗುರುಗಳು ಪ್ರಪಂಚದಲ್ಲಿ ಈಗ ಬಂದಿರುವರೆಂದು ನಂಬುವ ಜನಗಳನ್ನೆಲ್ಲಾ ಒಟ್ಟುಗೂಡಿಸುವುದು.

೨. ಆತನ ಲಕ್ಷ್ಯಗಳನ್ನು ನೆರವೇರಿಸುವುದಕ್ಕಾಗಿ ಆತನ ಜೊತೆಗೂಡಿ ಕೆಲಸ ಮಾಡುವುದು.

ಈ ಉದ್ದೇಶಗಳನ್ನೊಪ್ಪುವವರೆಲ್ಲರೂ ಸಂಘದ ಮೆಂಬರುಗಳಾಗಿ ಸೇರಬಹುದು. ಸಂಘಕ್ಕೆ ಸೇರಲು ಯಾವ ಚಂದಾ ಹಣವನ್ನೂ ಕೊಡಬೇಕಾದಿಲ್ಲ.

ಸಂಘದ ಒಟ್ಟಿನ ಕೆಲಸ ಮಾಡುವುದಕ್ಕಾಗಿ ಒಬ್ಬ ಮುಖ್ಯ ಕಾರ್ಯದರ್ಶಿ ಇದಾರೆ. ಹಾಲೆಂಡ್ ದೇಶದ ಆರ್ನೆಮ್ ನಗರದ ಸಮೀಪದಲ್ಲಿರುವ ಎರ್ಡಿ ಎಂಬ ಪ್ರದೇಶವು ಸಂಘದ ಮುಖ್ಯ ಸ್ಥಳವು. ಈಗ ಸಂಘದ ಶಾಖೆಗಳು ಪ್ರಪಂಚದ ನಾಲ್ವತ್ತೈದು ದೇಶಗಳಿವೆ. ಈ ಪ್ರತಿಯೊಂದು ದೇಶದಲ್ಲಿಯೂ ಒಬ್ಬ ರಾಷ್ಟ್ರೀಯ ಕಾರ್ಯನಿರ್ವಾಹಕರಿರುತ್ತಾರೆ.

ಸಂಘದ ಅಂಕಿತವು ಬೆಳ್ಳಿಯ ಪಂಚಕೋಣಾಕಾರವಾದ ನಕ್ಷತ್ರ.

ಇಂಡಿಯಾದೇಶದ ರಾಷ್ಟ್ರೀಯ ಕಾರ್ಯನಿರ್ವಾಹಕರು:—

ಮಿ|| ಎನ್. ಎಸ್. ರಾಮರಾವ್,
ಅಡಯಾರು, ಮದರಾಸು.

ಶ್ರೀಮತಿ ಪದ್ಮಾಬಾಯಿ ಸಂಜೀವರಾವ್,
ಥಿಯಾಸಾಫಿಕಲ್ ಸೊಸೈಟಿ ಬೆನಾರಿಸ್

ಕರ್ಣಾಟಕಶಾಖೆಯ ಸೆಕ್ರಿಟರಿ—ಮ|| ಕೆ. ವೆಂಕಟರಾಮಯ್ಯ,
ಬಸವನಗುಡಿ, ಬೆಂಗಳೂರು.

ಕರ್ನಾಟಕ ವಿದ್ಯಾವರ್ಧಕ ಸಂಘ

ಯುಗಪುರುಷ

ಯುಗ ಯುಗ ಮರೆಯಲಾಗದ ಯುಗಪುರುಷ

ಪರಿವಿಡಿ

ವಿಷಯ	ಬರಹೆಗಾರರು
೧. ಸಂಪಾದಕೀಯ.	
೨. ಶಿಕ್ಷಣ ಯಾವುದಕ್ಕಾಗಿ? ([illegible])	[illegible] ಕಾರಂತ.
೩. [illegible] ([illegible])	[illegible] ಭಟ್ಟ B. A. (Hons.)
೪. [illegible] (ಕವಿತೆ)	[illegible]
೫. [illegible] (ಕವಿತೆ)	[illegible]
೬. [illegible] ([illegible] ಕತೆ)	[illegible]
೭. [illegible] ([illegible])	[illegible] ಉಪಾಧ್ಯಾಯರು B. A. L. L. B.
೮. [illegible] ([illegible])	[illegible]
೯. [illegible] ([illegible])	[illegible] B. A. B. O. L.
೧೦. [illegible] (ಕತೆ)	[illegible]
೧೧. [illegible] ([illegible])	[illegible]
೧೨. [illegible]	[illegible]

[illegible]

[illegible]

ಮುಲ್ಕಿ ಪ್ರಿಂಟಿಂಗ್ ಪ್ರೆಸ್

[illegible]

MULKI PRINTING PRESS

[illegible] Mulki, S. K.

ಯುಗಪುರುಷ

ಸಂಪುಟ ೩

ಸಂಚಿಕೆ ೨

ಮೇಲ್ತರಗತಿಯ

ಕನ್ನಡ ಮಾಸಪತ್ರಿಕೆ

ವಾ. ಚ. ೩ ರೂ.

ಬಿಡಿ ಪ್ರತಿ ೪ ಆ.

ಸಂಪಾದಕರು:

ಕೊಡತ್ತೂರು ಅನಂತಪದ್ಮನಾಭ ಉಡುಪ.

ಎಸ್. ಎಲ್. ನಾರಾಯಣ ಭಟ್ಟ.

— ಜನವರಿ ೧೯೫೦ —

ಸಂಪಾದಕೀಯ

ಅನುಚಿತ ಧೋರಣೆ

ಕರ್ನಾಟಕ ಪ್ರಾಂತ ಬೇಡಿಕೆಯನ್ನು ಕ. ಪ್ರಾ. ಕಾ. ಸಮಿತಿಯು ಹಲವಾರು ಸಲ ಸರಕಾರದ ಗಮನಕ್ಕೆ ತಂದರೂ ಅದರ ಬೇಡಿಕೆಯು ಕಡೆಗಣಿಸಲ್ಪಟ್ಟಿದೆ. ಕಾಂಗ್ರೆಸ್ ಧುರೀಣರ ಧೋರಣೆಯಿಂದಲೂ, ಕ್ಷಣಕ್ಕೊಂದು ರೀತಿತಾಳುವ ಅಭಿಪ್ರಾಯದಿಂದಲೂ ಕನ್ನಡದ ಜನ ಅಸಂತುಷ್ಟವಾಗಿದೆ. 'ಕನ್ನಡಿಗರ ಬೇಡಿಕೆಯು ಮಾನ್ಯವಾಗಿದೆ' ಎಂದಿದ್ದ ಸರದಾರ್ ಪಟೇಲರು ಮೈಸೂರ ಪ್ರಶ್ನೆ ತೊಡಕಿನದ್ದಾಗಿದೆ ಎನ್ನುತ್ತಾರೆ. ಅಖಿಲ ಭಾರತ ಕಾಂಗ್ರೆಸ್ಸಿನ ಅಧ್ಯಕ್ಷ ಪಟ್ಟಾಭಿಯವರು ಆಂಧ್ರ ಪ್ರಾಂತದ ಕುರಿತು ತೋರುವ ಶ್ರದ್ಧೆ ಕನ್ನಡದ ಪ್ರಾಂತಕ್ಕೆ ತೋರುತ್ತಿಲ್ಲ. ಬೇರೆ ಬೇರೆ ಪ್ರಾಂತಗಳ ಪ್ರತಿನಿಧಿಗಳಿಗೆ ಭೇಟಿಕೊಟ್ಟು ಸಮಧಾನ ಹೇಳುವ ನಮ್ಮ ನಾಯಕರಿಗೆ ಕನ್ನಡದ ಧುರೀಣರಿಗೆ ಭೇಟಿಕೊಡುವಷ್ಟು ಸಹನೆಯೂ ಇಲ್ಲ! ಆಂಧ್ರ ಪ್ರಾಂತರಚನೆಯ ಕಾಲದಲ್ಲಿ ಗಡಿ ನಿರ್ಣಯಕ ಸಮಿತಿಯನ್ನು ನಿರ್ಮಿಸುವ ಕಾಲಕ್ಕೆ ತಮಿಳ, ಕೇರಳಿಗೆ ಪ್ರಾತಿನಿಧ್ಯಕೊಟ್ಟು ಕನ್ನಡಿಗರಿಗೆ ತೀರ ಅನ್ಯಾಯವನ್ನು ಮಾಡಿದ್ದಾರೆ. ಆಸ್ತಿ ವಿಭಜನೆಯಲ್ಲೂ ಅಷ್ಟೆ ಕನ್ನಡಕ್ಕೆ ಪ್ರಾತಿನಿಧ್ಯವಿಲ್ಲ! ಕನ್ನಡಕ್ಕೆ ಬರಬೇಕಾದ ಕನ್ನಡದ್ದೇ ಆದ ಬಳ್ಳಾರಿ, ಇನ್ನೂ ಕೆಲವು ಜಿಲ್ಲೆಗಳನ್ನು ಬಲತ್ಕಾರವಾಗಿ ಆಂಧ್ರ ಪ್ರಾಂತಕ್ಕೆ ಸೇರಿಸಿಕೊಳ್ಳುವ ಹಂಚಿಕೆಯನ್ನು ಮಾಡಲಾಗುತ್ತಿದೆ. ಈ ಪಕ್ಷಪಾತತನವನ್ನು ಕೇಂದ್ರ

Subscription Rs. 3 per year	YUGAPURUSHA A Leading Kannada Monthly KINNIGOLI, S. K.	As. 4 Per copy

ಹಾಗೂ ಪ್ರಾಂತೀಯ ಸರಕಾರಗಳು ಕೂಡಿಯೆ ಮಾಡಿವೆ. ಕೇಂದ್ರದಿಂದ "ಗಡಿ ನಿರ್ಣಯದಲ್ಲಿ ಯಾವುದೇ ರೀತಿಯ ತಕರಾರು ಉಂಟಾಗಬಾರದು" ಎನುವ ಆದೇಶ ಬಂದಮೇಲೆಯೆ ನಮ್ಮ ಪ್ರಧಾನರಾದ ಕುಮಾರಸ್ವಾಮಿ ರಾಜಾರವರು "ತಾತ್ಪೂರ್ತಿಕವಾಗಿ ಬೊಂಬಾಯಿಗೋ- ಮದ್ರಾಸಿಗೋ- ಆಂಧ್ರಕ್ಕೋ- ಕನ್ನಡದ ಕೆಲವು ಜಿಲ್ಲೆಗಳನ್ನು ಸೇರಿಸಬೇಕಾಗುತ್ತದೆ" ಅಂದದ್ದು. ಈಗ 'ತಾತ್ಪೂರ್ತಿಕ'ವಾಗಿ ಆಂಧ್ರಕ್ಕೆ ಸೇರುವ ಕನ್ನಡ ಜಿಲ್ಲೆಗಳು ನಾಳೆ ಕರ್ನಾಟಕಕ್ಕೆ ತಿರುಗಿ ಬಂದಾವೆಂಬುದು ಕನಸಿನ ಮಾತೇ ಸರಿ. ಈ ಎಲ್ಲಾ [illegible] ಕನ್ನಡ ಜನರ ಇಲ್ಲವೆ ಕರ್ನಾಟಕ ಧುರೀಣರ [illegible]. ಈ ವರೆಗೆ ಕನ್ನಡಿಗರು ತೋರಿದ [illegible]

[illegible]

ಪ್ರಶ್ನೆಯಾಗಲೀ, ಅಲ್ಲಿಯ ಜನತೆಯನ್ನೆ ಹೊಂದಿಕೊಂಡಿದೆ ಹೊರತು; 'ರಾಜ ಬೇಕು' ಎನುವ ಕೆಲಮಂದಿ ಧುರೀಣರಿಂದಲ್ಲ; ಇಂದಲ್ಲ ನಾಳೆ ಮೈಸೂರು ಕರ್ನಾಟಕದಲ್ಲಿ ಲೀನವಾಗಲೇಬೇಕು; ಆಗಿಯೇ ಆಗುತ್ತದೆ. ಅಲ್ಲಿಯ ಜನ ಇದಕ್ಕೆ ಸಂಪೂರ್ಣ ಸಹಕಾರವನ್ನು ನೀಡುವದರಲ್ಲಿ ಸಂದೇಹವಿಲ್ಲ. ಆದರೂ ಕಾಂಗ್ರೆಸ್ ಕಾ. ಸಮಿತಿಯು ಕನ್ನಡ ಜನತೆಯ ಕುತೂಹಲವನ್ನು ಕೆರಳಿಸಿ ತುಂಬ ನಿರಾಶೆಯನ್ನುಂಟುಮಾಡಿದೆ. ಈಗಿರುವ ತೊಡಕು ತೊಂದರೆಗಳನ್ನು ತಿಳಿಸಿ, ನಿಶ್ಚಿತವಾದ ಒಂದು ಸಮಯವನ್ನಾಗಲೀ, ಭರವಸೆಯನ್ನಾಗಲೀ, ಕೊಟ್ಟು ಕನ್ನಡಿಗರ ಜೀವಾಳದ ಪ್ರಶ್ನೆಯನ್ನು ಬಗೆಹರಿಸಬಹುದಾಗಿತ್ತು! ಆದರೆ ಕಾ. ಕಾ. ಸಮಿತಿಯು ಸ್ವಲ್ಪವೂ ವಿವೇಚಿಸದೆ ಕನ್ನಡಿಗರ ಬೇಡಿಕೆಯನ್ನು ಕಟುತರವಾದ ಮಾತಿನಿಂದ ಟೀಕಿಸಿಯದೆ. ಇದರಿಂದ ಒಂದು ರೀತಿಯ ಅಸಂತೋಷ, ಅಸಹಕಾರ ಬುದ್ಧಿ. ಕನ್ನಡಿಗರಲ್ಲಿ ಉದ್ಭೂತವಾಗಲಿದೆಯಿದೆ. ಕಾ. ಕಾ. ಸಮಿತಿಯ ನಿರ್ಣಯವು ಜಾಣತನದ್ದಾಗಿರದೆ ಇಷ್ಟಿಷ್ಟು ಕ್ಷೇಪಕಾರಿಯೂ, ದುಡುಕು ಸ್ವಭಾವದ್ದೂ ಆಗಿರುತ್ತದೆ. ಕೇವಲ ಐದಾರು ವಾರದೊಳಗೆ ಆಗಲಿರುವ ಹೊಸ ರಾಜ್ಯಘಟನೆಯ ಕಾಲದಲ್ಲಿ ಕನ್ನಡಿಗರ ಒಲವನ್ನು ಜಾಣತನದಿಂದ ಸಂಪಾದಿಸಿಕೊಳ್ಳುವದರ ಬದಲಾಗಿ ಕಾ. ಕಾ. ಸಮಿತಿಯು ಈ ರೀತಿಯ ಅನುಚಿತ ಧೋರಣೆಯನ್ನು ತಾಳಿದ್ದನ್ನು ನಾವು ವಿಷಾದಪೂರ್ವಕ ಖಂಡಿಸುತ್ತೇವೆ.

ಸಂಪಾದಕರು

ಯೋಗಕ್ಷೇಮ

ನಮ್ಮ ಹಲವಾರು ಹಿತೈಷಿಗಳ ಸಲಹೆಗೆ ಅನುಸಾರವಾಗಿ ಬರುವ ಸಂಚಿಕೆಯಿಂದ "ಯೋಗಕ್ಷೇಮ"ವೆಂಬ ಶಿರೋನಾಮೆಯಲ್ಲಿ ಪ್ರಶ್ನೋತ್ತರ ವಿಭಾಗವನ್ನು ತೆರೆಯುವ ನಿರ್ಧಾರವನ್ನು ಸಂಪಾದಕ ಮಂಡಳಿಯು ನಿಶ್ಚೈಸಿರುತ್ತದೆ. ಬೌದ್ಧಿಕ- ಸಾಹಿತ್ಯಕ- ರಾಜಕೀಯ- ಹಾಗೂ ಸಾಮಾಜಿಕ ವಿಷಯಗಳೆಲ್ಲೆಲ್ಲ ಪ್ರಶ್ನಿಸಬಹುದು. ಆದರೆ ಪ್ರಶ್ನೆಗಳೆಲ್ಲ ಮರ್ಯಾದಪೂರ್ಣವಾಗಿರಬೇಕು ಮಾತ್ರವಲ್ಲದೆ ತಿಂಗಳ ೧೫ನೇ ತಾರೀಕಿನೊಳಗೆ ಬಂದ ಪ್ರಶ್ನೆಗಳಿಗೆ ಮಾತ್ರ ನಂತರದ ಸಂಚಿಕೆಯಲ್ಲಿ ಉತ್ತರಿಸಲಾಗುತ್ತದೆ. ಈ ನವ ಯೋಜನೆಗೆ ಸರ್ವರೂ ಸಹಕರಿಸಲು ಕೋರಿಕೆ.

ಸುಸ್ವಾಗತ

ಗೆಳೆಯ ಎಸ್. ಎಲ್. ಭಟ್ಟರು ನನ್ನ ಆಜನ್ಮ ಮಿತ್ರರು. ಅವರಿಗೆ ನನ್ನಂತಹ ಹಲವಾರು ಮಿತ್ರರಿರಬಹುದು. ಆದರೆ ನನಗೆ ಅವರಂತಹ ಜೀವಮಿತ್ರರು ಅವರೊಬ್ಬರೇ. ಅಂದರೆ ಅವರ ಸರಳ ಸ್ವಭಾವ ಅಷ್ಟು ಸಹಜವಾದುದು. ನನ್ನ ಆಜನ್ಮ ಮಿತ್ರರಾದುದರಿಂದಲೇ ನನ್ನ ಜೀವನಮುಸಿರಾದ "ಯುಗಪುರುಷ"ಕ್ಕೂ ಅವರ ಸಹಕಾರ ಇರತಕ್ಕದ್ದೂ ಸಹಜವೇ. ಅದನ್ನು ಪ್ರಾರಂಭದಿಂದಲೂ ಈಯುತ್ತಲಿದ್ದರು

ಸಹ. ಆದರೆ ಕೆಲದಿನಗಳ ಹಿಂದೆ ನನ್ನ ಅನುಪಸ್ಥಿತಿಯಲ್ಲಿ ನಾನಿತ್ತ ತಾತ್ಪೂರ್ತಿಕ ಅಧಿಕಾರದಲ್ಲಿ ಶ್ರೀ ಬನ್ನಂಜೆಯವರು ಗೆ. ಎಸ್. ಎಲ್. ಭಟ್ಟರನ್ನು "ಉಡುಗರೆ–ಬಿಡುಗಡೆ"ಯಿಂದ ಪತ್ರಿಕೆಯಿಂದಲೇ ಬಿಡುಗಡೆಮಾಡಿ ಅವರ ಮನಃಕ್ಲೇಶವನ್ನು ಉಂಟುಮಾಡಿದ್ದರು. ಈ ಪ್ರಸಂಗ ಬಂದುದು ವೈಯಕ್ತಿಕ ಮತಭೇದದಿಂದ. ಅಂದಾಗ ಪತ್ರಿಕೆಯಿಂದಲೇ ಬಿಡುಗಡೆ ಮಾಡಬೇಕಿದ್ದರೆ ನನ್ನ ಅಭಿಪ್ರಾಯ ಅವಶ್ಯವಿತ್ತು. ಅಂತೂ ಭಟ್ಟರ ಕುರಿತು ಆಗಬಾರದುದು ಆಗಿಹೋದುದಕ್ಕೆ ಪಶ್ಚಾತ್ತಾಪ ಪ್ರದರ್ಶಿಸಿ "ಯುಗಪುರುಷ"ದ ಅಭ್ಯುತ್ಥಾನಕ್ಕೆ ಗೆ. ಭಟ್ಟರನ್ನೂ ಕೇಳಿಕೊಂಡೆ. ಅದಕ್ಕವರು ಒಪ್ಪಿದ್ದಾರೆ. ಅಂತಲೇ "ಯುಗಪುರುಷ"ದಲ್ಲಿ ಪ್ರಧಾನ ಪರಿವರ್ತನೆಯಾಗಿದೆ– ಆಗಲಿದೆ ಸಹ. ಗೆಳೆಯ ಭಟ್ಟರು ಸಂಪಾದಕ ಮಂಡಳಿಯಲ್ಲಿ ಪ್ರಧಾನ ಪಾತ್ರವಹಿಸಲು ಅನುಮತಿಯಿತ್ತುದಕ್ಕೆ ಯುಗಪುರುಷ ತನ್ನ ಕೃತಜ್ಞತೆಯನ್ನರ್ಪಿಸಿ ಅವರಿಗೆ ಸುಸ್ವಾಗತವನ್ನೀಯುತ್ತದೆ.

ಉಡುಪ.

[illegible]

[illegible]

[illegible]

[illegible]

ಶಿಕ್ಷಣ ಯಾವುದಕ್ಕಾಗಿ?

...ವಿದ್ಯಾವರ್ಧಕ ಸಂಘ... ಧಾರವಾಡ.

ಲೇಖಕರು: ಶ್ರೀ. ಶಿವರಾಮ ಕಾರಂತ.

ನಮ್ಮ ನಾಡಿನಲ್ಲಿ ಮೇಲಿನ ಪ್ರಶ್ನೆಗೆ ತಕ್ಕ ಉತ್ತರ ದೊರಕಿಸಿಕೊಳ್ಳುವುದು ತುಂಬ ಕಷ್ಟದ ಮಾತು. ಇದನ್ನು ಉತ್ತರಿಸುವಲ್ಲಿ, ತಾತ್ವಿಕವಾಗಿ ಮಾಡುವ ಚರ್ಚೆ ಬೇರೆ. ವಾಸ್ತವಿಕವಾದ ಪ್ರಶ್ನೆಗಳನ್ನು, ಪ್ರಸಂಗಗಳನ್ನು, ಎಣಿಸಿ ಚರ್ಚಿಸುವವರ ದಾರಿ ಬೇರೆ. ಬರಿಯ ತತ್ವದ ದೃಷ್ಟಿಯಿಂದ ಮಾತನಾಡುವುದಕ್ಕೆ ಕಷ್ಟವೇನೂ ಇಲ್ಲ. 'Educate' ಎಂದರೆ ವ್ಯಕ್ತಿಯಲ್ಲಿನ, ಉತ್ತಮ ಗುಣಗಳನ್ನು ಹೊರಕ್ಕೆ ತರುವುದೆಂಬುದೇ ತಾತ್ಪರ್ಯ. ನಮ್ಮ ವಿದ್ಯಾಧಿಕಾರಿಗಳೆಲ್ಲರೂ ಇದೇ ಆದರ್ಶವನ್ನು ಇರಿಸಿಕೊಂಡವರೆಂದು ತಿಳಿದುಕೊಂಡಿದ್ದಾರೆ. ಸಾಂಪ್ರದಾಯಿಕ ಪಂಡಿತರನ್ನು ಕೇಳಿದರೆ, 'ವಿದ್ಯೆ–ಅವಿದ್ಯೆ' ಎಂದು ವಿವೇಚಿಸಿ, ವೇದ ಉಪನಿಷತ್ತುಗಳಿಂದ ತೊಡಗಿ, ಆತ್ಮಾ ಪರಮಾತ್ಮನ ತನಕವೂ ಚರ್ಚೆಯನ್ನು ಮುಟ್ಟಿಸಿಬಿಡುತ್ತಾರೆ. ಹೀಗೆ– ಹಳಬರ ಮತ್ತು ನವೀನರ ಆದರ್ಶಗಳೇನೇ ಇರಲಿ– ನಮ್ಮ ಶಾಲಾ ಕಾಲೇಜುಗಳಲ್ಲಿ ಓದುತ್ತಿರುವವರ ದಾರಿಯೇನೆಂದು ನಾವು ತಿಳಿದಿದ್ದೇವೆ.

ವರ್ಷಕ್ಕೊಂದು, ನಾಲ್ಕು ವರ್ಷಕ್ಕೊಂದು, ಪಾಠಪಟ್ಟಿಗಳನ್ನು ಬದಲಿಸಿ ಬಿಟ್ಟರೆ ವಿದ್ಯಾಸುಧಾರಣೆ ಮಾಡಿದ್ದೇವೆ– ಎಂಬ ತೃಪ್ತಿ ನಮ್ಮ ಮೇಲಿನವರಿಗೆ. ನೊನ್ನೆ, ಮೊನ್ನೆ ಹೈಸ್ಕೂಲ್ ಶಿಕ್ಷಣದಲ್ಲಿ 'ಪ್ರಜಾ ಶಿಕ್ಷಣ'ದ ದೊಡ್ಡ ಪುರಾಣವನ್ನು ಸೇರಿಸಿದ್ದಾರೆ. ಕಾರ್ಯಕ್ಕೆ ಬರುವಾಗ, ಅದು ಮಕ್ಕಳಿಗೆ ತಲೆಬೇನೆ ತರುವ ಹಳೆಯ ಕಾಲದ 'ಸಿವಿಕ್ಸ್' ಪಾಠಗಳ ಹೊಸ ರೂಪಾಂತರವಾಗುತ್ತದೆ. ಕಾರ್ಯ ಪ್ರಪಂಚದಲ್ಲಿ, ನಮ್ಮ ಶಾಲಾ ಕಾಲೇಜುಗಳು ಮಾಡುತ್ತಿರುವ ಕೆಲಸವೆಂದರೆ– ವಿದ್ಯಾಭಿರುಚಿಯನ್ನು ಹೆಚ್ಚಿಸುವುದಲ್ಲ, ಶೀಲವನ್ನು ಬೆಳೆಯಿಸುವುದೂ ಅಲ್ಲ. 'ವಿದ್ಯೆಗಾಗಿ ವಿದ್ಯೆ' ಎಂಬ ಆದರ್ಶವೂ ಅವರಿಗಿಲ್ಲ. ಬದಲು ಆಯುಷ್ಯದ ಕೆಲವೊಂದು ಕಾಲವನ್ನು, ವಿದ್ಯಾರ್ಥಿಗಳ ಮನೋಧರ್ಮ ಅರಿಯದೆಯೆ, ಹಿರಿಯರು ತಮಗೆ ಮುಖ್ಯವೆಂದು ತೋರಿದ ಜ್ಞಾನವನ್ನು, ಕಿರಿಯರ ತಲೆಯೊಳಗೆ ತುಂಬಿಸುವ ಪ್ರಯತ್ನವಾಗಿದೆ. ಈ ಕೆಲಸ ಸಾರ್ಥಕವಾಯಿತೇ– ಎಂದು ಅಳೆಯಲು, ವಾರ್ಷಿಕ ಪರೀಕ್ಷೆಯ ನಾಟಕಗಳು ನಡೆಯುತ್ತವೆ. ಪದವೀಧರರನ್ನು ತಯಾರಿಸಿ, ಜೀವನದ ರಣರಂಗಕ್ಕೆ ಬಿಡುವುದು ನಮ್ಮ ಶಾಲಾ ಕಾಲೇಜುಗಳ ಕೆಲಸ. ವಿದ್ಯಾ ಸಂಸ್ಥೆಗಳಲ್ಲಿ ತುಂಬಿಸಿದ ಜ್ಞಾನ, ವಿದ್ಯಾರ್ಥಿಯ ಮುಂದಿನ ಬಾಳಿನಲ್ಲಿ ನೆರವಾಗುತ್ತದೆಯೇ?– ಎಂಬ ಗೊಡವೆ ಯಾರಿಗೂ ಇಲ್ಲ. ಅನ

ರಲ್ಲಿ ಜ್ಞಾನಲಾಲಸೆ ಹುಟ್ಟೀತು ಎಂಬ ಆಸೆಯೂ ಬೇಡ. ಇಷ್ಟಿದ್ದರೂ, ಸಾವಿರಾರು ಮಂದಿ ವಿದ್ಯಾರ್ಥಿಗಳು ಇನ್ನೇನಿಲ್ಲದ್ದಕ್ಕಾಗಿ ಕಾಲೇಜುಗಳಿಂದ ಪದವೀಧರರಾಗಿ ಪ್ರತಿ ವರ್ಷವೂ ಹೊರಬೀಳುತ್ತಲಿದ್ದಾರೆ. ಯಾಕೆ? ಅಂದರೆ– ಅವರು ಗಳಿಸುವ ಪದವಿಯಿಂದ ಪರ್ಯಾಯವಾಗಿ ಯಾವುದೋ ಒಂದು ಚಾಕರಿ ದೊರಕಿ, ಜೀವನ ನಡೆಸಲು ಬರುತ್ತದೆ 'ಎಂಬುದರಿಂದ– ಅಂದರೆ ಹಣ ಸಂಪಾದಿಸಲು ಬರುತ್ತದೆ– ಎಂಬುದೇ ಅದರ ಗುಟ್ಟು. ಕಲಿತ ವಿದ್ಯೆಯೂ, ಅವರ ವ್ಯಕ್ತಿಗತ ಜೀವನಕ್ಕೆ ನೆರವಾಗುವುದು ಕಡಿಮೆ. [illegible]

[illegible]

ಈ ಪರಿಸ್ಥಿತಿಯಿಂದ ಹತಾಶರಾಗಿ, ಹೊಸ ದಾರಿಯನ್ನು ಬಯಸುವವರಲ್ಲಿನೆ ದಲ್ಲ. ಹಾಗೆ ಬಯಸಿ ಹುಡುಕುತ್ತಿರುವ ಪ್ರಯೋಗಗಳಲ್ಲಿ 'ಬೇಸಿಕ್' ಶಿಕ್ಷಣ ಒಂದಾಗಿದೆ. ಇಲ್ಲಿ ಹೆಸರಿನ ಭಾಗವಷ್ಟೇ ಹೊಸತು. 'ಜೀವನಕ್ಕೆ ಶಿಕ್ಷಣಹೊಂದಿ ನಡೆಯಬೇಕು' ಅನ್ನುವ ಮಹಾನುಭಾವರು, ತಯಾರಿಸಿರುವ ಪಠ್ಯಕ್ರಮ ನೋಡಿದರೆ, ಅವರು ಎಣಿಕೆಗೆ ತಂದುಕೊಂಡ ಜೀವನ ಶಿಲಾಯುಗದ್ದೆನ್ನಬೇಕಾಗುತ್ತದೆ. ಈ ಶತಮಾನದ್ದಂತೂ ಅಲ್ಲ. ಇಂದಿನ ಅಂತರ್‌ರಾಷ್ಟ್ರೀಯ ಸಂಬಂಧ, ಜ್ಞಾನ, ಸ್ಪರ್ಧೆ, ಸಮಸ್ಯೆ– ಇವುಗಳನ್ನು ಗಮನಕ್ಕೆ ತಂದುಕೊಂಡ ಏರ್ಪಾಟು– ಅದೆಂದಿಗೂ ಆಗಿಲ್ಲ. ಅವರದು ತುಂಬ ಆಧ್ಯಾತ್ಮಿಕ ದೃಷ್ಟಿ ಇರಬಹುದೋ ಏನೋ.

ಶಿಕ್ಷಣದ ಆದರ್ಶಗಳಲ್ಲಿ ಮೂರು ಮುಖ್ಯವಾದ ವಿಷಯಗಳನ್ನು ನಾವು ನಮ್ಮ ಆದರ್ಶವಾಗಿ ಇರಿಸಿಕೊಳ್ಳಬಹುದೆಂದು ಕಾಣುತ್ತದೆ.– ಮೊದಲನೆಯದು ಮಗುವಿನ ಅಥವಾ ವ್ಯಕ್ತಿಯ ಚೇತನ, ಅಭಿರುಚಿಗಳು ಹೇಗಿವೆ ಎಂದು ತಿಳಿದು, ಅವನ್ನು ಬೆಳೆಯಿಸುವುದು. ಎರಡನೆಯದು– ವ್ಯಕ್ತಿಗೆ ಜ್ಞಾನಾಭಿರುಚಿ ಹುಟ್ಟಿಸಿ, ಅವನು ದೊಡ್ಡವನಾದ ಮೇಲೆ, ಜ್ಞಾನದಿಂದ ಆತ ದೊರಕಿಸಿಕೊಳ್ಳಬಹುದಾದ ಆನಂದವನ್ನು ದೊರಕಿಸುವುದಕ್ಕೆ ಸಹಾಯ ಮಾಡುವುದು.

ಮೂರನೆಯದು– ವ್ಯಕ್ತಿ ಜೀವನದ ಅನುಭವವನ್ನು, ತನ್ನ ಸಮಾಜಕ್ಕೆ ಅರ್ಪಿಸಲು ಸಹಾಯವಾಗುವ ಬಗೆಯಲ್ಲಿ, ಅವನನ್ನು ತರಬೇತಿ ಮಾಡುವುದು.

ಇವೆಲ್ಲವುಗಳಷ್ಟೇ ಮುಖ್ಯವಾಗಿ, ಆತ ತನ್ನ ಜೀವನವನ್ನು ಒಂದಲ್ಲ ಒಂದು ಬಗೆಯ ಸಮಾಜೋಪಯುಕ್ತ ಸೇವೆಯಿಂದ ನಡೆಯಿಸುತ್ತ ಉದರಂಭರಣೆಗೆ ಅನುಕೂಲಿಸುವಂತೆ ತಕ್ಕ ಶಿಕ್ಷಣ ಕೊಡುವಂಥದು.

ಇವನ್ನೆಲ್ಲ ಹೇಳಿದ ನಾನು–'ಶೀಲದ ಬೆಳವಣಿಗೆಯನ್ನು ಕುರಿತು ಏನೂ ಆಡಿಲ್ಲ. ಕಾರಣ, ಅದು ಅಮುಖ್ಯವೆಂದಲ್ಲ. ಎಷ್ಟೇ ಬಡಾಯಿ ಕೊಚ್ಚಿದರೂ ಅದು ಶಾಲೆಗಳಿಂದ ಆದೀತು, ಎಂಬ ವಿಶ್ವಾಸ ನನಗಿಲ್ಲ. 'ಸಿವಿಕ್ಸ್' ಪಾಠ ಓದಿದ ಹುಡುಗ, ಉತ್ತಮ ಪ್ರಜೆಯಾದಾನು, ಆಗಬೇಕು– ಎಂಬ ನಂಬಿಕೆ ನನಗಿಲ್ಲ. ಆ ವಿಷಯದ ಜ್ಞಾನ ಅವನಿಗೆ ಬಂದೀತು. ಆದರೆ ಅಂಥ ನಡತೆ ಬರಬೇಕಾದದ್ದು, ಒಟ್ಟು ಸಮಾಜದಿಂದ ನಡತೆ, ಉಳಿದವರ ನಡುವಳಿಕೆಯನ್ನು ಕಂಡು ಬರುವಂಥ ಪಾಠ. ನಾವು ತಿಳಿಯಬೇಕೆ ಉಪಾಧ್ಯಾಯರಿಂದ ಮಾತ್ರ ರಚಿತವಾಗಬೇಕಾದ ಗುಣವಿಶೇಷವಲ್ಲ. ಉಪಾಧ್ಯಾಯರ ನಡತೆಯೂ ಮುಖ್ಯವಾಗುತ್ತದೆ. ಅವರು ಹೇಳುವ ನೀತಿಪಾಠ (moral lessons) ಅಮುಖ್ಯ. ಪಾಠಕ್ಕೂ ನೀತಿಗೂ, ಪಾಠಕ್ಕೂ ನಡವಳಿಕೆಗೂ, ಇರುವ ಅಂತರ, ಗಳಿಗೆ ಗಳಿಗೆಗೂ ಎದ್ದು ಕಾಣುವ ಸಮಾಜದಲ್ಲಿ, ಬರಿಯ ಆಡುಮಾತಿಗೆ ಬೆಲೆ ಬರಲಾರದು. ಹಿರಿಯರ ನಡತೆ, ಸಮಾಜದ ನಡತೆ, ವಿದ್ಯಾರ್ಥಿ ಸಂಧಿಸುವ ಇನ್ನಿತರ ನಡತೆ ಅವನ ದಾರಿಯನ್ನು ರೂಪಿಸುವ ಶಕ್ತಿಗಳು. ಆತ ತಪ್ಪಿ ನಡೆದರೆ,

[illegible]

[illegible] ಜನವರಿ, ೧೯೫೦.

ಅದು ಆವನ ಸಮಾಜದ ಪ್ರಭಾವವೆಂದು ಸುಲಭದಲ್ಲಿ ತಿಳಿಯಬಹುದು. 'ನಮ್ಮ ನಡತೆ ಹೇಗೂ ಇರಲಿ. ಉದಾತ್ತ ಕಥೆ, ಕಥಾನಕ ಹೇಳಿ ವಿದ್ಯಾರ್ಥಿಯ ನಡವಳಿಕೆ ಸುಧಾರಿಸುತ್ತೇನೆ' ಎನ್ನುವವರು ಶಿಕ್ಷಣ ಧರ್ಮ ತಿಳಿಯದು ಕಡಿಮೆ ಆಗಬೇಕು. ಒಳಿತು ಕೆಡುಕುಗಳೆರಡೂ ಎಳೆಯ ವಯಸ್ಸಿನಲ್ಲಿ ಹಿರಿಯರ ಆದರ್ಶದಿಂದ ಬಹು ಬೇಗನೆ ಬರುತ್ತದೆ. ಹಿರಿಯರ ತಪ್ಪು ನಡೆಗಳನ್ನು, ಹಿರಿಯ ಮಾತುಗಳೆಂದೂ ಮರೆಸಲಾರವು. ನಮ್ಮ ವಿದ್ಯಾ ಸಂಸ್ಥೆಗಳು ಮಾಡಬಹುದಾದ ಕೆಲಸವೆಂದರೆ— ನಾವು ಮೇಲೆ ಹೇಳಿದ ಮೂರು ಆದರ್ಶಗಳ [illegible] ಕಾರ್ಯರೂಪದ ಹೇಗೆ ಸಾಧ್ಯವೋ [illegible] ದಾರಿ ತೋರುವುದು.

[illegible]

ಈ ಶಿಕ್ಷಣ ಎಂದೂ ಅಗ್ಗದ ಶಿಕ್ಷಣವಾಗಲಾರದು. ಅದು ತುಂಬ ವೆಚ್ಚ ಬೀಳುವ ಶಿಕ್ಷಣವೇ ಆಗುತ್ತದೆ. ಶಾಲೆಯ ಕೃಷಿ, ಕೈಗಾರಿಕೆಗಳು ಕ್ರಿಷಿಕ ಅಭಿರುಚಿ ಬೆಳೆಯಿಸುವುದಕ್ಕೇ ಹೊರತು, ಲಾಭದ ಎಣಿಕೆ ಹಾಕುವುದಲ್ಲ. ಪ್ರಯೋಗಗಳಿಂದ, ಓದಿನಿಂದ, ಪ್ರಸಾರದಿಂದ, ಮ್ಯೂಸಿಯಮ್‌ನಿಂದ, ಮಕ್ಕಳ ಜ್ಞಾನದ ಲಾಲಸೆ ಹೆಚ್ಚಿಸಿದರೆ, ತನಗೊಪ್ಪುವ ದಾರಿಯನ್ನು ಮಗು ಆರಿಸಿಕೊಳ್ಳುವುದು— ಸುಲಭವಾಗುತ್ತದೆ.

ಈ ದಾರಿಯಿಂದ ಜ್ಞಾನಲಾಲಸೆ, ಅಭಿರುಚಿ, ಬೆಳೆದು ಮುಂದೆ, ಹಾಗೆಯೇ ಅದನ್ನು ಬೆಳೆಯಿಸಿಕೊಂಡು ಹೋಗುವ ಏರ್ಪಾಟು ಇದ್ದಲ್ಲಿ, ವಿದ್ಯಾಸಾಧನೆ ನಮ್ಮ ಜೀವನಕ್ಕೆ ತುಂಬ ಸಂತೋಷಕೊಟ್ಟೀತು. ಜತೆಗೆ ತನ್ನಂತೆಯೇ ಅದು ಜೀವನದ ದಾರಿಯನ್ನು ತೋರಿಸಿಕೊಟ್ಟೀತು.

ವಿದ್ಯೆಯ ಇನ್ನೊಂದು ಗುರಿ— ವ್ಯಕ್ತಿ ಜೀವನವನ್ನು ಬೆಳೆಸಿ ಆತ ತನ್ನ ಸಮಾಜಕ್ಕೆ ಭೂಷಣವಾಗುವಂತೆ ಮಾಡುವುದು ಎಂದು. ಶಿಕ್ಷಣದ ಅವಧಿ ಹದಿನೈದು ವರ್ಷಗಳ ಕಾಲ— ಎಂದು ನಾವು ಎಣಿಸಿದಲ್ಲಿ, ಆ ಕಾಲದ ಕೊನೆಗೆ ನಮ್ಮ ಸಮಾಜ ಹೇಗಿದ್ದೀತು, ಯಾವ ಪ್ರಶ್ನೆಗಳನ್ನು ಎದುರಿಸಬೇಕಾಗುತ್ತದೆ— ಎಂಬುದನ್ನು ವಿದ್ಯೆಯ ಸೂತ್ರ ಹಿಡಿದವರು ತಿಳಿಯಲು ಶಕ್ತರಾಗಬೇಕು. ನಾವು ಪ್ರಪಂಚದ ಇತರ ರಾಷ್ಟ್ರಗಳೊಡನೆ ಸಂಬಂಧ ಉಳ್ಳವರಾಗಿದ್ದೇವೆ. ಅಂಥ ರಾಷ್ಟ್ರಗಳ ಗತಿಗೂ, ನಮ್ಮ ಗತಿಗೂ ಹೊಂದಿಕೆಯಿಲ್ಲದೆ ಹೋದರೆ ವಿದ್ಯಾರ್ಥಿಯು ದೊಡ್ಡವನಾದಮೇಲೆ, ಜೀವನ ನಡೆಸಿಕೊಂಡು ಹೋಗುವುದು ಕಷ್ಟದ ಕೆಲಸ. ನಮ್ಮ ದೇಶಕ್ಕೆ ಎಷ್ಟು ಗುಮಾಸ್ತರು ಬೇಕಾದಾರು— ಎಂಬುದರ ಎಣಿಕೆ ಇಲ್ಲದೆ, ಎಲ್ಲರನ್ನೂ ಗುಮಾಸ್ತರನ್ನಾಗಿ ಮಾಡುತ್ತಿರುವ ಶಿಕ್ಷಣ ಹೇಗೆ ಪ್ರಯೋಜನಕ್ಕೆ ಬರಲಾರದೋ, ಅದೇ ರೀತಿ ಅಂತರ್ರಾಷ್ಟ್ರೀಯ ಸ್ಪರ್ಧೆ, ಉದ್ಯೋಗ ಸಂಬಂಧಗಳು, ವ್ಯಾಪಾರಗಳಲ್ಲಿರುವಾಗ, ನಮ್ಮ ಗುಡಿಕೈಗಾರಿಕೆಗಳನ್ನೇ ಕಟ್ಟಿಕೊಂಡು, 'ನಾಳೆ ವಿದ್ಯಾರ್ಥಿಗಳು ಜೀವನ ಸಾಗಿಸಿಯಾರು' ಎನ್ನುವುದು ತಪ್ಪುದಾರಿ. ದಿನ ದಿನ, ವಿಜ್ಞಾನ, ಸ್ಪರ್ಧೆಗಳು ಹೆಚ್ಚುತ್ತಿರುವ ಪ್ರಪಂಚದಲ್ಲಿ, ಶಿಕ್ಷಣ— ಈ ಎರಡು ಪ್ರಭಾವಗಳನ್ನು ಗಮನಿಸಿಯೇ ಮುಂದುವರಿಯಬೇಕಾಗುತ್ತದೆ.

ನಮ್ಮೆಲ್ಲ ವಿಶ್ವವಿದ್ಯಾಲಯಗಳು— ಸಂಶೋಧನೆ, ಸೃಷ್ಟಿ, ವ್ಯಕ್ತಿ ಭಾವ [illegible] ಗಮನವನ್ನೇ ಕೊಡುತ್ತಲಿಲ್ಲ. ವಿಜ್ಞಾನ ಹೇಳಲಿ, ಇನ್ನೊಂದು ಹೇಳಲಿ— [illegible] ನೋಡುವ ಅವಕಾಶವಿಲ್ಲ. ಬಾಹ್ಯ ಪ್ರಪಂಚದ ಪರಿಚಯವಿಲ್ಲ. [illegible] ಪುಸ್ತಕ ಜ್ಞಾನವನ್ನಷ್ಟೇ ತಲೆಗೆ ತುಂಬಿಸುವ ಕೆಲಸ ಮಾಡುತ್ತಿವೆ. [illegible] ಬುದ್ಧಿ ಬೆಳೆದೇ ಇಲ್ಲ. ಸರಕಾರಿ ನೌಕರಿ ದೊರೆಯದೆ ಹೋದಲ್ಲಿ [illegible] ವಿದ್ಯಾರ್ಥಿ ನಿಸ್ಸಹಾಯಿಯಾದ ಬಡಪಾಯಿಯಾಗುತ್ತಾನೆ. ನಾವು ಕೊಡುವ ಶಿಕ್ಷಣದಿಂದ, ಅವನಲ್ಲಿ ಆತ್ಮ ವಿಶ್ವಾಸ ಹೇಗೆ ಬರಬೇಕು? ಶಾಲೆಯಲ್ಲೇ— [illegible] ಕೆಲಸ.

ಮ್ಮ ಕೆಲಸಗಳು ನಮ್ಮ ಸಮಾಜದಲ್ಲಿ ಕೀಳೆನಿಸಿವೆ. ಸಮಾಜಕ್ಕೆ ಅವಶ್ಯವಾದ ಯಾ [illegible] ಮತ್ತು ಸೇವೆಗಳೂ ಸಮಾನ ಗೌರವಕ್ಕೆ ತಕ್ಕುವು— ಎಂಬುದು ನಮಗೆ ತಿಳಿದೇ ಇಲ್ಲ. [illegible] ಪೋಷಣೆಯ ಶಿಕ್ಷಣವೂ ಈಗ ನಡೆಯುತ್ತಲಿಲ್ಲ. ದೇಶಕ್ಕೆ [illegible] ಬೇಡ? ಅವನ್ನು ಸುಲಭವಾಗಿ, ಅಗ್ಗವಾಗಿ, ಚೆನ್ನಾಗಿ— [illegible] ಸಂಶೋಧನೆ, ಕೈ ಚಳಕ, ಹೊಸ ಸೃಷ್ಟಿ, ಹೇಗೆ ಬೆಳೆಯಬೇಕು? [illegible] (೧೨—೧೫ ವರ್ಷ ಪ್ರಾಯಗಳಲ್ಲಿ) ಶಾಲೆಯಲ್ಲಿ ಕಲಿಯ ಬೇಕಾದ [illegible] ಇಂಥ ಪ್ರಶ್ನೆಗಳು [illegible] ಕಾಲು ಶತ [illegible]

ಬೇಸು ಪಸಿ—೨

[illegible]

ಬರ್ನಾರ್ಡ್ ಶಾ ಉವಾಚ..........

(ಸಂಕಲನ)

ಶ್ರೀ ಕು. ಶಿ. ಹರಿದಾಸ ಭಟ್ಟ. ಬಿ. ಎ.(ಆನರ್ಸ್)

೧. ಚೆಂಡಿನ ಆಟದ ಕುರಿತು:

"ಪ್ರಗಾಢವಾಗಿ ಯೋಚನೆ ಮಾಡಿ ಮಾಡಿ ನಾನು ಈ ನಿರ್ಧಾರಕ್ಕೆ ಬಂದಿದ್ದೇನೆ: ಮಾನವ ಸಮಾಜವು ಸದ್ಯದ ಪರಿಸ್ಥಿತಿಯಲ್ಲಿ ಚೆಂಡನ್ನು ಒಂದು ಬಯಲಿನೊಳಗೆಯೆ ಅತ್ತಿತ್ತ ಹೊಡೆದೋಡಿಸುವುದಕ್ಕಿಂತ ಹೆಚ್ಚಿನದಾವುದಕ್ಕೂ ಯೋಗ್ಯವಲ್ಲ. ಬಹುಶಃ ಇನ್ನೊಂದು ಸಾವಿರ ವರುಷಗಳಲ್ಲಿ ಚೆಂಡನ್ನು ಹೇಗೂ ಬಯಲಿಂದ ಹೊರ ಒದ್ದೋಡಿಸುವ ನೈತಿಕ ಮತ್ತು ಬೌದ್ಧಿಕ ಮಟ್ಟವನ್ನದು ಏರಬಹುದೋ ಏನೋ"

೨. ಬರ್ನಾರ್ಡ್‌ಶಾ ತನ್ನ ಸಾಹಿತ್ಯಿಕ ಜೀವನದ ಒಂದು ಯುಗದಲ್ಲಿ ಕಾದಂಬರಿಗಳನ್ನು ಕೂಡ ಬರೆಯುತಿದ್ದ. ಅವನ್ನು ಇಂಗ್ಲೆಂಡ ಮತ್ತು ಅಮೇರಿಕದ ಎಲ್ಲ ಪ್ರಕಾಶಕರಿಗೂ ಕಳಿಸಿ ಸುಮಾರು ಅರುವತ್ತು ಅಸ್ವೀಕಾರ ಪತ್ರಗಳನ್ನು ಜಮಾಯಿಸಿದ. ಒಂದು ಬಣ್ಣದ ಚೀಲದೊಳಗಿನ ಆ ಐದು ಗಂಟುಗಳು ಆತನಿಗೆ ಬಂದು ಹಿಂದೆ ಹೋಗುವ ರೂಢಿ ಸಮುದ್ರದಲೆಯಂತೆ ನಡೆದೇ ಇತ್ತು. ಒಮ್ಮೊಮ್ಮೆ ಹಿಂದೆ ಬಂದಾಗಲೂ ಅದೇ ವಿಶಿಷ್ಟ ಆರ್ಥಿಕ ಪ್ರಶ್ನೆ—— ಇನ್ನೊಬ್ಬ ಪ್ರಕಾಶಕನಿಗೆ ಕಳಿಸಲು ಆರು ಪೆನ್ಸ್‌ಗಳನ್ನು ಸಂಪಾದಿಸುವುದು ಹೇಗೆಂದು—— ಪ್ರಾದುರ್ಭವಿಸುತಿತ್ತು.

೩. ಆತ ಸಾಹಿತ್ಯಕಾರನಾದುದಕ್ಕೆ ಕಾರಣ:

ಲೇಖಕನನ್ನು ಆತನ ಗಿರಾಕಿಗಳು ನೋಡುವ ಸಂದರ್ಭವೂ, ಅಗತ್ಯವೂ ಇಲ್ಲದೆ ಇರುವುದರಿಂದ ಲೇಖಕನು ಮನಹೆಚ್ಚಿಸುವಂಥ ಶುಭ್ರ ಉಡುಪನ್ನು ಧರಿಸಬೇಕಾಗಿಲ್ಲ......... ಸಮುವಸ್ತ್ರವಿಲ್ಲದ ಗೌರವಾರ್ಹ ವೃತ್ತಿಯೆಂದರೆ ಸಾಹಿತ್ಯವೊಂದೇ.

೪. ಶಾ ಅತ್ಯಂತ ಗರೀಬನಾಗಿ ಹಣಕಾಸಿಗೆ ಪೇಚಾಡುತ್ತಿದ್ದ ಗಳಿಗೆಯಲ್ಲಿ ಯಾಚಕನೊಬ್ಬ ಅರ್ಥಿಗಂಟು ಬಿದ್ದ. ತನ್ನ ಹತ್ತಿರ ಒಂದೇ ಒಂದು ಚಿಕ್ಕಾಸೂ ಇಲ್ಲವೆಂದು ಆ ಮನುಷ್ಯನು ತನ್ನ ವಿಶ್ವಾಸಪಾತ್ರತೆಯ ನಂಬುಗೆ ಹುಟ್ಟಿಸಿದಾಗ ಶಾ ಒಂದು ಅಪ್ರ ಸತ್ಯವನ್ನೇ ನುಡಿದ: "ನನ್ನ ಹತ್ತಿರ ಏನಿದೆ ಮತ್ತೆ ಮಣ್ಣು!" ಆಗ ಆ ಯಾಚಕ ಸಹಜವಾಗಿ ಶಾನ ಉಪಕಾರಸ್ಮರಣೆ ಮಾಡಿ, ಒಂದಿಷ್ಟೂ ಬೆರಗು ತೋರಿಸದೆ ಹೊರಟು ಹೋದ. ಶಾ ತನ್ನನ್ನೇ ತಾನು ಕೇಳುವಂತಾಯಿತು: "ನಾನೂ ಯಾಚಕ ಭಿಕ್ಷುಕನಾಗಲಿಲ್ಲ! ಅಂದರೆ ಅವನಂತೆ ಕೌಶಲ್ಯಪೂರಣಕವಾಗಿ ಬೇಡುವ ಮನುಷ್ಯ ಹಣಕ್ಕಾಗಿ ಎಂದೂ ಎಡತಾಕಲಾರನೆಂಬುದು ಖಂಡಿತ."

೫. ಮಾಂಸ ತಿನ್ನುವುದರ ಕುರಿತು:

'ಮಾಂಸಭಕ್ಷಣನೆಂದರೆ ಒಂದು ಜಾತಿಯು ನರಭಕ್ಷ್ಯಣವೇ (Cannibalism); ಆದರೆ ಇಲ್ಲಿ ಮುಖ್ಯವಾದ ಮತ್ತು ಸಾಹಸಯುಕ್ತವಾದ ಪಾಕ ವಿಶೇಷವೇ ಮಾಯವಾಗಿದೆ.

೬. ಕುದಿತದ ಕುರಿತು:

ನಾನು ನಾನವಿದೋಧಿ. ನನ್ನ [illegible] ತೆಂಗ ತತ್ತು ತೆತ್ತು ನನಗೆ ಅವಕಾಶವೇ ಇಲ್ಲದ ಹಾಗೆ [illegible]. ಇದಕ್ಕೆ ಒಂದು ಕಾರಣ: ನನ್ನ ಬುದ್ಧಿವಿಕಾಸಕ್ಕೆ [illegible] ಇರುವುದಿಲ್ಲ. [illegible] ಕುದಿದು [illegible] ಒಂದು ಕೆಲಸಕ್ಕೂ ಬಾರದ [illegible] ಇದರಿಂದ [illegible] ಬುದ್ಧಿ [illegible]

[illegible]

The Canara Banking Corporation Ltd.

[illegible]

ಆರ್ತಧ್ವನಿ

ಅವಿಕಲ ಚಿತ್ತದ ಮುಸುಕಿದ ಮುಸುಕನು,
ಬಾಳಿನ ಬಟ್ಟೆಯ ಮುತ್ತಿದ ಕವುದಿಯ
ಹಗಲಿರುಳಾಗಲು ಮಾಡಿದ ಮಾಟವ
ಪ್ರಕೃತಿಯ ಗತಿಯನು ಕರುಬಿದ ಸಕುತಿಯ
ಕಿವುಚಲು ಬಿಮ್ಮನೆ ನೇಹಂದೋರ್ವುದು!
ಕುಡುಪನು ಕಳೆದಿಹ ಢಮರಿನ ತೆರದಿಂ—
ದಾರವೆಯಿಲ್ಲದ ಚೆಲುನಾಡಿನವೊಲು
ಬಾಳಿನ ಗತಿಯನು ತೆರಳಿಪ ಬಲುಮೆಯ
ನೀಡದೆ ಬಾಳ್ವಾರೈಸುತಲಿಂತಿದೆ—
ದನಿಯೇಳಿಸಲಿಕೆ ಡಮರಕ ವಿಂದು!
ಅನಂತ ವಾರಿಧಿಯೊಂದೇ ಬಿಂದುವ
ಸಾಂತ್ವನ ಜೀವನದೊಳಗಡೆ ಚಳಯಿಸೆ,
ದಿವ್ಯಾನಂದದ ಸ್ಪರ್ ಸುಖ ಸಂಪದ—
ನೆಯ್ತುಹುದಿಲ್ಲಿಗೆ ಅನಂತ ಶಕ್ತಿಯ
ಕಡೆಗಣ್ಣೋಟವೆ ನಲ್ ಬಲುಹಾಗಿ!
ಮಳಲಿನ ಕಾಡಿನ ಮೃಗ ಜಲಕರಸುವ
ಮೃಗಗಳ ತೆರದಿಂ ದಿಚ್ಚೆಯ ಬೆಂಬಿಡ—
ದೋಡುವ ಮಾನುಸ ನಾಗಸದೊತ್ತಡ
ಸುತ್ತುತಲಿರುತಿಹನನಿಶಂ— ಮರುಳಂ
ತಿಳಿವನ್ನರಿಯದೆ ಮೋಹಿತನಾಗಿ!

೨

ವ್ಯೋಮಾತೀತದ ಸಿಲುಗಡೆಯಲ್ಲಿ
ಕಲ್ಪಾತೀತದ ಕಾಲಡಿಯಲ್ಲಿ
ಓಂಕಾರದ ದನಿಯೇಳಿಪ ಸಕುತಿ,
ಸಾಸಿರ ಸಾಸಿರ ಸಿಟ್ಟಿಯರೂಹಿನೊ—
ಳೆನಿಸಿಬರೊ ಕೂಗುವರ ವರಡೆಯೇಳುವ
ಕರುಣಾಪೂರಕ ಆರ್ತ ಧ್ವನಿಯಿದು
ಓಂಕಾರದ ದನಿಯೊಡ ವೆರೆದರೆ ಈ

ಭೂಮಿಯ ನಶ್ವರ ಬಾಳಿನ ನಲುಮೆಯ
ಕಡಿಯುತ—ಅನಂತ ಜೀವನದಾಕಡೆ—
ಗೆಯ್ದುಲು ಕೊಡಲಿನ ಬಳ್ಳಿಯ ಕಡಿಯುತ
ಬಯಕೆಯ ಬಗೆಮಲರರಳಲು ಜ್ಞಾನ—
ಜ್ಯೋತಿಯು ಬೆಳಗಿರೆ ಬಟ್ಟೆಯ ಕೊನೆಯೋ
ಜ್ಞಾನ ದಿವ್ಯಾನಂದ— ಸುಖವು!

ಅ. ಕ. ಸಂಕಪ್ಪ ರೈ.

ಪ್ರೇಮಚಂದಗೆ

[illegible]

ಭಾರತದ ಭವಿಷ್ಯ

ಲೇಖಕರು: **ಶ್ರೀ. ವ್ಹಿ. ಜಿ. ಲೋಕರೆ, ಪರೇಲ್, ಬೊಂಬಾಯಿ.**

ನನ್ನನ್ನು ಬೀಳ್ಕೊಳ್ಳಲು ಬಂದ ಗೆಳೆಯರಲ್ಲಿ ಒಬ್ಬೊಬ್ಬರು ಒಂದೊಂದು ಬಗೆಯಿಂದ ನನಗೆ ಉಪದೇಷ ಮಾಡುತ್ತಿದ್ದರು. ಪೂಜೆಯ ಮುಕ್ತಾಯದಲ್ಲಿ ಪ್ರಸಾದ ಹಂಚುವಂತೆ ತಮ್ಮ ತಮ್ಮ ಮಾತು ಮುಗಿಸಿ ತಿಂಡಿ ತಿನಿಸುಗಳ ಚಿಕ್ಕ ಪೊಟ್ಟಣಗಳನ್ನಾಗಲಿ ಬೇರಾವದಾದರೂ ಒಂದು ವಸ್ತುವನ್ನಾಗಲಿ ಪ್ರೀತಿಯ ಉಡುಗೊರೆಯೆಂದು ನನ್ನ ಕೈಗೆ ತುರುಕಿ ಒಂದು ಗೆಲವಿನ ನಗೆ ಬೀರಿ ದೂರ ಸರಿಯುತ್ತಿದ್ದರು. ಹಾಗೆಯೇ ನನ್ನ ಸಹ— ಪ್ರವಾಸಿಗಳ ಗೆಳೆಯರೂ ಮುಂತಾದವರು ಬಂದು ತಮ್ಮ ತಮ್ಮವರನ್ನು ಬೀಳ್ಕೊಳ್ಳುತ್ತಿದ್ದರು. ನಮ್ಮ ಊರಿಗೆ ಬಂದ ದೇಷ ಭಕ್ತ ದೇಷಪಾಂಡೆಯವರನ್ನು ಬೀಳ್ಕೊಳ್ಳಲು ಬಂದ ದೇಷ ಸೇವಕರ ಗುಂಪಿನವರಂತೂ ದೇಷಭಕ್ತರ ಜೊತೆಯಲ್ಲಿ ತಮ್ಮೆಲ್ಲರ ಫೋಟೋ ತೆಗೆಸಿಕೊಳ್ಳಲು ಮರೆಯಲಿಲ್ಲ. ಆಫೋಟೋ ಎಂದರೆ ಒಂದು ವಿಶ್ವವಿದ್ಯಾಲಯದ ಪದವಿಗಿಂತಲೂ ದೊಡ್ಡ ಮಾನಪತ್ರ. ಅಷ್ಟರಲ್ಲಿ ನನ್ನ ಸಾಮಾನುಗಳನ್ನೆಲ್ಲ ಗಾಡಿಗೆ ಹಾಕಿ ನನ್ನ ಪ್ರಯಾಣದ ಟಿಕೇಟನ್ನು ನನ್ನ ಕೈಗೆ ಕೊಡುತ್ತ ನಮ್ಮ ಅಣ್ಣ, "ತಮ್ಮಾ, ಶ್ಯಾಮೂ ಮುಂಬಯಿಗೆ ಹೋಗಿ ಕಾಲೇಜು ಸೇರಿ M. A. ಓದುವ ಡೌಲಿನಲ್ಲಿ ಹಳ್ಳಿಯ ಜನರೆಂದು ನಮ್ಮೆಲ್ಲರನ್ನು ಮರೆತು ಹೋಗಬೇಡ. ಆಗಾಗ ಪತ್ರ ಬರೆಯುತ್ತಿರು." ಎಂದು ಗದ್ಗದ ಕಂಠದಿಂದ ಬೀಳ್ಕೊಂಡನು ನೆರೆದ ಗೆಳೆಯರೆಲ್ಲರೂ ಒಬ್ಬೊಬ್ಬರಾಗಿ ನನ್ನ ಕೈ ಕುಲುಕಿ (Shake-Hand) ಬೀಳ್ಕೊಳ್ಳುತ್ತಿದ್ದರು. ಈ ಗಡಿಬಿಡಿಯ ಸಮಯದಲ್ಲಿಯೂ ಕಿಡಿಗೇಡಿ ಕಿಟ್ಟು, "ಶ್ಯಾಮು, ಕಾಲೇಜು ಸೇರಿದ ಮೇಲೆ ಮುಂಬಯಿಯ ಕಾಲೇಜು ಗರ್ಲ— ಹೆಣ್ಣು ಹುಡುಗಿಯರ— ವೈಯಾರಗಳ ವರ್ಣನೆಯನ್ನೂ ಪತ್ರದಲ್ಲಿ ರಸವತ್ತಾಗಿ ಬರೆದು ತಿಳಿಸು; ಮರೆಯ ಬೇಡ. ಈ ಹಾಳು ಕರ್ನಾಟಕ ಕಾಲೇಜಿನಲ್ಲಿ 6 ವರ್ಷ ಪರೀಕ್ಷೆಗೆ ಕಟ್ಟಿದರೂ B. A. ಡಿಗ್ರಿ ಸಿಗುವುದಿರಲಿ ಒಂದು ಚಲೋ ವೈಯಾರಿಯನ್ನು ದೊರಕಿಸುವುದೂ ಸಾಧ್ಯವಾಗಲಿಲ್ಲ. ನೀನೊಬ್ಬ ಮಿತ್ರನೆಂದು ನಿನಗೆ ಹೇಳುತ್ತೇನೆ, ನೋಡು ಸಾಧ್ಯವಾದರೆ ನನಗೊಂದು ಬೊಂಬೆ ಫೇಷನ್ ಹುಡುಗಿ ದೊರಕಿಸಿ ಕೊಡು. ನಿನ್ನ ಮೆಹೆರಬಾನಿಯ ಕಾರ್ಯಕ್ಕೆ ತಕ್ಕ ಇನಾಮು ಕೊಡಲಿಕ್ಕೆ ನಾನೇನೂ ಮರೆಯುವುದಿಲ್ಲ" ಎಂದು ಹಲ್ಲು ಕಿಸಿದನು. ಎಲ್ಲರೂ ಗೊಳ್ಳನೆ ನಕ್ಕರು.

ರೈಲು ಹೊರಟಿತು. ಬೀಳ್ಕೋಳ್ಳಲು ಬಂದವರ ಜಂಜಾಟದಿಂದ ಪಾರಾದ ಮನಸ್ಸು ನಾನು ಕುಳಿತಿರುವ ಡಬ್ಬಿಯ ಒಂದು ಮೂಲೆಯಲ್ಲಿ ನಿಂತಿರುವ ವ್ಯಕ್ತಿಯತ್ತ ಹಾಯಿತು. ಆ ವ್ಯಕ್ತಿಯನ್ನು ನಾನು ಎಲ್ಲಿಯೋ ನೋಡಿದ ನೆನಪಾಯಿತು. ಅಹುದು

ರೈಲು ಪ್ಲಾಟಫಾರಮ್‌ಗೆ ಬರುವುದಕ್ಕಿಂತ ಸುಮಾರು ಒಂದು ತಾಸು ಮೊದಲೇ ನಿಲ್ದಾಣದ ಒಂದು ತುದಿಗೆ ಹೋಗಿ ನೀಲಾಕಾಶವನ್ನು ನೋಡುತ್ತ ವಿಚಾರದಲ್ಲಿ ಮಗ್ನನಾದ ವ್ಯಕ್ತಿ ಇವನೇ? ಅಹುದು ಇವನೇ. ಈಗಲೂ ಅವನದು ಅದೇ ನಿಲುವು, ಅವನ ಆ ಕಣ್ಣು, ಆ ನಿಲುವಿಕೆ ಇವು ಯಾರನ್ನೂ ಸಹಜವಾಗಿ ಅವನಲ್ಲಿ ಒಂದು ಬಗೆಯ ಸಹಾನುಭೂತಿ ಹುಟ್ಟಿಸುವಂತಿದ್ದವು.

"ಸ್ವಾಮಿ, ನಿಮಗೆಲ್ಲಿ ಹೋಗಬೇಕು? ಕುಳಿತುಕೊಳ್ಳಿರೇಕೆ? ಇಲ್ಲಿ ಸ್ಥಳವಿದೆ." ಎಂದು ವಿಚಾರ ಮಗ್ನ ವ್ಯಕ್ತಿಯನ್ನು ಒತ್ತಾಯಪೂರ್ವಕವಾದ ಉತ್ತರ ಕೊಟ್ಟೆನು.

ಅವನ ಗಂಭೀರ ಮುಖದಲ್ಲಿ ಮುಗುಳುನಗೆಯು ಕೆಳುದೆರೆಯೊಂದು ಮೂಡಿ ಮಾಯವಾಯಿತು. "ದೇವರು ನಿಮಗೆ ಒಳ್ಳೆಯದನ್ನು ಮಾಡಲಿ". ಎಂದು ಹೇಳುತ್ತ ನನ್ನ ಬಳಿಯಲ್ಲಿ ಬಂದು ಕುಳಿತುಕೊಂಡನು.

[illegible]

ಸುರಿಸಿದವು. ನಾನು ಇದೇ ಕೆಲವು ದಿನಗಳ ಹಿಂದೆ ಸಂದರ್ಶಿಸಿದ ಹಾಳುಬಿದ್ದ ಹಂಪೆ ವಿಜಯನಗರದ ಅವಶೇಷಗಳನ್ನು ಕಂಡು ಕಣ್ಣೀರು ಸುರಿಸದೆ ಇರುವ ಬರಡು ಕಣ್ಣುಗಳಿರಲಾರವು."

ನಾನು ಬಿ. ಎ. (B. A.) ಪರೀಕ್ಷೆಗೆ ಕಟ್ಟಿದ್ದು ಇತಿಹಾಸ ವಿಷಯದಲ್ಲೇ. ಕಿಸನನ ಮಾತು ನನ್ನ ಅಭಿಮಾನವನ್ನು ಜಾಗ್ರತಗೊಳಿಸಿತು. ನಾನೂ ನನ್ನ ವಿದ್ಯೆ ಹಾಗೂ ಜ್ಞಾನದ ಒಂದು ಕೈ ತೋರಿಸಿ ಬಿಡುವ ನಿರ್ಧಾರಮಾಡಿದೆನು.

"ಮಿ. ಕಿಸನ್ ನಮ್ಮ ಹಿಂದಿನ ಐತಿಹಾಸಿಕ ಅವಶೇಷಗಳನ್ನು ನೋಡಿ ಯಾರಿಗಾದರೂ ಕೆಡಕೆನಿಸದೆ ಇರಲಾರದು. ಆದರೆ ಇದಕ್ಕೆ ಉಪಾಯವಿಲ್ಲ. ನಮ್ಮವರಾದರೇನು ನಮ್ಮ ಇತಿಹಾಸ ಪ್ರಸಿದ್ಧ ಸ್ಥಳಗಳನ್ನು ವೈರಿಯ ಕೈಗೆ ಬಿಟ್ಟು ಓಡಿ ಹೋಗಿರಲಿಲ್ಲ. ಅವರೂ ತಮ್ಮ ಖಡ್ಗದಿಂದ ವೈರಿಯ ನೆತ್ತರಕೋಡಿ ಹರಿಸಿ ತಾವೂ ಸ್ವಾಭಿಮಾನದಿಂದ ತಮ್ಮ ಸ್ವಾತಂತ್ರ್ಯತೆಯನ್ನು ಉಳಿಸಿಕೊಳ್ಳಲು ಕಡೆತನಕ ಕಾದು ದೇಶದ ರಕ್ಷಣೆಯಲ್ಲಿ ದೇಹವಿಟ್ಟಿರುವರು. ಪೃಥ್ವಿರಾಜರಂಥ ವೀರರು ಏಕಾಕಿಯಾಗಿ ಬಲಾಢ್ಯ ಶತ್ರುವಾದ ಶಹಬುದ್ದೀನನೊಡನೆ ಕಾದಿ ರಣರಂಗದಲ್ಲಿ ಪ್ರಾಣತೆತ್ತಮೇಲೆಯೇ ಅವನ ಮೃತದೇಹವನ್ನು ತುಳಿಯುತ್ತ ಶಹಬುದ್ದೀನನು ದಿಲ್ಲಿಯನ್ನು ಪ್ರವೇಶಿಸಬೇಕಾಯಿತು. ಪ್ರತಾಪಸಿಂಗನಂಥ ಚಿಕ್ಕ ಪುಟ್ಟ ಅರಸರೂ ಕೂಡಾ ಅಕಬರನಂಥ ಬಲಾಢ್ಯ ಸಮ್ರಾಟ ಹಾಗೂ ಅವನ ಗೆಳೆಯರಾದ ಏತದ್ದೇಶೀಯ ಫಿತೂರಿ ಅರಸರನ್ನೊಳಗೊಂಡ ಪ್ರಚಂಡ ಬಲಪ್ರವಾಹಕ್ಕೆ ಅಡ್ಡನಿಂತು ಅದನ್ನು ತಡೆಗಟ್ಟಿದುದು ಮರೆಯತಕ್ಕ ಸಂಗತಿಯಲ್ಲ. ಅದಿರಲಿ ೧೮೫೭ರಲ್ಲಿಯ ಸಿಪಾಯಿಗಳ ಬಂಡಾಯ–ಅಲ್ಲ ಸ್ವಾತಂತ್ರ್ಯ ಯುದ್ಧ–ದ ಕಾಲದಲ್ಲಿ ಕಾದಾಡಿ ಮಡಿದ ವೀರ ಹುತಾತ್ಮರಾದ ಲಕ್ಷ್ಮೀಬಾಯಿ, ತಾತ್ಯಾಟೋಪಿಯವರಂಥವರ ಶೌರ್ಯ, ಸಾಹಸ, ತ್ಯಾಗಗಳನ್ನು ನೆನೆದು ನಾವು ಅಭಿಮಾನಪಡಬೇಕಾದ ಸಂಗತಿ. ಶಂಕರಾಚಾರ್ಯ, ಬುದ್ಧರಂಥ ವೇದಾಂತಿಗಳು, ನಾನಾಫಡಣವೀಸನಂಥ ರಾಜಕಾರಣ ಧುರೀಣರು, ಹಾಗೂ ತಾಜಮಹಲ, ಹಂಪೆ, ವಿಜಯನಗರಗಳನ್ನು ಕಟ್ಟಿದಂಥ ಕಲಾವಂತರು ನಮ್ಮ ದೇಶದಲ್ಲಿ ಇದ್ದರೆಂಬುದು ಅಭಿಮಾನಾಸ್ಪದ. ಬರಿದೆ ಹಾಳುಬಿದ್ದ ಅವಶೇಷಗಳನ್ನು ಕಂಡು ನಮ್ಮವರು, ನಮ್ಮ ಪೂರ್ವಜರು ಇವರ ಬಗ್ಗೆ ಅಭಿಮಾನ ಶೂನ್ಯರಾಗುವುದು ನನಗಂತೂ ಸೇರುವುದಿಲ್ಲ."

"ನಿಮ್ಮ ಮಾತು ಸುಳ್ಳೆನ್ನುವುದಿಲ್ಲ, ಮಿ. ಶಾಮರಾವ್, ಆದರೆ ಕೂಲಂಕುಷವಾಗಿ ನಮ್ಮ ಇತಿಹಾಸವನ್ನು ಅಭ್ಯಸಿಸಿದಾಗ ನಮ್ಮ ದುರ್ಗತಿಗೆ ಪರದೇಶೀಯ ಕುತರ್ಕ ಹಾಗೂ ಶೌರ್ಯಕ್ಕಿಂತ ನಮ್ಮಲ್ಲಿಯ ಒಡಕು ಬುದ್ಧಿಯಿಂದ ನಾವೇ ಇದಕ್ಕೆ ಮೂಲಭೂತರಾಗಿರುವೆವೆನ್ನುವುದರಲ್ಲಿ ನನಗೇನೂ ತಪ್ಪೆನಿಸುವುದಿಲ್ಲ...."

ಕಿಸನನು ಒಂದೆರಡು ನಿಮಿಷ ಸುಮ್ಮನಿದ್ದದನ್ನು ಕಂಡು— ನನಗೆ ಗೆಲುವಿನ ಆಶೆ. ಆದರೆ ಆ ತೀಕ್ಷ್ಣ ಬುದ್ಧಿಯು ನಿಮಿಷನೆರಡು ನಿಮಿಷ ವಿಚಾರಮಗ್ನವಾಗಿ ಮತ್ತೆ ಮಾತು ಮುಂದುವರಿಸಿದಾಗ ನಾನು ಸ್ವಲ್ಪ ಅಳುಕಿದೆನು. ಒಂದೊಂದಾಗಿ ಇತಿಹಾಸದ ಪುಟಗಳನ್ನೂ ನನ್ನೆದುರು ಬಿಚ್ಚಿಡುತ್ತಿದ್ದ ಕಿಸನ.

“ಅಲೆಕ್ಝಾಂಡರನು ಒಂದರ ಸುಮಾರಿಗೆ ನಮ್ಮ ದೇಶಕ್ಕೆ ಬಂದು ಝೀಲಮ್ ನದಿಯನ್ನು ದಾಟಿ ಪೋರಸನನ್ನು ಸೋಲಿಸಿದ ಸಂಗತಿ ನಿಮಗೆ ಗೊತ್ತಿಲ್ಲದೆ ಇಲ್ಲ. [illegible]

ದರೂ ಸುಳ್ಳೆಂದು ಸಿದ್ಧಗೊಳಿಸುವುದು ಇತಿಹಾಸ ಶಾಸ್ತ್ರದಲ್ಲಿ ಇಷ್ಟು ಓದಿದ ನನಗೆ ಅಸಾಧ್ಯವಾದ ಸಂಗತಿಯಾಗಿತ್ತೆಂದರೂ ಸರಿಯೆ. ಆದರೆ ಬರಿದೆ ತಪ್ಪುಗಳನ್ನು ಹುಡುಕುತ್ತಿರುವುದು ಅವನಲ್ಲಿಯ ಒಂದು ದುರ್ಬಲತೆಯೆಂದು ನನಗನಿಸಹತ್ತಿತು.

“ಕಿಸನ ನೀವು ಆಗುಹೋಗುಗಳ ಒಂದೇ ಒಂದು ಅಂಗವನ್ನು ನೋಡುತ್ತೀರಿ ಬರಿದೆ ಕೆಡುಕು ಮಾತ್ರ ನಿಮ್ಮ ನೆನಪಿನಲ್ಲಿ ಧೃಢವಾಗಿ ಊರಿಕೊಂಡಿರುವುದು. ಪರಕೀಯರಿಂದ ಪಾದಾಕ್ರಾಂತವಾದರೂ, ಇಂಗ್ಲೀಷರಂಥ ಬಂಡವಾಳಗಾರರ ಕೈಯಲ್ಲಿ ಎರಡುನೂರು ವರುಷ ಚಡಪಡಿಸಿದರೂ ಎಲ್ಲ ಸಂಕಟಗಳಿಗೂ ಎದೆಗೊಟ್ಟು ಇಂದಿಗೂ ನಾವು ನಮ್ಮ ಧರ್ಮ, ಸಂಸ್ಕೃತಿಗಳನ್ನು ಕಾದುಕೊಂಡಿರುವೆವು, ಇದಕ್ಕೇನೆನ್ನುವಿರಿ? ಅದಿರಲಿ ಸದ್ಯ ಮಹಾತ್ಮಾ ಗಾಂಧಿಯರ ಪುಣ್ಯದಿಂದ ನಮ್ಮ ದೇಶವು ಸ್ವತಂತ್ರವಾಗಿರುವುದು. ಇನ್ನು ಇವೆಲ್ಲ ಹಿಂದಿನ ತಪ್ಪು ಒಪ್ಪುಗಳನ್ನು ನೆನೆಯುವುದರಲ್ಲೇನಿದೆ?”

ಕಿಸನನಿಂದ ಮಾರುತ್ತರ ಸಿಗಲಾರದೆಂದು ನನ್ನ ಧೃಡ ನಂಬಿಕೆಯಿತ್ತು. ನಾನು ವಿಷಯಗಳನ್ನು ತಪ್ಪು-ಕುಹಕ-ದೃಷ್ಟಿಯಿಂದಲೇ ನಿರೀಕ್ಷಿಸುವ ಕಿಸನನ ದೃಷ್ಟಿಕೋನದ ಮೇಲೆಯೇ ನನ್ನ ವಾಗ್ಬಾಣವನ್ನು ಪ್ರಯೋಗಿಸಿದ್ದೆನು. ಆದರೆ ನನ್ನ ಗುರಿ ತಪ್ಪಿತು. ನಾನು ತಿಳಿದಂತೆ ಅವನ ಜ್ಞಾನ ಹಾಗೂ ದೂರದರ್ಶಿತ್ವವು ಆಗುಹೋಗುಗಳ ತಪ್ಪನ್ನು ಹುಡುಕುವ ಕುಹಕದಲ್ಲಿ ಮೈಮರೆತಿರಲಿಲ್ಲ. ಮುಂದಿನ ಮಾರ್ಗದಲ್ಲಿ ಮತ್ತೆ ಹಿಂದಿನ ತಪ್ಪುಗಳೇ ನಮ್ಮ ಕೈಯಿಂದ ಮತ್ತೊಮ್ಮೆ ರಂಗಭೂಮಿಗೆ ಬರಬಾರದೆಂದಿದ್ದರೆ ಹಾಗೆ ಮಾಡದಿದ್ದಲ್ಲಿ ಮಾರ್ಗವು ಅಷ್ಟು ಸುಲಭವಾಗುವುದು ಅಶಕ್ಯವೆಂಬುದು ಅವನ ಮತ. ಸಾಕ್ಷಾತ್ ಸರಸ್ವತಿದೇವಿಯೇ ಎಂಬಂತೆ ಅವನ ನಾಲಗೆಯು ಜ್ಞಾನ ಭಂಡಾರದಿಂದ ಇತಿಹಾಸದ ಆಗುಹೋಗುಗಳ ಲೆಕ್ಕಪತ್ರಗಳನ್ನು ನನ್ನ ಮುಂದಿರಿಸಿ ಈಗ ಮಾತಿನಲ್ಲೇ ವರ್ತಮಾನ, ಭವಿಷ್ಯತ್ತುಗಳ ಚಿತ್ರವನ್ನು ಬರೆಯಲಿಕ್ಕಾರಂಭಿಸಿತು. ನಾನು ಅದನ್ನು ನೋಡುತ್ತಿದ್ದೆನು.

“ನಮ್ಮ ದೇಶಕ್ಕೆ ಪರದೇಶದಿಂದ ಬಂದವ”ರಲ್ಲಿ ಬ್ರಿಟಿಷರೇ ಕೊನೆಯವರು. ಅವರಿಂದ ನಾವು ನಮ್ಮ ಸ್ವಾತಂತ್ರ್ಯವನ್ನು ಮರಳಿ ಪಡೆದಿರುವೆವು—ಅಲ್ಲ ಕಸಕೊಂಡಿರುವೆವು. ನಮ್ಮ ದೇಶಕ್ಕೆ ಹತ್ತಿದ ಸಾಮ್ರಾಜ್ಯಶಾಹಿ ಹುಳುಗಳಲ್ಲಿ ಬ್ರಿಟಿಷ ಸಾಮ್ರಾಜ್ಯಶಾಹಿಯೊಂದು ಮಹಾ ರೋಗದ ಹುಳು. ನಮ್ಮ ಸಂಸ್ಕೃತಿ, ಜ್ಞಾನ, ಕಲಾಕೌಶಲ್ಯ ಇತ್ಯಾದಿ ಎಲ್ಲ ಬಗೆಯಿಂದ ನಮ್ಮನ್ನು ಅಧೋಗತಿಗಿಳಿಸಿ ನಮ್ಮ ಸಾಮಾಜಿಕ ಜೀವನವನ್ನು ಅತಿ ತುಚ್ಛ ತರಗತಿಗಿಳಿಸಿ ನಮ್ಮ ಆರ್ಥಿಕ ದಿವಾಳಿ ಹೊರಡಿಸಿದ್ದೂ ಬ್ರಿಟಿಷ ಸಾಮ್ರಾಜ್ಯಶಾಹಿಯೇ ಎಂದು ಬೇರೆ ಹೇಳಬೇಕಾಗಿಲ್ಲ. ಧೂರ್ತರಾದ ಇಂಗ್ಲೀಷರು ಇತರ ಪರದೇಶಿಯರಿಗೆ ಸಾಧಿಸದ ಅಸಾಧ್ಯವನ್ನು ಸಾಧಿಸಿದ ಸಾಧ್ಯರು. ನಾವು ಇಂದು ಸ್ವತಂತ್ರರಾಗಿದ್ದರೂ ಬಿದ್ದ ಪೆಟ್ಟಿನಿಂದ ನಿವಾರಿಸಿಕೊಂಡೇಳುವುದೇನೂ ಅಷ್ಟು ಸುಲಭವಾಗಿಲ್ಲ.”

"ಒಂದು ಕಾಲದಲ್ಲಿ ಪರದೇಶಿಯರು ಇನ್ನೂ ಅರಣ್ಯವಾಸಿಗಳಿದ್ದಾಗ" ಕಿಸನನ ಗಂಭೀರವಾಣಿ ತಡೆಯಿಲ್ಲದೆ ಮುಂದೆ ಸಾಗಿತ್ತು, "ನಾವು ಓದು ಬರಹ ಕಲಾ-ಕೌಶಲ್ಯಗಳಲ್ಲಿ ನುರಿತವರಾಗಿದ್ದೆವು. ಅವರು ಇನ್ನೂ ಗವಿಗಳಲ್ಲಿ ವಾಸಿಸುತ್ತಿರುವಾಗ ನಾವು ಪಟ್ಟಣಗಳಲ್ಲಿ ಮನೆಗಳನ್ನೂ, ಅರಮನೆಗಳನ್ನೂ ಕಟ್ಟುತ್ತಿದ್ದೆವು. ನಮ್ಮಲ್ಲಿ ಅತ್ಯುತ್ತಮ ಆಯುಧಗಳಿದ್ದವು. ಬುದ್ಧರಂಥ ತತ್ವಜ್ಞಾನಿಗಳೂ, ಶಂಕರಾಚಾರ್ಯ ರಂಥ ಶಿಲ್ಪಿಗಳೂ ನಮ್ಮಲ್ಲಿ ಮೆರೆದಿರುವರು. ಪರದೇಶದ ಅಜ್ಞಾನಿ ಹಳ್ಳಿಯ ಹುಡುಗ ನನ್ನು ಮಹಾತ್ಮಾ ಯೇಸುಕ್ರಿಸ್ತನಂಥ ಧರ್ಮಸ್ಥಾಪಕನಾಗಿ ಮಾಡಿದಂಥ ಗುರುಗಳೂ ವಿದ್ಯಾಪೀಠಗಳೂ ನಮ್ಮಲ್ಲಿದ್ದವು. ಇಂದು ನಾವು ಸ್ವತಂತ್ರರಾಗಿರುವೆವು. ದೇಶವು ಸ್ವತಂತ್ರವಾಗಿದ್ದೂ ಉಚ್ಚ ಶಿಕ್ಷಣವನ್ನು ಪಡೆಯುವುದಕ್ಕಾಗಿ ಇಂದು ನಮಗೆ ಪರದೇಶಕ್ಕೆ ಹೋಗಬೇಕಾದ ಪ್ರಸಂಗ ಬಂದೊದಗಿರುವುದು."

ಇಲ್ಲಿ ಕಿಸನ ಒಂದೆರಡು ನಿಮಿಷ ತಡೆದು ತನ್ನ ಕೈ ಚೀಲದೊಳಗಿಂದ ಒಂದು ... ಅದರಲ್ಲಿಯ ಸಂಗತಿಯಂತೆ ... ಪಾತ್ರನಾಗಿದ್ದು ... ಕಲಿಯುವುದಕ್ಕಾಗಿ ... ಪದವೀಧರನಾದ ... ಕಟ್ಟಿದೆನು.

[illegible]

ಆದರೆ ಅವನ ಚಾಣಾಕ್ಷತೆಯು ಎಂದೋ ಅದನ್ನು ಮಾತಿನಲ್ಲಿ ಶಬ್ದಕ್ಕೆ ಜೋಡು ಕೊಡಲು ಉಪಯೋಗಿಸಿದ ಅಲ್ಪವಿರಾಮ ಚಿನ್ಹವಾಗಿ ಮಾರ್ಪಡಿಸಿದನು.

"ಮಹಾತ್ಮರ ಪ್ರಯತ್ನದಿಂದ ನಮ್ಮ ದೇಶವು ಸ್ವಾತಂತ್ರ್ಯತೆಯ ಬೆಳಕು ಕಂಡಿ ರುವುದೇನೋ ನಿಜ. ಆದರೆ ಇಂದು ಆ ಸೂರ್ಯನು ಅಸ್ತಮಿಸಿರುವನು. ಸ್ವಾತಂತ್ರ್ಯವು ವ್ಯಕ್ತಿ ಸ್ವಾತಂತ್ರ್ಯದ ನೆಲಗಟ್ಟಿನ ಮೇಲೆ ಕಟ್ಟಲ್ಪಟ್ಟಿದ್ದು ವೈಯಕ್ತಿಕ ಹಕ್ಕನ್ನು ಕಾದುಕೊಳ್ಳುವುದಕ್ಕೆ ಪ್ರತಿಯೊಬ್ಬನು ಸ್ವತಂತ್ರನಿರುವನು. ನಮ್ಮ ಅಜ್ಞಾನ, ಅಶಿಕ್ಷಿತತೆಯನ್ನು ದೂರೀಕರಿಸಲು ಇಂದು ನಾವು ಯಾವ ಮಾರ್ಗವನ್ನು ಹುಡುಕಿ ತೆಗೆ ದಿರುವೆವು? ಸ್ವತಂತ್ರ ಭಾರತದ ನಾಳೆಯ ನಾಗರಿಕರಾಗಲಿರುವ ನಮ್ಮ ದೇಶದ ವಿದ್ಯಾರ್ಥಿಯರಿಗೆ ದೇಶದ ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯ ಸ್ಥಿತಿಗತಿಗಳ ಜ್ಞಾನ ಹಾಗೂ ಇದೆಲ್ಲವನ್ನೂ ಸುಧಾರಿಸುವ ವಿವಿಧ ರೀತಿ ನೀತಿಗಳ ಅರಿವನ್ನು ಕೊಡುವ ಬದಲು ಅವರ ಅಮೌಲ್ಯ ವೇಳೆಯನ್ನು ತತ್ವಜ್ಞಾನ ಹಾಗೂ ಮಾನವತೆಯ ಮೇಲೆ ಅತ್ಯುತ್ತಮ ಲೇಖನಗಳನ್ನೂ ಗ್ರಂಥಗಳನ್ನೂ ಬರೆಯಲು ಕಲಿಸುವುದರಲ್ಲೇ ಹಾಳು ಮಾಡುತ್ತಿರುವೆವು."

"ನಮ್ಮ ಭವಿಷ್ಯದ– ನಮ್ಮ ದೇಶದ ಭವಿಷ್ಯದ ಬುನಾದಿಯು ಇನ್ನೂ ತಯಾರಿ ಕೆಯಲ್ಲಿರುವುದು." ಭವಿಷ್ಯವಾದಿ ಕಿಸನ ಭವಿಷ್ಯ ಹೇಳುತ್ತಲೇ ಇದ್ದನು. "ನಮ್ಮ ದೇಶದ ರಾಜ್ಯಕಾರಭಾರವು ನಮ್ಮ ಕೈಯಲ್ಲಿರುವಂತೆ ನಮ್ಮ ದೇಶದ ಭವಿಷ್ಯವೂ..... ಆದರೆ ಇಂದಿನ ವರೆಗೆ ನಾವು ಏನು ಮಾಡಿರುವೆವು? ಈಗ ಏನು ಮಾಡುತ್ತಿರುವೆವು? ಎಂದು ಯಾರಿಗಾದರೂ ಕೇಳಿದರೆ ನಮ್ಮ ದೇಶವು ನಮಗೆ ಪ್ರಿಯವಾದುದು. ನಾವು ದೇಶಕ್ಕಾಗಿ ಜೀವದಾನ ಕೊಡಲು ಸಿದ್ಧರಿರುವೆವು ಎಂದು ಹೇಳುವರು. ಸದ್ಯ ನಮ್ಮ ದೇಶಕ್ಕೆ ಬೇಕಾಗಿರುವುದು ರಕ್ತಬಲಿಯಲ್ಲ; ಜೀವಬಲಿಯಲ್ಲ; ಆರ್ಥಿಕ ಬೆಂಬಲ. ಒಂದೆಡೆಯಲ್ಲಿ ಜನರು ಬರಗಾಲ ಹಾಗೂ ಬಡತನದಿಂದ ಸಾಯುತ್ತಿದ್ದರೆ ಮತ್ತೊಂ ದೆಡೆಯಲ್ಲಿ ಕಿಸೆ ತುಂಬಿಸಿಕೊಳ್ಳುವ ಕಾರ್ಯ ಸಾಗಿರುವುದು. ಹಾಗಿದ್ದೂ ಅವರು ದೇಶವನ್ನು ಪ್ರೀತಿಸುವೆವೆನ್ನುತ್ತಿರುವರು!! ಆದರೆ ಇವರ ಜೀವನಹಾಗೂ ಅಸ್ತಿತ್ವವು ಭಾರತದ ಅಸ್ತಿತ್ವ ಹಾಗೂ ಉತ್ಕರ್ಷದ ಮೇಲೆಯೇ ಅವಲಂಬಿಸಿರುವುದೆಂಬುದನ್ನು ಇವರು ಅರಿತುಕೊಳ್ಳುವುದಾದರೂ ಯಾವಾಗ? ಜಗತ್ತಿನ ಕಣ್ಣುಗಳು ನಮ್ಮ ದೇಶದ ಮೇಲೆ ಇರುವುದನ್ನು ಇವರು ಮರೆಯುತ್ತಿರುವರು! ಭಾರತದ ಭವಿಷ್ಯವೂ ಇವ ರನ್ನು ಆಶಾಭರಿತ ಕಣ್ಣುಗಳಿಂದ ನೋಡುತ್ತಿರುವುದನ್ನೂ ಇವರು ಮರೆತಿರುವರು."

ಇಷ್ಟರಲ್ಲಿ ರೈಲು ಮಿರಜ ಸ್ಟೇಷನ್‌ದಲ್ಲಿ ನಿಂತಿತು. ಕಿಸನನು ಅಷ್ಟಕ್ಕೇ ಮಾತ ಮುಗಿಸಿ ಹೋಗಲು ಎದ್ದು ನಿಂತನು. ಆಶ್ಚರ್ಯದಿಂದೊಡಗೂಡಿದ ನನ್ನ ಪ್ರಶ್ನಾರ್ಥಕ ದೃಷ್ಟಿಯನ್ನು ಅರಿತುಕೊಂಡನೋ ಎಂಬಂತೆ ಮಾತಾಡಿದನು.

"ನಾನೂ ಮುಂಬಯಿಗೆ ಹೋಗುವವನು. ಇಂದೇ ಇದರ ಬಳಿಕ ಹೊರಡುವ ಗಾಡಿಯಿಂದ ಪ್ರವಾಸವನ್ನು ಮುಂದುವರಿಸುವೆನು. ಸದ್ಯ ನನ್ನೊಬ್ಬ ಗೆಳೆಯನನ್ನು ಮಹತ್ವದ ಕಾರ್ಯಕ್ಕಾಗಿ ಭೆಟ್ಟಿಯಾಗಬೇಕಾದುದರಿಂದ ಇಲ್ಲಿ ಇಳಿಯಬೇಕಾಗಿ ಬಂತು. ಒಳ್ಳೇದು, ನಮಸ್ಕಾರ; ಹೋಗಿಬರುತ್ತೇನೆ."

ನಾನು, ಹೋಗಿಬರುತ್ತೇನೆಂದು ಹೇಳಿ ಗಾಡಿಯಿಂದ ಕೆಳಗಿಳಿದ ಕಿಸನನತ್ತ ನೋಡುತ್ತಲೇ ಇದ್ದೆನು. ಅವನು ಕೆಳಗಿಳಿದ ಮೇಲೆ ನನ್ನದು ನನಗೇ ನಾಚಿಕೆಯೆನಿಸಿತು. ಕಿಟಿಕಿಯಿಂದ ಕೈ ಹೊರಗೆ ಹಾಕಿ "ಒಳ್ಳೇದು, ಹೋಗಿ ಬನ್ನಿ. ಪರದೇಶದಲ್ಲಿ ತನ್ನ ವಿದ್ಯಾಭ್ಯಾಸಂಗವನ್ನು ದೇಶದ [illegible] ಪಾರುಗಾಣಿಸಲಿ." ಎಂದು ಬೀಳ್ಕೊಂಡೆನು.

ಗಾಡಿ ಸ್ಟೇಷನಿನಿಂದ ದೂರ ಸಾಗಿತ್ತು. ಕಿಸನನು ಹೊರಟು ಹೋಗಿದ್ದನು. ಆದರೆ ಆತನ ಗೌರವರ್ಣದ ದೇಹ, ಸುಂದರ ಆಕೃತಿ, ಉನ್ನತ ಲಲಾಟ, ಅನುಭವೀ ನೇತ್ರ ಮತ್ತು [illegible]

[illegible]
ROYAL STORES
Car Street, UDIPI

ಲಂಡನ್ ನಗರ

ಲೇಖಕರು: **ಶ್ರೀ ಪಿ. ವಿ. ಉಪಾಧ್ಯಾಯರು** ಬಿ. ಎ. ಎಲ್. ಎಲ್. ಬಿ.

[ಅಂದವಾದ ಪತ್ರಗಳನ್ನು ಬರೆಯುವ ಕಲೆಯಲ್ಲಿ ನಮ್ಮ ದೇಶದಲ್ಲಿ ವಿ. ಎಸ್. ಶ್ರೀನಿವಾಸ ಶಾಸ್ತ್ರಿಗಳೇ ಪ್ರಸಿದ್ಧಿಪಡೆದವರು. ಅವರು ಲಂಡನ್‌ನಲ್ಲಿದ್ದಾಗ ಅಲ್ಲಿಯ ಜನರ ಜೀವನದ ವಿಷಯ ವಿವರಿಸಿ ಅವರ ಮಗಳಿಗೆ ಬರೆದ ಪತ್ರವಿದು. ಅಲ್ಲಿಯ ಜನರು ನಮ್ಮಲ್ಲಿಯ ಜನರಿಗಿಂತ ಹೆಚ್ಚು ನಾಗರೀಕತೆ ಹೊಂದಿದವರು ಎಂಬ ಮಾತು ಎಷ್ಟರ ಮಟ್ಟಿಗೆ ನಿಜವೆಂದು ಈ ಪತ್ರದಿಂದ ತಿಳಿದುಕೊಳ್ಳಬಹುದು.]

ಸೌತ್ ಕೆನ್ಸಿಂಗ್‌ಟನ್,
೧೭ನೇ ಆಗಸ್ಟ್ ೧೯೧೯.

ನನ್ನ ಮುದ್ದು ರುಕ್ಮಿಣಿಗೆ,

ಈ ದಿನ ಆದಿತ್ಯವಾರ. ನಿನಗೆ ಪತ್ರ ಬರೆಯುವ ನಿಶ್ಚಯದ ದಿನ ಗುರುವಾರ. ಆದರೆ ಬರುವ ಗುರುವಾರ ನನಗೆ ಹೆಚ್ಚಿನ ಕೆಲಸವಿರಬಹುದೆಂದೆಣಿಸಿ ಕಣ್ಣಿಗೆ ನಿದ್ದೆ ಹಿಡಿಯುವ ಮೊದಲು ಕೆಲವು ಪಂಕ್ತಿಗಳನ್ನು ಬರೆಯಲಿಕ್ಕೆ ಪ್ರಾರಂಭಿಸಿರುವೆನು. ಈ ನಗರದ ಮತ್ತು ಇಲ್ಲಿನ ಜನರ ವಿಷಯ ತಿಳಿಯಲು ನಿನಗೆ ಕುತೂಹಲವಿರುವುದರಿಂದ ಈ ಪತ್ರವು ನಿನಗೆ ರುಚಿಸಬಹುದೆಂದು ಎಣಿಸುತ್ತೇನೆ.

ಇಲ್ಲಿಯ ಮನೆಗಳ ಕ್ರಮದಲ್ಲಿ ಒಂದು ವಿಚಿತ್ರವೇನೆಂದರೆ ಪ್ರತಿಮನೆಗೂ ಒಂದು ನೆಲಮಾಳಿಗೆ ಇದೆ. ಇದರಲ್ಲಿ ಸೇವಕರು, ಒಂದು ಅಂಶದಲ್ಲಿ ಮನೆಯ ಯಜಮಾನಿ ಮತ್ತು ಅವಳ ಜನರು ವಾಸಿಸುತ್ತಾರೆ. ಅಡಿಗೆ ಮನೆ ಮತ್ತು ಉಗ್ರಾಣ ಸಹ ಇದರಲ್ಲೇ. ಇದಕ್ಕೆ ಕೆಳಗಿಳಿಯಲು ಮೆಟ್ಟಲುಗಳಿವೆ. ಒಳಗೆ ಸಾಕಷ್ಟು ಬೆಳಕು, ಗಾಳಿಗಳಿಲ್ಲ ಎಂದು ನೀನು ಎಣಿಸಬೇಡ. ಅಲ್ಲಿ ಸಾಕಷ್ಟು ಗಾಳಿ, ಬೆಳಕು ಇದ್ದು ಅದು ಬಹು ಚಲೋದಾಗಿದೆ. ಇಡೀ ಮನೆಯಲ್ಲಿ ಅತ್ಯಂತ ಸುಂದರವಾದ ಕೋಣೆಗಳು ನೆಲಮಾಳಿಗೆಯಲ್ಲಿರುವುವು. ಮೇಜು, ಕುರ್ಚಿ ಮೊದಲಾದ ಸಲಕರಣೆಗಳನ್ನು ಅಲ್ಲಿ ಇರಿಸುತ್ತಾರೆ. ಈಗ ನಾನು ಇರುವ ಮನೆಯಲ್ಲಿ ಕೆಲಸದ ಹೆಂಗಸು ಇಲ್ಲವಾದುದರಿಂದ ಮನೆಯ ಯಜಮಾನಿಗೆ (ಹೊಟೇಲು ಮಾಲಕಳಿಗೆ) ನಮ್ಮ ಊಟದ ಸಾಮಾನುಗಳನ್ನು ನಾವಿರುವ ಮೇಲಿನ ಕೋಣೆಗಳಿಗೆ ತರಲಿಕ್ಕೆ ಪ್ರಯಾಸವಾಗುತ್ತದೆ. ಆದುದರಿಂದ ನಮ್ಮನ್ನೆಲ್ಲಾ ಊಟಕ್ಕೆ "ನೆಲಮಾಳಿಗೆಗೆ ಬಂದು ಬಿಡಿರಿ" ಎಂದು ವಿನಂತಿಸುತ್ತಾಳೆ. ನಾವಾದರೂ ಅದಕ್ಕೆ ಸಂತೋಷದಿಂದ ಸಮ್ಮತಿಯನ್ನು ಕೊಡುತ್ತೇವೆ.

ಮಾರ್ಗದಲ್ಲಿ ನಡೆದುಕೊಂಡು ಹೋಗುವಾಗ ಕಂಡು ಬರುವ ಒಂದು ವಿಶೇಷ ಸಂಗತಿ ಎಂದರೆ ಪ್ರತಿ ಮನೆಗೂ ಕದ ಮುಚ್ಚಿರುವುದು. ನಮ್ಮಲ್ಲಿ ಈ ರೀತಿ

ಕದ ಹಾಕಿ ಕೊಂಡಿದ್ದರೆ ಮನೆಯವರು ಎಲ್ಲಿಯೋ ಹೋಗಿರುವರೆಂದು ಅರ್ಥ. ಇಲ್ಲಿ ಕದ ತೆರೆಯುವುದೆಂದರೆ ಯಾರಾದರೂ ಒಳಗೆ ಬರುವಾಗ ಅಥವಾ ಹೊರಗೆ ಹೋಗುವಾಗ ಮಾತ್ರ. ಬಾಗಿಲಿನ ಹೊರಗೆ ಗಂಟೆ ಬಾರಿಸುವ ವ್ಯವಸ್ಥೆಯೊಂದಿದೆ. ಹೊಸಬನೊಬ್ಬ ಬಂದನೆಂದರೆ ಪ್ರಥಮತಃ ಅವನು ಗಂಟೆಯನ್ನು ಒತ್ತುತ್ತಾನೆ. ಇದು ಸೇವಕಿಯು ಇರುವ ಕಡೆ ಕೇಳಿಸುವುದು. ಅವಳು ಹೊರಗೆ ಬಂದು ಕದ ತೆರೆಯುವಳು. ಒಳಗೆ ಬಂದೊಡನೆ ಅವಳು ಅವನ ಕೈಯಲ್ಲಿರುವ ಕೊಡೆ, ಬೆತ್ತ, ಮೇಲಂಗಿ ಇತ್ಯಾದಿಗಳನ್ನು ತೆಗೆದುಕೊಂಡು ಅವುಗಳ ಸ್ಥಳಗಳಲ್ಲಿ ಇಡುತ್ತಾಳೆ. ಕೊಡೆ, ಬೆತ್ತ, ಮೇಲಂಗಿ ಇವುಗಳನ್ನು ಇಡಲಿಕ್ಕೆ ಪ್ರತ್ಯೇಕ ಒಂದು ಮರದ ಸಿಲುವು (Stand) ಇದೆ. ಅವನ ಕೈಯಿಂದ ಅವುಗಳನ್ನು ತೆಗೆದು ಕೊಳ್ಳಲು ಅವಳು ಮರೆತರೆ ಅಥವಾ [illegible]

[illegible]

ತೊಳೆಯಲ್ಪಟ್ಟು ಸ್ವಚ್ಛವಾಗಿರುತ್ತದಲ್ಲದೆ ಅದರ ವ್ಯವಸ್ಥೆಯು ತೃಪ್ತಿಕರವಾಗಿರುತ್ತದೆ. ಬಚ್ಚಲು ಮನೆಯಲ್ಲಿ ಮೂರು ಅಡಿ ಆಳವಿರುವ ಚೈನಾ ಗಾಜಿನ ಒಂದು ಟಬ್ಬು (ಮರಿಗೆ) ಇದೆ. ಅದಕ್ಕೆ ಬಿಸಿ ನೀರಿನ ಮತ್ತು ತಣ್ಣೀರಿನ ಹೀಗೆ ಎರಡು ನಳ್ಳಿಗಳಿವೆ. ಅದರಲ್ಲಿ ಬೇಕಾದಂತೆ ನೀರನ್ನು ಸರಿಪಡಿಸಿಕೊಂಡು ಮೈ ತೊಳೊಳ್ಳಬಹುದು.

ಬೆಳಿಗ್ಗೆ ಎಂಟು, ಒಂಬತ್ತು ಗಂಟೆ ಸಮಯಕ್ಕೆ ಲಘು ಫಲಹಾರ. ಒಂದು, ಎರಡು ಗಂಟೆ ಸಮಯಕ್ಕೆ ಉಪಹಾರ. ಸಾಯಂಕಾಲ ನಾಲ್ಕು ಅಥವಾ ನಾಲ್ಕೂವರೆ ಗಂಟೆಗೆ ಸಾಂಯಕಾಲದ ಚಹಾ ಇದಕ್ಕೆ ಬ್ರೆಡ್ಡು, ಬಿಸ್ಕೀಟು, ಕೇಕ್ ಇದೆ. ಏಳು, ಏಳೂವರೆ ಗಂಟೆಗೆ ಮುಖ್ಯ ಊಟ. ಐಶ್ವರ್ಯವಂತರು ಹನ್ನೊಂದು, ಹನ್ನೊಂದೂವರೆ ಗಂಟೆ ರಾತ್ರಿಗೆ ಲಘು ಊಟವಾದ ನಂತರ ಜನರು ಹೆಚ್ಚಾಗಿ ವಿಹಾರಕ್ಕಾಗಿ ಹೊರಡುತ್ತಾರೆ. ಮೈದಾನುಗಳಲ್ಲಿ, ಉದ್ಯಾನಗಳಲ್ಲಿ ತಿರುಗಾಡುತ್ತಾರೆ. ಕೆಲವರು ಮನೋರಂಜನೆಗಾಗಿ ನಾಟಕ ಸಿನೇಮಗಳಿಗೆ ಹೋಗುತ್ತಾರೆ. ನಾಟಕ, ಸಿನೇಮಗಳು ಹೆಚ್ಚಾಗಿ ಹನ್ನೊಂದು, ಹನ್ನೊಂದೂವರೆ ರಾತ್ರಿಗೆ ಅಂತ್ಯವಾಗುತ್ತವೆ. ಮಧ್ಯ ರಾತ್ರಿಗೆ ಎಲ್ಲರೂ ಮನೆಗೆ ಹಿಂತಿರುಗುತ್ತಾರೆ. ವಿದ್ಯುದ್ದೀಪಗಳ ವ್ಯವಸ್ಥೆ ಚೆನ್ನಾಗಿದೆ, ಯಥೇಷ್ಟ ಉದ್ಯಾನಗಳವೆ, ಮತ್ತು ಕುಳಿತುಕೊಳ್ಳಲು ಯೋಗ್ಯ ವ್ಯವಸ್ಥೆ ಇದೆ. ನಾಟಕ ಶಾಲೆಗಳಿಗಂತೂ ಲೆಕ್ಕವೇ ಇಲ್ಲ. ಮತ್ತು ಅವು ನಮ್ಮ ದೇಶದ ನಾಟಕ ಶಾಲೆಗಳಿಗಿಂತ ಎಷ್ಟೋ ಭವ್ಯವಾಗಿವೆ. ನಾನು ಈ ವರೆಗೆ ನೋಡಿದ್ದು ನಾಲ್ಕು ನಾಟಕ ಶಾಲೆಗಳನ್ನು ಮಾತ್ರ. ಎಲ್ಲೆಲ್ಲಿಯೂ ಟಿಫಿನ್‌ನ ಏರ್ಪಾಡು ಚೆನ್ನಾಗಿದೆ. ಒಂಟಿಯಾಗಿ ತಿರುಗಾಡುವವರು ಅತಿ ವಿರಳ. ಒಬ್ಬ ಪುರುಷನೂ, ಒಬ್ಬ ಸ್ತ್ರೀಯೂ ಒಟ್ಟಾಗಿ ಹೋಗುವುದು ಇಲ್ಲಿಯ ಒಂದು ಸಾಮಾನ್ಯ ನಿಯಮವಾಗಿದೆ. ಇದರಿಂದ ಏನೊಂದು ಅನಾಹುತಗಳು ಸಂಭವಿಸಲಾರವು. ಅದು ಯೋಗ್ಯವಾದ ಮತ್ತು ಎಲ್ಲರೂ ಒಪ್ಪುವ ಒಂದು ಅಭ್ಯಾಸ. ಎಲ್ಲಿ ಹೋದರೂ ನವಯೌವನದ ಸುಂದರಿಯರು ಅಂದವಾಗಿ ಅಲಂಕರಿಸಲ್ಪಟ್ಟು, ಹಸನ್ಮುಖಿಗಳಾಗಿ ಸಂತೋಷದಿಂದ ತಿರುಗಾಡುತ್ತಿರುವುದೂ ನೋಡಲಿಕ್ಕೆ ಬಹಳ ಆನಂದವಿದೆ. ಈ ವಿಷಯದಲ್ಲಿ ಪೇರಿಸ್ ಪಟ್ಟಣವು ಇದಕ್ಕಿಂತಲೂ ಮನೋಹರವಾಗಿದೆ ಎನ್ನುವರು. ನಾನು ಪೇರಿಸ್‌ನ್ನು ನೋಡಲಿಲ್ಲ. ಆದರೆ ಲಂಡನಿನಲ್ಲಿ ಅಪ್ಸರೆಯರಂತೆ ಸೌಂದರ್ಯವುಳ್ಳ ಅನೇಕ ತರುಣಿಯರನ್ನು ನೋಡಿದ್ದೇನೆ.

ಕಳೆದ ಆದಿತ್ಯವಾರ ನಾನು ಇಲ್ಲಿಂದ ಹದಿನೈದು ಮೈಲು ದೂರದಲ್ಲಿ ಮನೋಹರವಾದ ಅರಮನೆ ಮತ್ತು ಉದ್ಯಾನ ಇರುವ ಹೆಮ್ಪಟನ್ ಕೋರ್ಟಿಗೆ (Hampton Court) ಹೋಗಿದ್ದೆ. ಹಿಂದೂದೇಶದ ಸೈನಿಕರೂ ಅಲ್ಲಿರುತ್ತಾರೆ. ಬಹಳ ಮಂದಿ ಅಲ್ಲಿ ನೆರೆದಿದ್ದರು. ಆದರೆ ಅಲ್ಲಿ ನಿಶ್ಶಬ್ದವಿತ್ತು. ಪ್ರತಿಯೊಬ್ಬನೂ ನಮಗೋಸ್ಕರ ದಾರಿ ಬಿಟ್ಟುಕೊಡುವನು, ಎಲ್ಲರೂ ಮೆಲ್ಲಗೆ ಮಾತಾಡುವರು. ದಾರಿಯನ್ನು ಅಡ್ಡಗಟ್ಟದೆ ಮುಂದುವರಿಯುತ್ತಾ ಇರುವರು. ಆಹಾ! ಲಂಡನಿನ ಜನರನ್ನು ಹೇಗೆಂದು ಹೊಗಳಲಿ?

ಎಷ್ಟು ಕ್ರಮ ಬದ್ಧರು, ಅವರಲ್ಲಿ ಎಷ್ಟೊಂದು ತಾಳ್ಮೆ, ಶಾಂತತೆ, ವಿನೋದ ಪ್ರಿಯತೆ, ವಿನಯ, ಪರಸ್ಪರ ಸಹಾಯ ಮಾಡುವ ಬುದ್ಧಿ. ರೈಲ್ವೆ, ಟ್ರಾಮು, ಬಸ್ಸು ಆಫೀಸುಗಳಲ್ಲಿ ಮೂರು ನಾಲ್ಕು ಸಾಲುಗಳಲ್ಲಿ ಜನರು ಒಬ್ಬರ ಹಿಂದೆ ಒಬ್ಬರು ಸಭ್ಯತೆಯಿಂದ ನಿಂತು ಕೊಂಡಿರುವುದನ್ನು ಕಾಣಬಹುದು. ಯಾರೊಬ್ಬನಿಗಾದರೂ ಮುಂದಿರುವವನನ್ನು ಹಿಂದೆಹಾಕಿ ತಾನು ಮುಂದೆಹೋಗಬೇಕೆಂಬ ಪ್ರಯತ್ನವಿಲ್ಲ. ತಾಳ್ಮೆಯಿಂದ ಪ್ರತಿಯೊಬ್ಬನೂ ತನ್ನ ಸರ್ತಿಯನ್ನು ಕಾಯುತ್ತಿರುವನು. ನೀನು ಹಿಂದಿರುವವನಿಗೆ ನಿನ್ನ ಸ್ಥಾನವನ್ನು ಬಿಟ್ಟುಕೊಡುವರೆ ಸಿದ್ಧನಿದ್ದರೂ, "ಬೇಡ! ನನ್ನ ಸರ್ತಿ ಬರುತ್ತದೆ" ಎಂದು ಮರ್ಯಾದೆಯ ಉತ್ತರ ಬರುವುದು. ಒಬ್ಬ ಗಂಡಸು ತನ್ನ ಸ್ಥಾನದಲ್ಲಿ ಕುಳಿತಿರುವಾಗ ಒಬ್ಬ ಸ್ತ್ರೀಯು ಪ್ರವೇಶಿಸಿದಳೆಂದರೆ ಕೂಡಲೆ ತನ್ನ ಸ್ಥಾನವನ್ನು ಬಿಟ್ಟೇಳುವುದು ಇಲ್ಲಿಯ ಸಭ್ಯತೆಯ ಕ್ರಮ. ನೆಲದಡಿಯ ರೈಲುಗಳಲ್ಲಂತೂ ಇದ್ದ ಸ್ಥಾನ (Seat) ಗಳಲ್ಲೆಲ್ಲಾ ಸ್ತ್ರೀಯರು ಕುಳಿತಿರುವುದು. ಮೇಲಿಂದ ತೂಗಾಡುವ ಹಗ್ಗಗಳನ್ನು [illegible] ಗಂಡಸರು ನಿಂತಿರುವುದನ್ನು ನೀವು ಕಾಣಬಹುದು. [illegible]

[illegible]

ರಾಘವಾಂಕನ ಕೃತಿ (ವೀರೇಶ ಚರಿತೆ)

ಈಗಣ ಷಟ್ಪದಿಗಳು ಸುಮಾರು ಹದಿನೆರಡನೆಯ ಶತಕಕ್ಕಿಂತಲೂ– ರಾಘವಾಂಕನಿಂದಲೂ– ಮೊದಲೂ ಬಳಕೆಯಲ್ಲಿದ್ದುವೆಂದು ಈಗಾಗಲೇ ಹಲವಾರು ಮಹನೀಯರು ಉಲ್ಲೇಖಿಸಿದ್ದಾರೆ. ಅಂತೆಯೇ ಷಟ್ಪದಿಗಳೂ, ಮೂರು ತೆರದ ರಗಳೆಗಳೂ ಹಾಡುಗಬ್ಬಗಳಾಗಿ ವೀಣೆಯಲ್ಲಿ ನುಡಿಸಬರುವುವೆಂದೂ ವಿವೇಚಿಸಿದ್ದಾರೆ.

ಈಗ ಷಟ್ಪದಿಗಳೆಂದರೆ ಶರ, ಕುಸುಮ, ಭೋಗ, ಭಾಮಿನಿ, ಪರಿವರ್ಧಿನಿ, ವಾರ್ಧಕಗಳೆಂದು ಆರು ಮಾತ್ರ ಪ್ರಸಿದ್ಧವಿವೆ ಆದರೆ, ಮಾತ್ರಾಗಣನಾರೀತಿಯಿಂದ ಪರಿವರ್ಧಿನಿಯ ಅನಂತರ– ವಾರ್ಧಕದ ಮೊದಲು– ಅದೊಂದು ಷಟ್ಪದಿಯಿರಲೇಬೇಕೆಂದೂ, ಅದು ನಾಲ್ಕೈದು ಮಾತ್ರೆಗಳ ಮಿಶ್ರಣದ್ದೆಂದೂ ವಿವರಿಸಿದ್ದಾರೆ. ಹಾಗೂ ಅದನ್ನು ಆಧುನಿಕರು ತಮ್ಮ ಕೃತಿಗಳಲ್ಲಿ ಬಳಕೆಗೆ ತರುತ್ತಾ, ಏಳು ತೆರದ ಷಟ್ಪದಿಗಳಾಗುವುವು. ಷಟ್ಪದಿಗಳೆಂದರೆ 'ಆರು ಸಾಲಿನ ಹಾಡು, ಎಂದು ಅರ್ಥವಷ್ಟೇ ವಿನಾ– ಆರು ತೆರದವುಗಳೆಂದು ಮಾತ್ರ ಹೇಳಬರುವುದಿಲ್ಲವೆನ್ನಬಹುದು (ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಜಯಕರ್ನಾಟಕ, ಸಾಹಿತ್ಯವಾಹಿನಿ ಇ. ನೋಡಿರಿ.)

ಇನ್ನು. ವಾರ್ಧಕವು ಐದು ಮಾತ್ರೆಗಳ ನಾಲ್ಕು ಗಣಗಳುಳ್ಳುದೆಂದು ಲಾಕ್ಷಣಿಕರು ನಿರ್ಧರಿಸಿದಂತೆಯೇ ಎಲ್ಲಾ ಕವಿಗಳು ಗ್ರಹಿಸಿದ್ದಾರೆ. ಆದರೆ, ಷಟ್ಪದಿಗಳ ಪ್ರಸಾರಕನೆಂದು (ಸುಧಾರಕನೂ ಅಹುದೆಂದು ತಿಳಿವುದು) ಹೆಸರಾಂತ ರಾಘವಾಂಕನು ತನ್ನದೊಂದು ಖಂಡಕಾವ್ಯದಲ್ಲಿ ಮೇಲೆ ಹೇಳಿದ ವಾರ್ಧಕದ ಲಕ್ಷಣವನ್ನು ಮಾರ್ಪಡಿಸಿ, ನಾಲ್ಕು ಮಾತ್ರೆಯ ಐದು ಗಣಗಳನ್ನು ಅಳವಡಿಸಿದ್ದಾನೆ. (ಇಂತಹ ಪ್ರಗತಿ ಶೀಲನು ಇಂದು ಇದ್ದಿದ್ದರೆ, ಮೊತ್ತ ಮೊದಲು ಪ್ರಸ್ತಾವಿಸಿದಂತೆ 'ಹದಿನೆಂಟು ಮಾತ್ರೆಯ ಷಟ್ಪದಿಯೂ ಬಳಕೆಯಲ್ಲಿ ಬರುತ್ತಿತ್ತೇನೋ ಕನಸು ನೋಟವು!)

ಅದುವೇ 'ವೀರೇಶ ಚರಿತೆಯು. ಇತ್ತ ಇದಕ್ಕೆ 'ಉದ್ದಂಡ ಷಟ್ಪದಿಯೆಂಬ ಹೆಸರೆಂದು ಹಲವರ ಮಾತುಗಳಿದ್ದರೂ; ಬೇರಾವ ಸುಧಾರಣೆಗಳಿಲ್ಲದೆ ಬರಿಯ ಮಾತ್ರೆಗಳ ಗುಂಪುಗಳ ಮಾರ್ಪಾಟಿನಿಂದಲೇ ಅದೊಂದು ಹೊಸತಾಗಿ ಹೆಸರಿಸಬೇಕೆಂದಿಲ್ಲ. ಹಾಗೂ ಹೊಸ ರೀತಿಗೆ ಹೆದ್ದಾರಿಗಳೆಂಬಂತೆ– ತ್ರಿಪದಿಗಳು ಗ್ರಂಥಗಳಲ್ಲಿ ಹೇಳಿದ ಲಕ್ಷಣಗಳಲ್ಲಲ್ಲದೆ, ಬೇರೆ ತೆರದಲ್ಲಿಯೂ ಪ್ರಾಚೀನ ತಮಗಳು ಸಿಗುತ್ತವೆ! (ಕನ್ನಡ ಕೈಪಿಡಿ) ಯೆಂಬಂತೆ– ಮಾತ್ರ ಪರಿವರ್ತಿಸಿದ್ದಾನೆನ್ನಬಹುದು.

ಕವಿಯೇ ಇದಕ್ಕೆ 'ಮೊಸಲು ಗವಿತೆ, (1–9) ಯೆಂದರೆ, ಮೊಸಲು ಎಂದರೆ [illegible] ತಾನೇ ಅರ್ಥವು.

ಪ್ರಸ್ತುತ ಲೇಖದಲ್ಲಿ ವೀರೇಶ ಚರಿತೆಯ ಕೆಲ ಸಂದರ್ಭಗಳನ್ನೆತ್ತಿ, ಅದರದೇ ಆದ ಹೆಚ್ಚಳವನ್ನು ವಿವರಿಸುವೆನು.

(1.1.) ಶ್ರೀಪತಿ ಇತ್ಯಾದಿ ದೇವರುಗಳು ಹರಿಶ್ಚಂದ್ರ ಕಾವ್ಯ (ಆತನದೇ)ದ (1.1)ವುಗಳಿಂದ ವಿವರಿಸಲ್ಪಡುತ್ತಾರೆನ್ನಬಹುದು. ಇದೇ ತೆರದ ಕಾವ್ಯ ಸಾಮ್ಯಕ್ಕಾಗಿಯೋ ಎಂಬಂತೆ, ಹರಿಶ್ಚಂದ್ರನನ್ನು ಇಲ್ಲಿ (1.30.) ಮಹಾ ಭೂಪನೆಂದು ವಿಶೇಷಿಸಿದೆ. (1.2.) ಚಂದ್ರನ ಸೆರೆಯನ್ನು– ಅಂದಿಯ್ಯನೆಂದಂತೆ 'ಕಾವನ ಗೆಳೆಯನಾದ ಚಂದಿರನನ್ನು ಶಿವನು ಜಡೆಯಲ್ಲಿ ಕಟ್ಟಿದ್ದನೆಂಬ ವಿನಾತನ್ನು–ನೆನಪುಗೊಡುತ್ತಿದೆ.

(1.4.) ಭಾವ ಸ್ಥಿತಿಗಳ ಪೂರ್ಣತೆಯನ್ನು 'ವೀರ ಶಿಖಾಮಣಿಯೂ ದೇವ ಶಿಖಾಮಣಿಯೂ ಆದ ಹಂಪೆಯ ದೇವನಲ್ಲಿ 'ಭಕ್ತ ಶಿಖಾಮಣಿಯೆನ್ನಲಾದ ರಾಘವಾಂಕನು ಕಂಡು ಕೊಂಡುದಿರಬೇಕೆನ್ನಬಹುದು.

(1.5.) [illegible]

(1.61) [illegible]

[illegible]

[illegible]

[illegible]

ಸಲವೂ ಘೋಷಣೆಯಾಗಿ (2.53) ಪ್ರಯೋಗಿಸಿದ್ದಾನೆ. (2.30) ಧನುರ್ವಿದ್ಯಾವಾರಿಧಿಯೆಂಬುದು ಅಂದಿನ ಬಿಲ್ಲವಿಗಳಿಗೆ ಬಿರುದಿನದಾಗಿರಬೇಕು.

ಪ್ರಾಸವಿಚಾರವಾಗಿ (1.11) ಶಶಿ, ವಿಷ, ಪ್ರಸರ; (1.39) ಹೊಸ, ಕುಶ; (2.42) ಹಸ, ಶಶಿ; (1.17) ವಿಳಂಬುಧಿ, ಪಾಲರು; (2.28) ಕಾಲನ, ಆಳಾಪ; (2.34) ಇಳೆ, ಬಿರಿಯಲು; (2.49) ಖಳ, ಮುಂದಲೆ; (1.25) ಸ್ವೈರೆಗಿನ, ಕಂದೆರವೆಯೋ (ಶಕಟರೇಫ) ಎಂಬವಿವೆ. ಅಂದರೆ, ರಳ ಕುಳ ಕ್ಷಳಗಳ ಪ್ರಾಸವನ್ನು ತಾನೇ ತಾನಾಗಿ ನಿರೂರಿದ ಹರಿಹರ ಕವಿಯ ವಿದ್ಯಾಪುತ್ರನಾದ ರಾಘವಾಂಕನೂ ಅಂತೆಗೈದನು!

ಇಲ್ಲಿಯ ನುಡಿಗಟ್ಟುಗಳೋ ಬಲು ಚೆನ್ನು:– (1.22) ಪತಿಯಾದರಿಸದವರನಾದರಿಪುದು ಸತಿಗೆ ಅತಿ ಹಿತವಲ್ಲ, (1.29) ಎಲ್ಲಾ ವಸ್ತುಗಳಂ ಪಡೆಯಲ್ಬಲ್ಲುದು ಧರೆಯಲ್ಲದೆ ಧರೆಯಂ ಪಡೆಯಲ್ಬಲ್ಲ ಸುವಸ್ತುಗಳಿಲ್ಲ, (1.34) ಉರಗೇಂದ್ರನ ಪದಮಂ ಭೂನಾಗದ ಮರಿ........ ಬಯಸುವವೋಲ್, (1.53) ರಕ್ಕಸಿ ಹೀರಿದ ಕುಂಭಕ್ಕೆಣೆಯಾಯಿತು, (1.58) ಮದ ಸೊಕ್ಕಿದ ಕರಿ ಕೊಳನಂ ಪೊಕ್ಕಂತೆ, (2.13) ಒಪ್ಪಿದಿ ತೃಣವಂ ಸುಡುವಡೆ ತಳಿಯಂ ಹೊತ್ತಿಸುವರೆ, (2.24) ಮುಗ್ಧನ ಹೋಮ, (2.33) ಬಿರುಗಾಳಿಯ ಮುಂದಣ ಮೇಘಾವಳಿಯಂತೆ, (2.34) ಇಳೆಯೊಳಗೆ ಎಳನೇಸರು ಮೂಡುವ ತೊಡಕೊಂದೇ ಕಳೆಯನು ತೊಡವಿದ ಕತ್ತಲೆಯೊತ್ತಿಯ ತತ್ತಿಯ ಬಲದಂತೆ, ಇತ್ಯಾದಿಗಳು ಮಹಾಕವಿಯ ಸುಪ್ರಯೋಗಗಳಿಗೆ ನಿದರ್ಶನವಿದೆ. ಇನ್ನೊಂದೆಡೆ ಅರ್ಥಕ್ಕೆ ಕೊಂಚ ತೊಡಕಾಗುವುದೇ ಎಂದು ಕಾಣುವುದು (ಅಧ್ಯಾಹಾರ, ಪುನರುಕ್ತಿಗಳು) (1.66) ಶ್ರೀಪತಿ ಪತಿಯನು ವಾಣೀ ಪತಿಯನು ನಾಳೋಮಾಪತಿ ಪತಿಯನು ಕೇಳಲ್ಬಾರದವೋಲಂ। ತಾ ಪಾತಕ ನಿಂದಿಸಿ ನುಡಿದನ ಶಿವ ಶಿವ ಘೂಡಿಸುತೆ ಸತಿ ಮನದೊಳಗೆ.

ಒಟ್ಟಾರೆ ಚಿಕ್ಕ ಚಿನ್ನದಗಣಿಯಂತೆ ಹಲ ತೆರದ ಭಾವನೆಯ ಪದರುಗಳಿವೆಯೆನ್ನಬಹುದು.

ವೆಂಕಟರಾಯಾಚಾರ್ಯ.

ಮಾಸ್ತರ– ವಿದ್ಯಾದಾಯಿನೀ ಶಾಲೆ, ಸುರತ್ಕಲ್.

ಕಡಿಮೆ ಕ್ರಯ **ಬಾಳಿಕೆ ಜಾಸ್ತಿ** **ಉತ್ತಮ ಮ್ಯಾಲು**

ಶಾಲಾ ಮಕ್ಕಳಿಗೆ ಅವಶ್ಯಬೀಳುವ

— ಸಕಲ ಸಲಕರಣೆಗಳು ಸದಾ ಸಿದ್ಧ —

ಸಿ. ಫೆರ್ನಾಂಡಿಸ್

ಕಿನ್ನಿಗೋಳಿ, ದ. ಕ.

ಅಂತರ್ರಾಷ್ಟ್ರೀಯ ವಿಚಾರ

ವಾಹಿನಿ.

ಲೇ:- **ಶ್ರೀ ಬಿ. ಗೋವಿಂದ ರಾವ್**, ಬಿ. ಎ. ಬಿ. ಓ. ಯಲ್.

(ಜಾಗತಿಕ ಶಾಂತಿ— ಶಾಂತಿ ಸಮ್ಮೇಳನ— ಹಿಂದೂದೇಶದ ಅಗ್ರಸ್ಥಾನ— ಚಾರಿತ್ರಿಕ ಹಿನ್ನೆಲೆ) ಭಾಗ ೧.

[illegible]

[illegible]

[illegible]

[illegible]

ನಗಳ ಹಿಂದಿನ ಕಾಲದ ಚರಿತ್ರೆಯನ್ನು ನಾವು ಅವಲೋಕಿಸಿದರೆ ನಮ್ಮಿ ಕರ್ಮ ... ಜಿನ ಭೂಮಿಯು ಶಾಂತಿದೂತನ ನೆಲೆವೀಡಾಗಿತ್ತೆಂಬುದನ್ನರಿಯಬಹುದು. ಜಿನ ಮತಸ್ಥಾಪಕನಾದ ಮಹಾವೀರ ಸ್ವಾಮಿ, ಬೌದ್ಧಮತ ಸ್ಥಾಪಕನಾದ ಗೌತಮ ಬುದ್ಧ, ಪ್ರಪಂಚದಲ್ಲಾಳಿದ ಮಹಾ ಚಕ್ರವರ್ತಿಗಳಲ್ಲಿ ಶಾಂತಿದೂತನೆಂದು ಪ್ರಸಿದ್ಧನಾದ ಅಶೋಕ, ಈಗಣ ಪರಿಶೋಧನೆಗಳಿಂದ ಸಿದ್ಧವಾಗುವಂತೆ ಕ್ರಿ. ಪೂ. ೧ನೆಯ ಶತಮಾನದಲ್ಲಿ ಜನ್ಮವೆತ್ತಿದ ಜಗದ್ಗುರು ಬಿರುದಾಂಕಿತರಾದ ಶ್ರೀ ಆದಿಶಂಕರಾಚಾರ್ಯ (ಹಿಂದೂದೇಶದ ಯುರೋಪಿಯನ್ ಚರಿತ್ರಕಾರರು ಕೇವಲ ಭ್ರಮೆಯಿಂದ ಕ್ರಿ. ಶ. ೮ನೆಯ ಶತಮಾನದಲ್ಲಿ ಜೀವಿಸುತ್ತಿದ್ದ ಅಭಿನವ ಶಂಕರಾಚಾರ್ಯರೆಂಬ ವ್ಯಕ್ತಿಯನ್ನು 'ಆದಿಶಂಕರಾಚಾರ್ಯ'ರೆಂದು ಉಲ್ಲೇಖಿಸಿರುವರು—) ಸುಮಾರು ಅದೇ ಸಮಯದಲ್ಲಿ ಉತ್ತರ ಹಿಂದೂಸ್ಥಾನದಲ್ಲಿ ರಾಜ್ಯವಾಳಿ ಸುವರ್ಣ ಯುಗವನ್ನು ಪ್ರಾಪ್ತಿಸಿದ್ದ ಶಕಪುರುಷ ವಿಕ್ರಮಾದಿತ್ಯ— ಅಂತೆಯೇ ಹಲವಾರು ಚಕ್ರವರ್ತಿಗಳು; ಯೋಗಿಗಳು, ವಿಶ್ವಕವಿಗಳು, ತತ್ವಜ್ಞಾನಿಗಳು ಹಿಂದೂದೇಶದಲ್ಲಿ ಜನ್ಮವೆತ್ತಿ ವಿಶ್ವಶಾಂತಿ ರೂಪರೆಂಬ ಕೀರ್ತಿಯನ್ನು ಅನ್ವರ್ಥವಾಗಿ ಖ್ಯಾತಿ ಗೊಂಡಿರುವರು— ಅವರುಗಳೆಲ್ಲರ ಸ್ಥೂಲ ದೇಹಗಳು ಇಂದು ಅದೃಶ್ಯವಾದರೂ ಅವರ ಯಶಶ್ಶರೀರಗಳು ಅವರವರ ತ್ರಿಕಾಲ ಉಪಯೋಗಿಯಾಗಿರುವ ಲಿಖಿತ ಕೃತಿಗಳಲ್ಲಿ ಇಂದೂ ಮೆರೆಯುತ್ತಲಿದ್ದು ಇನ್ನೂ ಆಚಂದ್ರಾರ್ಕವಾಗಿ ಉಳಿಯುವುವು ಎಂಬುದರಲ್ಲಿ ಸಂದೇಹವಿಲ್ಲ.

ಇನ್ನು ಈಗಣ ಸಹಸ್ರಮಾನದ ಆದಿಮಧ್ಯದಲ್ಲಿ ಜೀವಿಸುತ್ತಿದ್ದ ಕೆಲ ಮಹಾವ್ಯಕ್ತಿಗಳ ಪರಿಚಯವನ್ನು ಮಾಡೋಣ. ಕ್ರಿ. ಶ. ೧೧—೧೨ ನೇ ಶತಮಾನಗಳಲ್ಲಿ ಜೀವಿಸುತ್ತಿದ್ದ ವಿಶಿಷ್ಟಾದ್ವೈತ ಮತ ಸ್ಥಾಪಕರಾದ ಶ್ರೀ ರಾಮಾನುಜಾಚಾರ್ಯ, ೧೨ನೇ ಶತಮಾನದಲ್ಲಿ ವೀರ ಶೈವ ಮತ ಪ್ರಸಾರವನ್ನು ಮಾಡಿದ ಶ್ರೀ ಅಲ್ಲಮಪ್ರಭುಗಳ ಶಿಷ್ಯರಾದ ಶ್ರೀ ಬಸವೇಶ್ವರರು, ೧೩ನೇ ಶತಮಾನದಲ್ಲಿ ದ್ವೈತಮತವನ್ನು ಪ್ರಚಾರಪಡಿಸಿದ ಶ್ರೀ ಮಧ್ವಾಚಾರ್ಯ, ೧೩—೧೪ ನೇ ಶತಮಾನಗಳಲ್ಲಿ ಶತಾಯುಗಳಾಗಿ ಜೀವಿಸಿ ಕನಕ ವೃಷ್ಟಿಯನ್ನು ಪ್ರಾಪ್ತಿಸಿದ ಕರ್ನಾಟಕಸಿಂಹಾಸನ ಪ್ರತಿಷ್ಠಾಚಾರ್ಯರೆಂಬ ಬಿರುದಿನಿಂದ ಪ್ರಸಿದ್ಧರಾದ ಶ್ರೀ ಮಾಧವಾಚಾರ್ಯ ವಿದ್ಯಾರಣ್ಯ ಮಹಾಮುನಿ, ೧೫ನೇ ಶತಮಾನದಲ್ಲಿ ಜನ್ಮವೆತ್ತಿ ಹಿಂದೂ-ಮುಸಲ್ಮಾನ ಮತಗಳಲ್ಲಿ ಐಕ್ಯತೆಯುಂಟು ಮಾಡಿ ದೇಶದಲ್ಲಿ ಮತೈಕ್ಯವನ್ನು ಸಾಧಿಸಿದ ಗುರು ನಾನಕ, ೧೬—೧೭ನೇ ಶತಮಾನಗಳಲ್ಲಿ ಜೀವಿಸುತ್ತಿದ್ದ ಮರಾಠ ಸಂತರಾದ ಶ್ರೀ ನಾಮದೇವ್, ತುಕಾರಾಮ, ರಾಮದಾಸ ಮೊದಲಾದ ಭಕ್ತಶ್ರೇಷ್ಠರು— ಇನ್ನೂ ಅನೇಕ ಜಗದ್ವಂದ್ಯ ವ್ಯಕ್ತಿಗಳು ನಮ್ಮ ದೇಶದಲ್ಲೇ ಅವತರಿಸಿ ಮಾನವನ ಸಂಕೋಚ

ಭಾವನೆಯನ್ನು ತೊಡೆದು ಹಾಕಿ ಪ್ರಪಂಚದಲ್ಲಿ ಶಾಂತಿ ಸಂದೇಶವನ್ನು ಪುನಃ ಪುನಃ ಸಾರಿದರು.

'History repeats itself.' ಚರಿತ್ರೆಯು ಪುನಃ ಪುನಃ ಒಂದೇ ತೆರನಾದ ಘಟನೆಯನ್ನು ಹೊಂದಿ ಮುಂದುವರಿಯುತ್ತದೆ— ಎಂಬ ಆಂಗ್ಲೋಕ್ತಿಯಂತೆ ಕಳೆದ ಎರಡು ಶತಮಾನಗಳ ಅವಧಿಯಲ್ಲಿ ಪರಮ ಪವಿತ್ರವಾದ ನಮ್ಮ ಆರ್ಯಾವರ್ತದಲ್ಲಿ ವಿಶ್ವಪ್ರೇಮಿಗಳೂ ಜಾಗತಿಕ ಶಾಂತಿ ಸಂದೇಶಕರೂ ಮಾನವನ ಇಹಪರ ಸುಖಗಳೆರಡಕ್ಕೂ ಸಾಧನಗಳನ್ನು ಕಲ್ಪಿಸಿದವರೂ ಹಲವಾರು ಮಂದಿ ಅವತರಿಸಿ ಲೋಕಕಲ್ಯಾಣವನ್ನುಂಟು ಮಾಡಿದರು. ಕೆಲವು ವಿಚಾರಿಗಳಿಗೆ ಆ ಮಹಾತ್ಮರುಗಳ ಕಾರ್ಯಕ್ಷೇತ್ರಗಳು ನಮ್ಮ ದೇಶದಲ್ಲೇ ಇದ್ದುವು— ಹಾಗಾದರೆ ಅವರ ವಿಶ್ವಸೇವೆಯೆಂತಹುದು? ಎಂಬ ಸಂದೇಹವು ತೋರಬಹುದಾದರೂ ಅದಕ್ಕೆ ಉತ್ತರವಾಗಿ ಆ ಮಹಾ ಪುರುಷರ ಸಮಗ್ರ [illegible]ಗಳಲ್ಲಿ ವಿಶ್ವವ್ಯಾಪಿ ಭಾವನೆಗಳೇ ಬೇರೂರಿದ್ದುವು. ಅವು ಕಾಲ ದೇಶ [illegible] ಬಂಧಿಸಲ್ಪಡಲಿಲ್ಲವೆಂದು ಸಾಕ್ಷ್ಯವಾದ [illegible]

[illegible]

ಚೌತಿಯ ಕಡುಬು

'ಎಸ್ಸೆಲ್' ಬರೆದುದು.

ಚೌತಿಯ ದಿನ ವೆಂಕಟ ಸಾಮಿಯ ಮನೆಯಲ್ಲಿ ಗಂಟೆ ಜಾಗಂಟೆಯ ಗದ್ದಲವನ್ನು ಕೇಳಿ ವಿನಾಯಕನ ಪೂಜೆಯಿರಬಹುದೇ ಎಂದುಕೊಂಡೆ. ಆದರೆ ಸುಮಾರು ನಾಲ್ಕಾರು ವರ್ಷಗಳಿಂದ ಅವನ ನೆರೆಮನೆಯಲ್ಲಿ ವಾಸಿಸುತ್ತಿದ್ದೇನೆ; ಈ ನಡುವೆ ಒಂದು ವರ್ಷದಲ್ಲೂ ಗಣಪತಿಯನ್ನಿಟ್ಟು ಪೂಜೆ ಮಾಡಿರಲಿಲ್ಲ. ಅದೂ ನನಗೆ ಹೇಳಿಕೆಯನ್ನು ಕೊಡದೆ ಸಾಮಿ ಹೇಗೂ ಬಿಡುವಂತಿರಲಿಲ್ಲ. ಶ್ಯಾಮಲಾ ಏನಾದರೂ ತಿಂದಿ ತಿನಿಸನ್ನು ಮಾಡಿದರೆ 'ನಿಮ್ಮ ಸ್ನೇಹಿತರನ್ನು ಕರೆಯಬಾರದೇ!....'' ಎಂದು ಕೇಳುತ್ತಾಳೆ. ಇಂದು ಬೆಳಗಿನಿಂದ ಯಾವ ಸದ್ದೂ ಇಲ್ಲದೆ ಈ ಮಧ್ಯಾಹ್ನದ ಹೊತ್ತಿಗೆ ಎಂದೂ ಇಲ್ಲದ ಈ ಪೂಜೆಯ ಗೀಳು ಅವನಿಗೆ ಏನು ಹಿಡಿಯಿತೋ! ಎಂದು ಯೋಚಿಸಿದೆ. ಅಷ್ಟರಲ್ಲಿ ವೆಂಕಟ ಸಾಮಿಯ ಕಂಪೌಂಡರ್ ವಾಸುಮಾಣಿ ಓಡಿ ಬಂದು "ಡಾಕ್ಟರ್ ಕರೀತಾರೆ ನಿಮ್ಮನ್ನ!.... ಊಟಕ್ಕೆ ಮನೆಗೆ ಬರ್ಬೇಕಂತೆ!'' ಎಂದ! 'ಏನೋ ಗಣಪತಿ ಇಟ್ಟಿದಾರೇನೋ ಮನೇಲಿ?' ಎಂದು ಕೇಳುವಷ್ಟರಲ್ಲೇ "ಹೌದು .... ವಿನಾಯಕನ ಪೂಜೆ ನಡೀತಾ ಇದೆ ಮನೇಲಿ'' ಎಂದು ನಕ್ಕು, ಹೊರಟು ಬಿಟ್ಟ! ನನಗೆ ಆಚ್ಚರಿಯಾಯಿತು ಅವನ ವರ್ತನೆಯಿಂದ! ವೆಂಕಟ ಸಾಮಿಯ ಕರೆ ಬಂತು ಎಂದಮೇಲೆ ಅದಕ್ಕೆ ಪ್ರತಿ ಮಾತಾಡುವಂತಿಲ್ಲ— ಒಂದು ಕ್ಷಣ ತಡಮಾಡಿದರೆ ತಾನೇ ಸ್ವತಹ ಬಂದುಬಿಡುತ್ತಾನೆ. ನಾನು ಬಟ್ಟೆ ಬದಲಾಯಿಸಿ ಪಂಚೆಯುಟ್ಟು, ಅಚ್ಚ ಬ್ರಾಹ್ಮಣನಾಗಿ ಹೊರಟೆ!

ವೆಂಕಟ ಸಾಮಿಯ ಮನೆ ನಮ್ಮ ಮನೆಗಿಂತ ಬಹಳ ದೂರವೇನಲ್ಲ! ಅವನ ಮನೆಗೂ ನನ್ನ ಮನೆಗೂ ನಡುವೆ ದೊಡ್ಡ ಪಾಗಾರವಿದೆ. ನಮ್ಮೂರಲ್ಲೆಲ್ಲ ಅದನ್ನು ದಾಸಪ್ಪನವರ ಕೋಟೆಯೆಂದೇ ಕರೆಯುತ್ತಾರೆ! ವೆಂಕಟ ಸಾಮಿಯ ತಂದೆಗೂ ನನ್ನ ಮನೆಯ ಯಜಮಾನ ದಾಸಪ್ಪಯ್ಯನವರಿಗೂ ಆದ ಜಗಳದ ಪರಿಣಾಮವಾಗಿ ಈ ಗೋಡೆಯು ಉದ್ಭವಿಸಿತಂತೆ! ವೆಂಕಟ ಸಾಮಿಯ ತಂದೆ ಕೋರ್ಟಿನಲ್ಲಿ ಗೆದ್ದುಕೊಂಡರಂತೆ! ದಾಸಪ್ಪಯ್ಯನವರಿಗೆ ಸೋಲಾಯಿತು. ಅವರ ಸಮಕಾಲೀನರಾದ ಕೆಲವರು ವೆಂಕಟ ಸಾಮಿಯ ತಂದೆ ಗೆದ್ದದ್ದು ಅನ್ಯಾಯದಿಂದಲೇ ಎನ್ನುತ್ತಾರೆ! ಇನ್ನು ಕೆಲವರು ದಾಸಪ್ಪಯ್ಯನವರ ಅತಿಯಾಸೆಗೆ ಸರಿಯೆ ಆಯಿತು ಎನ್ನುತ್ತಾರೆ! ಅಂತೂ ದಾಸಪ್ಪಯ್ಯನವರು ಸೋತದ್ದರಿಂದಲೋ ಏನೋ— ಇಲಿಯಂತಹ ಮನುಷ್ಯ ಹುಲಿಯಂತಾದರು! ವೆಂಕಟ ಸಾಮಿಯ ಮುಖಾವಲೋಕನವನ್ನೂ ಮಾಡದಂತೆ ದೀಕ್ಷೆ ವಹಿಸಿದರಂತೆ. ವೈರದ ಬುದ್ಧಿ ಬೆಳೆದು, ಅವನ ಮನೆಯ ಗಾಳಿಯೂ ಈ

ಕಡೆಗೆ ಸೋಕಬಾರದೆಂದು ದೊಡ್ಡದಾದ ಪಾಗಾರವೊಂದನ್ನು ಕಟ್ಟಿಸಿದರು. ದೇವರು ಅವರಿಗೆ ಆಯುಸ್ಸು ಕೊಟ್ಟಿದ್ದರೆ ವೆಂಕಟ ಸಾಮಿಯ ಮನೆಯನ್ನೂ ಮೀರಿ ನಿಲ್ಲುತ್ತಿತ್ತೋ ಏನೊ! ಆದರೆ ಅರ್ಧದಲ್ಲೇ ಅವರು ತೀರಿಕೊಂಡರು! ಆ ಅರ್ಧ ಪಾಗಾರವೇ ದೊಡ್ಡ ಕೋಟೆಯ ಹಾಗೆ ನನ್ನ ಮತ್ತು ವೆಂಕಟ ಸಾಮಿಯ ಮನೆಯ ಮಧ್ಯೆ ನಿಂತಿದೆ. ಅವನ ಮನೆಯಲ್ಲಿ ಏನಾದರೂ ನನಗೆ ತೋರುವಂತಿಲ್ಲ! ನನ್ನ ಮನೆಯದೂ ಅಷ್ಟೆ! ಅಂತಲೇ ನಾನು ತುಂಬ ಜನ ಅತಿಥಿಗಳೂ, ಯೋಗ್ಯ ಬ್ರಾಹ್ಮಣರೂ ಬಂದಿರಬಹುದೆಂದು ಬ್ರಾಹ್ಮಣ ವೇಷಧಾರಿಯಾಗಿ ಹೋದುದು! ಆದರೆ ಅಲ್ಲಿ ಯಾರೂ ಇಲ್ಲ! ವೆಂಕಟ ಸಾಮಿ, ಶ್ಯಾಮಲಾ, ಕಂಪೌಂಡರ್ ವಾಸು ಮಾಣಿ. ನನ್ನ ಕಂಡು ಎಲ್ಲರೂ ನಕ್ಕರು. ನನಗೆ ಒಂದೂ ಅರ್ಥವಾಗಲಿಲ್ಲ. ನನ್ನ ದೌರ್ಭಾಗ್ಯಕ್ಕೆ ಇನ್ನಷ್ಟು ನಕ್ಕುಬಿಟ್ಟರವರು. ಮುಂದೆ ನೋಡುವಾಗ ಅಲ್ಲಿ ನಡೆಯುತ್ತಿರುವುದು ವಿನಾಯಕನ ಪೂಜೆಯಲ್ಲ; [illegible]

ಬೇಕು. ಬಡವರನ್ನು ಕಂಡರೆ ತುಂಬ ಕನಿಕರ. ಬಡಬಗ್ಗರು ಏನನ್ನು ಕೇಳಿದರೂ ಕೈಯೆತ್ತಿ ಕೊಟ್ಟು ಬಿಡುತ್ತಿದ್ದಳು! ವೆಂಕಟಸಾಮಿ ಅವಳ ಸ್ವಭಾವಕ್ಕೆ ಅಡ್ಡಿ ಬರುವವನಲ್ಲವಾದರೂ ಒಮ್ಮೊಮ್ಮೆ ಅಷ್ಟಕ್ಕೆ ಬಿಡಬಾರದೆಂದು ತೋರುತಿತ್ತು ಅವನಿಗೆ ಆದರೆ ಶ್ಯಾಮಲಾ ಅದನ್ನು ಕೇಳುವವಳಲ್ಲ. "ಎಷ್ಟು ಆಶೆ ಪಾಪ! ತಿಂಗಳಿಗೆ ನೂರಾರು ಸಂಪಾದಿಸುತ್ತೀರಿ. ನಾಲ್ಕು ರೂಪಾಯಿ ಕೈ ಬಿಟ್ಟರೆ ಏನು ಧಾಡಿ?" ಎನ್ನುತ್ತಾಳೆ. ವೆಂಕಟ ಸಾಮಿ ಮತ್ತೆ ಅವಳ ಮಾತಿಗೆ ಇದಿರಾಡುವಂತಿಲ್ಲ.

ಚೌತಿ ಕಡುಬು ನಮ್ಮ ಮನೆಯ ಹಿರಿಯರೊಬ್ಬರಿಗೆ ತುಂಬ ಗಂಡಾಂತರಕ್ಕೀಡು ಮಾಡಿತು. ಅವರ ವಯಸ್ಸು ಕಡುಬನ್ನು ತಿಂದು ಜೀರ್ಣಿಸಿಕೊಳ್ಳುವಂತಹದಲ್ಲ. ಆದರೂ ವಿಘ್ನೇಶ್ವರನ ಪ್ರಸಾದವೆಂದು ಅವರು ಮುಕ್ಕಿದ್ದೂ ಮುಕ್ಕಿದ್ದೇ! ಆದರೆ ಮೇಲಿನ ದಿನ ತಿಂದದ್ದು ಮೈಗೆ ಹಿಡಿಯದೆ ವಿಶೇಶ ಕಾಯಿಲೆಯಾಯಿತು. ಇಂತಹ ಹಳೆಯವರಿಗೆ ಕಾಯಿಲೆಯಾದರೆ ಕೇಳಬೇಕೇ? ಎಲ್ಲರ ಮೇಲೂ ಸಿಟ್ಟು; ಆಗ್ರಹ. ತನಗೆ ವಯಸ್ಸಾಯಿತು— ಸಾಯಲಿ— ಎಂತ ಔದಾಸೀನ್ಯವನ್ನು ತಾಳುತ್ತಾರೋ ಎನುವ ಭೀತಿ ಬೇರೆ. ನಾವು ಎಷ್ಟು ಶುಸ್ರೂಷೆ ಮಾಡಿದರೂ ಮನಸ್ಸಿಗೆ ತೃಪ್ತಿಯಾಗದು! ಸಾಯುವ ತನಕ ಸುಖವಾಗಿ ಬಾಳಬೇಕೆಂಬ ಆಶೆ ಅವರಿಗೆ. ಆದರೆ ಸಾಯುವ ತನಕ "ಸುಖವಾಗಿ ಸಾಧ್ಯವಿಲ್ಲ" ಕೊನೆಯ ಪಕ್ಷ ಸಾಮಾನ್ಯ ಜೀವನ ನಡೆಸ ಬಹುದಲ್ಲಾ! ಅಂತೂ ಅವರ ಪೀಡೆಯನ್ನು ತಡೆಯಲಾರದೆ ವೆಂಕಟ ಸಾಮಿಯ ಕೋಸಿಗೆ ಓಡಿದೆ. ನಾನು ಹೋಗುವ ಹೊತ್ತಿಗೆ ವೆಂಕಟ ಸಾಮಿ ಕೋಸಿನಿಂದ ಹೊರಟಾಗಿದೆ. ಕಂಪೌಂಡರ್ ವಾಸು ಮಾಣಿಯೊಡನೆ ಏನಾದರೂ ಉಪಶಮನಕ್ಕೆ ಔಷಧಿ ತೆಗೆದು ಕೊಳ್ಳೋಣಾಂತ ಎಣಿಸಿದೆ. ಎರಡು ತಿಂಗಳ ಹಿಂದೆ ಆತನ ಒಂದು ದೋಸಿನಿಂದ ಇಹಯಾತ್ರೆಯನ್ನು ತೀರಿಸಲು ಹೊರಟ ಕತೆಯನ್ನು ವೆಂಕಟ ಸಾಮಿಯು ಹೇಳುವುದು ಕೇಳಿದ್ದೆ. ವಾಸುಮಾಣಿಯೊಡನೆ "ಮನೆಯಲ್ಲಿರಬಹುದೇನೋ" ಎಂದೆ. "ಇರಬಹುದು ಸಾರ್; ಆದರೆ ಈ ಹೊತ್ತು ಬೇಡ ಸಾರ್........ ನಾಳೆ ಕೊಂಡು ಹೋಗಿ ಸಾರ್" "ನಾಳೆ ತನಕ ಪ್ರಾಣ ಬದುಕುತ್ತೇನೋ!" "..... ಈ ಹೊತ್ತು ಅವರು ತುಂಬ ತಲೆ ಕೆಡಿಸಿ ಕೊಂಡಿದಾರೆ. ಬೆಳಿಗ್ಗೆ ಮನೆಯಿಂದ ಬರುವಾಗಲೇ ಒಂದೆರಡು ಬಾಟ್ಲಿ ಆಸವಗಳು ಗ್ಯಾಸ್ ಹೆಚ್ಚಾಗಿ ಒಡೆದವು. ಕೋಸಿಗೆ ಬಂದಮೇಲೆ ಇಲ್ಲಿ ತಲೆಯಲ್ಲಿ ಅದಕ್ಕೆ ಖರ್ಚಾದ ಬೆಲ್ಲ— ಇತರ ವಸ್ತುಗಳ ನಷ್ಟದ ಲೆಕ್ಕವೇ ಸುತ್ತುತಿತ್ತು। ಬಂದ ಒಬ್ಬ ಹೊಟ್ಟೆ ನೋವಿನ ರೋಗಿಗೆ ಬೆಲ್ಲ ಕೊಡೋ" ಎಂದರು ಬೆಲ್ಲದ ಯೋಚನೆಯಲ್ಲಿ! ಶೇಷರಾಯರ ಮಗ "ಅನುರ್ಜೆನ್ಸಿ" ಇಂಜಕ್ಷನ್ ಬೇಕೆಂದು ಬಂದಾಗ ಸಿಟ್ಟಿನ ಭರದಲ್ಲಿ "ಸಿರಿಂಜ್ ಕೆಳಗೆ ಬಿದ್ದು ಪುಡಿ ಪುಡಿಯಾಯಿತು. ಅದರ ನಷ್ಟವನ್ನು ರಾಯರ ಖಾತೆಗೆ ಸೇರಿಸಿದರೂ ಮನಸ್ಸಿಗೆ ಸಮಾಧಾನವಿಲ್ಲ ಆದುದರಿಂದ .... ಈ ಹೊತ್ತು ಬಂದವರಿಗೆಲ್ಲ ಆಸವದ ಖರ್ಚು.... ಸಿರಿಂಜಿನ

ನಷ್ಟ........ ವ್ಯರ್ಥವಾಗಿ ಸ್ವಸ್ಥ ಕುರ್ಚಿಯಲ್ಲಿ ಕೂತ ಭತ್ತೆ.... ಎಲ್ಲಿದರ ಸುಂಕ ಹಾಕ್ತಾರ್ರೀ.... ನಾಳೆ ತನಕ ಕಾದು ನೋಡ ಬಹುದಲ್ಲಾ ಎಂದ ವಾಸುವಾಣಿ. "ಎಲ್ಲ ಗಿರಾಕಿಗಳ ಮುಂದೆ ಹೀಗೆ ಹೇಳ್ತಿಯೇನೋ ಪುರಾಣ...." ಎಂದೆ. "ಮತ್ತೆ.... ತಿಂಗಳಿಗೆ 15 ಎಂದರೆ ಏನು ಸಾರ್! ಹೆಚ್ಚು ಕೇಳಿದರೆ.... "ನೀನು ಏನು ಮಾಡಿದ್ದಕ್ಕೆ ನಿನಗೆ ನಾನು ಕೊಡೋದು ಅಂತ ರೇಗ್ತಾರ್ರೀ?...." ಕೇಳುತ್ತಾ ಕೂತರೆ ಇನ್ನೊಂದು ಪುರಾಣ ತೆಗೆಯುತ್ತಾನೆಂತ ಖಾತ್ರಿಯಾಯಿತು. ಇವನ ಪುರಾಣ ಮುಗಿಯುವಾಗುವ ಹೊತ್ತಿಗೆ ಮನೆಯ ಪ್ರಾಣ ಸಿದ್ಧತೆಮಾಡೀಕೆಂದು ವೆಂಕಟ ಸಾಮಿಯ ಮನೆಯ ದಾರಿ ಹಿಡಿದೆ.

ಹೌದು, ವೆಂಕಟ ಸಾಮಿ ದುಡ್ಡಿನ ವಿಷಯದಲ್ಲಿ [illegible] ಮನುಷ್ಯ [illegible] ಆದರೂ ನಾನು [illegible]

[illegible]

ಮೂರ್ತಿ ಅಷ್ಟಕ್ಕೆ ತೃಪ್ತಿ ಪಟ್ಕೊಳ್ದೆ ಪೂರ್ತ ಗಣಪತಿಯ ಆವೇಶ ತಕ್ಕೊಂಡು ಕಡುಬು ಬೇಕು.... ಉಂಡೀ ಬೇಕೂಂತ.... ಚಂಡೀ ಹಿಡ್ದು ಕೂತ್ಬಿಟ್ಟ ನೋಡ್ರೀ.... ಪಾಪ ಅವ್ನೋರಾದ್ರೂ ಏನ್ಮಾಡ್ತಾರೂ ಕಡುಬು....ಉಂಡಿಗೆ.... ಅವ್ರ ಶಾದ್ಧಾಂತದಿಂದ ಕಾಫೀನೂ ಇಲ್ಲ.... ಅಡ್ಗೆನೂ ಇಲ್ಲ.... ದಿನ ಕೇಳ್ಕೊಂಡು ಡಾಕ್ಟ್ರು ಬರೋ ಹೊತ್ತಿಗಂತ ಮೊದ್ಲಾಗಿ ಬಂದ್ಬಿಟ್ರು.... 'ಊಟಕ್ಕ ಆಗಿಲ್ಲೇನೂ ಇನ್ನೂ?' ಎಂದು ಜಬರ್ದಸ್ತು ಮಾಡ್ಬಿಟ್ರು! 'ನೋಡಿ ನಿಮ್ಮ ಕುಮಾರ ಕಂಠೀರವ ಬೆಳಗಿಂದ ಸತ್ಯಾಗ್ರಹ ಹೂಡಿ ದಾನೆ ಗಣಪತಿ ಮಾಡು.... ಕಡುಬು ಕೊಡೂಂತ....' ಎಂತ ಒಯ್ಯಾರದಿಂದ ಹೇಳಿದ್ರು ಅಮ್ಮಾವ್ರು, ಡಾಕ್ಟ್ರು ಏನಾದ್ರು ಸಮಧಾನ ಹೇಳ್ತಹುದೂಂತ.... ಅದ್ರೆ ಅವ್ರು 'ಪೂಜೆಮಾಡು.... ಗಣಪತಿ.... ವಿನಾಯಕಾಂತ. ನಿನ್ನೆ ಹಾಗೆ ಪೂಜೆಮಾಡ್ಬಿ, ಗಣಪತೀಂತ ಮಾಡ್ಬಿಟ್ಟಿದ್ದೀಯಲ್ಲಾ!' 'ಹೌದು ನೀವೂ ಇದ್ರಲ್ಲಾ ಹೇಳ್ಬಾರ್ದಾಗಿತ್ತೇ ಬುದ್ದೀ?' ಎಂದರು, ಸಲುಗೆಯಿಂದ. ಅಮ್ಮಾವ್ರು ಅಂದದ್ದು ಅಂದದ್ದೇ; ಸಾಕ್ಷಾತ್ ಗಣಪತಿ ತಂದೆಯೆ ಆಗ್ಬಿಟ್ರು "ಸಾಕ್ಮಾಡು ನಿನ್ನ ಹಾಳು;ಪುರಾಣಾನ! ಮನೆಗ್ಬರೋ ಹೊತ್ತಿಗೆ ಅನ್ನಯಿಲ್ಲ.... ನೀರಿಲ್ಲ.... ಜೊತೆಗೆ ಈ ವೈಭವ ಬೇರೆ.... ಗಣಪತಿಯಂತೆ ಕಡುಬಂತೆ! ಎಲ್ಲಾ ಮನೇಲಿ ಗಣಪತಿ ಬಾವಿಗ್ಹಾಕಿದೂ ನಮ್ಮನೇ ಗಣಪತಿ ಪೂಜೆ ಇನ್ನೂ ತೀರ್ಲಿಲ್ಲ...." ಎಂದು ಕಣ್ಣರಳಿಸಿ ಕಿಡಿಗಾರಿದ್ರು ನೋಡಿ! ಅಮ್ಮಾವ್ರು ಸ್ವಲ್ಪ ಬಿರುಸಾಗಿ "ಈ ಗಣಪತೀನೂ ನೀರಿಗ್ಹಾಕ್ಬಿಡಿ.... ಮತ್ತೆ ಸುಖವಾಗಿರ್ಬಹುದಲ್ಲಾ!" ಎಂದ್ರು. ಇದನ್ನು ಕೇಳಿ ಡಾಕ್ಟ್ರಿಗೆ ಎಲ್ಲಿಲ್ಲದ ಸಿಟ್ಟು ಬಂತು. ನಾಲ್ಕೇಟ್ ಚೆನ್ನಾಗಿ ಹೊಡೆದ್ಬಿಟ್ರೀ....! ಈ ಮನೀಗ್ಬಂದು ಆರೇಳು ವರ್ಷಾತು.... ಆದ್ರೂ ಇಂಥಾ ರಂಪಾಟ ನಾ ಕಾಣ್ಲಿಲ್ಲ.... ಪಾಪ ಅವ್ನೋರಾ ಮುಖ ನೋಡುವಂತಿಲ್ಲಾ...." ಎಂದು ವೆಂಕಟ ಸಾಮಿಯ ಇನ್ನೊಂದು ಅವತಾರವನ್ನು ವರ್ಣಿಸಿದ. ಈ ಎಲ್ಲ ಪರಿಸ್ಥಿತಿಯನ್ನು ನೋಡುವಾಗ ಮನೆಯ ಮುದುಕಿಯ ಗೃಹಗತಿ ಏನೋ ಕೆಟ್ಟಿರಬೇಕೆಂದು ಯೋಚಿಸಿದೆ. ಈ ದಿನವೇ ವೆಂಕಟ ಸಾಮಿಯ ಸಲಹೆ ಕೇಳಿದರೆ ಆಳು ಹೇಳಿದ ಮಾತು ಸತ್ಯವಾದೀತು. ಮುದುಕಿಯನ್ನು ಕೈಯಾರೆ ಕೊಂದಹಾಗೆಯೆ ಆಗುತ್ತೆ. ಆದರೆ ಮನೆಯಲ್ಲಿ ಏನು ಉತ್ತರ ಹೇಳಬೇಕೆಂದು ತೋಚದೇ ಹೋಯಿತು. ನಿಧಾನವಾಗಿ ವೆಂಕಟ ಸಾಮಿಯನ್ನು ಮಾತಾಡಿಸೋಣವೇ ಎಂದು ತೋರಿತು. ಅವರೊಳಗೆ ಸಂಧಾನ ಮಾಡಿಸಿ ಹಾಕಿದರೆ ರಾತ್ರಿ ಊಟಕ್ಕಾದರೂ ಅಡಿಗೆ ಸಿದ್ಧವಾದೀತಲ್ಲಾ ಎಂದು ಮನೆಯ ಮುಂದೆ ಹೋದೆ. ವೆಂಕಟ ಸಾಮಿ ಸರಸರನೆ ಮಾಳಿಗೆಯಿಂದ ಕೆಳಗಿಳಿದು ಒಳಮನೆಗೆ ಹೋದ. ಕೆದರಿದ ತಲೆ, ಕೆಂಡದಂತೆ ಕೆಂಪಾದ ಕಣ್ಣು, ಇವನ್ನೆಲ್ಲ ಕಂಡು ಇಲ್ಲಿಂದ ಆದಷ್ಟು ಬೇಗ ಕಾಲು ತೆಗೆಯುವುದೇ ಲೇಸೆಂದು ತೋರಿತು. ಶ್ಯಾಮಲಾ ಪಕ್ಕದ ಕೋಣೆಯಿಂದ ಹೊರಬಂದು ಬನ್ನಿ ಮೇಲೆ ಬನ್ನಿ! "ಸೀರೆಯ ಸೆರಗಿನಿಂದ ಕಣ್ಣೊರೆಸುತ್ತಾ ಹೇಳಿದಳು. ಸದಾ ಹಸನ್ಮುಖಿಯಾಗಿ, ಲಕ್ಷಣವಾಗಿ ತೋರುತ್ತಿದ್ದ

ಆ ವದನ ಇಂದು ನೋಡುವಂತಿರಲಿಲ್ಲ! ನಿನ್ನೆಯ 'ಚೌತಿಯ ಕಡುಬು' ಆಕೆಯ ಬೆನ್ನಿನಲ್ಲಿ ಮೂಡಿತ್ತು! ಇಂತಹರ ನಡುವೆ ನನ್ನ ಗೋಳನ್ನು ಹೊಯ್ದುಕೊಂಡು ಪ್ರಯೋಜನವಿಲ್ಲೆಂದು ಹಿಂದೆ ಹೊರಟೆ! ವೆಂಕಟ ಸಾಮಿಯ ಮನೆಯ 'ಚೌತಿಯ ಕಡುಬು' ಇಷ್ಟು ಅವಾಂತರ ಮಾಡಿತು! ಇನ್ನು ನನ್ನ ಮನೆಯ 'ಚೌತಿಯ ಕಡುಬಿನ' ಅವಾಂತರ ಏನೋ ಎಂದು ಮನೆಗೆ ಬಂದು ನೋಡುತ್ತೇನೆ 'ನಾ ಸಾಯ್ತೇನೆ.... ಮದ್ದೂ.... ಮದ್ದೂ....'' ಅಂತ ಮುದುಕಿ ಕೂಗುತ್ತೆ. ಅಲ್ಲಿ ಮಗು 'ಕದುಬು ಕದುಬು....ಉಂಡೀ....'' ಅಂದ್ರೆ ನನ್ನ ಮನೆ ಮುದ್ಕೀ "ಮದ್ದೂ.... ದಾಹ.... ಸಾಯ್ತೇನೆ....'' ಎಂತ ಚೀರಿ ಬಿದ್ದು ಒದ್ದಾಡ್ತಿತ್ತು!! ಎರಡು ಮನೆಯ ರೋಗವೂ 'ಚೌತಿಯ ಕಡುಬಿ'ನಿಂದಲೇ.

ಚಿಕ್ಕ ಬಳ್ಳಾಪುರದಲ್ಲಿ

ಅಭ್ಯಾಗತರ ಅಭಿರುಚಿಗೆ ತಕ್ಕುದಾದ ಚೊಕ್ಕವಾದ

—ತಿಂಡಿ ತಿನಿಸುಗಳಿಗಾಗಿ–ರುಚಿ ರುಚಿ ಭಕ್ಷ್ಯ ಭೋಜ್ಯಗಳಿಗೆ—

ಹೆಸರಾಂತ ಉತ್ತಮ ರೀತಿಯ ಒಂದೇ ಒಂದು ಉಪಹಾರ ಗೃಹ

ನೆಹರೂ ಲಂಚ್ ಹೋಂ

Proprietor

M. Padmanabha Rao,

Post Office Road,

Chicka Ballapura.

ಚಕ್ರದೃಷ್ಟಿ

("ದುರ್ಬೀನುಧಾರಿ"ಯಿಂದ)

ಲೋಕದ ಗಣ್ಯ ಘಟನೆಗಳ ಪೈಕಿ ಕಮ್ಯೂನಿಸ್ಟ್ ಚೈನದ ಮಹೋದಯವು ಪ್ರಾಮುಖ್ಯದ್ದಿದೆ. ಸದ್ಯ ಎಲ್ಲಕ್ಕಿಂತ ಹೆಚ್ಚಿನ ಆತುರವನ್ನು ನಿರ್ಮಿಸಿರುವ ಪ್ರಶ್ನೆ ಕೂಡಾ ಅದೇ– ಚೈನೀ ಕಮ್ಯೂನಿಸ್ಟರ ಮುಂದಿನ ಹೆಜ್ಜೆಯೇನೆಂಬುದು. ಹೊಸ ಜನತಾ ಸರಕಾರದ ಉದಯಗೆಂಪೋ,ಚಿಯಾಂಗ್ ಕೈಶೇಕ್ ಸರಕಾರದ ಸಂಜೆಗೆಂಪೋಬಿದ್ದು, ದೀರ್ಘಾವಧಿಯಿಂದ ತುಂಬಿ ಬಂದು ಚೈನವಿಂದು ಸಂಪೂರ್ಣವಾಗಿ ಕೆನ್ನೀರ ಸರೋವರದಂತೆ ಕಂಗೋಳಿಸುತ್ತಿದೆ. ಅಷ್ಟೇ ಅಲ್ಲ, ಅದರ ಅಲೆಗಳೀಗ ಅಕ್ಕಪಕ್ಕದ ದಡಗಳಿಗೆ ಬಡಿಯುತ್ತಿವೆ. ಒಂದೆಡೆ ಫ್ರೆಂಚ್ ಇಂಡೋಚೈನದ ಸರಹದ್ದಿನವರೆಗೂ ಚೀನೀ ಕೆಂಪು ಸೇನೆಗಳು ಬಂದಿವೆ; ಇನ್ನೊಂದೆಡೆ ಬರ್ಮದ ಗಡಿಮುಟ್ಟಿವೆ. ಈಗ ಬೀಳ ಹತ್ತಿರುವ ಚೈನೀ ಕಮ್ಯೂನಿಸ್ಟರ ಒತ್ತಡವನ್ನು ಪ್ರತಿ ಭಟಿಸುವುದಾಗಲೀ, ದೀರ್ಘಾವಧಿ ಸಹಿಸಿ ಬಾಳುವುದಾಗಲೀ ಸಯ್ಯಾಮಿಗಸಾಧ್ಯವೆಂಬುದು ಖಂಡಿತವಾದ್ದರಿಂದ ಅಲ್ಲಿ ಸಂರಕ್ಷಣೆ ಮತ್ತು ಸಂಧಾನ, ಇವೆರಡರ ಒಳಾಂದೋಲನಗಳೂ ನಡೆದಿವೆ. ಬರ್ಮದ ವಿದೇಶ ಮಂತ್ರಿಯು. ಇ. ಮಾವುಂಗರು ನವಡಿಲ್ಲಿಗೋಡಿ ಬಂದು, ಬರ್ಮಾ– ಚೈನಾ ಮತ್ತು ಬರ್ಮಾ– ಭಾರತ ಸರಹದ್ದುಗಳ ಭವಿಷ್ಯದಕುರಿತು ಮಾತುಕತೆ ನಡೆಸಿ ಹೋಗಿದ್ದಾರೆ. ಮುಂದಿನ ತಿಂಗಳಲ್ಲಿ ಬರ್ಮದ ಪ್ರಧಾನ ಮಂತ್ರಿ ಥಾಕಿನ್ ನು ಸ್ವತಃ ಬಂದು ಮಾತಾಡಲಿದ್ದಾರೆ. ಆಗ್ನೇಯ ಏಷ್ಯಾದ ಬ್ರಿಟಿಷ್‌ಕಮಿಶನರ್ ಜನರಲರು, ಬಿಸಿಮೂಸಿದ ಬೆಕ್ಕಿನಂತೆ ಚಪಲ ಗತಿಯಿಂದ ಓಡಾಡ ಹತ್ತಿದ್ದಾರೆ. ಅಂತೂ, ಕೆಂಪು ಚೈನವೀಗ ಅಕ್ಕಪಕ್ಕದ ದೇಶಗಳಿಗೆ ಕೆಲಸ ಕೊಟ್ಟಿದೆ. "ಅಜೆಯು ನೀರೇರಿತು; ಚಿನ್ನು'' ಕಟ್ಟಗಟ್ಟ ಮಾಡಿಕೊಳ್ಳೋಣ ಎಂಬ ಒದ್ದಾಟ ಒತ್ತಿನ ರಾಷ್ಟ್ರಗಳದಾಗಿದೆ. ಎಲ್ಲವೂ ಮೊದಲೇ ಕಮ್ಯೂನಿಸ್ಟ್ ಒಸರು ಇರುವ ದೇಶಗಳು; ಅದನ್ನು ಭಾರತವು ಒಣಗಿಸಿ ಕೊಂಡಂತೆ ಮಿಕ್ಕಾವ ರಾಷ್ಟ್ರದಿಂದಲೂ ಒಣಗಿಸಿ ಕೊಳ್ಳಲಾಗಿಲ್ಲ. ಭಾರತದಲ್ಲಾದರೂ ಬುಗ್ಗೆಯ ಬಾಯಿ ಪೂರ್ಣ ಮುಚ್ಚಿಹೋಯಿತೆನ್ನಲು ಬರುವುದಿಲ್ಲ. ಪಕ್ಕದ ದಡೆಗೇನೆ, ನೆರೆಬಡಿಯುತ್ತಿರುವಾಗ, ಒಳಗಡೆಯ ಬುಗ್ಗೆಗಳಿಗೂ ಚೇತನ ಬರುವುದು ಸ್ವಾಭಾವಿಕ. ಇನ್ನಿನ್ನು ಈ ಕುರಿತು ಹೆಚ್ಚು ಹೆಚ್ಚು ಜಾಗ್ರತೆ ಬೇಕು.

× × × × × ×

ಕಾಶ್ಮೀರದ ಸಂಬಂಧವಾಗಿ ಭಾರತ— ಪಾಕಿಸ್ತಾನಗಳೊಳಗಿರುವ ವಿವಾದಗಳ ಕುರಿತು ರಾಜೀ ಮಾಡಿ ಹಾಕುವಂತೆ ಸಂಯುಕ್ತ ರಾಷ್ಟ್ರ ಸಂಘದ ಭದ್ರತಾ ಕೌನ್ಸಿಲು ನೇಮಿಸಿ ಕಳುಹಿದ್ದ ಕಾಶ್ಮೀರ ಕಮಿಶನಿನವರು, ಕಟ್ಟ ಕಡೆಗೆ ಭದ್ರತಾ ಕೌನ್ಸಿಲಿಗೇ ಒಪ್ಪಿಸಿದ ಶಿಫಾರಸುಗಳನ್ನು ಕೇಳುವಾಗ ಕಿಸಕ್ಕನೆ ನಗು ಬರುತ್ತಿದೆ. "ಈ ವಿವಾದ

ಗಳನ್ನು ತೀರ್ಮಾನಿಸಲು ನಮ್ಮಿಂದಾಗುವದಿಲ್ಲ; ಎಲ್ಲಾ ಅಧಿಕಾರ ಕೊಟ್ಟು ಒಬ್ಬ ಮನುಷ್ಯನನ್ನೇ ನೇಮಿಸಿ ಬಿಡಿ'' ಎಂದು ಆ ಕಮಿಶನಿನವರು ಭದ್ರತಾ ಕೌನ್ಸಿಲಿಗೆ ಹೇಳಿದ್ದಾರೆ. ಕಾಶ್ಮೀರ, ಡಿಲ್ಲಿ, ಕರಾಚಿಗಳ ನಡುವೆ ಹಲವು ಬಾರಿ ಓಡಾಡಿ, ಎಷ್ಟೋ ದಾಖಲೆ ದಸ್ತಾವೇಜುಗಳನ್ನು ತಿರುವಿ ಹಾಕಿ, ಸುಮಾರು ಒಂದೂವರೆ ವರುಷಗಳ ನಂತರ ಕಾಶ್ಮೀರ ಕಮಿಶನಿನವರು ಮಾಡಿ ಬಿಟ್ಟ ಶೋಧವಿದು! ಲೋಕ ಶಾಂತಿ ಶೋಧನೆಗಾಗಿ ಇರುವ ಜಾಗತಿಕ ಸಂಘದ ಪಕ್ಷೀದಾರಿಗಳೆಂದರೆ ಇವರೇ. ತನ್ನ ಪಟ್ಟೆಯೊಳಗಿನ ಆಸ್ತಿಗೆ ಆಚೀ ಮನೆಯವ ಅಕ್ರಮ ಪ್ರವೇಶ ಮಾಡಿದ್ದಾನೆ, ಎಂದು ಕೋರ್ಟಿನಲ್ಲಿ ವ್ಯಾಜ್ಯ ದಾಖಲಾಗುವದಿದೆ; ಸ್ಥಳ ತನಿಖೆ ನಡೆಸಿ ಬರುವಂತೆ ಕೋರ್ಟು 'ಕಮಿಶನ' ನೇಮಿಸುವುದೂ ಇದೆ. ಹಾಗೆ ನೇಮಕಗೊಂಡವನಿಗೆ ಕಣ್ಣು ಕೈಯಿದ್ದರೆ, ಪರಿಸ್ಥಿತಿಯ ಅಂದಾಜು ಕಟ್ಟದೆ ಮರಳಿ ಬರುವುದಿಲ್ಲ; ವಾದಿ ಪ್ರತಿವಾದಿಗಳ ಮುಖವರ್ಣಕ್ಕಿಂತ ಹೆಚ್ಚಾಗಿ ನ್ಯಾಯಾನ್ಯಾಯವನ್ನು ತೂಗಿ ನೋಡುವ ಅಭ್ಯಾಸ ಆ ಕಮಿಶನಿನವರಿಗಿದ್ದರೆ, ಅವರು ತಿರುಗಿ ಕೋರ್ಟಿಗೆ ಬಂದು ಕೈ ಅಂಗಾತ ಹಿಡಿದು ''ಬಿಟ್ಟು ಆಫೀಸರನೇ ನೇಮಿಸಿರಿ'' ಎನ್ನುವುದಿಲ್ಲ. ಅದರೆ ಕಾಶ್ಮೀರ ಕಮಿಶನಿನ [illegible]

[illegible]

ನಾನು; ಇಬ್ಬರು ಹೆಣ್ಣು ಹುಡುಗಿಯರನ್ನು ದತ್ತಸ್ವೀಕಾರ ಮಾಡಿದ್ದೆ. ಅವರಿಬ್ಬರೂ ಗುಡಂದಿರನ್ನು ಕಟ್ಟಿಕೊಂಡು ಓಡಿ ಬಿಟ್ಟರು'' ಎಂದು ಆಚಾರ್ಯ ಕೃಪಲಾನಿಗಳಂದರು. ದೇಶದ ತಾಪತ್ರಯಗಳನ್ನು ಕಟ್ಟಿಕೊಳ್ಳುವ ಧುರೀಣರಿಗೂ ಮನೆತಾಪತ್ರಯಗಳಿವೆ! ಡಾ। ಪಟ್ಟಾಭಿ ಮುದುಕ; ಮಕ್ಕಳು ಮರಿಗಳಾಗಿ, ಅವರಿಗೆ ಕೂಡಿಸಿಡಬೇಕಾದಷ್ಟನ್ನೂ ಇಷ್ಟರಲ್ಲೇ ಮಾಡಿಟ್ಟವರು. ಹಲವು ಮನೆಗಳಿರಬಹುದಾದ್ದರಿಂದ, ಈ ಪ್ರಾಯದಲ್ಲಿ ತನ್ನ ಸಹಧರ್ಮಿಣಿಯನ್ನು ಬೆಜವಾಡಾದ ಮನೆಯಲ್ಲಿ ಬಿಟ್ಟು ತಾನು ನವದಿಲ್ಲಿಯ ಬಂಗಲೆಯಲ್ಲೇ ಉಳಿದು ಕೊಳ್ಳುವದು ಆಯುಷ್ಯಕ್ಕನುಕೂಲ. ಆಚಾರ್ಯ ಕೃಪಲಾನಿಗಳು ಪಾಪ, ಕಟ್ಟ ಕಡೆಗೆ ಮದುವೆಯಾದವರು; ವಿವಾಹವಾಗಲು ತಡ ಮಾಡುವುದು, ಅವರ ಇಚ್ಛೆಯಾಗಿದ್ದಂತೆ ಬೇಗ ಸಂತಾನವಾಗಬಾರದೆಂಬ ಬಯಕೆ ಅವರಿಗಿರಲಿಲ್ಲ. ಪ್ರಾಯಶ ಅದು ಇಚ್ಛಾಧೀನವಲ್ಲ. ಎಳೇ ಪ್ರಾಯದಲ್ಲಿ ವಿವಾಹವಾಗದ ಆಚಾರ್ಯರ ಅಪರಾಧಕ್ಕಾಗಿ, ಮಕ್ಕಳನ್ನಾಡಿಸುವ ಭಾಗ್ಯ ತಪ್ಪಬೇಕೆಂಬ ಶಿಕ್ಷೆಯೊದಗಬಾರದಿದ್ದಿತು. ಕೃಪಲಾನಿ ಸಂತಾನವು ಭಾವೀ ಭಾರತದ ಆವಶ್ಯಕತೆಗಳಲ್ಲೊಂದು. ಆದರೆ ಈ ಅಭಾವಕ್ಕಾಗಿ ದೂರಬೇಕು ಯಾರನ್ನು? ಅವರು ದತ್ತಸ್ವೀಕಾರ ಮಾಡಿದ ಹೆಮ್ಮಕ್ಕಳಾದರೂ ಓಡಿ ಹೋಗಬಾರದಿತ್ತೆಂದು, ಅವರನ್ನೇ ದೂರೋಣವೆ? ಅವರಲ್ಲಿ ಬೇಗ ಗಂಡನ ಬಯಕೆ ಹುಟ್ಟಿತು. ಪ್ರಾಯಶಃ ತಡ ಮಾಡುವುದು ಅಪಾಯಕರವೆಂಬ ಪಾಠವನ್ನು ಸ್ವೀಕೃತ ತಂದೆಯ ಜೀವನದಿಂದ ಅವರು ಸಕಾಲವಲ್ಲಿ ಕಲಿತು ಕೊಂಡಿರಬೇಕು. ಇನ್ನೊಂದು ಹೆಣ್ಣನ್ನು ದತ್ತು ಪಡೆಯುವ ಯೋಚನೆಯಿದೆ, ಎಂದು ಕೃಪಲಾನಿಗಳಂದಿದ್ದಾರೆ. ಹಾಗೆ ಮಾಡುತ್ತಾ ಹೋಗಲಿ; ಒಬ್ಬೊಬ್ಬಳಲ್ಲೇ ಮದುವೆಯ ಬಯಕೆ ಹುಟ್ಟಿಸುವ ವಿಧಾಯಕ ಕಾರ್ಯ ಆಚಾರ್ಯರಿಂದಾಗಲಿ. ಆಸ್ತಿಯ ಮೇಲೆ ಸ್ತ್ರೀಪುರುಷರಿಗೆ ಸಮಾನ ಹಕ್ಕು ಬಾಧ್ಯತೆಗಳನ್ನೀಯುವ ಹಿಂದೂ ಕೋಡು ಮಸೂದೆ ಶಾಸನವಾಗಿ ಬಂದ ಮೇಲೆ, ಕೆಲವರು ಶಂಕಿಸುತ್ತಿರುವ ಯಾವ ಅಪಾಯವೂ ಏಳದಂತೆ ಎಲ್ಲೆಲ್ಲೂ 'ಸ್ತ್ರೀಪುರುಷ' ಎಂಬ ಜತೆ ಜೀವನೇ ಇರುವಂತಾಗಲಿ.

ಪ್ರಜಾತಂತ್ರದ ಹೆದ್ದಾರಿ

(ಅಮೇರಿಕದ ಟೆನಸಿ ಕಂದರದ ಯೋಜನೆ)

ಬರೆದವರು:

ಕು. ಶಿ. ಹರಿದಾಸ ಭಟ್ಟ, ಬಿ. ಎ. (ಆನರ್ಸ)

ಈ ಚಿತ್ರಮಯ ಗ್ರಂಥದ ಬೆಲೆ

ಬರೇ ಎರಡು ರೂಪಾಯಿ.

ಪ್ರತಿಗಳಿಗೆ:—

ಮೇನೇಜರ,

ಕಲ್ಯಾಣಪುರ ಪ್ರೆಸ್, ಲಿ. ಉಡುಪಿ.

ಪುಸ್ತಕ ವಿಮರ್ಶೆ

ಪುಟ್ಟರಸು:— (ಮಕ್ಕಳ ಕತೆಗಳ ಸಂಗ್ರಹ) ಬರೆದವರು. ಶ್ರೀ ನೂನ್ ಹೊಯಿಸಳರು. ಪ್ರಕಾಶಕರು ಕಾವ್ಯಾಲಯ ಮೈಸೂರು. ಪುಟ ೫೨. ಅ. ೯೮. ಬೆಲೆ ೧—೦—೦.

ಯಾವುದೇ ರಾಷ್ಟ್ರದ ಭವಿಷ್ಯದ ಭವ್ಯತೆಯನ್ನು ಆ ರಾಷ್ಟ್ರದಲ್ಲಿರುವ ಮಕ್ಕಳ ಸಾಹಿತ್ಯದ ಮಟ್ಟವನ್ನು ಕಂಡು ಕೊಂಡು ನಿರ್ಧರಿಸಬಹುದು. "ಇಂದಿನ ಮಕ್ಕಳೇ ಮುಂದಿನ ಜನಾಂಗ"ವೆಂಬ ಮಾತು ಎಷ್ಟು ಸಹಜವೋ ಅಷ್ಟೇ ಅವರ್‍ಗೆ ಅವರಿಗೆ ತಕ್ಕ ಸಾಮಗ್ರಿಯನ್ನೊದಗಿಸುವುದು [illegible] ಮಕ್ಕಳ ಮನೋರಾಜ್ಯವನ್ನು ವಿಸ್ತರಿಸುವ— ಮನೋವೈಜ್ಞಾನಿಕ ದೃಷ್ಟಿಯ [illegible] ಸಾಹಿತ್ಯ ಪ್ರಪಂಚ ಸುಸಂಪನ್ನ ಹಾಗೂ ಸುಸಂಪೂರ್ಣವೂ [illegible] ಕನ್ನಡ ಸಾಹಿತ್ಯ ಎಷ್ಟು ಮುಂದರಿಯಬೇಕೋ ಅಷ್ಟು ಮುಂದರಿಯುವಲ್ಲಿ [illegible] ಸಂಗ್ರಹಗಳನ್ನು [illegible] ಮೈಸೂರು ಕಾವ್ಯಾಲಯದವರ ಕಾರ್ಯ ಪ್ರಶಂಸನೀಯ.

[illegible]

ಹಾಗಾಂತ ಭಾವ ಗಾಂಭೀರ್ಯ ಹಿರಿಯರನ್ನು ಬೆರಗುಗೊಳಿಸುವಂತಹದು.

ಸರಳಶೈಲಿ— ಸರಸ ವಿಚಾರ— ಸಹಜ ರೀತಿಯ ಸ್ವಭಾವ ಚಿತ್ರಣ ಇವು ಮೊದಲಾದುವುಗಳು ಎಲ್ಲ ಕತೆಗಳಲ್ಲೂ ಎದ್ದು ಕಾಣುವ ವೈಶಿಷ್ಟ್ಯ.

ಪ್ರಥಮದ ಕತೆ "ನಿರಾಶ್ರಿತೆ"ಯಲ್ಲಿ ದೇಶದಲ್ಲಿ ಜಗಿದೆದ್ದ ಜಾತಿ ವಿದ್ವೇಷಾನಲದಿಂದ ತುಳಸೀ— ಚಂದ್ರರಂತಹ ಆದರ್ಶ ಪ್ರೇಮಿಗಳ ದಿವ್ಯ ಪ್ರೇಮ ಕಾಶ್ಮೀರವು ಸುಟ್ಟು ಬೂದಿಯಾದ ಕರಾಳ ಕೃತ್ಯದ ನಗ್ನ ಚಿತ್ರಣ ಚಿತ್ರಿಸಿದ್ದರೆ "ಪುನರ್ಜನ್ಮ"ದಲ್ಲಿ ಅಂಧ ವಿಶ್ವಾಸದಿದಿರು ಗೋವುವಿನಂತಹ ತರಳ ಬಾಲಕನ ಆತ್ಮ ಬಲಿದಾನದ ಹೃದಯ ಸ್ಪರ್ಶಿ ಸನ್ನಿವೇಶದ ಚಿತ್ರಣವಿದೆ. "ಜಾತಿಯಬಲಿ" "ಕಲ್ಯಾಣಿ"ಯಲ್ಲೂ ಜಾತಿಭೇದ ಭಾವನೆಯ ಪೈಶಾಚಿಕ ಕೃತ್ಯಕ್ಕೆ ಮಾನವತೆಯನ್ನೇ ತಿಲಾಂಜಲಿ ಇತ್ತ ದಾರುಣ ದೃಶ್ಯವನ್ನೂ ಕಾಣುವಂತೆ "ಪಶ್ಚಾತ್ತಾಪ" "ಗುರು ಪೀಠ" "ಸೋದರಿ"ಗಳಲ್ಲಿ ಸಾಮಾಜಿಕ ಕುರೀತಿಗಳ ಅರ್ಥವಿಹೀನ ಅನರ್ಥ ಕೃತ್ಯಗಳ ವಿಕೃತ ಸ್ವರೂಪವನ್ನು ಕಾಣಬಹುದು. ಅಂತೆಯೇ "ಆತ್ಮಾರ್ಪಣೆ""ಯಲ್ಲಿ ದೇಶಕ್ಕಾಗಿ ಇತ್ತ ಆತ್ಮ ಬಲಿದಾನದ ಸುಂದರ ರಸ ಸನ್ನಿವೇಶ ಚಿತ್ರಿತವಾಗಿದೆ.

ಒಟ್ಟಿನ ಮೇಲೆ ಪುಸ್ತಕ ಪ್ರಶಂಸನೀಯ— ಸಂಗ್ರಾಹ್ಯ

ಕಥನ ಕವನಗಳು— "ನಾನೃಷಿ; ಕುರುತೇ ಕಾವ್ಯಂ" ಕವಿತಾ ಕಾಮಿನಿಯ ಸಾಕ್ಷಾತ್ಕಾರ ಚಿರಕಾಲೀನತಪಶ್ಚರ್ಯೆಯಿಂದ ಮಾತ್ರ ಸಾಧ್ಯ. ಚಿರಕಾಲೀನ ಅನನ್ಯ ಮನಸ್ಕತೆಯ ನಿರ್ಮಲ ತಪಸ್ಸಿನೊಂದಿಗೆ ದೈವದತ್ತ ಪ್ರತಿಭಾ ಪ್ರಗಲ್ಭತೆಯ ಸಮ್ಮಿಲನವಾಯಿತೊ ಸರಿ ಸುವರ್ಣಕ್ಕೆ ಸೌಗಂಧ್ಯ ಬಂದೊದಗಿದಂತೆ· ಮುಕ್ತಾಮಣಿಯಲ್ಲಿ ಮಾಧುರ್ಯವು ತುಂಬಿ ತುಳುಂಕಿದಂತೆ.

ಇಂತಹ ರಸಸ್ರೋತ ಕವಿವರ ಕುವೆಂಪುರವರ ಕಥನ ಕವನದಲ್ಲಿ ಪ್ರವಾಹರೂಪವಾಗಿ ಹರಿದಿದೆ. ಅದೂ ಅಥದಿಂದ ಇತಿ ತನಕ.

"ಕಥನ ಕವನ"ದಲ್ಲಿ ಹನ್ನೊಂದು ಬಿಡಿ ಕಥನ ಕವನಗಳ ಮೂಲಕ ರಸ ಸೃಷ್ಟಿಯ ಸೃಷ್ಟಿಯ ಹಿರಿಕಾರ್ಯವೆಸಗಲ್ಪಟ್ಟಿದೆ. "ಕರಿಸಿದ್ದ" ಮೊದಲಾದ ಪ್ರಥಮದ ಆರು ಕವನಗಳಲ್ಲಿ ಮಲೆನಾಡಿನ ಸುಂದರ— ಸರಸ— ಸರಳ ಜೀವನದ ಸಹಜ ಸ್ವಭಾವ ಮನ ಮೋಹಕ ಹಾಗೂ ಹೃದಯ ಸ್ಪರ್ಶಿ ಚಿತ್ರಣ ಚಿತ್ರಿಸಲ್ಪಟಿದ್ದರೆ "ರಕ್ತ ರಜನಿಯಲ್ಲಿ ದಶರಥನ ಶಬ್ದ ಭೇದ ಬಾಣಕ್ಕೆ ತುತ್ತಾದ ಪಿಂಗಲ ಮುನಿವರರ ಸುಕುಮಾರ— ತರಳ ಸಿಂಧುವಿನ ದುರಂತ ಮನೋವಿದಾರಕ ಸನ್ನಿವೇಶವಿದೆ. ಅಂತೆಯೇ "ತಾನಾಜಿ" "ಜಯ ಸಿಂಹರ ಕೊನೆಗಾಲ" "ಪ್ರತಾಪಸಿಂಹ" ಮೊದಲಾದುವುಗಳಲ್ಲಿ ಮಾತ್ರ ಭೂಮಿಗಾಗಿ ಆತ್ಮಾರ್ಪಣೆಯಿತ್ತ ತ್ಯಾಗಮಯ ಜೀವನದ ಸುಂದರ ರಸ ಚಿತ್ರಣವಿದೆ.

ಒಟ್ಟಿನ ಮೇಲೆ ಕುವೆಂಪುರವರ ಭಾವ ಗಾಂಭೀರ್ಯ ನಿರ್ಝರಿಯ ಝರಿಯಂತೆ ಪ್ರವಾಹರೂಪದ್ದು. "ಕಥನ ಕವನ"ದಲ್ಲಿ ಕಾವ್ಯಕನ್ಯೆ ಸರ್ವಾಲಂಕೃತಳಾಗಿ ಸರ್ವಾಂಗ ಸುಂದರಳಾಗಿ ಅಭಿನಯಿಸುತ್ತಿದ್ದಾಳೆ. ಸರಳ ಶೈಲಿ— ಲಲಿತ ಭಾವ ಭಂಗಿ—ಸರಸ ಪದವಿನ್ಯಾಸ ಸಹಜ ಸ್ವಭಾವ ಸುಪೂರ್ಣವರ್ಣನಾ ವೈಖರಿ— ವಿಶಾಲ ಹಾಗೂ ಉಚ್ಚಾದರ್ಶ— ಮನ ಮೋಹಕ ಅಲಂಕಾರ ಚಮತ್ಕಾರ ಇವೆಲ್ಲವುಗಳಿಂದ "ಕಥನ ಕವನ ಕಥನಕ್ಕೆ ಟೀಕದಂತಿದೆ.

ಉಡುಪ

ವಾ. ವ. ಅಂಚೇವೆಚ್ಚಸೇರಿ ೨-೦-೦ ಬಿಡಿಪ್ರತಿಗೆ ೦-೪-೦

ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ

॥ ಶ್ರೀ ॥

ನವನೀತ.

ಎಂಬ

ಕನ್ನಡ ಮಾಸಪತ್ರಿಕೆಯು.

ಸಂಪುಟ ೧ | ಚೈತ್ರ ೧೮೪೨. | ಸಂಚಿಕೆ ೧

ವಿಷಯಾನುಕ್ರಮಣಿಕೆ.

೧ ಗಜಾನನಸ್ತೋತ್ರಂ. ಸಂಪಾದಕ
೨ ಸ್ವವಿಷಯ. ,,
೩ ಕರ್ನಾಟಕ ಪ್ರಾರ್ಥನೆ. ಕೃ. ತ್ರೀ. ಬೆಟಗೇರಿ.
೪ ಕರ್ನಾಟಕ ಇತಿಹಾಸ ಸಾಧನ. ಕಾವ್ಯಾನಂದ.
೫ ವಿನೋದಗಳು. ಕೆ.
೬ ಜಯದೇವಕವಿ. ಕೃ. ತ್ರೀ. ಬೆಟಗೇರಿ.
೭ ದೇವರ ಲೀಲೆಯು ಅಗಾಧವಾದದ್ದು! ನಾ. ಗು. ಪಾಟೀಲ ಬೆಟಗೇರಿ.
೮ ವೀರಗೋವಿಂದ (ಚಾಲುಕಾದಂಬರಿ.)

ಸಂಪಾದಕರು.
ಕೃ. ತಿ. ಬೆಟಗೇರಿ.
ಜಿ. ಬಿ. ಕುಲಕರ್ಣಿ, ಬಿ. ಎ.

Printed at the 'Belgaum-Samachar' Press by H. B. Samant and Published by K. T. Betigeri, Mahadeogalli, H. No. 1541 Belgaum,

ಕನ್ನಡಿಗರಿಗೆ ಬಿನ್ನಹ.

ಜ್ಞಾನಾಂಜನಕ್ಕೆ ಮುದ್ರಾಲಯವಿಲ್ಲದೆ ಮಾಸಪತ್ರಿಕೆಯನ್ನು ನಡೆಸುವದು ತೀರ ಅಸಾಧ್ಯವಾದುದರಿಂದ ಅದರ ಚಾಲಕರು ಈ ಕೆಳಗೆ ಕಾಣಿಸಿದಂತೆ ವ್ಯವಸ್ಥೆ ಮಾಡಿದ್ದಾರೆ. ದಯವಿಟ್ಟು ಕನ್ನಡ ಭಾಷಾಭಿಮಾನಿಗಳು ತಮ್ಮ ಕೈಲಾದಮಟ್ಟಿಗೆ ಸಹಾಯಮಾಡಿ ನಮ್ಮ ಭಾಷೆಯ ಉದ್ಧಾರಕ್ಕೆ ಆಧಾರಸ್ತಂಭರಾಗುವರೆಂದು ನಂಬಿದ್ದೇನೆ.

ನಿಯಮಗಳು.

(೧) [illegible]

(೨) [illegible]

(೩) [illegible]

(೪) [illegible]

(೫) [illegible]

(೬) [illegible]

(೭) [illegible]

(೮) [illegible]

[illegible]

ನವನೀತ.

ಮ.ವೃ.॥ ನವನೀತಂ ಸುಮನೋಹರಂ ಮೃದುಲಮಾಧುರ್ಯಂಗಳಿಂಕೂಡಿತಾ ।
ನವನೀತಾಣದೆ ತೋಷಿಪಂತಸಿಬರುಂ ಕರ್ನಾಟಭಾಷಾಂಗನಾ ॥
ನವನೀತಿ-ಪ್ರಭವ-ಪ್ರಬಂಧ ಸುಪುರಾಣಾದ್ಯಂಗಳಿಂದೊಪ್ಪುವೀ ।
ನವನೀತಾನ್ವಯ ಮಾಸಪತ್ರದಖಿಲರ್ಗಾನಂದವನ್ನೀವಳು ॥ ೧ ॥

ವರುಷ ೧ } ಚೈತ್ರ ೧೮೪೭ { ಸಂಚಿಕೆ ೧

ಶ್ರೀ

ಗಜಾನನ ಸ್ತೋತ್ರಂ.

॥ ವಾ. ಷಟ್ಪದಿ ॥

ಗಿರಿಜೆಯೊಳ್ ಜನ್ಮಿಸಿಕವಾಟಮಂ ಕಾಯ್ದಿರೆವಾಗ ।
ಶಿರಹೋಗೆ ಜವದಿಂದ ಕುಂಜಮುಖಮಂ ತಳೆದು ।
ಹರಿಸುತಧ್ವಂಸ! ನಾಗಾಭರಣನಿಂ ಪ್ರೇಮದಿಂ ವರವರವನೆಕೊಂಡೀ ॥
ಪರಮತವಭಕುತರೆಡರಂಗಳಂನಶಿಸಲ್ಕೆ ।
ಕರದಿಪಾಶಾಂಕುಶವನಲ್ತೆಯಿಂಪಿಡಿದಿರ್ದ ।
ಹರಸುತನೆ! ವಿಘ್ನಾರಿ! ನುತಿಪೆವು ಸಕಲ ಸಂಕಟಗಳಂ ಪರಿಹರಿಸೊಸಿನಿಂ ॥ ೧ ॥

ಹರಿಯನ್ನು ಧರಿಸಿರ್ದು ಹರಿಮೌಳಿಹರನಲ್ಲ ।
ವರಚತುರ್ಭುಜವಿದ್ದು ಕಮಲಜನಪಿತನಲ್ಲ ।
ಪರಿಯಾದ ರಕ್ತವಸನವನ್ನುಟ್ಟಿರ್ದು ರಕ್ತಾಂಬರಧರಾರ್ಕನಲ್ಲ ॥
ಹರಗೆಪ್ರಿಯನಿರ್ದು ಮಾರ್ಕಾಂಡೇಯನೀನಲ್ಲ ।
ಕರಿಮುಖವ ತಳೆದಿರ್ದುವೀಕ್ಷಿಸಲ್ ಗಜಮಲ್ಲ ।
ಪರಮಮಂಗಲಮೂರ್ತಿ! ನಮಿಸುವೆನುಸತತನಗೆವರಸೌಖ್ಯವನ್ನೀಡೆಲ್ಲೈ ॥ ೨ ॥

ಸಂಪಾದಕ.

೧ ಹಾವು. ೨ ಚಂದ್ರ. ೩ ಸೂರ್ಯ.

ಸ್ವವಿಷಯ.

ಕನ್ನಡ ಬಂಧುಗಳೇ!

ಮಹಾಮಹಿಮನಾದ ಭಗವಂತನ ಇಚ್ಛೆಯಹೊರತು, ಯಾವ ಕಾರ್ಯವೂ ಸಾಧಿಸಬೇಕಾದು ಶಕ್ಯವಿಲ್ಲ. 'ನವನೀತ'ವನ್ನು ಯುಗಾದಿಯ ಪ್ರತಿಪದೆಗೆ ಹೊರಡಿಸಬೇಕೆಂದು, ಈಗ್ಗೆ ನಾಲ್ಕು ತಿಂಗಳಿಂದ ಸತತ ಪ್ರಯತ್ನಮಾಡಿ ಎಲ್ಲ ಸಾಹಿತ್ಯವನ್ನು ಸಜ್ಜುಗೊಳಿಸಿ ಇಟ್ಟಿದ್ದೆವು. ಆದರೆ, ಜಗತ್ಪಾಲಕನಾದ ಭಗವಂತನ ಇಚ್ಛೆಗೆ [illegible] ಅದನ್ನು ಸ್ವಲ್ಪ ದಿವಸ [illegible] ಪ್ರತಿಯೊಂದು ಕಾರ್ಯದಲ್ಲಿ ನಾವು ಎಷ್ಟು ಸಾಹಸ [illegible] ಯಾವ ಕಾರ್ಯವೂ ಸಾಫಲ್ಯ [illegible] ಮಾಡದಿದ್ದರೂ ಸಹ [illegible] ಕಾರ್ಯವನ್ನು ಸಫಲ [illegible] 'ನವನೀತ'ವು ಒಮ್ಮೆ ಕರ್ನಾಟಕದ [illegible] ನಿಂತಿತು. [illegible] ಪ್ರೇಮದಿಂದಲೂ, [illegible] ಕನ್ನಡಿಗರು ಅದನ್ನು [illegible] ಬರಮಾಡಿಕೊಳ್ಳುವ [illegible]

[illegible] ಇತಿಹಾಸದೇ [illegible] ಕರ್ನಾಟಕದ ಇತಿಹಾಸ [illegible] ಪೌರಾಣಿ [illegible] 'ನವನೀತ' [illegible] ಇತಿಹಾಸವನ್ನು [illegible] ಇಂಗ್ಲಿಷ [illegible]

ತಮ್ಮ ವಾಙ್ಮಯವನ್ನು ತರತರದ ರೀತಿಯಿಂದ ವೃದ್ಧಿಸಲಿಲ್ಲವೆ? ಅಂದಮೇಲೆ ಇಂಥ ಉಚ್ಚತರವಾದ ಇತಿಹಾಸ ಗ್ರಂಥಗಳು ನಮ್ಮ ಕನ್ನಡದಲ್ಲಿ ಎಷ್ಟಿರುತ್ತವೆ? ಎಲೌ ಕರ್ನಾಟಕಸುಂದರೀ! ನಿನ್ನ ಉಜ್ವಲವಾದ ಕೀರ್ತಿಯನ್ನು ಬಚ್ಚಿಟ್ಟುಕೊಂಡು, ಇನ್ನೂ ಅರನಿದ್ರೆಯಲ್ಲಿಯೇ ಹೊರಳಾಡುವಿಯಾ? ಎಚ್ಚರಾಗು! ಎಚ್ಚರಾಗು!! ನಿನ್ನ ಸಹೋದರಿಯರಾದ ಆಂಧ್ರ, ಮಹಾಸ್ತ್ರೀಯರು ಎಚ್ಚತ್ತು ಉಚ್ಚಸ್ಥಾನವನ್ನು ಹೊಂದಿದರು ಎಚ್ಚರಾಗು!

× × × × ×

ಈಗ್ಗೆ ದೇಶದಲ್ಲಿ ಎಲ್ಲಿಹೋದರೂ, ಜನರು ತಮ್ಮ ಧರ್ಮಾಭಿಮಾನವನ್ನು ತೊರೆದು, ಪೌರಾಣಿಕ ಗ್ರಂಥಗಳಕಡೆಗೆ ದುರ್ಲಕ್ಷ್ಯಮಾಡಿ ಬಾಹ್ಯಾಡಂಬರಕ್ಕೆ ಮಾತ್ರ ಮೆಚ್ಚಿರುವರು. ತಮ್ಮ ಪೂರ್ವಜರು ಬರೆದ ಧರ್ಮಗ್ರಂಥಗಳನ್ನು ಕಣ್ತೆರೆದು ನೋಡದೆ, ಪಾಶ್ಚಿಮಾತ್ಯರ ಅನುಕರಣವನ್ನೇ ಮಾಡುತ್ತ ನಡೆದದ್ದರಿಂದ, ನಮ್ಮ ಧರ್ಮವು ಬೂದಿಮುಚ್ಚಿದ ಕೆಂಡದಂತೆ ಮೂಲೆಗುಂಪಾಗಿ ಬಿದ್ದಿರುವದು. ಆದುದರಿಂದ, ಕನ್ನಡಿಗರಿಗೆ ಧರ್ಮೋಪದೇಶದ ಲೇಖಗಳನ್ನೂ ಮನಸ್ಸಿಗೆ ಆನಂದವನ್ನೀಯುವ ಪೌರಾಣಿಕ ಗ್ರಂಥಗಳನ್ನೂ, ಒದಗಿಸಿ ಕೊಡುವದು 'ನವನೀತ'ದ ಎರಡನೆಯ ಕರ್ತವ್ಯವಾಗಿರುವದು. ಕನ್ನಡಿಗರೆ! ಧರ್ಮರಾಜನು ಎಂಥ ಸಂಕಟಗಳಿಗೊಳಗಾದರೂ, ತನ್ನ ಧರ್ಮವನ್ನು ಬಿಡದೆ ಪಾಲಿಸಿದ್ದರಿಂದಲ್ಲವೆ? ಅವನ ಕೀರ್ತಿಯು ದಿಗಂತದಲ್ಲಿ ಹಬ್ಬಿದ್ದು. ಅದರಂತೆ ಶಿವಾಜಿಯು ಚಿಕ್ಕಂದಿನಲ್ಲಿ ಗುರುಮುಖದಿಂದ ಭಾರತವನ್ನು ಕೇಳಿದ್ದರಿಂದಲೇ ತನ್ನ ಇಪ್ಪತ್ತನೆಯ ವರುಷದಲ್ಲಿ ಸ್ವರಾಜ್ಯ ಸ್ಥಾಪನೆ ಮಾಡುವ ಶಕ್ತಿಯನ್ನು ಪಡೆಯಲಿಲ್ಲವೆ? ಅಂದಮೇಲೆ ನೀವೂ ನಿಮ್ಮ ಉಚ್ಚತರವಾದ ಧರ್ಮವನ್ನು ಎಂಥ ವಿಘ್ನಗಳಿಗೊಳಗಾದರೂ ಬಿಡದೆ ಪಾಲಿಸಿರಿ. ಪೌರಾಣಿಕ ಗ್ರಂಥಗಳನ್ನು ಭಕ್ತಿಯಿಂದ ಓದುತ್ತಲಿರ್ರಿ. ಅಂದರೆ ನಿಮ್ಮ ಕೀರ್ತಿಯೂ ದಿಗಂತದಲ್ಲಿ ಹಬ್ಬುವದು.

× × × × ×

ಇನ್ನು 'ನವನೀತ'ದ ಮೂರನೆಯ ಕರ್ತವ್ಯವೆಂದರೆ ಶಿಕ್ಷಣವಿಷಯವೇ ಆಗಿರುವದು. ಈ ಹೊಸ ಮನ್ವಂತರದೊಳಗೆ ರಾಷ್ಟ್ರೋನ್ನತಿಯಾಗಬೇಕಾದುದರಿಂದಲೂ, ರಾಜಕೀಯ, ಸಾಮಾಜಿಕ, ಔದ್ಯೋಗಿಕ ವಿಷಯಗಳು ಪ್ರಗತಿಯನ್ನು ಹೊಂದಬೇಕಾದುದರಿಂದಲೂ, ಶಿಕ್ಷಣವು ಅತ್ಯವಶ್ಯವಾಗಿದೆ. ಪೂರ್ವದಲ್ಲಿ ಜಗತ್ತಿನೊಳಗೆ ಸಕಲ ಶಿಕ್ಷಣದಿಂದಲೂ ಶೋಭಿಸುತ್ತಿದ್ದ ನಮ್ಮ ಭರತ

ವರ್ಷವು, ಕಾಲಚಕ್ರದಲ್ಲಿ ಸಿಕ್ಕು ಈಗ್ಗೆ ಶಿಕ್ಷಣದಲ್ಲಿ ಹಿಂದೆ ಬಿದ್ದಿರುವದನ್ನೀಕ್ಷಿಸಿದರೆ ಬಹಳೇ ವಿಷಾದವೆನಿಸುತ್ತದೆ. ದೇಶೋನ್ನತಿ ಯಾಗಬೇಕಾದರೆ ಶಿಕ್ಷಣವೇ ಮುಖ್ಯ ಸಾಧನವಾಗಿದೆ. ಶಿಕ್ಷಣದಿಂದಲೇ ಇಂಗ್ಲಂಡ, ಜಪಾನ, ಜರ್ಮನಿ, ಅಮೇರಿಕಾ, ಮೊದಲಾದ ರಾಷ್ಟ್ರಗಳು ಸುಧಾರಣೆಯ ಶಿಖರಕ್ಕೆ ತಲ್ಪಿರುವವು. ನಾವೂ ಅವುಗಳಂತೆ ಸುಧಾರಣಾ ಮಾಲೆಯಲ್ಲಿ ಪ್ರವೇಶಿಸಬೇಕಾದುದರಿಂದ, ನಮ್ಮ ದೇಶದಲ್ಲಿ ಶಿಕ್ಷಣಪ್ರಸಾರವನ್ನು ಅತಿಲಘುಸದಿಂದ ಮಾಡಬೇಕಾಗಿದೆ. ಇದಕ್ಕೆ ಒತ್ತಾಯದ ಶಿಕ್ಷಣವೇ ಅತ್ಯವಶ್ಯವಾಗಿದೆ.

× × × × ×

ದೇಶದ ಸಂಪತ್ತು ಬೆಳೆಯಬೇಕಾದರೆ ನಮಗೆ ಕೃಷಿಕರ್ಮವೇ ಮುಖ್ಯ ಸಾಧನವಾಗಿರುವದು, [illegible] ಪರದೇಶಗಳನ್ನು ಸುಲಿದು ವೈಭವವನ್ನು [illegible] ನಮಗೆ ಬೇಕಾಗಿಲ್ಲ. ಮತ್ತು ಆ ವೈಭವವು ಬಹಳ ದಿವಸ [illegible] ಕೃಷಿಕರ್ಮದಿಂದಲೇ ತಮ್ಮ ದೇಶದ [illegible] ವೈಭವಶಾಲಿಗಳಾಗಿ [illegible] ವೈಭವಶಾಲಿಗಳಾಗಬೇಕಾದರೆ ಕೃಷಿಕರ್ಮವೇ ಮುಖ್ಯ [illegible] ಕೃಷಿಕರ್ಮ ವಿಷಯಕ [illegible]

× × × × ×

[illegible]

ಕರ್ನಾಟಕ ವಿದ್ಯಾವರ್ಧಕ ಸಂಘ

ಗ್ಲಾನಿಬಂದಂತಾಗಿ, ಈಗ್ಗೆ ಐದು ತಿಂಗಳಿಂದ ಕನ್ನಡಿಗರ ದರ್ಶನವಿಲ್ಲದೆ ಕುಳಿತಿರುವದೆಂದು ಬರೆಯಲು ವ್ಯಸನ ಪಡುತ್ತೇವೆ. ಅದರ ಸಂಪಾದಕರು ತರುಣರೂ, [illegible] ಉತ್ಸಾಹಿಪುರುಷರೂ ಇದ್ದು, ಕನ್ನಡದ ದುಸ್ಥಿತಿಯನ್ನು [illegible] ಮರುಗಿ ಅದರ ಏಳಿಗೆಯಬಗ್ಗೆ ತಮ್ಮ ಕೈಲಾದ ಮಟ್ಟಿಗೆ ಪ್ರಯತ್ನಿಸಬೇಕೆಂದು ಮಾಡಿರುವರು. ಹೀಗಿದ್ದು ಕನ್ನಡಿಗರು ಅವರಿಗೆ ಸಹಾಯ ಮಾಡದೆಯಿರುವದು, ತೀರಲಾಂಛನಾಸ್ಪದವೂ, ವಿಷಾದಜನಕವೂ ಆಗಿರುವದು ದೇಶದ ಏಳ್ಗೆಗೂ, ಭಾಷೋನ್ನತಿಗೂ ನಿಕಟ ಸಂಬಂಧವಿದ್ದದರಿಂದ 'ಜ್ಞಾನಾಂಜನ' ದ ಸಂಪಾದಕರು ಭಾಷೋನ್ನತಿಯಂಥ ಉಚ್ಚಧ್ಯೇಯವನ್ನು ಮುಂದಿಟ್ಟುಕೊಂಡು ಹೆಣಗುತ್ತಿರುವರು. ಇಂಥ ಸಮಯದಲ್ಲಿ ಕನ್ನಡಿಗರು 'ಜ್ಞಾನಾಂಜನ' ಕ್ಕೆ ಪೂರ್ಣ ಸಹಾಯಮಾಡಿ, ಅವರ ಉತ್ಸಾಹವನ್ನು ದ್ವಿಗುಣಿತ ಮಾಡುವದು ವಿಹಿತವೂ, ಶ್ರೇಯಸ್ಕರವೂ ಆಗಿರುವದು.

ಪರಭಾಷೆಗಳಕಡೆಗೆ ದೃಷ್ಟಿಯನ್ನೀಯಲು ಪ್ರತಿಯೊಂದು ಭಾಷೆಯಲ್ಲಿ ಅನೇಕ ಮಾಸ ಪುಸ್ತಕಗಳೂ, ಸಾಪ್ತಾಹಿಕ ದೈನಿಕ ಪತ್ರಗಳೂ ಇದ್ದದ್ದು ಕಂಡುಬರುವವು. ಒಂದು ಆಂಗ್ಲದೇಶದಲ್ಲಿ ಮಾಸಪತ್ರಿಕೆ, ವಾರಪತ್ರಿಕೆ, ದೈನಿಕಗಳು ಕೂಡಿ ಸಾವಿರಕ್ಕೆ ಸಮೀಪಿಸಿರುವವು. ಆದರೆ, ನಮ್ಮ ಕರ್ನಾಟಕದಲ್ಲಿ ನೂರನ್ನು ಮಿಕ್ಕಿಲ್ಲೆಂದರೆ ಅತಿಶಯೋಕ್ತಿಯಾಗದು. ಭಾಷಾ ಸೇವೆಯನ್ನು ಮಾಡಬೇಕೆಂಬ ಕುತೂಹಲದಿಂದ ಜನಿಸಿದ ಎಷ್ಟೋ ಪತ್ರಗಳು ಕನ್ನಡಿಗರ ಸಹಾಯವಿಲ್ಲದೆ ನಾಮಶೇಷ ವಾದವು. ಕನ್ನಡಿಗರಿಗೆ ಶಾಸ್ತ್ರೀಯ ಜ್ಞಾನವನ್ನುಂಟು ಮಾಡಿಕೊಡಬೇಕೆಂಬಿಚ್ಛೆಯಿಂದ ಹೊರಟ 'ವಿಜ್ಞಾನ' ವು ಅಜ್ಞಾತವಾಸವನ್ನೈದಿತು. ಅದರಂತೆ 'ಹಿತಚಿಂತಕವು' ಶತಚಿಂತೆಗಳಿಂದಲೇ ನಿಂತಿತು. ಅಷ್ಟೇಕೆ? ಹುಬ್ಬಳ್ಳಿಯಲ್ಲಿ ಹೊರಡುತ್ತಿದ್ದು, ಕರ್ನಾಟಕದ ಶಿರೋಭೂಷಣದಂತಿದ್ದ 'ಸಚಿತ್ರಭಾರತ' ವು ಕೆಲವು ದಿವಸ ಅಚ್ಚಳಿಯದೆ ಕನ್ನಡಿಗರ ಸೇವೆಮಾಡಿ, ಅದೂ ಈಗ ಸಾಗದ ಮೂಲಕ ಕರ್ನಾಟಕದ ಮಸ್ತಕದಿಂದ ಅಸ್ತವ್ಯಸ್ತವಾಗಿ ಬಿದ್ದು ಅಸ್ತಮಿಸುವ ದಾರಿಯಲ್ಲಿದೆ.

ಆದರೆ ಈ ಹೊಸ ಮನ್ವಂತರದ ಸುಳಿಗಾಳಿಗೆ ಕನ್ನಡಿಗರು ಸ್ವಲ್ಪ ಎಚ್ಚತ್ತಂತೆ ಕಂಡುಬರುವದು. ಕನ್ನಡ ಪದವೀಧರರು ಒಬ್ಬೊಬ್ಬರೇ ಬಂದು ಅಮೌಲ್ಯ ವಸ್ತುವನ್ನು ಕಳಕೊಂಡವರಂತೆ ಸುತ್ತೆಲ್ಲ ಕಣ್ದೆರೆದು ನೋಡುತ್ತಿರುವರು. ಭಾಷಾ ಸೇವೆಯನ್ನು ಮಾಡಬೇಕೆಂಬ ಉತ್ಕಟೇಚ್ಛೆಯಿಂದ ಇತ್ತಿತ್ತಲಾಗಿ ಎಷ್ಟೋ

ಪತ್ರಗಳು ಜನ್ಮವೆತ್ತಿ ಕರ್ನಾಟಕದಲ್ಲೆಲ್ಲ ತಾರಕೆಗಳಂತೆ ಮಿನುಗುತ್ತಿರುವವು. ಜನರಲ್ಲಿ ವಾಚನಾಭಿವೃದ್ಧಿಯನ್ನು ಗೈಯುವ ವಾಚನಮಂದಿರಗಳು ಹಳ್ಳಿಗಳಲ್ಲಿ ಸಹ ಉದ್ಭವಿಸ ತೊಡಗಿವೆ. ಕಗ್ಗತ್ತಲೆಯಿಂದ ಆಚ್ಛಾದಿಸಿದ ಕರ್ನಾಟಕದಲ್ಲಿ ಈಗೀಗ ಪ್ರಭಾತಕಾಲದ ಕೆಂಗಿರಣಗಳು ಬೀಳಲುಪಕ್ರಮಿಸಿವೆ. ಇದಲ್ಲದೆ ದೇಶೋನ್ನತಿಯ ಮುಖ್ಯಸಾಧನವಾದ ಶಿಕ್ಷಣವನ್ನು ತಮ್ಮ ನಾಡಿನಲ್ಲಿ ಒಳ್ಳೇ ರಭಸದಿಂದ ಪಸರಿಸಬೇಕೆಂದು ಕನ್ನಡಿಗರು ಸ್ವತಃ ಬಂಡವಲ ಹಾಕಿ ಹೊಸ ಕಾಲೇಜಸ್ಥಾಪಿಸಲು ಪ್ರಯತ್ನಿಸ ಹತ್ತಿದ್ದಾರೆ. ಅದರಂತೆ ರಾಜಕೀಯ ವಿಷಯದಲ್ಲಿಯೂ ಮುಂದೆ ಬೀಳಬೇಕೆಂಬ ಮಹತ್ವಾಕಾಂಕ್ಷೆಯನ್ನು ಧರಿಸಿರುವರು. ಹೀಗೆ ಅನೇಕ ರೀತಿಯಿಂದ ನೋಡಿದರೂ, ಕನ್ನಡಿಗರಲ್ಲಿ ಸ್ವಲ್ಪ ಜಾಗ್ರತೆಯು ಉತ್ಪನ್ನವಾದಂತೆ ತೋರುತ್ತದೆ.

ಆದರೆ ಈ ಸಮಯದಲ್ಲಿ ಕನ್ನಡಿಗರು ದ್ವೇಷಾಗ್ನಿಯಲ್ಲಿ ಸಿಲುಕಿ ಸುಟ್ಟುಕೊಳ್ಳದೆ ಒಮ್ಮನಸಿನಿಂದ ನಡೆದು ದೇಶೋನ್ನತಿ ಮಾಡತಕ್ಕದು ವಿಹಿತವು. ಮತ್ತು ನಮಗೆ [illegible] ಮುಂದಿಟ್ಟುಕೊಂಡು [illegible] ಕರ್ನಾಟಕವನ್ನು ಒಕ್ಕಟ್ಟಿನ [illegible] ಗಟ್ಟಿಯಾಗಿ ಬಂಧಿಸಿ, ಹಿಂದುಸ್ಥಾನದಲ್ಲಿ ಕರ್ನಾಟಕ [illegible] ಮಾಡುವದು ಇಷ್ಟವು. [illegible] ಪ್ರಾರ್ಥಿಸುವೆನು.

[illegible]—

ನಾಣ್ಯಗಳು ಸಿಗುತ್ತಿದ್ದವೆಂದು ಹೇಳುತ್ತಾರೆ. ಒನಕೇಬೈಲಿನ ಹತ್ತರ ಒಂದು ಒನಕೇ ಹಿಡಿದ, ಹಾಗೂ ನೇಗಿಲು ಹೆಗಲಿಗೆ ಹಾಕಿದ, ದೇವರು ಇರುತ್ತದೆ. ಇದಕ್ಕೆ ಜನರು हातकांडे (भानकांडे ಎಂಬಂತೆ ಕೈಲೆಕುಟ್ಟುವವ ಎಂಬರ್ಥ ವಿರುವದು.) ಎನ್ನುವರು. ಇದು ಬಲರಾಮನ ಪ್ರತಿಮೆಯೇ ಸರಿ. (मुसलहस्त) ಒನಕೆ ಹಿಡಿದದರಿಂದ ಒನಕೇ ಬೈಲು ಎಂಬ ಹೆಸರು ಬಂದಿದೆ. ಈ ಊರ ಭೂಮಿಯಲ್ಲಿಯೇ ಮತ್ತೊಂದು ದೊಡ್ಡ ಕಲ್ಲು ಹುಗಿದಿದ್ದು. ಅದಕ್ಕೆ ಮಾಸ್ತೀ ದೇವರು ಎನ್ನುವರು ಇದಕ್ಕೆ ಸುಮಾರು ೨೦೦ ರೂಪಾಯಿ ಉತ್ಪನ್ನವಿರುವದು. ಮಾಸ್ತೀ ಅಂದರೆ ಮಹಾಸತಿ ಇರಬಹುದು. ಪತಿವ್ರತೆಯು ಸಹ ಗಮನ ಹೋದ ಸ್ಥಳವಿರಬಹುದು ಈ ನಾಲ್ಕೂ ಗ್ರಾಮುಗಳಿಗೆ ವತನದಾರ ಕುಲಕರ್ಣಿಯರು ಹಣಮಂತ ನರಸಿಂಹ ಹೆಬ್ಬಾಳ ಎಂಬವರೇ ಇದ್ದಾರೆ. ಈ ವೂರು ಸುಮಾರು ಸಾವಿರ ವರ್ಷದ ಹಿಂದಿನ ದಿರಬೇಕು.

—ಕಾವ್ಯಾನಂದ.—

ವಿನೋದಗಳು.

ರಾಮುಕೃಷ್ಣವೈಯ್ಯಾಕರಣಿಗಳು—ಏನರಿ ಕೋಶಪ್ಪಶಾಸ್ತ್ರಿಗಳೇ ಈ ಊರ ಹೆಂಗಸರು “ನೀರಿನ ಪಂಚೈತೆ ಅತಿ” ಅನ್ನುತ್ತಾರೆ. ಪಂಚೈತೆ ಇದು ಯಾವ ಜಾತಿಯ ಶಬ್ದ?

	ಶಾಲೆಯನ್ನು ಕಲಿಯಲು ಹೋಗುವೆ. ತಂದೆ ಅಪ್ಪಣೆ ಕೊಟ್ಟನು. ಮುಂದೆ ರಮೇಶನು ದಿನಾಲು ತಪ್ಪದೆ ರಾತ್ರಿ ಶಾಲೆಗೆ ಹೋಗಿ ಓದಲೂ, ಬರೆಯಲೂ, ಕಲಿತು ಜಾಣನಾದನು.	೭] ದಿನಾಲು ಅವನು ಎಲ್ಲಿಗೆ ಬರಹತ್ತಿದನು ? ೮] ಮುಂದೆ ಕಲಿತು ಏನು ಆದನು ?
ಪುನರಾವಲೋಕನೆ:-		[ಶಬ್ದದ ಚಿತ್ರಪಟ ಹಾಕಿ ಶಿಕ್ಷಕನು ಪ್ರಶ್ನೆ ಕೇಳುತ್ತ, ಪ್ರೌಢರಿಂದ ಶಬ್ದ ಬರೆಯಿಸುವದು.]
	ದನ	೧] ರಮೇಶನು ಏನು ಮಾಡುತ್ತಿದ್ದನು ? — ದನ " ಈ ಶಬ್ದವನ್ನು ಯಾರು ಬರೆಯುವಿರಿ ?
	ಮನೆ	೨] ರಮೇಶನು ಊಟಕ್ಕೆ ಎಲ್ಲಿ ಕುಳಿತನು ? ಮನೆ, ಊಟ ಈ ಶಬ್ದಗಳನ್ನು ಯಾರು ಬರೆಯುವಿರಿ ?
	ಊಟ	೩] ದಿನಾಲು ಎಲ್ಲಿಗೆ ಬರಹತ್ತಿದನು ?
	ಶಾಲೆ	—ಶಾಲೆ" ಈ ಶಬ್ದವನ್ನು ಯಾರು ಬರೆಯುವಿರಿ ?
	ಜಾಣ	೪] ರಮೇಶನು ಕಲಿತು ಏನು ಆದನು ? ಜಾಣ ಈ ಶಬ್ದವನ್ನು ಯಾರು ಬರೆಯುವಿರಿ ?

ಗೃಹಪಾಠ:— ಇಂದಿನ ಕಥೆಯನ್ನು [illegible] —

[illegible]



ಕರ್ನಾಟಕ ವಿದ್ಯಾವರ್ಧಕ ಸಂಘ ಧಾರವಾಡ.

* ನಗರ ಸಭೆ *

❊ ಹಿಂದಿನ ಸಂಚಿಕೆಯಿಂದ ಬಂದದ್ದು) (ಅನುವಾದಕರು:— ಬಿ. ಎ. ಸನದಿ, ಬೆಳಗಾವಿ.

❊ ಮುನಸಿಪಲ್ ಬೋರ್ಡಿನ ರಚನೆ

ನಮ್ಮ ದೇಶದಲ್ಲಿ ಈ ನಗರಸಭೆಯ ಪದ್ಧತಿ ಪ್ರಾರಂಭವಾಗಿ ಕೆಲವು ವರ್ಷಗಳಾದವು. ಇತ್ತಿತ್ತಲಾಗಿ ಮಾತ್ರ ಎಲ್ಲ ನಗರಗಳಲ್ಲಿಯೂ ಇಂಥ ಮುನಿಸಿಪಾಲಟಿಗಳ ರಚನೆಯಾಗಿ ಬಿಟ್ಟಿದೆ. ಈ ಮುನಿಸಿಪಲ್ ಬೋರ್ಡು [ಕಾರ್ಯಕಾರೀ ಮಂಡಳ] ಹೇಗೆ ರಚಿಸಲ್ಪಡುತ್ತದೆ ? — ಸಭೆಯ ಸದಸ್ಯರನ್ನು ಪ್ರೌಢ ನಾಗರಿಕರೆಲ್ಲ ಕೂಡಿ ಆರಿಸುವದು ರೂಢಿಯಾಗಿದೆ. ಇದಕ್ಕಾಗಿ ನಗರವನ್ನು ಕೆಲ ವಿಭಾಗಗಳನ್ನಾಗಿ ಮಾಡಲಾಗುತ್ತದೆ. ಈ ವಿಭಾಗಗಳಿಗೆ ಕ್ಷೇತ್ರ ಅಥವಾ ವಾರ್ಡ ಎನ್ನುತ್ತಾರೆ. ಪ್ರತಿಯೊಂದು ವಾರ್ಡಿನಿಂದ ಒಬ್ಬರು ಇಲ್ಲವೆ ಇಬ್ಬರು ಸದಸ್ಯರನ್ನು ಆರಿಸಲಾಗುತ್ತದೆ. ಈ ಚುನಾವಣೆಯನ್ನು ಆಯಾ ವಾರ್ಡಿನ ಜನರೇ ಮಾಡುತ್ತಾರೆ. ಚುನಾವಣೆಯ ಸಮಯ ಸಮೀಪಿಸಿದಾಗ ಪ್ರತಿಯೊಂದು ವಾರ್ಡಿನಲ್ಲಿ ಮತಾಧಿಕಾರವುಳ್ಳ ಜನರ ಲಿಸ್ಟ [ಪಟ್ಟಿ] ತಯಾರಿಸಲಾಗುತ್ತದೆ. ಈ ಸೂಚಿಪತ್ರವನ್ನು ಎಲ್ಲರೂ ನೋಡಲು ಅನುಕೂಲವಾದ ಸ್ಥಳದಲ್ಲಿ ತೂಗು ಹಾಕಲಾಗುತ್ತದೆ. ಈ ಪಟ್ಟಿಯಲ್ಲಿ ಯಾರದಾದರೂ ಹೆಸರು ಬಾರದಿದ್ದುದಾದರೆ, ಇಲ್ಲವೆ ಏನಾದರೂ ತಪ್ಪಾಗಿದ್ದರೆ ಜನ ನೋಡಿಕೊಳ್ಳಲಿಯೆಂದು ಹೀಗೆ ಮಾಡಿರುತ್ತಾರೆ, ಅಷ್ಟೆ ಒಂದು ವೇಳೆ ಏನೊಂದು ತಪ್ಪು ಕಂಡು ಬಂದರೆ ಚುನಾವಣೆಯ ಅಧಿಕಾರಿಗಳಿಗೆ ನಿವೇದಿಸಿದರೆ ಅದನ್ನು ತಿದ್ದಲಾಗುತ್ತದೆ.

ಇಲ್ಲಿಯವರೆಗೆ ೨೧ ವರುಷ ವಯಸ್ಸಾದ ಪುರುಷನಿಗಾಗಲೀ, ಸ್ತ್ರೀಗಾಗಲೀ, ಹೊಲಮನೆ ಇಲ್ಲವೆ ಯಾವುದಾದರೂ ಕರದ ಆಧಾರದಿಂದ ಮುನಿಸಿಪಾಲಟಿಯ ಮತದಾರ ಅಥವಾ ಸದಸ್ಯರಾಗುವ ಅಧಿಕಾರವಿರುತ್ತಿತ್ತು. ಆದರೆ ಭಾರತವು ಸ್ವತಂತ್ರವಾದ ತರುವಾಯ ಸಿದ್ಧವಾದ ಹೊಸ ನಿಯಮಗಳಿಗನುಸಾರವಾಗಿ ಮೊದಲಿನ ನಿಬಂಧನೆಗಳು ತೊಲಗಿ ಕೇವಲ ೨೧ ವರುಷ - ವಯಸ್ಸಿನ ನಿಬಂಧನೆಯೊಂದೇ ಉಳಿದಿದೆ. ಇದರರ್ಥವಿಷ್ಟೆ, — ೨೧ ವರುಷಕ್ಕೆ ಮೇಲ್ಪಟ್ಟವರು ಮತವನ್ನು ಕೊಡಬಲ್ಲರು ಮತ್ತು ನಗರಸಭೆಯ ಸದಸ್ಯರಾಗಲೂ ಚುನಾವಣೆಯ ರಂಗಕ್ಕೂ ಇಳಿಯಬಲ್ಲರು.

ಚುನಾವಣೆಯ ಕಾಲ ಸಮೀಪ ಬಂದಾಗ ಸದಸ್ಯತ್ವಕ್ಕಾಗಿ ಸ್ಪರ್ಧಿಸುವ ಉಮೇದವಾರರ ಹೆಸರುಗಳನ್ನು ತಿಳಿಸಲಾಗುವದು. ಆ ಹೆಸರುಗಳು ಮತದಾರರ ಸೂಚೀಪತ್ರದಲ್ಲಿ ಬಂದವುಗಳೇ ಆಗಿರಬೇಕು. ಯಾವೊಂದು ವಾರ್ಡಿ (ಕ್ಷೇತ್ರ)ನಿಂದ ಒಬ್ಬರಿಗಿಂತ ಹೆಚ್ಚು ಉಮೇದವಾರರ ಹೆಸರು ಬಂದರೆ ಅಲ್ಲಿ ಸ್ಪರ್ಧೆ ನಡೆದು ಚುನಾವಣೆ ಮಾಡಲೇಬೇಕಾಗುವದೆಂದು ತಿಳಿಯಬೇಕು. ಅಂಥ ವೇಳೆಯಲ್ಲಿ ಆ ವಾರ್ಡಿನವರು ಯಾವ ವ್ಯಕ್ತಿಯನ್ನು ಹೆಚ್ಚಾಗಿ ಸೇರುತ್ತಾರೆ ಎಂಬುದನ್ನು ತಿಳಿದುಕೊಳ್ಳುವದಕ್ಕಾಗಿ ಮತದಾರರ ಸೂಚೀ ಪತ್ರದಲ್ಲಿದ್ದ ಜನರ ಅಭಿಪ್ರಾಯ ಕೇಳುತ್ತಾರೆ. ಈ ಅಭಿಪ್ರಾಯಕ್ಕೇ ನಾವು "ಮತ" ಎಂದೂ ಇಂಗ್ರೇಜಿಯಲ್ಲಿ "ವ್ಹೋಟ" ಎಂದೂ ಕರೆಯುತ್ತಾರೆ. ಮತ್ತು ಈ ಮತಗಳನ್ನು ಕೊಡುವವರಿಗೆ "ಮತದಾರ" ರೆಂದು ಕರೆಯುತ್ತಾರೆ. ಮತಗಳನ್ನು ಗುರುತು ಹಾಕಿ ಕೊಡುವ ಕಾಗದಕ್ಕೆ 'ಬ್ಯಾಲೆಟ್‌ಪೇಪರ' ಅಂದರೆ "ಮತದಾನ ಪತ್ರ" ವೆಂದು ಕರೆಯುತ್ತಾರೆ. ಮತದಾನ ಪತ್ರದ ಒಂದು ಬದಿಗೆ ಉಮೇದವಾರರ ಹೆಸರುಗಳಿರುತ್ತವೆ, ಇನ್ನೊಂದು ಬದಿಗೆ ಬರಿಯ ಸ್ಥಳವಿರುತ್ತದೆ. ಈ ಬರಿದಾಗಿದ್ದ ಸ್ಥಳದ ಮೇಲೆಯೇ ತಮಗೆ ಬೇಕೆನಿಸಿದ ಉಮೇದವಾರನ ಹೆಸರಿಗೆದುರಾಗಿ ಅಧಿಕ ಇಲ್ಲವೆ ಗುಣಾಕಾರ [ಕತ್ರಿ] ಚಿಹ್ನ ಹಾಕಿ ಒಂದು ಪೆಟ್ಟಿಗೆಯಲ್ಲಿ ಹಾಕಬೇಕಾಗುತ್ತದೆ. ಈ ಪೆಟ್ಟಿಗೆಯನ್ನು ಪೋಲಿಂಗಸ್ಟೇಶನ್ (ಮತದಾನ ಕೇಂದ್ರ) ದಲ್ಲಿ ಮೊದಲೇ ಇಟ್ಟಿರುತ್ತಾರೆ. ಜನರೆಲ್ಲ ತಮ್ಮ ಮತಗಳನ್ನು ಕೊಡಲು ಒಂದೆಡೆ ಕೂಡುವ ಸ್ಥಳಕ್ಕೇನೇ "ಪೋಲಿಂಗ ಸ್ಟೇಶನ್" ಎಂದು ಕರೆಯುತ್ತಾರೆ. ಈ ಇಡಿಯ ಕಾರ್ಯನಿರ್ವಹಣೆಗೆ ಇಲೆಕ್ಶನ್, ಚುನಾವಣೆ, ನಿರ್ವಾಚನ - ಇತ್ಯಾದಿಯಾಗಿ ಕರೆಯುತ್ತಾರೆ. ಚುನಾವಣೆಯ ನಂತರ ಪ್ರತಿಯೊಬ್ಬ ಸ್ಪರ್ಧಾಳುವಿಗೆ ದೊರೆತ ಮತಗಳನ್ನು ಪ್ರತ್ಯೇಕವಾಗಿ ಎಣಿಸುತ್ತಾರೆ. ಯಾರಿಗೆ ಹೆಚ್ಚು - ಹೆಚ್ಚಾಗಿ ಮತಗಳು ದೊರಕಿರುತ್ತವೆಯೋ, ಅವರೇ ಯಶಸ್ವಿಯಾದರೆಂದು ಗಣಿಸಲಾಗುತ್ತದೆ.

ಓದು ಬಾರದವರಿಗೂ ಮತದಾನಕ್ಕಾಗಿ ತಿಳಿಯಲೆಂದು ಇನ್ನೊಂದು ಪದ್ಧತಿಯೂ ಇದೆ. ಮತದಾನ ಕೇಂದ್ರ [ಪೋಲಿಂಗ ಸ್ಟೇಶನ್] ಗಳಲ್ಲಿ— ಒಂದು ಕೋಣೆಯಲ್ಲಿ ಉಮೇದವಾರರ ಮತ ಪೆಟ್ಟಿಗೆಗಳನ್ನು ಬೇರೆಬೇರೆ ಇಡಲಾಗುತ್ತದೆ. ಉಮೇದವಾರರಿಗೆ ಅವರವರ ಪೆಟ್ಟಿಗೆಯ ಬಣ್ಣ ಬೇರೆ ಬೇರೆ ತಿಳಿಸಲಾಗಿರುತ್ತದೆ. ಅವರು ಮತದಾರರೆಲ್ಲರ ಮುಂದೆ ತಮ್ಮ ತಮ್ಮ ಪೆಟ್ಟಿಗೆಗಳ ಬಣ್ಣಗಳನ್ನು ಹೇಳಿ ಹೆಚ್ಚೆಚ್ಚು ಮತಗಳು ದೊರಕುವಂತೆ ಪ್ರಚಾರಕಾರ್ಯ ಮಾಡುತ್ತಾರೆ. ಚುನಾವಣೆಯ ದಿನ ಉಮೇದವಾರರ ಪರವಾಗಿ ಕಾರ್ಯ ಮಾಡುವ ಜನರು "ಕೆಂಪು ಪೆಟ್ಟಿಗೆಯಲ್ಲೇ ನಿಮ್ಮ ಮತ ಹಾಕಿರಿ." "ಹಸಿರು ಪೆಟ್ಟಿಗೆಯಲ್ಲೇ ಮತ ಹಾಕಿರಿ." ಇತ್ಯಾದಿಯಾಗಿ ಕೂಗುವದನ್ನು ನೀವು ಕೇಳಿರಬಹುದು. ಆಗ್ಗೆ ಆ ಮತದಾರರಿಗೆ ತಮ್ಮ

ಉಮೇದವಾರನ ಮತಪೆಟ್ಟಿಗೆಯ ಬಣ್ಣ ತಿಳಿಯಬೇಕೆಂದೂ, ಅವರು ಅದನ್ನೇ ನೆನಪಿಟ್ಟು ಮತ ಹಾಕಬೇಕೆಂದೂ ಮಾಡಲಾಗುತ್ತದೆ.

ಮತ ಹಾಕುವ ಸಮಯ ತೀರಿದೊಡನೆಯೇ ಆ ಪೆಟ್ಟಿಗೆಗಳನ್ನೆಲ್ಲ ಭದ್ರಗೊಳಿಸಿ ಚುನಾವಣೆಯ ಅಧಿಕಾರಿಯ ಕಡೆಗೆ ಕಳಿಸಲ್ಪಡುತ್ತವೆ. ಅಲ್ಲಿ ಒಂದೊಂದೇ ಬಣ್ಣದ ಪೆಟ್ಟಿಗೆಗಳನ್ನೂ ಬೇರೆ ಬೇರೆಯಾಗಿ ಒಡೆದು ನೋಡುತ್ತಾರೆ. ಯಾವ ಬಣ್ಣದ ಪೆಟ್ಟಿಗೆಯಲ್ಲಿ ಹೆಚ್ಚು ಮತಪತ್ರಗಳು ಬಿದ್ದುದು ಕಂಡು ಬರುತ್ತದೆಯೋ ಆ ಪೆಟ್ಟಿಗೆಯ ಉಮೇದವಾರನೇ ಜಯಶಾಲಿಯಾದಂತೆ!

ವಿದೇಶಿಯ ಸಾಮ್ರಾಜ್ಯವಾದಿಗಳು ಭಾರತೀಯರಲ್ಲಿ ಭೇದಭಾವ ಕಲ್ಪಿಸಿ ತಾವು ರಾಜ್ಯವಾಳುವ ನೀತಿ ಸಾಧಿಸಿದರೆಂಬುದು ನಿಮಗೆ ಗೊತ್ತಿದ್ದ ಮಾತಾಗಿದೆ. "ಬಡಿದಾಟ ಹಚ್ಚಿ ನ್ಯಾಯ ತೀರಿಸುವದು" ಅವರ ರಾಜ್ಯನೀತಿಯಾಗಿತ್ತು. ದೇಶದ ಪ್ರತಿಯೊಂದು ಕಾರ್ಯ ಮತ್ತು ಶಾಸನದ ವ್ಯವಸ್ಥೆಯ ರೀತಿ ಸಾಂಪ್ರದಾಯಿಕ ಮತ್ತು ಮತಭೇದಗಳ ಮೇಲೆಯೇ ಅವಲಂಬಿಸಿತ್ತು. ಚುನಾವಣೆಗಳ ಸಮಯದಲ್ಲಂತೂ ಒಡಕಿನ ಬೇರು ಇನ್ನೂ ಆಳವಾಗಿ ಇಳಿಯುತ್ತಿತ್ತು. ಮತಭೇದ ಮತ್ತು ದ್ವೇಷಗಳ ಹೊಸ ಹೊಸ ಶಾಖೆಗಳಾಗುತ್ತಿದ್ದವು. ಮುಸಲ್ಮಾನರು ತಮ್ಮ ಸದಸ್ಯನನ್ನು ತಾವೇ ಆರಿಸುತ್ತಿದ್ದರು. ಅಂಥ ಮುಸಲ್ಮಾನ ಉಮೇದವಾರ ಹಿಂದುಗಳ ಹಿತರಕ್ಷಕನಾಗಿದ್ದರೂ ಹಿಂದುಗಳು ಅವನಿಗೆ ಮತ ಹಾಕುವಂತಿರಲಿಲ್ಲ. ಹೀಗಾಗಿ ಮುಸಲ್ಮಾನ ಮತ್ತು ಶೀಖ ಜನ ತಮ್ಮ ಧರ್ಮದವರಿಗೇ ಮತ ಕೊಡಬೇಕಾಗುತ್ತಿತ್ತು.

ಬರ ಬರುತ್ತ ಈ ರೋಗ ಅತಿಯಾಗಿ ಬೆಳೆದು ಮುಂದೆ ನಮ್ಮ ದೇಶವು ಎರಡು ತುಂಡುಗಳಾಗಿ ವಿಭಜಿಸಲ್ಪಡುವದಾಯಿತು. ಒಂದೆಡೆ ಹಿಂದುಸ್ತಾನ, ಇನ್ನೊಂದೆಡೆ ಪಾಕಿಸ್ತಾನ! ದೇವರ ದಯೆಯಿಂದ ಈ ರೋಗ ಇಂದು ಮಾತ್ರ ಮಾಯವಾದಂತಿದೆ. ಇಂದು ಎಲ್ಲ ನಗರವಾಸಿಗಳಾಗಲಿ, ವಾರ್ಡಿನವರಾಗಲಿ, ಪರಸ್ಪರ ಕೂಡಿಕೊಂಡು ತಾವು ಬಯಸಿದ ಉಮೇದವಾರನಿಗೇ ಮತ ಕೊಡಬಹುದಾಗಿದೆ. ಅಂತೆಯೇ ಕವಿಯ ವಿಚಾರವೂ ಸತ್ಯವೆನಿಸುವಂತಿದೆ.

ಹಿಂದು--ಕ್ರಿಶ್ಚನ್, ಶೀಖ--ಮುಸಲಮಾನ
ಎಲ್ಲರು ಇಹರಿದೋ— ಬಂಧು ಸಮಾನ!

(ಮುಂದೆ ಸಾಗುವದು.)

★ ನಿರಕ್ಷರಿ ಜೀವನದ ಕಥೆ

ಲೇಖಕರು:— ಶ್ರೀ. ಮಂ. ವೆ. ನಾಯ್ಕ, [illegible]
[[illegible]] [illegible]

ನನ್ನ ಹೆಸರು ಮಂಗೇಶಾ. ನಾನು ಚಿಕ್ಕವನಿರುವಾಗಲೇ ನನ್ನ ತಂದೆ ತೀರಿಹೋದರು. ನಾನಿರುವದೊಂದು ಸಣ್ಣ ಹಳ್ಳಿ. ನಾನು ಅನಾಥ. ನನ್ನ ಹಳ್ಳಿಯಾದರೂ ನನ್ನಂತೆಯೇ ಅನಾಥವಿತ್ತು. ಅದನ್ನು ಕಣ್ಣೆತ್ತಿ ನೋಡುವವರಿಲ್ಲಾ. ಒಬ್ಬಿಬ್ಬರು ಸಾವುಕಾರರಿದ್ದರೆ ತಮ್ಮದನ್ನೆ ತಾವು ನೋಡುವರು. ಆಗ ನನಗೆ ೧೪ ವರ್ಷ ವಯಸ್ಸಾಗಿತ್ತು. ಮನೆಯಲ್ಲಿ ಮುದುಕಿಯಾದ ತಾಯಿ ಮತ್ತು ಮೂರು ಜನ ತಂಗಿಯರಿದ್ದರು. ಈ ಎಲ್ಲರ ಹೊಟ್ಟೆ ಹೊರೆಯುವ ಭಾರ ನನ್ನ ತಲೆಯ ಮೇಲೆ ಬಿದ್ದಿತು. ನಮ್ಮ ಕೆಲವು ಭೂಮಿ ಕಂಚು ತಾಮ್ರಗಳೆಲ್ಲಾ ತಂದೆ ಸಾಲ ತೆಗೆದುಕೊಂಡಿದ್ದ. ಎಂಥಾ ಸಾವುಕಾರರು ಕರಾರ ನೋಟು ಈ ವಿದ್ಯೆ ಇಲ್ಲದ ನಿರಕ್ಷರಿಗೆ ತೋರಿಸಿ ಎಲ್ಲವನ್ನು ತಮ್ಮ ವಶಕ್ಕೆ ಪಡೆಕೊಂಡರು. ಹೀಗಾಗಿ ಸಂಸಾರ ಚರಿತಾರ್ಥ ಸಾಗಿಸಿಕೊಳ್ಳಲು ಆ [illegible] ಕೇಳಲಾಗಿ ನನಗೆ ಎಲ್ಲರೂ ಹೆಂಡದ ಉದ್ಯೋಗ ಹಿಡಿಯೆಂದರು. ಅದನ್ನೇ ಹಿಡಿದೆ. ಕೆಲವು ದುಡ್ಡಿಗೆ ಹಣ ಸಂಪಾದಿಸಿದ ನನಗೆ ೨೪ ವರ್ಷ ವಯಸ್ಸು ತುಂಬಿತು. ಅದೇ ಹಳ್ಳಿಯ ಒಬ್ಬ ಬಡವನ ಮಗಳ ಮದುವೆಯಾದೆ. ಹೆಂಡದ ಉದ್ಯೋಗ [illegible] ಸಾಗಿತು. ನಾನು ಸದ ಕುಡಿಯಲಿಕ್ಕೆ ಕಲಿತೆ. ಮನೆಗೆ ಹೋದರೆ ಮನೆ ತುಂಬ ಜಗಳ. ಮುದುಕಿಯಾದ ನನ್ನ ತಾಯಿ ನನ್ನ ನಡತೆ [illegible] ಇರುತ್ತಿದ್ದಳು. ಹಗಲೆಲ್ಲ ಅತ್ತೆ ಸೊಸೆಯರ ಜಗಳ, ಮನೆ ತುಂಬ ಹೀಗಾಗಿ ಸಂಸಾರದಲ್ಲಿ ಗೊಂದಲ. ಕುಡಿಯುವ ಚಟ ಹೆಚ್ಚಿಗೆಯಾಗಿ [illegible] ಹೊಡೆದು ತಂದ ಹೆಂಡತಿ ತವರ ಮನೆಗೆ ಹೋದಳು. [illegible] ಇವೆಲ್ಲವನ್ನು ಅಡವಿಟ್ಟೆ ಪುನಃ [illegible] ಅವರಿಂದ [illegible] ಲಾಭವಷ್ಟು ಈ ಎಲ್ಲಾ [illegible] ಸಂಪಾದಿಸಿದ್ದರೂ [illegible] ಹುಟ್ಟುತ್ತಿದ್ದಿಲ್ಲಾ. ನಾನು [illegible] ಮಾನವತಿಯರು [illegible] ಕಂಡು ಬಂದರಲ್ಲದೆ, [illegible] ಇಲ್ಲಾ. ನನ್ನನ್ನು

ಬೆಳಿಸಿದ ನನ್ನ ಹಳ್ಳಿಯಲ್ಲಾದರೂ ನನ್ನ ಸ್ಥಿತಿ ನೋಡುವವರಿದ್ದಿಲ್ಲ. ಅಬ್ಬಾ ಹಾ, ಹಾ, ಜಗತ್ತಿನ ಕಠೋರ ಹೃದಯವೇ ಎಂದೆಣಿಸಿದಾಗ ನನಗೆ ಮೈ ರೋಮಗಳೆಲ್ಲಾ ಈಶ್ವರನ ನೇತ್ರದಂತೆ ಉರಿದೇಳುತ್ತಿತ್ತು. ಕುಡುಕನಾದೆನೆಂದು ನನ್ನನ್ನು ನಿಂದಿಸುವ ಅವರ ಕುಬುದ್ಧಿ ನಿರ್ದಯತೆಗಳನ್ನು ಶಿಕ್ಷಿಸುವರು ಯಾರೂ ಇಲ್ಲೆ ಇಂಥ ದುರ್ದಸೆಯಲ್ಲಿದ್ದಾಗ ಸ್ವಹಿತ ಪರ ಹಿತಗಳ ಬಗ್ಗೆ ಹೇಗೆ ವಿಚಾರ ನನ್ನಲ್ಲಿ ಮಾಡಬಲ್ಲದು. ಅಥವಾ ಯಾಕೆ ಮಾಡಬೇಕು. ಆದರೆ ದೇವರು ದೊಡ್ಡವನೆಂಬುದು ಸುಳ್ಳಲ್ಲ. ನನ್ನ ಗೆಳೆಯರೊಬ್ಬರು ಶ್ರೀ. ಸಿದ್ಧಿವಿನಾಯಕ ವಿದ್ಯಾಲಯದಿಂದ ಕಲಿತು ಬಂದಿದ್ದರು. ಅವರು ಬಡ ಕುಟುಂಬಿಕರು. ಟೇಲರಿಂಗ ಕೆಲ್ಸ ಕಲಿತ್ತಿದ್ದರು. ಅವರು ಸ್ವತಃ ಶ್ರೀ. ಆನದಿ ಟೇಲರಿಂಗ ಫರ್ಮ ಎಂದು ಒಂದು ಅಂಗಡಿ ತೆರೆದು ಸ್ವಂತ ಹೊಲಿಗೆ ಕೆಲ್ಸ ಮಾಡುತ್ತಿದ್ದರು. ನಾನು ಒಂದು ದಿವ್ಸ ಅವರಲ್ಲಿ ಹೋದೆನು. ಅವರು ನನ್ನ ಸರ್ವಸಂಗತಿಯನ್ನು ಕೇಳಿಕೊಂಡರು. ಅವರು ನನ್ನನ್ನು ಅಲ್ಲಿಯೇ ಇಟ್ಟುಕೊಂಡು ಸಣ್ಣ ವ್ಯಾಪಾರ ಹಚ್ಚಿಕೊಟ್ಟರು. ತನ್ನ ಜೊತೆಗೆ ಕರಕೊಂಡು ತಿರುಗಾಡಿದರು. ರಾತ್ರಿಗೆ ರಾಮಾಯಣ ಮಹಾಭಾರತ, ಇತ್ಯಾದಿ ಓದುವರು. ನನಗೆ ಗಾಂಧಿಜೀ ಜವಾಹರಲಾಲ ಇವರ ಕಥೆ ಹೇಳುವದು. ಹೀಗೆ ಕೆಲವು ಕಾಲ ಕಳೆದೆವು. ಮೂರೇ ತಿಂಗಳಲ್ಲಿ ಗಳಿಸುವ ಶಕ್ತಿ ಪಡೆದೆ. ಕೊನೆಗೆ ಅವರು ರಾತ್ರೆ ಶಾಲೆ ತೆರೆದರು. ನಾನೂ ಕಲಿಯಲು ಪ್ರಾರಂಭಿಸಿದೆ. ಅಕ್ಷರ ಜ್ಞಾನ ಮಾಡಿಕೊಂಡೆ ಇಷ್ಟಾಗಿ ಇಂದಿಗೆ ೫ ವರ್ಷಗಳಾದವು. ನಿರಕ್ಷರಿ ಕತ್ತಲೆಯನ್ನು ಕಳೆದು ಸಾಕ್ಷರಿ ಬೆಳಕನ್ನು ಸಂಪಾದಿಸಿದೆ. ಈಗ ನನಗೆ ಸ್ವಪರ ಹಿತದ ಜ್ಞಾನವಾಗಿದೆ. ನನ್ನ ಹಳ್ಳಿಯ ಇತರ ಸಂಗತಿ ಬಗ್ಗೆ ಕನಿಕರ ಹುಟ್ಟುತ್ತಿದೆ. ನನ್ನ ತಾಯಿ, ಹೆಂಡತಿ, ತಂಗಿ, ಇವರನ್ನೆಲ್ಲ ನಿರಕ್ಷರತ್ವದಲ್ಲಿ ದೂರ ಮಾಡಿ ಸಂತೋಷದಲ್ಲಿ ಚರಿತಾರ್ಥ ಸಾಗಿಸಿಕೊಂಡು ಇದ್ದೇನೆ. ಸಮಾಜ ಜೀವನವನ್ನು ದೇವರು ಮಾಡಿದಲ್ಲಿ ಮನುಷ್ಯರೇ ಮಾಡಿಕೊಂಡದ್ದು ಹಾಗಿರುವಾಗ ಅಲ್ಲಿ ಕಾಣುವ ನ್ಯಾಯ ನ್ಯಾಯಗಳಿಗೆ ಸಾಮಾಜಿಕರೇ ಹೊಣೆಗಾರರು. ಸ್ವತಂತ್ರ ಹಿಂದುಸ್ತಾನದ ನಾಗರಿಕರು ಈ ಮಾತನ್ನು ಮುಂದಿಟ್ಟು ಈ ಹೀನ ಕಥೆಯನ್ನು ಬೆಳಕಿಗೆ ಬೀರಿದೆ. ನನ್ನ ಗೆಳೆಯರು ಪ್ರೌಢ ಶಿಕ್ಷಣ ಸಾಮಾಜಿಕ ಶಿಕ್ಷಣ, ಲೋಕ ಶಿಕ್ಷಣ, ಜನತಾ ಶಿಕ್ಷಣ ಇವೆಲ್ಲ ಹಳ್ಳಿಯಲ್ಲಿ ಪ್ರಚಾರ ಮಾಡುತ್ತಿದ್ದಾರೆ. ಬೆಳಕು ಕಲಿಯುವಲ್ಲಿದೆ. ಕಲಿತ ಹೆಣ್ಣು ದೇಶದ ಕಣ್ಣು ಗೆಳೆಯರೇ ಕಲಿತು ಕಲಿಯದೇ ಇದ್ದವರಿಗೆ ಕಲಿಸಿರಿ. ಈ ಜನತಾ ರಾಜ್ಯದಲ್ಲಿ ಜನತಾ ಶಿಕ್ಷಣ ಅಂದೋಲನವನ್ನು ಮಳೆಯಂದದಿ ಸುರಿಸಬೇಕಾಗಿ ನನ್ನ ವಿನಂತಿ. ನಾನು ಕಂಡ ಕತ್ತಲೆ ಬೆಳಕಿಗೆ ತರುವ ಸಾಹಸ ಮಾಡಿದೆ. ಗೆಳೆಯರೇ ನನ್ನನ್ನು ಕ್ಷಮಿಸಿರಿ.

"ನೆನಪಿಗಾಗಿ"

ಮಾದಪ್ಪನವರು ಶಿವನಹಳ್ಳಿಯಲ್ಲಿಯ ಶಿಕ್ಷಕರು. ಅವರ ಹೆಂಡತಿ ಚೆನ್ನಕ್ಕನವರು. ಮಾದಪ್ಪನವರಿಗಿದ್ದ ತೀರ ಚಿಕ್ಕ ಸಂಬಳದಲ್ಲಿಯೇ ಆ ಇಬ್ಬರೂ ದಂಪತಿಗಳು ಹಾಯವಾಗಿದ್ದಾರು. ಆದರೆ ಅವರಿಗೊಂದು ಚಿಂತೆ ಮಕ್ಕಳಿಲ್ಲದ್ದು. ಅದಕ್ಕಾಗಿ ಅಕ್ಕರೆಯಿಂದ ಆಕಳೊಂದನ್ನೀಗ ಸಾಕಿದ್ದರು. ದೊಡ್ಡ ಊರಿನಲ್ಲಿದ್ದಾಗ ಸಾಕಿದ ಚೆಂದವಾದ ನಾಯಿ ಒಂದಿತ್ತು.

ಈ ಚೆಂದವಾದ ನಾಯಿ ಸಹಿತ ಸಂಜೆಗೆ ದಂಪತಿಗಳಿಬ್ಬರೂ ಹವೆಗಾಗಿ ಹೊರಡುವದು ವಾಡಿಕೆಯ ಮಾತು.

ಒಂದು ದಿನ ಹೀಗೆ ತಿರುಗಾಡಿಕೊಂಡು ಬರುವಾಗ ನಾಯಿ ಚೆಲ್ಲಾಟಕ್ಕೆ ಬಿತ್ತು. ಮಾಸ್ತರರು ಹಿಂದೆ ಅದರೊಡನೆ ಓಡಿದರು. ತುಸು ಮುಂದೆ ಬಂದು, ದಾರಿ ಬಳಿಯೆಲ್ಲಿದ್ದ ಬಾವಿಯ ಕಟ್ಟೆಗೆ ಕುಳಿತು ಅವರ ಬರುವಿಕೆಗಾಗಿ ಆತುರಗೊಂಡಿದ್ದರು ಚೆನ್ನಕ್ಕನವರು.

ಆಗ ಸಣ್ಣಾಗಿ ದನಿಯೊಂದು ಕಿವಿಗೆ ಬಿತ್ತು. ಅದು ದುಃಖದ್ದೆಂದು ತಿಳಿಯದಿರಲಿಲ್ಲ. ಈ ಹೊತ್ತಿನಲ್ಲಿ ಯಾರು ಅಳುತ್ತಿರಬಹುದೆಂದು, ಇಣಕಿ ನೋಡಿದರು. ಕೂಡಲೇ ಧಾವಿಸಿ ಭಾವಿಯಲ್ಲಿಳಿದರು. ಆಗ [illegible] ಹರೆಯದ ಹೆಣ್ಣು ಮಗಳೊಬ್ಬಳು ಇವರನ್ನು ಕಂಡು ಅಳು ನಿಲ್ಲಿಸಿ [illegible], ನೀರಲ್ಲಿ ಹಾರಿಕೊಂಡೇ ಬಿಟ್ಟಳು.

ಅಕ್ಕನವರು ಗಡಬಡಿಸಿ [illegible] ತನ್ನ ಪತಿಯನ್ನು ಕೂಗಿದರು. ಗಾಬರಿಯಿಂದ [illegible] ಬಂದರು. ಮಾಸ್ತರರು ಸರಸರನೆ ಇಬ್ಬರೂ ಸೋಪಾನ ಇಳಿದರು. ಮಾಸ್ತರರು ತಮ್ಮ [illegible] ನೀರು ಗುಟುಕರಿಸುತ್ತಿದ್ದ ಹೆಣ್ಣು ಮಗಳಿಗೆ [illegible] ಅವಳು ಹಿಡಿಯುದನ್ನು ಕಂಡು [illegible] ದಿಂದ ಕುಡಿದ ನೀರು [illegible]. ಒದ್ದೆ ಅರಿವೆಯ ಬಟ್ಟೆಗಳಿಂದ [illegible]. ಚೆನ್ನಕ್ಕನವರು [illegible] ಕುಡಿಸಿದರು. ತುಸು [illegible].

ಒಂದು ತಾಸಿನ ಮೇಲೆ ಚೇತರಿಸಿಕೊಂಡು ತಾನೇ ಎದ್ದು ಕುಳಿತಿದ್ದ ಕರೆಮ್ಮನಿಗೆ ಕೇಳಿದರು. ಚೆನ್ನಕ್ಕ "ಯಾಕಮ್ಮ ಸಾವಿಗೆ ತುತ್ತಾಗುವ ವಿಚಾರ" ಎಂದು ಕರೆಮ್ಮ ತನ್ನ ನೊಂದ ಮನ ಬಿಚ್ಚಿದಳು. ಚೆನ್ನಕ್ಕ ಕರುಣೆಯಿಂದ ಕೇಳಿಕೊಂಡು ಹೇಳಿದರು. ಸವಿ ನುಡಿಗಳಿಂದ ತಿಳುವಳಿಕೆಯನ್ನು ತಮ್ಮ ಅನುಭವದೊಂದಿಗೆ, ಆಲಿಸಿ ಕರೆಮ್ಮನ ಮನ ಹಗುರಾಯಿತು.

ಚೆನ್ನಕ್ಕ ತಮ್ಮ ಪತಿಯನ್ನು ಕರೆದು ಕರೆಮ್ಮನ ಗಂಡನನ್ನು ಕರೆತರಲು ಹೇಳಿದರು.

ಮಾಸ್ತರರು ಕಗ್ಗತ್ತಲೆಗೆ ಬೆಳಕಾಗಿ ಕತ್ತಲೆಗೆಂದು ಕಂದೀಲು ತಕ್ಕೊಂಡು ಹೋಗುವದರಲ್ಲಿ ಅವಳ ಮನೆಯಲ್ಲಿ "ಗೋಳೋ" ಎಂದೆಲ್ಲರು ದುಃಖಿಸುತ್ತಿದ್ದರು. ಕೆಲವರು ಕೆರೆ ಹಳ್ಳ ಭಾವಿ ಹುಡುಕಾಡುಲು ಹೋಗಿದ್ದರು. ಎಂಬುದು ತಿಳಿಯಿತು. ಮಾಸ್ತರರು "ಅಳಬೇಡಿರಿ ಕರೆಮ್ಮ ಜೀವಂತನಿದ್ದಾಳೆಂದು" ಹೇಳಲು ಮನೆ ತುಂಬಿದ ದುಃಖ ಮೆಲ್ಲನೆ ನಿಂತು, ಮಾಸ್ತರರು ನಡೆದೆಲ್ಲ ಸಂಗತಿ ಹೇಳಿ ಅವರಿಂದ ಕಾರಣ ಕೇಳಿಕೊಂಡು, ನಾಲ್ಕು ತಿಳುವಳಿಕೆಯ ಮಾತು ಹೇಳಿ ಅವಳ ಪತಿಯನ್ನು ತಮ್ಮ ಮನೆಗೆ ಕರೆದು ತಂದರು.

ಆ ನೊಂದ ಮನದ ದಂಪತಿಗಳಿಗೆ ಉಣಿಸಿ ತಾವಿಬ್ಬರೂ ಅವರಿಗೆ ಸಮಾಧಾನದ ಮಾತು ಹೇಳಿದರು. ಆ ನೊಂದ ಮನವೀಗ ಆನಂದಗೊಂಡ ಗಂಡ ಹೆಂಡತಿ ಇಬ್ಬರೂ, ಪ್ರಾಣ ಉಳಿಸಿದ ಆ ದಂಪತಿಗಳಿಗೆ ಪಾದಕ್ಕೆರಗಿ ತಮ್ಮ ಮನೆಗೆ ಮರಳಿದರು.

ಈಗ ಕರೆಮ್ಮ, ಚೆನ್ನಕ್ಕನವರಲ್ಲಿಗೆ ಆಗಾಗ ಬರುತ್ತಿರುವದು ಸಹಜ. ಅಂತು ಒಮ್ಮೆ ಬಂದಾಗ ಕರೆಮ್ಮ ಕೇಳಿದಳು. ಅಂದು ನೀವು ನನಗೆ ಸಮಾಧಾನ ಹೇಳುವಾಗ ಅಂದಿರಿ ನನ್ನಂತೆ ನೀವು ಗಂಡನಿಗೆ ವಾದಿಸುತ್ತಿದ್ದಿರೆಂದೂ ಹಟಮಾರಿಗಳಾಗಿದ್ದಿರೆಂದೂ ಹೇಳಿದಿರಿ. ಆದರೆ "ಇಂದಿನ ಈ ಚೆಂದ ಬಾಳುವೆ ನಿಮಗೆ ಬರಬೇಕಾದರೆ ನೀವು ಯಾವ ದೇವರಿಗೆ ನಡಿದುಕೊಂಡಿರಿ. ಇಲ್ಲವೆ ಏನು ಹರಿಕೆ ಹೊತ್ತಿದ್ದಿರಿ" ಎಂದಳು.

ಅದಕ್ಕೆ ಚೆನ್ನಕ್ಕ ಹೇಳಿದರು. "ನಾನೂ ಬಹಳ ಹಟಮಾರಿಯೂ, ಪತಿಗೆ ವಾದಿಸುವವಳೂ" ಆಗಿದ್ದೆನು. ಮೇಲಾಗಿ ಹಳ್ಳಿಯಾಕೆ ಅಂದ ಮೇಲೆ ಕೇಳುವದೇನು ನನ್ನ ಅಬ್ಬರ? ಮುಂದೆ ನಾನು ಹಾದಿಗೆ ಬರುವದೇ ಬಹು ತೊಂದರೆಯ ಸಂಗತಿ ಎಂದೆನಿಸಿತ್ತವರಿಗೆ ಮೆಲ್ಲಗೆ "ಓದು ಬರೆಹ" ಕಲಿಸಲಾರಂಭಿಸಿದರು. ಚೆನ್ನಾಗಿ

ಓದು ಕಲಿತಮೇಲೆ ಉತ್ತಮ ಪುಸ್ತಕ ತಂದಿರಿಸಿದರು. ಅವನ್ನು ಓದುತ್ತ ತಿಳಿದುಕೊಂಡು ನನ್ನ ತಪ್ಪಿಗಾಗಿ ನಾನು ಮರುಗಿದೆ. ಈಗ ನಿನಗೆ ಕಾಣುವ ಚೆಂದವೆಲ್ಲ ಓದಿನಿಂದಲೇ ಬಂದುದಾಗಿದೆ ಎಂದರು. ಕೂಡಲೆ " ಹಾಗಾದರೆ ನನಗೆ ನೀವು ಕಲಿಸುವಿರಾ" ಎನ್ನಲು ಚೆನ್ನಕ್ಕ ಒಪ್ಪಿದರು; ಕಲಿಸಿದರು.

ಬಡತನದ ಬಾಳುವೆಯಲ್ಲಿ ಮನಸ್ತಾಪಗಳಿಗೆ ಕೊರತೆಯೇ ? ಈಗ ಹಾಗಾದಾಗೆಲ್ಲ ಕರೆವ್ವ ಪುಸ್ತಕದ ಮೊರೆ ಹೋಗುತ್ತಾಳೆ. ತನ್ನಂತೆ ನೊಂದು-ಬೇಸರಗೊಂಡು ಬಂದ ಹೆಣ್ಣು ಮಕ್ಕಳಿಗೆಲ್ಲ ಬುದ್ಧಿ ಹೇಳುತ್ತಿದ್ದಾಳೆ. ಕಥೆ ಓದಿ ಹೇಳುತ್ತಾಳೆ.

ತನ್ನನ್ನು ಜೀವದಿಂದುಳಿಸಿ ತನ್ನ ಮಕ್ಕಳ ಪರದೇಶಿಗಳಾಗುತ್ತಿದ್ದುದನ್ನು ತಪ್ಪಿಸಿದ ಮಾಸ್ತರರನ್ನೂ, ತನಗೆ ಓದು ಕಲಿಸಿದುದರಿಂದ ತನ್ನ ಬಾಳುವಿಗೆ ಬಂದ ಹೊಸತನವನ್ನೂ ಸೊಬಗನ್ನೂ ಹಿಂದಿನ ತನ್ನ ಜೀವನಕ್ಕೆ ಹೋಲಿಸಿ, ಹೆಮ್ಮೆಯಿಂದ ಚೆನ್ನಕ್ಕನವರನ್ನೂ ಕುರಿತು ಬೀಸುವಾಗ ಹಾಡುತ್ತಿರುವವಳಾದ ತನ್ನ ಮಕ್ಕಳಿಗೆ ಮಾದಣ್ಣ, ಚೆನ್ನಕ್ಕರ ಹೆಸರಿಟ್ಟಿದ್ದಾಳೆ.

— [illegible]

ವೀರಭಾರತ ಗ್ರಂಥಮಾಲೆ ಎರಡನೆಯ ವರ್ಷ

ಪ್ರಾರಂಭ ತಾ. [illegible]

ವಿಷಯುಗಳ ವಿಪುಲತೆ ! [illegible] !!

[illegible]

[illegible]

ಇದೀಗ ಪ್ರಕಟವಾಗಿದೆ

೧ ಅಜಿತನ ಶಿಷ್ಯ ([illegible]) [illegible]

೨ ಗಲಿವ್ಹರನ [illegible] [illegible]

೩ ದಾದಿ [illegible]

೪ ಅವ್ಯತಧಾರೆ ([illegible]) [illegible]

೫ ಬಲಿದಾನ ([illegible]) [illegible]

೬ ಸತ್ಯದ [illegible]

[illegible]

ರೂಪಾಯಿ

ಅನುವಾದಕರು:— ದೇವೇಂದ್ರ ಬಸ್ತವಾಡ, ತಿಗಡೊಳ್ಳಿ.

" ರೂಪಾಯಿ " ಎಷ್ಟು ಮೋಹಕವಾದ ಹೆಸರು ! ರೂಪಾಯಿ ಎಂದೊಡನೆ, ಎಷ್ಟು ಆನಂದ ! ಎಷ್ಟು ಉತ್ಸಾಹ ! ಇದರ ಹೆಸರನ್ನರಿಯದವರೂ, ಇದನ್ನು ಬಯಸದವರೂ ದೊರೆಯಲಾರರು. ಯಾಕಂದರೆ ಇದು ನಮ್ಮ ಜೀವನದ ಮೂಲಾಧಾರವಾಗಿದೆ. ನಮ್ಮ ಆಗು-ಹೋಗುಗಳು ಇದನ್ನೇ ಅವಲಂಬಿಸಿವೆ. ಆದುದರಿಂದಲೇ ನಾವು ಇದನ್ನು ಇಷ್ಟೊಂದು ಗೌರವಿಸುತ್ತೇವೆ. ಉಳಿದ ವಸ್ತುಗಳ ಸಂಗ್ರಹವು ನಮ್ಮಲ್ಲಿ ಹೆಚ್ಚು ಹೆಚ್ಚಾದಂತೆ ಅವುಗಳನ್ನು ಸಂಗ್ರಹಿಸುವ ಇಚ್ಛೆಯು ಕಡಿಮೆಯಾಗುತ್ತ ಹೋಗುತ್ತದೆ. ಆದರೆ ರೂಪಾಯಿಯು ಇದಕ್ಕೆ ಅಪವಾದವಾಗಿದೆ. ಇದರ ಸಂಗ್ರಹವು ಹೆಚ್ಚಾದಂತೆ ಇಚ್ಛೆಯೂ ಬೆಳೆಯುತ್ತ ಹೋಗುತ್ತದೆ. ಆದುದರಿಂದಲೇ ಪರಮಾತ್ಮನ ನಂತರದ ಸ್ಥಾನವನ್ನು ಇದು ಪಡೆದಿದೆ. ಇದು ಎಲ್ಲರ ಜೀವನದ ಅವಶ್ಯಕತೆಗಳನ್ನು ಪೂರೈಸುತ್ತದೆ. ಇದನ್ನು ಯಾರೂ ತಿನ್ನಲಾರರು, ಮತ್ತು ಧರಿಸಲಾರರು. ಆದರೆ ಅನ್ನ, ವಸ್ತ್ರ ಮೊದಲಾದ ಜೀವನದ ಎಲ್ಲ ಅವಶ್ಯಕತೆಗಳನ್ನೂ ಇದು ನಮಗೆ ಒದಗಿಸುತ್ತದೆ. ಆದುದರಿಂದಲೇ ಭಿಕ್ಷುಕನು ಕೈಯೊಡ್ಡುವುದು ಇದಕ್ಕಾಗಿ; ಸುಡುವ ಬಿಸಲಿನಲ್ಲಿ ಕೂಲಿಕಾರನು ಕಲ್ಲು, ಹೆಂಟೆಗಳನ್ನು ಹೊರುವುದು ಇದಕ್ಕಾಗಿ; ಲಕ್ಷಾಧಿಪತಿಗಳು ಅನ್ನ-ನೀರುಗಳ ಪರಿವೆಯಿಲ್ಲದೆ ತಿರುಗುತ್ತಿರುವುದು ಇದಕ್ಕಾಗಿ.

ರೂಪಾಯಿ ಇದೊಂದು ಮುದ್ರೆಯು. ಇದನ್ನು ಗುರುತಿಸಲು ಇದರ ಮೇಲೆ ತರತರದ ಚಿಹ್ನಗಳನ್ನೂ, ಚಿತ್ರಗಳನ್ನೂ ಅಚ್ಚು ಹಾಕಿರುತ್ತಾರೆ. ಇದರ ಪ್ರಾಮಾಣಿಕತೆಯ ಬಗ್ಗೆ ಸರಕಾರವು ಹೊಣೆಗಾರವಿರುತ್ತದೆ. ಇದರ ನಕಲನ್ನು ತಯಾರಿಸುವದು ಸುಲಭವಾದದ್ದಲ್ಲ. ಯಾವ ರೀತಿಯಿಂದಲೂ ಇದರಲ್ಲಿ ಹೆಚ್ಚು ಕಡಿಮೆ ಮಾಡಲು ಬಾರದಂತೆ ಇದನ್ನು ಮುದ್ರಿಸಿರುತ್ತಾರೆ. ಹೆಚ್ಚು ಬೆಲೆಯ ನಾಣ್ಯಗಳನ್ನು ಬೆಳ್ಳಿ, ಬಂಗಾರದಿಂದಲೂ, ಕಡಿಮೆ ಬೆಲೆಯವುಗಳನ್ನು ನಿಕ್ಕೆಲ್ ಅಥವಾ ಬೇರೆ ಯಾವದಾದರೊಂದು ಧಾತುವಿನಿಂದಲೂ ತಯಾರಿಸುತ್ತಾರೆ.

—: ನಾಣ್ಯಗಳಿಲ್ಲದ ಕಾಲ :—

ನಾಣ್ಯಗಳ ಬಳಿಕೆಯು ಬಹಳೇ ಪುರಾತನ ಕಾಲದಿಂದ ಇದೆ. ಆದರೆ ಇವುಗಳ ಸುಳಿವೂ ಕೂಡ ಇಲ್ಲದಂಥ ಕಾಲವೊಂದಿತ್ತು. ಆಗಲಾದರೂ ಜನರಲ್ಲಿ ವಸ್ತುಗಳ ವ್ಯವಹಾರವು ನಡದೇ ನಡೆಯುತ್ತಿತ್ತು. ಆದರೆ ಈಗಿನಂತಿರದೆ, ಒಂದು ವಸ್ತುವಿಗೆ ಬದಲಾಗಿ ಮತ್ತೊಂದು ವಸ್ತುವನ್ನು ಕೊಡಬೇಕಾಗುತ್ತಿತ್ತು. ಗೋದಿಯನ್ನು ಬೆಳೆದ ಒಕ್ಕಲಿಗನಿಗೆ ಅರಿವೆಯು ಬೇಕಾದರೆ ಅವನು ನೇಕಾರನ ಹತ್ತರ ಹೋಗುತ್ತಿದ್ದನು. ಆತನಿಗೆ ಗೋದಿಯನ್ನು ಕೊಟ್ಟು ಅದಕ್ಕೆ ಬದಲಾಗಿ ಅರಿವೆಯನ್ನು ಪಡೆಯುತ್ತಿದ್ದನು. ಆದರೆ ನೇಕಾರನಿಗೆ ಗೋದಿಯು ಬೇಕಾಗಿರದಿದ್ದರೆ ಒಕ್ಕಲಿಗನು ಬೇರೊಬ್ಬನನ್ನು ಹುಡುಕಬೇಕಾಗುತ್ತಿತ್ತು. ಉಳಿದ ವಸ್ತುಗಳನ್ನು ಹುಟ್ಟಿಸುವವರ ಸ್ಥಿತಿಯೂ ಇದರಂತೆಯೇ ಆಗುತ್ತಿತ್ತು. ಈ ಬಗೆಯ ವ್ಯವಹಾರವು ಜನರಿಗೆ ತೊಂದರೆದಾಯಕವೆನಿಸಿದ್ದರಿಂದ ಇದರ ನಿವಾರಣೆಯ ಉಪಾಯವನ್ನು ಹುಡುಕತೊಡಗಿದರು.

ಕೊನೆಗೆ ಒಂದು ಉಪಾಯವು ಹೊಳೆಯಿತು. ಗೊತ್ತುಪಡಿಸಿದ ಒಂದು ವಸ್ತುವಿನ ಮುಖಾಂತರವಾಗಿಯೇ ಎಲ್ಲ ವ್ಯವಹಾರವನ್ನು ಸಾಗಿಸಬೇಕೆಂದು ಗೊತ್ತುಮಾಡಿದರು. ಜನರು ಕವಡಿ, ಆನೆಯ ಕೋರೆ, ಚುಕ್ಕೆಯುಳ್ಳ ತೊಗಲು, ಪಶು, ಮೊದಲಾದವುಗಳನ್ನು ನಾಣ್ಯಗಳಂತೆ ಉಪಯೋಗಿಸತೊಡಗಿದರು. ಇವುಗಳ ಮುಖಾಂತರವಾಗಿಯೇ ವ್ಯವಹಾರವು ಸಾಗಿತು. ಆದರೆ ಇದರಿಂದಲೂ ತೊಂದರೆ ಕಡಿಮೆಯಾಗಲಿಲ್ಲ. ಯಾಕೆಂದರೆ ಇವುಗಳಲ್ಲಿಯ ಕೆಲವು ವಸ್ತುಗಳು ಬೇಗನೆ ನಾಶವಾಗುತ್ತಿದ್ದವು. ಕೆಲವು ವಿಶಿಷ್ಟ ಪ್ರದೇಶಗಳಲ್ಲಿ ಮಾತ್ರ ಬಳಕೆಯಲ್ಲಿರುತ್ತಿದ್ದವು. ಕೂದಲುಳ್ಳ ತೊಗಲನ್ನು ಹಿಮಾಲಯದಂಥ ಶೀತ ಪ್ರದೇಶದಲ್ಲಿ ಬಳಸುವದಾಗಿತ್ತೇ ಹೊರತು ದಕ್ಷಿಣ ಭಾರತದಂಥ ಉಷ್ಣ ಪ್ರದೇಶದಲ್ಲಿ ಅದರ ಬಳಕೆಯು ಸಾಧ್ಯವಿದ್ದಿಲ್ಲ.

ಈ ಅನುಭವದ ನಂತರ ಜನರು ಧಾತುಗಳ ಮುದ್ರೆಗಳ ಬಳಕೆಯನ್ನು ಕೈಕೊಂಡರು. ಇದು ಒಳ್ಳೆಯದೆಂದೂ ಅವರಿಗೆ ಅನ್ನಿಸಿತು. ಯಾಕೆಂದರೆ ಇವು ಹೆಚ್ಚು ಕಾಲದವರೆಗೆ ಬಾಳುತ್ತಿದ್ದುದಲ್ಲದೆ, ಇವುಗಳ ಬಳಕೆಯು ಎಲ್ಲ ಪ್ರದೇಶಗಳಲ್ಲಿಯೂ ಸಮಾನವಾಗಿರುತ್ತಿತ್ತು. ಹಾಗು ಹೊರತು ಈ ವಸ್ತುಗಳಿಗೆ ಹೆಚ್ಚು ಬೆಲೆ ಬರುತ್ತಿತ್ತು. ಇವುಗಳನ್ನು ಬೇರೆ ಕಡೆಗೆ ಒಯ್ಯಲು ತೊಂದರೆ ತಪ್ಪುಗಳಂತೆ ತೊಂದರೆಯಾಗುತ್ತಿದ್ದಿಲ್ಲ. ಕಾರಣ ಎಲ್ಲ ಪ್ರದೇಶಗಳಲ್ಲಿಯೂ ಹೆಚ್ಚು ಬೆಲೆಯಾಗಿ ಬೆಳ್ಳಿ-ಬಂಗಾರಗಳ ನಾಣ್ಯಗಳೂ ಕಡಿಮೆ ಬೆಲೆಗಾಗಿ ಇತರ ಧಾತುಗಳ ನಾಣ್ಯಗಳೂ ತಯಾರಾಗತೊಡಗಿದವು.

* ನಾಣ್ಯಗಳ ಆರಂಭದ ಕಾಲ *

ಮೊದಮೊದಲು ಬೆಳ್ಳಿ - ಬಂಗಾರಗಳ ಅನಿಯಮಿತಾಕಾರದ ತುಂಡುಗಳೇ ನಾಣ್ಯಗಳಾಗಿದ್ದವು. ಅವುಗಳಿಗೆ ನಿಶ್ಚಿತವಾದ ರೂಪವಾಗಲಿ, ತೂಕವಾಗಲಿ ಇದ್ದಿಲ್ಲ. ವ್ಯವಹಾರದ ಕಾಲಕ್ಕೆ ಅವುಗಳನ್ನು ಪರೀಕ್ಷಿಸಿ, ತೂಗಿ, ತೆಗೆದುಕೊಳ್ಳಬೇಕಾಗುತ್ತಿತ್ತು. ಕಾರಣ ಪ್ರತಿಯೊಂದು ವ್ಯವಹಾರದ ಕಾಲಕ್ಕೆ ತಕ್ಕಡಿ, ಒರೆಗಲ್ಲುಗಳ ಅವಶ್ಯವಾಗಿ ಬೇಕಾಗುತ್ತಿದ್ದವು. ಅವುಗಳ ಪರೀಕ್ಷೆಯನ್ನು ತಿಳಿದವರಿಂದಲೇ ಮಾಡಿಸಬೇಕಾಗುತ್ತಿತ್ತು. ಈ ತೊಂದರೆಗಳ ಮೂಲಕ ಆರಂಭದಲ್ಲಿಯೇ ಪರೀಕ್ಷಿಸಲ್ಪಟ್ಟ, ಗೊತ್ತುಪಡಿಸಿದ ರೂಪದ ನಾಣ್ಯಗಳ ಬಳಿಕೆಯ ವಿಚಾರವು ಜನರಲ್ಲಿ ಹೊಳೆಯಿತು. ಈ ಕೆಲಸವನ್ನು ಸರಕಾರವಾಗಲಿ, ಸಾಹುಕಾರ, ಜಮೀನುದಾರ, ಜಹಗೀರುದಾರರಾಗಲಿ ಮಾಡತೊಡಗಿದರು. ಯಾವ ನಾಣ್ಯಗಳ ಮೇಲೆ ಗೊತ್ತುಪಡಿಸಿದ ಈ ಜನರ ಮುದ್ರೆ ಇರುತ್ತಿತ್ತೋ ಅವುಗಳೇ ನಿಜವಾದವುಗಳೆಂದು ಜನರು ತಿಳಿಯುತ್ತಿದ್ದರು.

ಜಗತ್ತಿನಲ್ಲಿಯ ಮೊದಲನೆಯ ನಾಣ್ಯ

ಇಂದಿಗೆ ೨೫೦೦ ವರುಷಗಳ ಪೂರ್ವದಲ್ಲಿ, ಯೂನಾನ ದೇಶದ ಭಾಗವಾಗಿದ್ದ ಲಿಡಿಯಾದ ಒಬ್ಬ ಅರಸನು ಜಗತ್ತಿನಲ್ಲಿ ಮೊದಲೆಯ ನಾಣ್ಯವನ್ನು ತಯಾರಿಸಿದನೆಂದು ಗೊತ್ತಾಗಿದೆ. ಅದೇ ಸಮಯದ ನಾಣ್ಯಗಳು ನಮ್ಮ ದೇಶದಲ್ಲಿಯಾದರೂ ದೊರೆತಿವೆ. ನಾಣ್ಯಗಳು ಮೊದಮೊದಲು ದುಂಡಾಗಿದ್ದಿಲ್ಲ. ಚೌಕೋನ, ತ್ರಿಕೋನ, ಮೊದಲಾದ ಬೇರೆ ಬೇರೆ ಆಕಾರದವಿರುತ್ತಿದ್ದವು. ನಮ್ಮ ದೇಶದಲ್ಲಿಯ ಬೆಳ್ಳಿಯ ರೂಪಾಯಿಯು ಔರಂಗಜೇಬನ ಆಳಿಕೆಯ ನಂತರದ ಕೆಲದಿನಗಳವರೆಗೂ ಚೌಕೋನಾಕಾರದ್ದಿತ್ತು. ಈ ನಾಣ್ಯಗಳು ಬೇಗನೆ ಸವೆಯುತ್ತಿದ್ದವಲ್ಲದೆ, ಸುತ್ತಲಿನ ದಂಡೆಯನ್ನು ಕತ್ತರಿಸಿ ಧಾತುವನ್ನು ಕಡಿಯಲು ಬರುವಂತಿದ್ದವು. ಈ ದೋಷವನ್ನು ದೂರ ಮಾಡಲು ಸುತ್ತಲಿನ ದಂಡೆಗುಂಟ ಗೀರುಗಳುಳ್ಳ ದುಂಡಗಿನ ನಾಣ್ಯಗಳನ್ನು ಮುದ್ರಿಸತೊಡಗಿದರು. ನೀವು ಈಗಿನ ರೂಪಾಯಿ ಅರ್ಧ ರೂಪಾಯಿಗಳನ್ನು ಪರೀಕ್ಷಿಸಿ ನೋಡಿದರೆ ಅವುಗಳ ದಂಡೆಗುಂಟ ಗೀರುಗಳನ್ನು ಕಾಣಬಹುದು. ಆ ಗೀರುಗಳ ಮೂಲಕವಾಗಿಯೇ ನಾಣ್ಯಗಳನ್ನು ಕತ್ತರಿಸುವದು ಕಠಿಣವಾಗಿದೆ.

(ಮುಂದೆ ಸಾಗುವದು.)

ಲೋಕ ಶಿಕ್ಷಣ.

ಲೇಖಕ:— ಮ. ರಾ. ಮಂ. ನೆಂ. ನಾಯ್ಕ. ಮೂಲೇಗದ್ದೆ ಸಾ. ಶಿ. ಕಾ. ಸಾಂತಗಲ್ಲ (ಕುಚ್ಚಿನಾಡ ಸೀಮೆ)

ಬನ್ನಿರಿ ಬನ್ನಿರಿ ನಿರಕ್ಷರಿ ಸ್ಸೋದರರೆ ।
ರಾತ್ರಿ ಶಾಲೆಯು ಸೇರಿ ಬಿಡಿ ॥
ಭಾರತ ಗಣರಾಜ್ಯ ದಿನದಿ ।
ಸಾಕ್ಷರರಾಗಲು ಬಂದು ಬಿಡಿ ॥೧॥

ಗಂಡಸು ಹೆಂಗಸು ತರುಣರು ಮುದುಕರು ।
ಎಲ್ಲರು ತಪ್ಪದೆ ಬಂದು ಬಿಡಿ ॥
ಗಾಂಧಿ ಮಹಾತ್ಮನ ಭಜನೆಯ ಮಾಡುತ ॥
ಇಂದೇ ಕಲಿಯಲು ತೊಡಗಿ ಬಿಡಿ ॥೨॥

ದುಡಿಯುವರೆಲ್ಲರು ಒಕ್ಕಟ್ಟಾಗಿರಿ ।
ಜಾತಿಪಂಥಗಳ ಮರೆತು ಬಿಡಿ ॥
ಮಧ್ಯಮ ವರ್ಗದ ವಿಚಾರವಂತರು ।
ಸಾಮಾಜಿಕ ವರ್ಗಕೆ ಸೇರಿ ಬಿಡಿ ॥೩॥

ಕೂಲಿಕಾರರೂ ಮಿಲಗಾರರೂ ।
ರೈತರ ಜೊತೆಗೆ ಬಂದು ಬಿಡಿ ।
ಸಾಮಾಜಿಕ ವರ್ಗದ ಬೆಂಬಲದಿಂದೆ ।
ನಾಡಿನಾಳಿಕೆ ಕಸಿದು ಬಿಡಿ ॥೪॥

ಶ್ರಮ ಜೀವಿಗಳೇ ಸಾಮ್ರಾಜ್ಯದಿ ।
ರೈತರಿಗಂತೂ ಶಿಕ್ಷಣ ಸಿರಿ ॥
ಎಲ್ಲಾ ಜನರಿಗೆ ಸುಖವಾಗುವುದೇ ।
ಲೋಕ ಶಿಕ್ಷಣದ ಮುಖ್ಯ ಗುರಿ ॥೫॥

ಸುದ್ಧಿಗಳು ★

ಗ್ರುಪ್ ಶಿಕ್ಷಣ ಸಮ್ಮೇಲನ ಕಟಕೋಳ ಈ ಮೊದಲು ನಾವು ಪ್ರಕಟಿಸಿದಂತೆ ನಮ್ಮ ಶಾಲೆಯಲ್ಲಿ ನಮ್ಮ ಗ್ರೂಪದ ಪರವಾಗಿ ಶಿಕ್ಷಣ ಸಮ್ಮೇಲನವು ಕೆಳಗೆ ಬರೆದ ಪ್ರಕಾರ ಕಾರ್ಯಕ್ರಮದ ಮೇರೆಗೆ ಶ್ರೀ. ಅಜ್ಜಪ್ಪಣ್ಣಾ ಬಟಕುರ್ಕಿ ಇವರ ಹಿರಿಯತನದಲ್ಲಿ ಜರುಗಿತು.

ಮುಂಜಾನೆ ಘಂಟೆ ೮ ಕ್ಕೆ ಧ್ವಜವಂದನೆ ಪ್ರಾರ್ಥನೆ ಆಗಿ ಶ್ರೀ. ಮುಂಬರಡ್ಡಿ (M. L. A.) ಇವರಿಂದ ಉದ್ಘಾಟನೆ ಗಾಂಧೀಜಿಯವರ ಚಿತ್ರದ ಅನಾವರಣ ಸಮಾರಂಭ ಜರುಗಿದವು. ನಂತರ ಶ್ರೀ. ರಾಮದುರ್ಗಕರ ಗುರುಗಳವರಿಂದ ಸ್ವಾಗತಪರ ಭಾಷಣ, ಅಧ್ಯಕ್ಷರ ಆಯ್ಕೆಗಳಾಗಿ ಕ್ರಮಶಃ ಇನಾಮದಾರ, ಜೇಡರ, ಸೋರಗಾಂವಿ, ಗುರುಗಳವರಿಂದ ಮಾದರಿ ಪಾಠಗಳು ಜರುಗಿ ಮುಂಜಾನೆಯ ಕಾರ್ಯ ಕೊನೆಗೊಂಡಿತು.

ಸಾಯಂಕಾಲ ಶಿಕ್ಷಣ ತಜ್ಞರ ಭಾಷಣಗಳು ಜರುಗಿದ ನಂತರ ಶ್ರೀ. ರಾಮದುರ್ಗಕರ ಗುರುಗಳವರು ಬರೆದ ಶಿಕ್ಷಕ ಪರಿಚಯ ಎಂಬ ಪುಸ್ತಕದ ಪ್ರಕಾಶನವು ಶ್ರೀ. ಚೌಗಲಾ (ಕಾರ್ಯಾಧ್ಯಕ್ಷ ಶಿಕ್ಷಕ ಸಂಘ ಕೊಲ್ಹಾಪೂರ) ಅವರಿಂದ ಜರುಗಿತು. ತದನಂತರ ಐದು ಘಂಟೆಗೆ ಶ್ರೀ. ಕಟ್ಟಿ, ಸತ್ತಿಗೇರಿ, ಜಾಧವ ಗುರುಗಳವರಿಂದ ಶಾರೀರಿಕ ಚಟುವಟಿಕೆಗಳು ಉತ್ತಮ ರೀತಿಯಿಂದ ಸಾಗಿದವು. ಆ ಮೇಲೆ ಶ್ರೀ. ಕಟ್ಟಿ ಗುರುಗಳವರಿಂದ ಆಭಾರ ಮನ್ನಣೆಯ ಕಾರ್ಯ ಜರುಗಿ, ಧರಿಗೌಡರ ಭೋಸಲೆ ಎಂಬ ವಿದ್ಯಾರ್ಥಿಗಳಿಂದ ವಂದೇ ಮಾತರಂ ಗೀತೆಯೊಂದಿಗೆ ಕಾರ್ಯ ಕೊನೆಗೊಂಡಿತು.

ರಾತ್ರಿ ಬಾಲಕರ ವಿವಿಧ ವಿನೋದಾವಳಿಗಳು ಶ್ರೀ. ಕಟ್ಟಿ ಮತ್ತು ಸತ್ತಿಗೇರಿ ಗುರೂಜಿಯವರ ಮಾರ್ಗದರ್ಶನದಲ್ಲಿ ಸಾಗಿದವು.

ಕಾರ್ಯದರ್ಶಿ
ಆರ್. ಎನ್. ಕಟ್ಟಿ.

ಮನರಂಜನ ಕಾರ್ಯಕ್ರಮಗಳು.

ವಿಜಾಪೂರ ಜಿಲ್ಹಾ ಮನರಂಜನ ಚಟವಟಿಕೆಗಳನ್ನು ಸಂಬಂಧೀಕರಿಸುವ ಸಮಿತಿಯ ವತಿಯಿಂದ, ಬಾಗೇವಾಡಿ ಮತ್ತು ಮುದ್ದೇಬಿಹಾಳ ತಾಲೂಕಗಳಲ್ಲಿಯ ಏಳು ಹಳ್ಳಿಗಳಲ್ಲಿ ತಾ. ೨೬-೮-೫೩ ರಿಂದ ೧-೯-೫೩ ವರೆಗ ಮನರಂಜನ ಚಟುವಟಿಕೆಗಳ ಕಾರ್ಯಕ್ರಮಗಳು ಜರುಗಿಸಲ್ಪಟ್ಟವು. ತಾ. ೨೬-೮-೫೩ ನೆಯ ದಿನ ಬಾಗೇವಾಡಿಯಲ್ಲಿಯ ತಾಲೂಕ ಶಿಕ್ಷಕರ ಸಮ್ಮೇಲನದ ಅಂಗವಾಗಿ ಚಟುವಟಿಕೆಗಳು ಕೈಕೊಳ್ಳಲ್ಪಟ್ಟವು. ಈ ವೇಳೆಯಲ್ಲಿ ಶಾಸನ ಸಭೆಯ ಸದಸ್ಯರಾದ ಶ್ರೀ. ಮಲ್ಲಪ್ಪಣ್ಣಾ ಸುರಪುರ ಮತ್ತು ಶ್ರೀ. ಶಂಕರಗೌಡಾ ಪಾಟೀಲ ಹಾಗೂ ಶ್ರೀಮನ್ನಿರಂಜನ ಬಂಥನಾಳ ಶಿವಯೋಗಿಗಳು ಉಪಸ್ಥಿತರಿದ್ದು ಶೈಕ್ಷಣಿಕ ವಿಷಯಗಳ ಮೇಲೆ ಒಳ್ಳೇ ಪರಿಣಾಮವಾಗುವಂತೆ ಭಾಷಣ ಮಾಡಿದರು. ಮುದ್ದೇಬಿಹಾಳದಲ್ಲಿ ತಾ. ೨೭-೮-೫೩ ದಿನಾಂಕ ಜರುಗಿದ ವಿವಿಧ ಕಾರ್ಯಕ್ರಮಗಳು ಶಾಸನ ಸಭೆಯ ಸದಸ್ಯರಾದ ಶ್ರೀ. ಸಿ. ಜೆ. ಅಂಬಲಿ ಇವರುಗಳ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ನೆರವೇರಿಸಲ್ಪಟ್ಟವು. ತಾ. ೨೮-೮-೫೩ ದಿನಾಂಕ ಹುನಕುಂಟಿಯಲ್ಲಿ ಜರುಗಿದ ಗ್ರುಪ-ಸಮ್ಮೇಲನದ ಜೊತೆಗೆ ಮ. ಚಟುವಟಿಕೆಗಳೂ ಸಾಂಗವಾದವು. ಈ ಸುಸಂಧಿಯಲ್ಲಿ ಆಗಮಿಸಿದ ಶ್ರೀ. ಮನ್ನಿರಂಜನ ಮೃತ್ಯುಂಜಯ ಸ್ವಾಮಿಗಳು ಉಪದೇಶಪರಮಾತುಗಳನ್ನು ಮನದಟ್ಟಾಗುವಂತೆ ಹೇಳಿದರು.

ನಿಡಗುಂದಿಯಲ್ಲಿ ಜರುಗಿದ ಕಾರ್ಯಕ್ರಮಗಳಲ್ಲಿ ಕುಮಾರಿ ಮುಳಸ್ಕಾರ ಅ. ಡೆ. ಎ. ಇ. ವಿಜಾಪೂರ ಇವರು ' ಮಕ್ಕಳ ಆರೈಕೆ 'ಯನ್ನು ಕುರಿತು ಹಳ್ಳಿಯ ಹೆಣ್ಣು ಮಕ್ಕಳಿಗೆ ಉಪಯುಕ್ತ ಮಾತುಗಳನ್ನು ಹೇಳಿಕೊಟ್ಟರು. ಇದರಂತೆಯೇ ನಾಲ್ವತ್ತವಾಡ ಮತ್ತು ಚಿಮ್ಮಲಗಿಗಳಲ್ಲಿಯೂ ಮನರಂಜನ ಚಟುವಟಿಕೆಗಳು ಯಶಸ್ವಿಯಾಗಿ ಜರುಗಿ, ಆಗಸ್ಟ ೧೯೫೩ ರಲ್ಲಿ ನಿರ್ದಿಷ್ಟ ಪಡಿಸಿದ ಕಾರ್ಯಕ್ರಮಗಳು ಕೊನೆಗೊಂಡವು.

× × × ×

ಶಮನೇವಾಡಿ ದಿನಾಂಕ ೨೮-೮-೧೯೫೩ ಇಂದು ಶಮನೇವಾಡಿ ಕನ್ನಡ ಗಂಡು ಮಕ್ಕಳ ಶಾಲೆಯಲ್ಲಿ ಸಮಾಜ ಶಿಕ್ಷಣ ವರ್ಗವನ್ನು ಬೆಳಗಾಂವ ಜಿಲ್ಲೆಯ ಅಸಿಸ್ಟಂಟ ಎ. ಓ. ಅವರಾದ ಶ್ರೀ. ಬಿ. ಟಿ. ಚಿವಟೆ ಅವರು ಉದ್ಘಾಟಿಸಿದರು.

ಈ ವರ್ಗವನ್ನು ಉದ್ಘಾಟಿಸುತ್ತ ಶ್ರೀ. ಚಿವಟೆ ಅವರು ಸಮಾಜ ಶಿಕ್ಷಣದ ವಿಶಾಲ ಕ್ಷೇತ್ರದ ಕುರಿತು ಚರ್ಚಿಸಿ ಇದರಲ್ಲಿ ವಯಸ್ಕರ ಕಾರ್ಯಕಲಾಪಗಳನ್ನು ವಿವರಿಸಿದರು.

ಇಲ್ಲಿಯ ಲಕ್ಷ್ಮೀ ಎಜ್ಯುಕೇಶನ್ ಸೋಸಾಯಟಿಯ ಹೆಡ ಮಾಸ್ತರರು ಶ್ರೀಮಾನ್ ಟಿ. ಕೆ. ಪಾಟೀಲರು ಸಮಾಜ ಶಿಕ್ಷಣದ ಮಾಹಿತಿಯ ಕುರಿತು ಹೇಳಿದರು.

ಕಾರ್ಯಕರ್ತರಾದ ಶ್ರೀ. ಮುಗದುಮ್ಮ ಅವರಿಂದ ಪೂಮಾಲೆ ಅರ್ಪಿಸಿದ ನಂತರ ಶ್ರೀ. ಅಮ್ಮಣ್ಣವರ ಹೆಡ ಮಾಸ್ತರ ಕನ್ನಡ ಗಂಡು ಮಕ್ಕಳ ಶಾಲಾ ಶಮುಗೆವಾಡಿ ಇವರ ಆಭಾರ ಮನ್ನಣೆಯೊಡನೆ ಕಾರ್ಯಕ್ರಮ ಕೊನೆಗೊಂಡಿತು.

ಡಿ. ಜೆ. ಪಾಟೀಲ.

❋ ❋ ❋ ❋

ತಾ. ೧೩-೯-೫೨ ನೇ ದಿವಸ ಯಲ್ಲಾಪುರ ತಾಲೂಕ ಬೀಸಗೋಡ ಶಾಲೆಯಲ್ಲಿ ಸಮಾಜ ಶಿಕ್ಷಣ ಕುರಿತು ಸೇರಿದ ಸಭೆಗೆ ದೇಹಳ್ಳಿ, ಬೀಸಗೋಡ, [illegible] ಗೋಡ ಈ ಮೂರು ಗ್ರಾಮಗಳ ನೂರಾರು ಜನರು ಸೇರಿದ್ದರು. ಅಂದು ಭಜನೆ ಗಾಯನ, [illegible] ಮೊದಲಾದ ಕಾರ್ಯಕ್ರಮಗಳು ನಡೆದವು. [illegible] ಆಡಿದವರಿಗೆ ೫ ರೂ. ಪಾರಿತೋಷಕ ಕೊಡಲಾಯಿತು. ಸದರ ಸಭೆಗೆ ಕೂಡಿದ ಪ್ರತಿಷ್ಠಿತ ಜನರಲ್ಲಿ

(೧) ಶ್ರೀ. ಗಣಪಯ್ಯಾ ಕೃಷ್ಣಪ್ಪ [illegible]
(೨) ಶ್ರೀ. ನಾರಾಯಣ ವೆಂಕಟರಮಣ [illegible]
(೩) ಶ್ರೀ. ಶಿವರಾಮ ಸಂಬಯ್ಯಾ [illegible]
[illegible]
(೪) ಶ್ರೀ. ಗೋಪಾಲಕೃಷ್ಣ [illegible]
[illegible]

ಇವರು ಶೈಕ್ಷಣಿಕ [illegible] ನಂತರ ಈ ಭಾಗದ ಶಿಕ್ಷಣಾಧಿಕಾರಿ [illegible] ವರು ಸಮಾಜ ಶಿಕ್ಷಣ [illegible] ಈ ವಿಷಯವಾಗಿ [illegible] ಣವಿತ್ತರು. ಭಾಷಣವು [illegible] ಮವಾಗಿ ತಾವು ಶಿಕ್ಷಣ [illegible] ಯಿಂದ ಅಂದೇ ತಮ್ಮ [illegible] ಕೊಂಡರು. ಹಾಗೂ [illegible] ಮೂರು ಕ್ಲಾಸುಗಳು [illegible] ದ್ಧಿಯು ಕಡೆತನಕ [illegible] ಭಾರತಾಂಬೆಯು [illegible]

ಕಲ್ಲೋಳಿ ತಾ ೨೬-೭-೫೨ ರಂದು ಶ್ರೀ. ಮೀರಾ ಸಾಹೇಬ ಬಾಗವಾನ ಇವರ ಹಿರಿಯತನದಲ್ಲಿ ಶ್ರೀ. ಸರಸ್ವತಿ ಪೂಜಾ ಸಮಾರಂಭವು ನಡೆದಾಗ ಹೆ. ಮಾ. ಗೋ. ಅ. ಕುಲಕರ್ಣಿ ಅವರ ಭಾಷಣದ ನಂತರ " ನಾಗರ ಪಂಚಮಿ" ಹಬ್ಬ ಕುರಿತು ಶ್ರೀ. ಪಾವಟೆ ಬ. ದುಂ. ಅವರು ಸುಂದರವಾಗಿ ಭಾಷಿಸಿದ ನಂತರ ಶ್ರೀ. ಡಿ. [illegible] ಸೆಕ್ರೆಟರಿ ಮಾತನಾಡಿದ ಮೇಲೆ ಅಧ್ಯಕ್ಷರು ಶಾಲೆಯ ಬಗ್ಗೆ ಕಳಕಳಿಯಿಂದ ಮಾತನಾಡಿದ ಮೇಲೆ [illegible] ಕಾರ್ಯಕ್ರಮ ಕೊನೆಗೊಂಡಿತು.

ತಾ. [illegible] ರಂದು ಶ್ರೀ. ಮ. ಅ. ಪಾಟೀ[illegible] [illegible] ಸಭೆ ಸೇರಿದಾಗ "ಸ್ವಾತಂತ್ರ್ಯದ [illegible]" ಎಂಬ ವಿಷಯದ ಮೇಲೆ ಶ್ರೀ. [illegible] ಮಾತನಾಡಿದ ಮೇಲೆ [illegible] ಕುಲಕರ್ಣಿ [illegible] ಶ್ರೀ. [illegible] ಅಧ್ಯಕ್ಷರು ಮಾತನಾಡಿದರು.

[illegible]

❋ ❋ ❋ ❋

[illegible]

[illegible]

[illegible]

❋ ❋ ❋ ❋

ಬೆಳವಣಿಕಿ ಇಲ್ಲಿ ದಿ. ೧೫-೮-೫೨ ಕ್ಕೆ ಶ್ರೀ. ಲಕ್ಷ್ಮಣರಾವ ಪುತ್ತೇಪೂರ ಇವರ ಅಧ್ಯಕ್ಷತೆಯಲ್ಲಿ ಆರನೆಯ ಸ್ವಾತಂತ್ರ್ಯೋತ್ಸವವು ಒಳ್ಳೇ ವಿಜೃಂಭಣೆ ಯಿಂದ ಜರುಗಿತು. ಬೆಳಗ್ಗೆ ಬಾಲ-ಬಾಲಿಕಿಯರ ಪ್ರಚಂಡ ಗ್ರಾಮ ಸಂಕೀರ್ತನೆಯಾಗಿ ಗಾಂಧಿಚೌಕು ಶಾಲೆಯ ಬೈಲು ಹೀಗೆ ಎರಡು ಕಡೆಗೆ ಧ್ವಜವಂದನೆಯಾಯಿತು. ಆ ಮೇಲೆ ಜಾಹೀರ ಸಭೆ ಕುಮಾರ ಕಣವಿ ಶ್ರೀ ಗಳಾದ ಮರಿಗೌಡರ ಪಾಟೀಲ ಖುರ್ದಾನನರ ಘಾಟಕ ಇವರು "ಸ್ವಾತಂತ್ರ್ಯದ ಸವಿ ನೆನಪು" ಎಂಬ ವಿಷಯಕ್ಕೆ ಸುಶ್ರಾವ್ಯ ಭಾಷಣ ಮಾಡಿದರು. ಆ ನಂತರ ಶ್ರೀ. ಅ. ಸೊ. ಸಜ್ಜನ ಸೇವಾ ನಿವೃತ್ತ ಎ. ಡಿ. ಆಯ್. ಇವರ ಹಸ್ತದಿಂದ ಬಡ ಬಾಲ-ಬಾಲಿಕೆಯರಿಗೆ ಮೆಚ್ಚುಗೆಯಾಗಿ ಪಾಟ ಪುಸ್ತಕ ಹಂಚಲಾಯಿತು. ಇಲ್ಲಿಯ ಸಹಕಾರಿ ಸಂಘದ ಚೇಅರಮನ್ನರಾದ ಶ್ರೀ. ಎ. ಮ. ಪಾಟೀಲ ಇವರು ಗಂಡುಮಕ್ಕಳ ಶಾಲೆಗೆ ಸ್ವಾಂತತ್ರ್ಯದ ಸವಿ ನೆನಪಿಗಾಗಿ ತೋಟ ಹಚ್ಚಿದ ಒಂದು ನೀರಿನ ಟಾಕಿಯನ್ನೂ ತಮ್ಮ ಸಂಸ್ಥೆಯ ವತಿಯಿಂದ ದಯಪಾಲಿಸುವದಾಗಿ ಆಶ್ವಾಸನವಿತ್ತರು. ಗ್ರಾಮದ ಪ್ರಮುಖ ಜನರು, ರೈತರು, ಶಿಕ್ಷಕ-ಶಿಕ್ಷಿಕೆಯರು, ಬಾಲ ಬಾಲಿಕೆಯರು ಒಳ್ಳೇ ಹುಮ್ಮಸದಿಂದ ಈ ಉತ್ಸವದಲ್ಲಿ ಭಾಗವಹಿಸಿದ್ದರು. ರಾಷ್ಟ್ರಗೀತೆ ಅನ್ನಲ್ಪಟ್ಟು ಪ್ರಸಾದ ಹಂಚಿದ ಮೇಲೆ ಸಮಾರಂಭವು ಮುಕ್ತಾಯವಾಯಿತು.

ಬಿ. ವಿ. ಪಾಟಕ.

❋ ❋ ❋ ❋

ಸಮಾಜ ಶಿಕ್ಷಣ ಶಾಲಾ ಸೊರಟೂರ, ತಾ. ಗದಗ.

ಗದಗ ಮತ್ತು ಶಿರಹಟ್ಟಿ ಭಾಗದ ಅಸಿ. ಎ. ಓ. ಡಿ. ಎಸ್. ಬಿ. ಧಾರವಾಡ ಶ್ರೀ. ಎಲ್. ಎಸ್. ಪಾಟೀಲ ಸಾಹೇಬ ಇವರು ಇಲ್ಲಿ ಹೊಸದಾಗಿ ಪ್ರಾರಂಭಿಸಲ್ಪಟ್ಟ ಸಮಾಜ ಶಿಕ್ಷಣ ವರ್ಗಕ್ಕೆ ಭೆಟ್ಟಿಯನ್ನಿತ್ತು ಸಂಚಾಲಕರು ಸರಿಯಾಗಿ ಕೆಲಸ ಸಾಗಿಸಿದ್ದನ್ನೂ ಹಾಗು ಪ್ರೌಢರು ಸರಿಯಾಗಿ ಕ್ಲಾಸಿಗೆ ಬಂದು ಆಸ್ಥೆ ವಹಿಸಿ ಕಲಿಯುವದನ್ನೂ ಮತ್ತು ಇಲ್ಲಿಯವರೆಗೆ ಆದ ಪ್ರಗತಿಯನ್ನೂ ನೋಡಿ ಸಮಾಧಾನ ವ್ಯಕ್ತ ಮಾಡಿದರು. ವರ್ಗದ ಸಂಚಾಲಕರಾದ ಶ್ರೀ. ಕ. ಫ. ಸಾಸ್ವಿಹಳ್ಳಿ ಹೆಡಮಾಸ್ತರ ಮತ್ತು ಶ್ರೀ. ಎ. ಮ. ಚಿಂಚಲಿ, ಶ್ರೀ. ಅಂ. ಎ. ಚನ್ನಪ್ಪಗೌಡ್ರ. ಅಸಿ. ಮಾಸ್ತರ ಇವರೆಲ್ಲರಿಗೆ ಮಾರ್ಗದರ್ಶನ ಪರವಾಗಿ ಕೆಲವು ಸೂಕ್ತ ಸೂಚನೆಗಳನ್ನು ಮತ್ತು ಪ್ರೌಢರಿಗೆ ಸ್ವಚ್ಛತೆ, ಶಿಸ್ತು, ಹಾಗು ಸಾಕ್ಷರತೆ ಇವುಗಳ ಮಹತ್ವವನ್ನು ಕುರಿತು ಉಪದೇಶಪರ ಮಾತುಗಳನ್ನು ಹೇಳಿದರು

ಪ್ರಧಾನ ಸಂಚಾಲಕರು.
ಕ. ಫ. ಸಾಸ್ವಿಹಳ್ಳಿ

❋ ❋ ❋ ❋

ರಾಣೇಬೆನ್ನೂರ ತಾಲೂಕ ಉಕ್ಕುಂದ ಪ್ರೌಢ ಶಿಕ್ಷಣ ಕ್ಲಾಸಿನಲ್ಲಿ ಮೆ|| ಅಸಿಸ್ಟಂಟ ಡೆ. ಎ. ಇನಸ್ಪೇಕ್ಟರ ಸಾಹೇಬ ಬ್ಯಾಡಗಿ ಬೀಟಿಯವರ ಅಧ್ಯಕ್ಷತೆಯ ಕೆಳಗೆ ಮನರಂಜನೆಯ ಕಾರ್ಯಕ್ರಮ ಕೆಳಗೆ ಬರೆದ ಪ್ರಕಾರ.

(೧) ಸ್ವಾಗತ ಗೀತೆ
(೨) ಭಜನಾ ಮೇಳದವರು ಶ್ರೀಪರಮಾತ್ಮನ ಮತ್ತು ರಾಷ್ಟ್ರದ ಪ್ರಮುಖರ ಮೇಲೆ ಹಾಡಿದ ಲಾವಣಿ
(೩) ಪ್ರೌಢ ಶಿಕ್ಷಣ ಮಹತ್ವದ ಬಗ್ಗೆ ಭಾಷಣ

ಈ ಪ್ರಕಾರ ಕಾರ್ಯಕ್ರಮಕ್ಕೆ ಗ್ರಾಮದ ಯಾವತ್ತೂ ಪ್ರಮುಖ ಜನರು ಸರವಂದ, ಉಕ್ಕುಂದ, ರಾಮಗೊಂಡನಹಳ್ಳಿ, ಲಕಮಾಜಿಕೊಪ್ಪ, ಕೊಲ್ಲಾಪುರ, ತಿಮ್ಮೇನಹಳ್ಳಿ ಬೆಳಕೇರಿ ಶಾಲೆಗಳ ಯಾವತ್ತೂ ಶಿಕ್ಷಕರು ಹಾಜರಿದ್ದು ಸದರ ಶಾಲೆಯ ವಿದ್ಯಾರ್ಥಿಗಳಿಂದ ಸ್ವಾಗತ ಗೀತೆಯಾದ ನಂತರ ಭಜನಾ ಸಂಘದವರು ಶ್ರೀ ಪರಮಾತ್ಮನ ಮತ್ತು ರಾಷ್ಟ್ರದ ಪ್ರಮುಖ ಜನರ ಮೇಲೆ ಲಾವಣಿ ಹಾಡುಗಳನ್ನು ಉತ್ತಮ ರೀತಿಯಿಂದ ಅಂದು ತೋರಿಸಿದರು. ತರುವಾಯ ಶ್ರೀಯುತ ಸರವಂದ ಶಾಲಾ ಹೆಡ್ಡ ಮಾಸ್ತರರು ತಿಮ್ಮೇನಹಳ್ಳಿ ಶಾಲಾ ಮಾಸ್ತರರು ಪ್ರೌಢ ಶಿಕ್ಷಣ ಮಹತ್ವದ ಬಗ್ಗೆ ಉಪನ್ಯಾಸಗಳನ್ನು ಮಾಡಿದರು. ಆ ಮೇಲೆ ಮೆ|| ಅ. ಡೆ. ಎ. ಇ. ಸಾಹೇಬ ಬ್ಯಾಡಗಿ ಭಾಗ ಇವರು ಪ್ರೌಢ ಶಿಕ್ಷಣ ಪ್ರಗತಿಯಾಗುವ ಬಗ್ಗೆ ಕಾರ್ಯಕರ್ತರಿಗೆ ಕೆಲವು ಸೂಚನೆಗಳನ್ನು ತಿಳಿಸಿದರು. ನಂತರ ಅಧ್ಯಕ್ಷರ ಸಮಾರೋಪ ಭಾಷಣವಾದ ಮೇಲೆ ವಂದೇ ಮಾತರಂ ಗೀತೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಬಸವಣ್ಣೆಪ್ಪ ಗೋಮುನಿಯಪ್ಪ ದೇಸಾಯಿ.
ಪ್ರೌಢಶಿಕ್ಷಣ ಕಾರ್ಯಕರ್ತ ಉಕ್ಕುಂದ

❋ ❋ ❋ ❋

ಶೈಕ್ಷಣಿಕ ಗ್ರೂಪ ಸಮ್ಮೇಲನ

ಬನ್ನಿಕೊಪ್ಪ (ತಾ. ಶಿರಹಟ್ಟಿ) ಮೊದಲು ಪ್ರಸಿದ್ಧ ಪಡಿಸಿದಂತೆ ಸದರ ಸಮ್ಮೇಲನವು ಮೆ. ಟಿ. ಎಫ್. ದೇಸಾಯಿ ಅ. ಡೆ. ಎ. ಇ. ಧಾರವಾಡ ಇವರ ಅಧ್ಯಕ್ಷತೆಯಲ್ಲಿ ದಿ. ೨೧-೯-೫೨ ನೇ ದಿವಸ ಬನ್ನಿಕೊಪ್ಪದಲ್ಲಿ ವಿಜೃಂಭಣೆಯಿಂದ ಜರುಗಿತು. ಈ ಸಮ್ಮೇಲನಕ್ಕೆ ಗ್ರೂಪ ಶಿಕ್ಷಕ-ಶಿಕ್ಷಿಕೆಯರು ಹಾಗೂ ವಿದ್ಯಾರ್ಥಿ ವಿದ್ಯಾರ್ಥಿನಿಯರು ಹಾಗೂ ಬೆಳ್ಳಟ್ಟಿ, ಹೆಬ್ಬಾಳ, ಬೆಳಘಟ್ಟಿ, ರಣತೂರ, ಚಿಕ್ಕಸವನೂರ, ಮುಂತಾದ ಗ್ರಾಮಗಳಿಂದ ಶಿಕ್ಷಕರು ಹಾಗು ವಿದ್ಯಾರ್ಥಿ ವಿದ್ಯಾರ್ಥಿನಿಯರು ಭಾಗ ತಕ್ಕೊಂಡಿದ್ದರು. ಊರೊಳಗಿನ ಆಬಾಲವೃದ್ಧರು ಸಹ ಬಂದಿದ್ದರು.

ಮುಂಜಾನೆ ೮ ಘಂಟೆಗೆ ಬಾಲಕ-ಬಾಲಿಕೆಯರು ಹಾಗೂ ಶಿಕ್ಷಕ-ಶಿಕ್ಷಿಕೆಯರು ಪ್ರಭಾತಫೇರಿ ಕೂಡಿ ಊರೊಳಗಿನ ಎಲ್ಲ ಬೀದಿಗಳಲ್ಲಿ ಹಾಯ್ದು ಬಂದ ಬಳಿಕ ೯ ಘಂಟೆಗೆ ಶಾಲೆಯ ಬೈಲಲ್ಲಿ ಇಲ್ಲಿಯ ಗ್ರಾಮಪಂಚಾಯತಿ ಸರಪಂಚರಾದ ಶ್ರೀಮಾನ ದೇವಪ್ಪ [illegible] ಇವರ ಹಸ್ತದಿಂದ ಧ್ವಜವಂದನೆಯಾಯಿತು. [illegible]ರಿಗೂ ಪ್ರಸಾದ ಹಂಚಲಾಯಿತು.

ಮುಂಜಾನೆ ೧೧ ಘಂಟೆಗೆ ಸಮ್ಮೇಲನ ಕಾರ್ಯಕ್ರಮ ಪ್ರಾರಂಭವಾಯಿತು. ಪ್ರಾರಂಭದಲ್ಲಿ ಇಲ್ಲಿಯ [illegible] ಶಾಲಾ ಬಾಲಿಕೆಯರಿಂದ ಸ್ವಾಗತ ಪದ್ಯಗಳಾಗಿ ಶ್ರೀ. [illegible] ನ. ವೈದ್ಯ ಹೆಡಮಾಸ್ತರ ಇವರು [illegible] ಸ್ವಾಗತ ಕೋರಿದರು. ಬಳಿಕ ಅಧ್ಯಕ್ಷರ [illegible] ಭಾಷಣವಾಯಿತು.

ತರುವಾಯ ಶ್ರೀ. ಕೆ. ಎಫ್. [illegible] ಮಾಸ್ತರ ಇವರು ೧ ನೇ ಇಯತ್ತೆಗೆ [illegible] ಶ್ರೀ. [illegible] ಆರ್. ಹಿರೇಮಠ ಪ್ರಾ. ಗ್ರಾ. ಶಾ. [illegible] ಬಾವನೂರ ಇವರು ೫ ನೆಯ ಇಯತ್ತೆಗೆ [illegible] ಪ್ರಕಾರ ಮಾದರಿಯ ಪಾಠ ಕಲಿಸಿ [illegible] ಗಳ ಬಗ್ಗೆ ಚರ್ಚೆ ಜರುಗಿತು. ಶ್ರೀ. [illegible] ಅ. ಮಾ. ಬೆಳ್ಳಟ್ಟಿ, ಶ್ರೀ. ಜೀ. ವ. ವೈದ್ಯ ಹೆ. ಮಾ. ಬನ್ನಿಕೊಪ್ಪ ಇವರು ಚರ್ಚೆಯಲ್ಲಿ ಭಾಗ ತಕ್ಕೊಂಡಿದ್ದರು. ಅಧ್ಯಕ್ಷರಿಂದ ಚರ್ಚಾ ಪಾಠಗಳ ಪೂರ್ತಿಯಾಯಿತು. ಬಳಿಕ ಶ್ರೀ. ಕ. ಹ. ಹಲಗಪೂರ ಹೆ. ಮಾಸ್ತರ ಬೆಳ್ಳಟ್ಟಿ ಶ್ರೀ. ಲ. ಮ. ಪಾಟೀಲ ಅ. ಮಾ. ಬೆಳ್ಳಟ್ಟಿ ಇವರು ಪಕ್ಷ ಪುಸ್ತಕ, ಅಭ್ಯಾಸಪತ್ರಿಕೆ ಮೊದಲಾದ ಶೈಕ್ಷಣಿಕ ವಿಷಯಗಳ ಬಗ್ಗೆ ಮಾತಾಡಿದರು. ಬಳಿಕ ಅಧ್ಯಕ್ಷರ ಹಸ್ತದಿಂದ ಶೈಕ್ಷಣಿಕ ಪ್ರದರ್ಶನ ಉದ್ಘಾಟನೆಯಾಯಿತು. ಪ್ರದರ್ಶನವು ಒಳ್ಳೇ ಪ್ರೇಕ್ಷಣೀಯವಾಗಿತ್ತು. ಚಿತ್ರಪಟ, [illegible], ಹೆಣಿಕೆ, ಪಾಠ [illegible] ಹಳೆ ಹೊಸ [illegible] ಮಾಡಿದ ಕೈ[illegible] ಪ್ರದರ್ಶನವು ಚಿತ್ತಾಕರ್ಷಕವಾಗಿತ್ತು.

[illegible]

[illegible]

[illegible]

ಅಜಿತ ಎಜನ್ಸಿ, ಬೆಳಗಾವಿ.

1	A Pen Picture of Pandit Jawaharlal Nehru	1	0	0
2	"Sthita Pradnya Sutra"	0	6	0
೩	ಜನೆವರಿ ೨೬ ನಾಟಕ	೦	೫	೦
೪	ಸಾಕ್ಷರತಾ ಸಾಫಲ್ಯ ,,	೦	೫	೦
೫	ವಿಜಯಶ್ರೀ ಕಥಾ ಸಂಗ್ರಹ	೧	೦	೦
೬	ಹಂಬಲ ,,	೧	೦	೦
೭	ಅಮೃತಧಾರೆ ,,	೧	೦	೦
೮	ಅಜಿತನ ಶಿಸ್ತು ,,	೦	೫	೦
೯	ದಾದಿ ,,	೦	೫	೦
೧೦	ಕನ್ನಡ-ಮರಾಟೆ ,,	೦	೨	೦
೧೧	ಒಲಿದಾನ ಕಾದಂಬರಿ	೦	೧೨	೦
೧೨	ಕಣ್ಣು ಮುಂದೆ ಕೊಲೆ ,,	೧	೮	೦
೧೩	ಕಾಂಗ್ರೇಸದ ಇತಿಹಾಸ	೦	೧೦	೦
೧೪	ಹಿರಿಮೆಯ ಮಂತ್ರ	೦	೩	೦
೧೫	ಗಲಿವ್ಹರನ ದೇಶಸಂಚಾರ ,,	೦	೬	೦
೧೬	ರಾಷ್ಟ್ರಗೀತಾ ಮಂಜರಿ ಪದ್ಯ	೦	೪	೦
೧೭	ಮಹಾತ್ಮಾ ಗಾಂಧಿಯವರ ಕೊಲೆ ,,	೦	೮	೦
೧೮	ದೊರೆ ಮಲ್ಲಸರ್ಜನ ದುಂದುಮಿ ,,	೨	೦	೦
೧೯	ಭಾರತ ಭೂ ಮಹಿಮೆ ,,	೦	೩	೦
೨೦	ಶ್ರೀಮಾರುತಿ ಉಪಾಸನಾ ,,	೦	೩	೦
೨೧	ಶ್ರೀಲಕ್ಷ್ಮೀ ವೆಂಕಟೇಶ ಸ್ತೋತ್ರಂ ,,	೦	೫	೦
೨೨	ಮನೋಬೋಧೆ ,,	೦	೫	೦
೨೩	ಶ್ರೀ ಶನಿಮಹಾತ್ಮ್ಯೆ ,,	೦	೩	೦
೨೪	ಶ್ರೀಕ್ಷೇತ್ರ ಯಡೂರ	೨	೮	೦
	ಶ್ರೀಮತ್ ಶಿವಾನಂದ ಸ್ವಾಮಿಗಳ			
೨೫	ಉದರದ ಆರೋಗ್ಯ ಮತ್ತು ಸ್ನಾಯುಬಲ ಸಂವರ್ಧನ	೨	೬	೦
೨೬	ಬ್ರಹ್ಮಚರ್ಯವೇ ಜೀವನ ಅರ್ಥಾತ್ ವೀರ್ಯನಾಶವೇ ಮೃತ್ಯು	೩	೮	೦

ಶ್ರೀ. ಸಿಂಪಿ ಲಿಂಗಣ್ಣನವರ ಸಾಹಿತ್ಯ ಕೃತಿಗಳು.

ಇವರ ಸಾಹಿತ್ಯವನ್ನೋದಿದರೆ ಮಾಸಿದ ತಲೆ ಮಡಿಯಾಗುವದೆಂದೂ, ತಂಗೂಳು ಬಿಸಿಯನ್ನವಾಗುವದೆಂದೂ ಒಂದೇ ಮಾತಿನಲ್ಲಿ ಹೇಳಬಹುದು.

ಶ್ರೀ ಅರವಿಂದ ಸಾಹಿತ್ಯ ಕನ್ನಡದಲ್ಲಿ,

೧	ಶ್ರೀ ಅರವಿಂದರು (ಚರಿತ್ರ)	೧	೧೨	೦
೨	ಧರ್ಮ ಮತ್ತು ರಾಷ್ಟ್ರೀಯತ್ವ (ಲಂಪ್ರಬಂಧಗಳು)	೧	೮	೦
೩	ಅರವಿಂದರ ಪತ್ರಗಳು	೦	೮	೦
೪	ಧರ್ಮಕ್ಷೇತ್ರೇ ಕುರುಕ್ಷೇತ್ರೇ ಉಳಿದುವು	೦	೮	೦
೫	ಮುಗಿಲ ಜೇನು (ಕವನ ಸಂಗ್ರಹ)	೧	೮	೦
೬	ದತ್ತ ಸಾಹಿತ್ಯ (ಶ್ರೀ. ಬೇಂದ್ರೆ ಅವರ ಸಾಹಿತ್ಯ ಪರಿಚಯ)	೧	೮	೦
೭	ಬೆಟ್ಟದ ಹೊಳೆ (ಕಾದಂಬರಿ)	೧	೪	೦
೮	ಸ್ವರ್ಗದೋಲೆಗಳು	೧	೮	೦
೯	ಭಕ್ತರಾಜ ಬಸವಣ್ಣ	೦	೧೨	೦
೧೦	ಪವಿತ್ರ ಜೀವನ (ಕಥಾ ಸಂಗ್ರಹ)	೧	೮	೦
೧೧	ಭಾರತದ ಭವ್ಯಸಿದ್ಧತೆ (ಇತಿಹಾಸ ನಿರೀಕ್ಷಣೆ)	೧	೪	೦
೧೨	ಪೂಜಾ (ಗದ್ಯಕವನ)	೦	೮	೦
೧೩	ಯೋಗದೀಕ್ಷೆ (ಯೋಗ ವಿಚಾರದ ಪಶ್ನೋತ್ತರಗಳು)	೧	೪	೦

— ಶ್ರೀ ಅರವಿಂದ ಗ್ರಂಥಾಲಯ
ಚಡಚಣ (P. Q.) ಜಿ. ವಿಜಾಪೂರ.

ಶ್ರೀಕ್ಷೇತ್ರ ಎಡೂರ.

ಶ್ರೀಕ್ಷೇತ್ರ ಎಡೂರ ಎಂಬ ಶಬ್ದ ಭಾವಿಕರ ಭಕ್ತರ ಹೃದಯಗಳಲ್ಲಿ ಎಂತಹ ತೆರೆಯನ್ನು ಎಬ್ಬಿಸಬಲ್ಲದು? ಎಡೂರ ವೀರಭದ್ರದೇವರ ಮಹಿಮೆ ಎಂತಹ ಭಾವನೆಗಳನ್ನು ಹುಟ್ಟಿಸಬಲ್ಲದು? ಈ ಮಹಾಕ್ಷೇತ್ರದ ಪರಿಚಯವು ಬೇಕೆ? ಶ್ರೀ ವೀರಭದ್ರದೇವರ ಮಹಿಮಾತಿಶಯದ ತಿಳುವಳಿಕೆಯ ಹಂಬಲವೇ? ಹಾಗಾದರೆ ಇದೋ ಅಂಥ ಭಾವಿಕರ ಭಕ್ತರ ಸಲುವಾದ ಮೇಲಿಗ "ಶ್ರೀಕ್ಷೇತ್ರ ಎಡೂರ" ಎಂಬ ಪುಸ್ತಕವು [illegible]. ಕೊಂಡು ಓದಿ ಮಹಿಮಾತಿಶಯದ ಪರಿಚಯ ಮಾಡಿಕೊಂಡು ಹೃದಯಗಳನ್ನು ಪ್ರಸೀತಗೊಳಿಸಿ ಧನ್ಯರಾಗಿರಿ! ಬೆಲೆಯು ಬರೆ ೨-೮-೦. (ಪ್ರತಿಗಳು ಸ್ವಲ್ಪೆ ಅವೆ. ಬೇಕಾದವರು ಬೇಗನೇ ತ್ವರೆಮಾಡಿರಿ.)

ದಿ ಅಜಿತ ಎಜನ್ಸಿ, ಬೆಳಗಾವಿ.

THE FOURTH
MYSORE STATE JOURNALISTS' CONFERENCE
HASSAN

ಕರ್ಣಾಟಕ ಚಂದ್ರಿಕೆ

ಕನ್ನಡಿಗರ ಕೂಟ

ಉತ್ತಮವರ್ಗದ ಮಾಸ[illegible]

ವಾರ್ಷಿಕಚಂದಾ ಅಂಚೆವೆಚ್ಚ ಸೇರಿ [illegible]

ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ

ಸಂಪುಟ ೧೧ | ಸಿದ್ಧಾರ್ಥಿ ಮಾರ್ಗಶೀರ್ಷ, ಪುಷ್ಯ, ಮಾಘ, ಫಾಲ್ಗುಣ, | [illegible]

ಸಂಪಾದಕ

ಆಸ್ಥಾನವಿದ್ವಾನ್ ನಂಜನಗೂಡು ಶ್ರೀಕಂಠಶಾಸ್ತ್ರಿ.

MYSORE:
PRINTED AT THE G.T.A. PRESS
1922.

THE FOURTH
MYSORE STATE JOURNALISTS' CONFERENCE
HASSAN

ಕರ್ಣಾಟಕ ಚಂದ್ರಿಕೆ

ಕನ್ನಡಿಗರ ಕೂಟ
ಧಾರವಾಡ

ಉತ್ತಮವರ್ಗದ ಮಾಸ...

ವಾರ್ಷಿಕಚಂದಾ ಅಂಚೆವೆಚ್ಚ ಸೇರಿ ...

ಕರ್ನಾಟಕ ವಿದ್ಯಾವರ್ಧಕ ಸಂಘ
ಧಾರವಾಡ

ಸಂಪುಟ ೧೧ | ಸಿದ್ಧಾರ್ಥಿ ಮಾರ್ಗಶೀರ್ಷ, ಪುಷ್ಯ, ಮಾಘ, ಫಾಲ್ಗುಣ, | ...

ಸಂಪಾದಕ

ಆಸ್ಥಾನವಿದ್ವಾನ್ ನಂಜನಗೂಡು ಶ್ರೀಕಂಠಶಾಸ್ತ್ರಿ.

MYSORE:
PRINTED AT THE G.T.A. PRESS
1922.

ವಿಷಯಾನುಕ್ರಮಣಿಕೆ.

ಸ್ವವಿಷಯ ... ... ೧—೨.

ವಿಷ್ಣುಲೀಲಾ ೧೩ರಿಂದ ಪೂರ್ವರಂಗ, ಕೋಧನಪತ್ರ, ಮತ್ತು [ಮುಖಪತ್ರ ಪೂರ್ತಿ

ಮೈಸೂರುಪಚಾತ್ರ ... ೪೯ರಿಂದ ಮುಖಪತ್ರ ಪೂರ್ತಿ.

ಕರ್ನಾಟಕ ಪಂಚತಂತ್ರ ... ೯ರಿಂದ ಮುಖಪತ್ರಪೂರ್ತಿ.

ಸ್ತ್ರೀಶಾರದಪೂರ್ವಕ [illegible] ರಕ್ಷಾಪತ್ರ.

ಸ್ತ್ರೀಶಾಲೆ [illegible]

[illegible]

ಕನ್ನಡಿಗರ ಕೂಟ ಧಾರವಾಡ

ಸ್ವವಿಷಯ.

ಪೋಷಕಮಹಾಶಯ,

ವಿದ್ಯಾಭ್ಯಾಸದ ಇಲಾಖೆಯಿಂದ ದೊರೆಯುತ್ತಿದ್ದ ಪೋಷಣದ್ರವ್ಯವು ವರ್ಷಪೂರ್ತಿಯಾದ ಬಳಿಕ ಎಂದರೆ ಸಂಪುಟವು ಮುಗಿದ ಮೇಲೆ ಕೈ ಸೇರುವಂತಾದುದೂ, ಮೈಸೂರು ಶ್ರೀನಿವಾಸ ಪ್ರೆಸ್ಸಿನವರು ತೊಂದರೆಯನ್ನುಂಟುಮಾಡಿದುದೂ. ಮುದ್ರಣದ ಕಾಗದಗಳ ಬೆಲೆಯು ನಾಲ್ಕೈದರಷ್ಟು ಏರಿದುದೂ, ಚಂದ್ರಿಕೆಯ ಹನ್ನೊಂದನೆಯ ಸಂಪುಟದ ಸತ್ವವನ್ನು ಉಡುಗಿಸಿ, ತಲೆಯೆತ್ತದಂತೆ ಮಾಡಿಬಿಟ್ಟವು. ಸಂಪಾದಕನ ಸಾಹಸವೇನೂ ನಡೆಯದೆ ಹೋಯಿತು. ಪತ್ರಿಕೆಯು ಪ್ರಕಟವಾಗಲೇ ಆರದೆನ್ನುವ ಶಂಕೆಯೂ ಬೇರೂರಿತು. ಈ ವಿಪ್ಲವದಲ್ಲಿ ನಮ್ಮ ಮಿತ್ರವರ್ಯರೂ ಭಾಷಾಭಿಮಾನಿಗಳೂ ಆದ ಹೊಸಪುರದ ಇನಾಂದಾರ್ ಬ್ರ|| ಶ್ರೀ|| ಧರ್ಮಸ್ಥಳಂ ಲಕ್ಷ್ಮೀನಾರಾಯಣ ಶಾಸ್ತ್ರಿಗಳವರು ಉದಾರಾಶ್ರಯವಿತ್ತು, ಮುಮೂರ್ಷಾವಸ್ಥೆಯಲ್ಲಿದ್ದ ಚಂದ್ರಿಕೆಯನ್ನು ಸಜೀವವನ್ನಾಗಿ ಮಾಡಿ, ಪೋಷಕರ ಋಣದಿಂದ ಬಿಡುತೆಗೊಳಿಸಲು ನೆರವಾದುದರಿಂದ ತಮ್ಮ ಸಂದರ್ಶನವನ್ನು ಪಡೆಯುವ ಸುಯೋಗವು ಮತ್ತೆ ಲಭಿಸಿತು. ಶ್ರೀ|| ಶಾಸ್ತ್ರಿಗಳವರ ಔದಾರ್ಯವನ್ನೂ ಭಾಷಾಭಿವೃದ್ಧಿಕಾರ್ಯದಲ್ಲಿ ಅವರಿಗಿರುವ ಉತ್ಸಾಹವನ್ನೂ ಅಭಿನಂದಿಸಿ ಚಂದ್ರಿಕೆಯು ಈ ಮೂಲಕ ತನ್ನ ಕೃತಜ್ಞತೆಯನ್ನು ಪ್ರಕಾಶಪಡಿಸುವುದಲ್ಲದೆ ಅವರಿಗೂ ಅವರ ಅಪ್ತೇಷ್ಟವರ್ಗಕ್ಕೂ ಜಗದೀಶ್ವರನು ಆಯುರಾರೋಗ್ಯೈಶ್ವರ್ಯಾದಿಗಳನ್ನು ಅಶೋಷ್ಯತೆಯಾಗಿ ಅನುಗ್ರಹಿಸಿ ಕಾಪಾಡಲೆಂದು ಅರ್ಥಿಸುತ್ತಿರುವುದು.

ಚಂದ್ರಿಕಾ ಪ್ರಚಾರವು ನಿಂತು ಹೋಗಿದ್ದರೂ ಯಥಾಪೂರ್ವವಾದ ಅಭಿಮಾನವನ್ನಿಟ್ಟು ತಮ್ಮ ಸೌಹಾರ್ದವನ್ನು ಪ್ರದರ್ಶಿಸುತ್ತಿರುವ ಮಂಗಳೂರಿನ ಸ್ವದೇಶಾಭಿಮಾನಿ, ಚಾಮರಾಜನಗರದ [illegible],

|| ಶ್ರೀ: ||

ಧರಣೀರಮಣಿಯ ವಿಮಲಾ | ಭರಣವೆನಲ್ ನಾಡೆ ಮೆರೆವ ಕನ್ನಡ ನಾಡೊಳ್ || ವರಮಹಿಷಾಸುರನಾಮಕ | ಪುರಮದು ಯದುಭೂಪರಕ್ಷಿತಂ ಕರಮೆಸೆಗುಂ || ೧ ||

ಸಕಲಕಲಾನಿಪುಣರ್ ಮೇಣ್ | ಪ್ರಕಟಿತನಿಜಧರ್ಮಮಾರ್ಗರಾ ಯದುಜನಪರ್ || ಅಕಳಂಕರವರೊಳೆಸೆದಂ | ಸುಕವಿಪ್ರಿಯನಮಲಕೀರ್ತಿ ಚಾಮಮಹೀಂದ್ರಂ || ೨ ||

ಸರಸಂ ನಾಟಕಪದ್ಧತಿ | ಯಿರದೊಡಮೀನಾಡೊಳರಸನುರೆ ಯತ್ನಿಸುತಂ || ಪಿರಿದಾಶ್ರಯಮಿತ್ತಾ ಕವಿ | ವರರಿಂ ಬರೆಯಿಸಿದನೊಲ್ದು ನೋಡಿದನೊಸೆದಂ || ೩ ||

ಮೊಳೆತುದು ಪೂತುದು ಕಾತುದು | ಸಲೆಪಣ್ತುದು ನಾಟಕದ್ರುಮಂ ಮೈಸೂರೊಳ್ || ವಿಲಸತ್ಕೃಷ್ಣನೃಪಪ್ರೋ | ದ್ಬಲದಿಂ ಕನ್ನಡದಮಂದಿಗಿತ್ತುದು ತಿಳಿವಂ || ೪ ||

ಶ್ರೀವೈಷ್ಣವಾಚಾರ್ಯಕುಲಭವ | ನೀಕ್ಷುಸುಧೋಪಮಕ್ರಿಯಾಮರ್ಮಜ್ಞಂ || ಎ. ವೀ. ವರದಾಚಾರ್ಯಂ | ಕೋವಿದನಾ ನಾಟಕಾಭಿನೇತೃಗಣೋಜಂ || ೫ ||

ಈವಿದ್ವನ್ಮಣಿಯುದ್ಯಮಂ ಬಗೆಗೊಳಲ್ "ರತ್ನಾವಳೀಸಂಘ"ಮಾ | ಯ್ತಾವಾವೂರೊಳುಮೆಮ್ಮ ನಾಡೊಳಿದರಾ ಸದ್ವೃತ್ತಮಂ ಕಾಣದರ್ || ಕಾವಿಲ್ಲಂ ಪಲನಾಟಕಂಗಳಿದರಾ ಸಂಸ್ಥಾಪಕೋತ್ಸಾಹದಿಂ | ಶ್ರೀವಿದ್ವನ್ನುತಮಾಯ್ತು ಭಾಪು! ಕವಿಯುಂ ನಾನಲ್ತೆ ಧನ್ಯಂ! ವಲಂ || ೬ ||

ವರಮತ್ಸ್ಯಂ ಮೊದಲೆನಿಸಿರೆ | ದೊರೆವಡೆದಸುರಾರಿಯೆಂಟುಮವತಾರಂಗಳ್ || ನೆರೆಬಲ್ಲರ ಬಗೆಗೊಪ್ಪಿರೆ | ಬರೆದೆನಿದಂ "ವಿಷ್ಣುಲೀಲೆ"ಯೆಂ ನಾಟಕಮಂ || ೭ ||

ಇದನಭಿನಯಿಸಲ್ ಬಲ್ಲಂ | ಚದುರಂ ಭರತಾಗ್ರಗಣ್ಯವರದಾಚಾರ್ಯಂ || ಅದರಿಂದಾಣತಿವಡೆದಾ | ನಿದನಾತಂಗರ್ಪಿಸಿರ್ಪೆನತ್ಯಾದರದಿಂ || ೮ ||

ಕನ್ನಡದರಸರುಮೆಸೆವಾ | ಕನ್ನಡದೊಳ್ನಾಡುಮೈದೆ ಕನ್ನಡದಿಂಪುಂ || ಕನ್ನಡದ ನಾಟಕಂಗಳು | ಮುನ್ನತಿವಡೆದಿಳೆಯೊಳೊಪ್ಪುಗಾಚಂದ್ರಾರ್ಕಂ || ೯ ||

ಗ್ರಂಥಕರ್ತ — ಎಂ. ಶ್ರೀಕಂಠಶಾಸ್ತ್ರಿ,

ಆಸ್ಥಾನವಿದ್ವಾನ್.

Registered according to Act XXV of 1867.

[illegible]

ಕಥಾವಿವರ.

೧. ಜಯವಿಜಯರು ಲೋಕಾನುಗ್ರಹಾರ್ಥವಾದ ಮಾಯೆಗೆ ಅಧೀನರಾಗಿ ಸನಕಾದಿಯೋಗಿಗಳನ್ನು ತಿರಸ್ಕರಿಸಿ ತನ್ಮೂಲಕ ಭವಪಾಶಕ್ಕೆ ಒಳಗಾಗಿ ದೈತ್ಯರಾಕ್ಷಸ ಮಾನುಷಗಳೆಂಬ ಮೂರು ಜನ್ಮಗಳನ್ನು ಎತ್ತುವರು.
ಮತ್ಸ್ಯಕೂರ್ಮಾವತಾರಗಳು

೨. ಸೂತ್ರಧಾರನೂ ಪಾರಿಪಾರ್ಶ್ವಕನೂ ಮಂಗಳಾಚರಣೆಮಾಡುವರು.
ವರಾಹಾವತಾರ

೩. ಹಿರಣ್ಯಕಶಿಪುವು ಹಿರಣ್ಯಾಕ್ಷನ ವಧೆಯನ್ನು ಕೇಳಿ ವಿಷ್ಣುವನ್ನು ಕೊಲ್ಲಲು ನಿಶ್ಚಯಿಸುವನು.

೪. ಅಮರಾವತಿಗೆ ಹೋಗುತ್ತಿದ್ದ ಇಂದ್ರನನ್ನು ಕಂಡು, ನಾರದನು ಕಯಾದುವಿನ ವಿಷಯವಾಗಿ ಬುದ್ಧಿವಾದಹೇಳುವನು.

೫. ಬಾಲಕರ ಕಾಟದಿಂದ ಬೇಸರಹೊಂದಿದ ಕಂಚುಕಿಯೊಡನೆ ಸಖಿಯು ಪ್ರಹ್ಲಾದನ ಹರಿಧ್ಯಾನ ವಿಷಯವನ್ನೂ, ಹಿರಣ್ಯಕಶಿಪುವಿನ ಕೋಪವನ್ನೂ ಸೂಚಿಸುವಳು.

೬. ಹಿರಣ್ಯಕಶಿಪುವು ಪ್ರಹ್ಲಾದನನ್ನು ಅಗ್ನಿಕುಂಡದಲ್ಲಿ ಹಾಕಬೇಕೆಂದು ವಿಧಿಸಿ ರಾಣಿವಾಸಕ್ಕೆ ಹೋಗುವನು.

೭. ಪ್ರಹ್ಲಾದನು ಮೃತನಾದನೆಂದು ತಿಳಿದಿದ್ದ ಹಿರಣ್ಯಕಶಿಪುವಿನಿದಿರಾಗಿ ಪ್ರಹ್ಲಾದನು ಕಾಣಿಸಿಕೊಳ್ಳುವನು. ಹಿರಣ್ಯಕಶಿಪುವು ಮಗನ ನಡೆವಳಿಕೆಗಾಗಿ ಕೋಪಿಸಿಕೊಂಡು ಹೊರಟುಹೋಗುವನು.

೮. ಸಮಾಧಾನ ಪಡಿಸುವುದಕ್ಕೆ ಹಿಂಬಾಲಿಸಿದ ಕಯಾದುವಿನಿಂದ ಹಿರಣ್ಯಕಶಿಪುವು ಪ್ರಹ್ಲಾದನಿಗೆ ವಿಷಪಾನಮಾಡಿಸುವನು ಪ್ರಹ್ಲಾದನು ಮೃತನಾಗದಿರಲು ಹಿರಣ್ಯಕಶಿಪುವು ತಾನೇ ಅವನನ್ನು ಕೊಲ್ಲಲು ಪ್ರಯತ್ನಿಸಿ, ನೃಸಿಂಹರೂಪಧರನಾದ ಮಹಾವಿಷ್ಣುವಿನಿಂದ ಕೊಲ್ಲಲ್ಪಡುವನು.
ನರಸಿಂಹಾವತಾರ

೯. ನಾರದನ ಅಪೇಕ್ಷೆಯಂತೆ *ವಾಮನರೂಪವು ಪ್ರತ್ಯಕ್ಷವಾಗುವುದು*

೧೦. ನಾರದನು ರಾವಣಕುಂಭಕರ್ಣರ ಹಾವಳಿಯಿಂದ ನೊಂದ ಮಹೇಂದ್ರನಿಗೆ ಧೈರ್ಯಹೇಳುವನು. *ಪರಶುರಾಮಾವತಾರ*.

೧೧. ಸೀತಾಪಹರಣಮಾಡಿದ ರಾವಣನನ್ನು ಶಿಕ್ಷಿಸುವುದಕ್ಕಾಗಿ ಕಪಿಸೇನೆಯೊಡನೆ ಬಂದು ಸಮುದ್ರತೀರದಲ್ಲಿದ್ದ ರಾಮಲಕ್ಷ್ಮಣರ ಬಳಿಗೆ ವಿಭೀಷಣನು ಬಂದು ಶರಣಾಗತನಾಗುವನು. ವಿಭೀಷಣ ಪಟ್ಟಾಭಿಷೇಕ-ರಾವಣನ ಕಡೆಯವನಾದ ಶುಕನು ಕಪಿಗಳ ಕೈಗೆ ಸಿಕ್ಕಿ ರಾಮನ ಅನುಗ್ರಹದಿಂದ ಬದುಕಿಹೋಗುವನು.

೧೨. ದರ್ಭಶಯನದ ಶ್ರೀರಾಮನು ದಾರಿಬಿಡದಿದ್ದ ಸಮುದ್ರನ ಮೇಲೆ ಕೋಪಿಸಿ ಬಾಣಪ್ರಯೋಗಮಾಡುವನು. ಸಾಗರನು ಪ್ರತ್ಯಕ್ಷನಾಗಿ ಸೇತುವೆಯನ್ನು ಕಟ್ಟಲು ಸಮ್ಮತಿಸುವನು. ಸೇತುಬಂಧನ.

೧೩. ಕಪಿಗಳ ಪೆಟ್ಟಿನಿಂದ ನೊಂದ ಶುಕನನ್ನು ವಿದ್ಯುಜ್ಜಿಹ್ವನು ಹಾಸ್ಯಮಾಡಿ [illegible] ಕರೆದುಕೊಂಡು ಅಶೋಕವನಕ್ಕೆ ಹೋಗುವನು.

೧೪. [illegible] ಶಿರಸ್ಸನ್ನು [illegible]

೧೫. [illegible]

೧೬. [illegible]

೧೭. [illegible]

೧೮. [illegible]

೧೯. [illegible]

೨೦. [illegible]

೨೧. [illegible]

೨೨. ಸೀತಾಗ್ನಿಪ್ರವೇಶ-ಅಗ್ನಿ ಮುಂತಾದವರು ಸೀತೆಯನ್ನು ರಾಮನಿಗೆ ಅರ್ಪಿಸುವರು. ನಾರದನು ಜಯವಿಜಯರು ಶಿಶುಪಾಲದಂತವಕ್ರರಾಗಿ ಜನ್ಮಿಸುವುದನ್ನು ಸೂಚಿಸುವನು. *ಕೃಷ್ಣಾವತಾರ*

೨೩. ಗೋಪಿಯರೂ ಕೃಷ್ಣನೂ ವಿಹರಿಸುತ್ತಿರುವಾಗ ವಿದರ್ಭನಗರದಿಂದ ಬಂದ ಬ್ರಾಹ್ಮಣನು ರುಕ್ಮಿಣಿಯ ಕಾಗದವನ್ನು ತಂದುಕೊಡುವನು. ಕೃಷ್ಣನು ಶಿಶುಪಾಲನಿಗೆ ಅಪಮಾನಗೊಳಿಸಿ ರುಕ್ಮಿಣಿಯನ್ನು ತಾನೇ ಕರೆತರಲು ನಿಶ್ಚಯಿಸಿ ಹೊರಡುವನು.

೨೪. ನಾರದನ ಸಂಭಾಷಣೆಯಿಂದ ಶಿಶುಪಾಲ ಜರಾಸಂಧ ರುಕ್ಮಿಗಳ ಕೋಪವು ಹೆಚ್ಚುವುದು.

೨೫. ರುಕ್ಮಿಣಿಯ ಪರಿಣಯವನ್ನು ಕುರಿತು ಡಂಗುರದವನು ಪ್ರಜ್ಞೆತಪ್ಪಿ ಸಾರುವನು.

೨೬. ಪರಿವಾರಸಹಿತಳಾಗಿ ರುಕ್ಮಿಣಿಯು ಶಚೀದೇವಾಲಯವನ್ನು ಪ್ರವೇಶಿಸಿ ಪೂಜಿಸುವಳು. ಕೃಷ್ಣನು ಪ್ರತ್ಯಕ್ಷನಾಗಿ ಅವಳನ್ನು ಕರೆದುಕೊಂಡು ಹೋಗುವನು. ರುಕ್ಮಿಜರಾಸಂಧರು ಪ್ರತಾಪಗಳನ್ನು ಹೇಳಿಕೊಳ್ಳುವರು

೨೭. ಕೃಷ್ಣನೊಡನೆ ಯುದ್ಧಮಾಡಿ ಪರಾಜಿತರಾದ ಜರಾಸಂಧ ದಂತವಕ್ರರನ್ನು ನಾರದನು ಹಾಸ್ಯಮಾಡಿ, ಇವರಿಗೆ ಧರ್ಮರಾಯನು ಮಾಡುವ ರಾಜಸೂಯವೇ ಅಂತ್ಯಕಾಲವೆಂದು ನಿಶ್ಚಯಿಸುವನು

೨೮. ರಾಜಸೂಯ ಯಾಗದಲ್ಲಿ ಪಾಂಡವರ ವೈಭವವನ್ನು ಕಂಡು ದುರ್ಯೋಧನನು ಶಕುನಿಯೊಡನೆ ಹೇಳಿಕೊಂಡು ದುಃಖಿಸುವನು.

೨೯. ಧರ್ಮರಾಯನು ಭೀಷ್ಮನ ಅಭಿಪ್ರಾಯದಂತೆ ಶ್ರೀಕೃಷ್ಣನಿಗೆ ಅಗ್ರಪೂಜೆ ಮಾಡುವನು. ಶಿಶುಪಾಲನು ಕೃಷ್ಣನನ್ನೂ ಭೀಷ್ಮನನ್ನೂ ತುಚ್ಛೀಕರಿಸಿ ಮಾತನಾಡಲು ಚಕ್ರಾಯುಧವು ಶಿಶುಪಾಲನನ್ನು ಕೊಲ್ಲುವುದು.

೩೦. ಶಿಶುಪಾಲ ದಂತವಕ್ರರ ಜನ್ಮದಿಂದ ಮುಕ್ತರಾದ ಜಯವಿಜಯರು ಮಹಾವಿಷ್ಣುವಿನ ಸಾನ್ನಿಧ್ಯವನ್ನು ಸೇರುವರು.

ಮಂಗಳ.

ಶೋಧನ ಪತ್ರಿಕೆ.

ಪುಟ.	ಪಙ್ಕ್ತಿ.	ಅಶುದ್ಧ.	ಶುದ್ಧ.
ii	೨೧	ವೃದ್ಧನಾದ ನನಗೆ	ನನಗೆ
vi	೧	ಹೋಗಿವರೇಣ್ಯರಾ	ಯೋಗಿವರೇಣ್ಯರಾ
೨	೨೧	ಅಕ್ಕನನ್ನು	ಅಕ್ಕನನ್ನು
೩	೧೩	ಸೆರೆಮನೆವನಹಹ	ಸೆರೆಮನೆವನಹಹ
೪	೨೩	ಇಷ್ಟಫಲ	ಇಷ್ಟಫಲ
೪	೨೦	ಅಲಸಿಕೆ	ಅಲಸಿಕೆ
೧೪	೪	ಬಾಲಕರು	ಬಾಲಕರು
೧೩	ಕಡೆಯಪದ್ಯ	ಅಣ್ಣಸ್ಥಿರನಾಗುವನು [illegible]	"ಪ್ರಹ್ಲಾದನೆಲ್ಲಿ? ಅವನು ಇಷ್ಟ [illegible] ಗಾಗರೇ ಬಾರಿ"—
		[illegible]	
೧೯	೧೯	ಅವನ್ನು	ಅವನ್ನು
[illegible]	[illegible]	[illegible]	[illegible]

[illegible]

ಕರ್ನಾಟಕ ವಿದ್ಯಾವರ್ಧಕ ಸಂಘ. ಧಾರವಾಡ.

ಚಂಡೋ—ಸಾರೋ ಸಾರೋ ।

ಶು—ಬಲ್ಲೆ ಹೊಕ್ಕ। ಏನೀದುಃಖ ।

ಚಂ—ಛೀ ಛೀ ಛೀ ಮುಕ್ಕ ।

ಶು—ನೀಕರೂಗಲೇಕೆ । ಕೋಪವೇಕೆ । ಕಾಡಬೇಡ । ನೋಡುಕೋಳಿ

ಚಂ—ಮುಚ್ಚುಬಾಯ । ಛೀಛೀಛೀ ಮುಕ್ಕ ।

ಶು—ತಲೆವಾಗಿ ಬೇಡುವೆನೆ । ಬಾಬಾರೆ ಜಾಣೇ ॥ ದಮ್ಮಯ್ಯ ಕಾಣ ।
ಚಲವೆನ್ನಾಣೆವಜಾಣೆ ॥

ಚಂ—ಪಡಿನುಡಿನುಡಿವೆಯ । ಥೂಥೂಥೂಮುಕ್ಕ ॥

೪೬ ೭ ಶುಕ— (ರಾಗ—ತಾಳ.)

ಚಂ—ನಡೆನಡೆಮೂದೇವಿ । ಈತಕ್ಕನಾನೆಲ್ಲ । ಮೊದಲೇಬಲ್ಲೆನು ॥

ಶು—ದಮ್ಮಯ್ಯಬೇಡುವೇ । ದುಮ್ಮಾನದೇತವೇ ।

ಚಂ—ದೂರಸಾರೆಲೊ ಘೋರನೇ ॥

ಶು—ಕನ್ನೆಯೆಬಾರೇ। ಎನ್ನನುಸೇರೇ । ಏಕೀಚಲವು।ಕಡುಕೋಪವು ॥

ಚಂ—ಅನ್ಯಾಯಕಾರಾ ।

ಶು—ಬಾರೆನಾಬೇಡುವೆ ।

ಚಂ—ಸಾರತ್ತ ಚೋರಾ ।

ಶು—ಏಕಿಂತುಕಾಡುವೇ ।

ಚಂ—ಛೀ ಸಾರುದೂರ ।

ಶು—ಏಕೀವಿಕಾರಾ । ಕಾಲಿಗೆರಗಿಬೇಡುವೆ ॥

೪೬	೧೦	ರಾಮನು ಪಾತಾಳದಲ್ಲಿ	ರಾವಣನು ಪಾತಾಳದಲ್ಲಿ
,,	೨೦	ಪೂತತ್ವಜನೇಶಾ ।	ಪೂತಜನೇಶಾ ।
೫೦	೧೭	ನೀನೂಸಹಗಮನವಮಾಡಿ	[ಬಿಡು. ನೀನು ಸಹಗಮನವಮಾಡಿದರು
೫೭	೧೯	ಕಂಡೆನಲ್ಲಾ	ಕಂಡೆನಲ್ಲಾ !
೬೧	೧೩	ಕೃಷ್ಣನೂ ಗೋಪಿಯರೂ,	

ರಾಗ—ತಾಳ.

ಸ್ತ್ರೀಯರು—ಕೃಪೆದೋರೀಗ | ದೇವಗೋಪಪುಂಗವಾ ॥ ನೃಪಸಂದೋಹವಂದ್ಯ
ಪದ । ಭೂಮೀಧವಾ ॥ ಬಾರಾಪ್ರಿಯಮೋಹನಾ । ಭಕ್ತಜೀವನಾ ॥

ಕೃಷ್ಣ—ಸಾರಸನಯನೇ ಮೋಹನೇ । ಬಾರೆಲೆ । ಭಾಮಿನೀ ಕಾಮಿನೀ
ಫಣಿಸಮವೇಣೀ । ರಾಣೀ ॥

ಸ್ತ್ರೀಯರು—ವರಸೌಭಾಗ್ಯಜಾಲಮಿಗೆ । ಕೈಸೇರುಗೆ । ಗೋಪೀಜನೇಶ । ಭಕ್ತ
[ಶೋಷಕ ।

೬೪	೭೦	ದಯುದೊರ್ಕೈನಮ್ಮಕೂಡೆ	ದಯೆದೋರ್ಕೈ ನಮ್ಮಕೂಡೆ
೬೬	೬	ರುಕ್ಷ್ಮಿಣಿ	ರುಕ್ಮಿಣಿ
,,	೨೫	ಪೆರೆಹಿಡಿದಿರುವುವು	ಸೆರೆಹಿಡಿದಿರುವುವು
೬೭	೬	ತ್ರಾಪರಾಯಣನಲ್ಲವೆ ?	ತ್ರಾಣಪರಾಯಣನಲ್ಲವೆ ?
೭೦	೧೩.೧೫	ಹೇಳರನಲ್ಲವೆ !	ಹೇಳದನಲ್ಲವೆ !
೭೧	೧೫.೧೪	ಹೋಯ್ತುದೇಅಂತ	ಹೋಯ್ತುದೇಅಂತಾ
,,	೧೬	ಡಂಗಾರು	ಡಂಗುರ
೭೩	೧೮	ಸುರಳಸೇ॥	ಸುರದಸೇ॥
೭೫	೧೮	ರಕ್ಮಿಣಿ	ರುಕ್ಮಿಣಿ
೭೬	೨೧	[illegible]	[illegible]
೭೭	೨೨-೨೫	[illegible]	[illegible]
೭೯			
೮೦	೨೦	[illegible]	[illegible]
೮೩	೧೨	[illegible]	[illegible]
೮೫	೧೨	[illegible]	[illegible]
೮೮	೨೨	[illegible]	[illegible]
೮೮	೨೨	[illegible]	[illegible]

* ವಿಷ್ಣುಲೀಲಾ.

ಪೂರ್ವರಂಗಂ.

ಸೀನ್ ೧.

(ಜಯವಿಜಯರು ಸಮುದ್ರಮಧ್ಯದಲ್ಲಿ ಸಂತೋಷದಿಂದ ವಿಹರಿಸುತ್ತಿರುವರು.)

ಜಯ ವಿಜಯ— ರಾಗ— ತಾಳ.

ತೋರುವೀಭೂರಿಭಾಗ್ಯವು | ದೊರೆಯಲೀಗ | ಸರಿಯಿಹರೆ | ಇದಿರಹರೆ ||ಪ|| ವೀರವಾರ | ದಾರೊ ಸಾಟಿ ಮೆರೆವೆವು | ಸರೋಜ-ಭವಾದಿ | ಸುರಾಳಿ-ಗಢೇಯು | ರೆನಿಸುತೆ ||ಅ|| ಸಿರಿಪತಿಯಾ | ಸರಿಸದೊಳೂ | ಹರಿಸವನಾಂತು | ಚರಿಸುವೆವಾವು | ವೀರಿದ-ಭೋಗವ| ಸೂರೆಯ-ಕೊಂಡೆವು| ಆರಿಹ-ರೆಮ್ಮವೊಲು|| ಧರೆಯೊಳಿಯೆ||೧||

ಜಯ—ನಮಗೆ ಸಮಾನರಾದವರು ಹದಿನಾಲ್ಕುಲೋಕಗಳಲ್ಲಿಯೂ ಯಾರೂ ಇಲ್ಲ.

ವಿಜಯ—ನಿಶ್ಚಯ, ಶ್ರೀಮನ್ನಾರಾಯಣನಿಗೆ ನಮ್ಮಲ್ಲಿ ಎಷ್ಟು ಪ್ರೀತಿ! ಎಷ್ಟು ವಾತ್ಸಲ್ಯ ?

ಜಯ—ಆತನ ಪ್ರೀತಿಯಿಲ್ಲದಿದ್ದರೆ ನಮಗಿಂತಹ ಪದವಿಯು ಲಭಿಸುತ್ತಿತ್ತೆ ?

ವಿಜಯ—ಸಂಶಯವೇಕೆ ! ಭಕ್ತಪರಾಧೀನನಾದ ಶ್ರೀಮನ್ನಾರಾಯಣನು ಸೃಷ್ಟಿ ಸ್ಥಿತಿ ಲಯಗಳನ್ನೆಲ್ಲ ನಮ್ಮ ಇಷ್ಟಾನುಸಾರವಾಗಿಯೇ ನಡೆಯಿಸುತ್ತಿರುವನು. ನಮ್ಮ ಉಭಾಶ್ರಯಸ್ಥಿತಿಯನ್ನುಕಂಡು ಎಷ್ಟುಮಂದಿಗೆ ಅಸೂಯೆಯೋ ?

---

* ಈ ನಾಟಕವನ್ನು ಪೂರ್ತಿಯಾಗಿ ಆಗಲಿ ಅಥವಾ ಇದರ ಯಾವುದಾದರೊಂದು ಭಾಗವನ್ನೇ ಆಗಲಿ ಗ್ರಂಥಕರ್ತನ ಅಪ್ಪಣೆಯಿಲ್ಲದೆ ಯಾರೂ ಅಭಿನಯಿಸಕೂಡದೆಂದು ಎಚ್ಚರಿಸಲಾಗಿದೆ.

ಸಂ, ಶ್ರೀಕಂಠಶಾಸ್ತ್ರಿ, ಗ್ರಂಥಕರ್ತ,

ಜಯ—ಯಾರು ಅಸೂಯೆ ಪಟ್ಟರೇನು ? ನಮ್ಮ ಪದವಿಯನ್ನು ತಪ್ಪಿಸಲು ಆ ಶ್ರೀಮನ್ನಾರಾಯಣನಿಗೂ ಅಶಕ್ಯವಲ್ಲವೆ ?

(ಆಗ ನಾರದನು ಧ್ಯಾನಪರನಾಗಿ ಪ್ರವೇಶಿಸುವನು.)

ನಾರದ—

ರಾಗ—ತಾಳ

ಸೋಮಕದಾನವಭಂಜನರಾಯ | ದೇವೇಶಾ | ಲಕ್ಷ್ಮೀಶಾ || ಶ್ರೀ ಮೀನಾಕೃತಿಧರ[illegible] | [illegible]ಶ್ರೀವಿಶ್ವೇಶಾ ||

ನಾರಾಯಣ ನಾರಾಯಣ ! ನಿನ್ನ ವಿಲಾಸಗಳನ್ನು ವರ್ಣಿಸಲು ಯಾರು ತಾನೆ ಶಕ್ತರಾದಾರು ! ಸಂತೋಷ ಸಂತಾಪಗಳನ್ನು ಉಂಟುಮಾಡುವವನೂ ನೀನೆ, ಪರಿಹರಿಸುವವನೂ ನೀನೆ, ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯಗಳೆಂಬ ಅರಿಷಡ್ವರ್ಗವು ಪ್ರಾಣಿಗಳಲ್ಲಿ ತಲೆದೋರಿ [illegible] ನಿನ್ನ ಮಾಯೆಯ ಪ್ರಭಾವದಿಂದಲೇ. ಈಗ ಧರ್ಮಕಂಟಕರಾಗಿ ಲೋಕಕ್ಕೆ [illegible] ರುವ ದಾನವರನ್ನು ನಿಗ್ರಹಿಸುವುದಕ್ಕಾಗಿ ನೀನು ತೋರಿಸುವ ಅದ್ಭುತ ಲೀಲೆಗಳನ್ನು [illegible] ಯಾರಿಗೆ ತಾನೆ ಶಕ್ಯ ! ([illegible] ನೋಡಿ) ಓಹೋ ! ಜಯ ವಿಜಯರು ! ([illegible]) [illegible] ?

[illegible]

ನಾರದ—[illegible]

[illegible]

ಜಯ—[illegible]

[illegible]

ವಿಜಯ—ಏನು ! ನಾವು ಧರ್ಮವಿರುದ್ಧವಾಗಿ ನಡೆಯುವಂತೆಯೂ ನೀವೇನೋ ನಮಗೆ ಧರ್ಮೋಪದೇಶ ಮಾಡುವಂತೆಯೂ ಒದರಲಾರಂಭಿಸಿದಿರಿ. ಛೋಕೆ ಛೋಕೆ ! ನಮ್ಮನ್ನು ಯಾರೆಂದು ತಿಳಿದು ಹೀಗೆಮಾತನಾಡುತ್ತಿರುವಿರಿ ?

ನಾರದ—ಅಯ್ಯಾ, ನನಗೆ ನಿಮ್ಮಲ್ಲಿರುವ ಪ್ರೇಮಾತಿಶಯದಿಂದ ಧರ್ಮಸ್ವರೂಪವನ್ನು ವಿವರಿಸಬೇಕೆಂದು ಆಲೋಚಿಸಿದೆನು.

ಜಯ—ಎಲಾ, ಬಡಋಷಿಯೇ, ಮಹಾ ವೈಕುಂಠದ್ವಾರಪಾಲಕರಾದ ನಾವು ನಿನ್ನಿಂದ ಧರ್ಮೋಪದೇಶವನ್ನು ಪಡೆಯಬೇಕೋ ?

ವಿಜಯ—ನಮ್ಮ ಸ್ಥಾನ, ನಮ್ಮ ಅಧಿಕಾರ, ನಮ್ಮ ನಡೆವಳಿಕೆ ಇದೊಂದನ್ನೂ ಅರಿಯದ ನಿನಗೆ ನಾವೇ ತಕ್ಕರೀತಿಯಲ್ಲಿ ಬುದ್ಧಿಗಲಿಸಿ ಕಳುಹುವೆವು.

ನಾರದ—(ಸ್ವಗತಂ) ಆಹಾ ! ಇವರಲ್ಲಿ ಅಹಂಕಾರವು ತಾನೇತಾನಾಗಿ ನೆಲಸಿರುವುದು. (ಎಂದು ತಿರುಗಿನೋಡಿ) ಸನಕಾದಿಗಳು ! ಸ್ವಾಮಿಯ ಸಂದರ್ಶನಾರ್ಥವಾಗಿ ಬರುತ್ತಿರುವರು. ಈ ಯೋಗಿಗಳ ವಿಷಯದಲ್ಲಿಯೂ ಈ ದ್ವಾರಪಾಲಕರು ತಿರಸ್ಕಾರಭಾವವನ್ನೇ ತೋರಿಸುವರು. ಅದಕ್ಕೆ ತಕ್ಕಫಲವನ್ನೂ ಅನುಭವಿಸುವರು ಅಹಾ ! ಇದೇ " ವಿಷ್ಣುಲೀಲೆ "

(ತೆರೆಯಲ್ಲಿ)

ಸನಕಾದಿಗಳು—

ರಾಗ—ತಾಳ

ಶ್ರೀಪತಿಜಗದಾಧಾರ | ಪದ್ಮಾಮನೋಹಾರ | ಸರಿದೀಶಗಂಭೀರ | ವೇದಾಂತಸಾರ || ಶ್ರುತಿಪಾಲಸೋತ್ಸಾಹ | ಧೃತಮೀನವರದೇಹ | ಸಕಯೋಗಿಸಂದೋಹ | ನಿರ್ಧೂತಮೋಹ ||

(ಆಗ ಮಹಾವಿಷ್ಣುವು ಮತ್ಸ್ಯರೂಪವನ್ನು ತಾಳಿ ಪ್ರತ್ಯಕ್ಷನಾಗುವನು.)

ನಾರದ—(ನೋಡಿ ಸಂತೋಷದಿಂದ) ಆಹಾ ! ಮತ್ಸ್ಯರೂಪವನ್ನು ವರ್ಣಿಸಿ ಸ್ತೋತ್ರಮಾಡಿದ ಸನಕಾದಿಗಳಿಗೆ ಶ್ರೀಮನ್ನಾರಾಯಣನು ಮತ್ಸ್ಯರೂಪವನ್ನೇ ಪ್ರತ್ಯಕ್ಷಗೊಳಿಸಿ ಕೃತಾರ್ಥರನ್ನಾಗಿ ಮಾಡಿದನು ! ಇದಲ್ಲವೇ ಭಕ್ತವಾತ್ಸಲ್ಯ !

ಜಯ—(ತಿರುಗಿನೋಡಿ) ಇದೇನು ಗದ್ದಲ !

ವಿಜಯ—(ನೋಡಿ) ಸನಕಾದಿಗಳು ಬರುತ್ತಿರುವಂತಿದೆ. ಕಾಲ ದೇಶವರ್ತಮಾನಗಳನ್ನರಿಯದೆ ಅರಚುತ್ತಿರುವ ಈ ಮೂರ್ಖರಿಗೆ ಚೆನ್ನಾಗಿ ಬುದ್ಧಿಗಲಿಸಿ ಕಳುಹಿಸಬೇಕು.

ನಾರದ—ಎಲೈ ಜಯವಿಜಯರಿರಾ, ಭಕ್ತಕೋಟಿಯಲ್ಲಿ ನೀವೂ ಸೇರಿದವರಾಗಿದ್ದು "ನಾವೇ ಹೆಚ್ಚು ! ಮಿಕ್ಕವರು ತುಚ್ಛರು !" ಎಂಬ ದುರಹಂಕೃತಿಗೆ ಆಸ್ಪದಕೊಡುವುದು ನೀತಿಯಲ್ಲ.

ಜಯ—(ಕೋಪದಿಂದ) ಎಲಾ, ಕಲಹೋತ್ಪಾದಕನಾದ ನಾರದನೇ, ನಿನ್ನ ನೀತಿಬೋಧೆಯನ್ನು ಅಷ್ಟಕ್ಕೇ ನಿಲ್ಲಿಸಿ ಹೊರಡು. ಇಲ್ಲವಾದರೆ ಗಲಹಸ್ತಕ್ಕೆ ಗುರಿಯಾದೀಯೆ !

(ಎಂದು ಗದೆ [illegible])

ನಾರದ—(ನಗುತ್ತ) ಆಹಾ, ಹಾಗಾದರೆ ನಾನು ಹೋಗಿಬರುವೆನು.

ರಾಗ— ತಾಳ—

[illegible] । [illegible] । [illegible] ॥ [illegible]
[illegible] । [illegible] ॥

(ಎಂದು ಹೊರಟುಹೋಗುವನು.)

(ಆಗ [illegible] ಸನಕಾದಿಗಳು ಪ್ರವೇಶಿಸುವರು.)

ಸನಕಾದಿಗಳು—

ರಾಗ—ತಾಳ

[illegible] । [illegible] । [illegible] ।
[illegible] ॥ [illegible] ।

([illegible])

ಜಯ—[illegible]

ವಿಜಯ—[illegible]

ಸನಕ—[illegible]

ಸನಂದ—ನಾರಾಯಣ ನಾರಾಯಣ. ಈ ದುರಹಂಕಾರಪೂರ್ಣರು ಸ್ವಾಮಿಯ ಸಾನ್ನಿಧ್ಯದಲ್ಲಿ ನಿಲ್ಲಲಾಗುವುದೆ ?

ಸನತ್ಕುಮಾರ—"ತೇನವಿನಾ ತೃಣಮಪಿ ನ ಚಲತಿ" ಎಂಬ ಶ್ರುತಿಯಂತೆ ಈ ವಿಧವಾದ ಬುದ್ಧಿಯು ಇವರಿಗುಂಟಾಗಿರುವುದು ಆ ಸರ್ವಚೈತನ್ಯಸ್ವರೂಪನ ಪ್ರೇರಣೆಯಿಂದಲೇ.

ಜಯ—ನೀವು ಹತ್ತು ತಲೆಗಳನ್ನು ಹೊತ್ತು ಬಂದರೂ ಇತ್ತ ಬಿಡಲಾರೆವು.

ವಿಜಯ—ನೀವು ಮೂರು ಕಣ್ಣಿಟ್ಟುಕೊಂಡು ಬಂದರೂ ನಿಮಗೆ ಶ್ರೀಮನ್ನಾರಾಯಣನ ದರ್ಶನವು ಲಭಿಸುವುದಿಲ್ಲ.

ಸನಕ—ಇದೇನೀ ಉನ್ಮತ್ತಪ್ರಲಾಪ !

ಜಯ—ನಮಗೆ ಉನ್ಮಾದವೋ ? ನಿಮಗೋ ? ಉಪವಾಸವ್ರತಾಚರಣೆಗಳಿಂದ ನೆತ್ತಿಗೇರಿದ ಪಿತ್ತವು ನಿಮ್ಮನ್ನು ಹೀಗೆ ಕುಣಿಸುತ್ತಿರುವುದು.

ಸನಂದ—ಈ ಅಲ್ಪರಮಾತುಗಳಿಗೆ ನಾವು ಕಿವಿಗೊಡಲೇಬಾರದು.

ಜಯ—ಮಹೋನ್ನತಸ್ಥಾನದಲ್ಲಿರುವ ನಮ್ಮನ್ನು ಅಲ್ಪರೆಂದು ತಿರಸ್ಕರಿಸುವಿರಾ ?

ಸನತ್ಕುಮಾರ—ತಿರಸ್ಕಾರ ಪುರಸ್ಕಾರಗಳು ಅವರವರ ಕರ್ಮಾನುಸಾರವಾಗಿ ಲಭಿಸುವುವು.

ವಿಜಯ—ಎಲಾ ಡಾಂಭಿಕರಿರಾ, ನಿಮ್ಮೊಡನೆ ಶುಷ್ಕಕಲಹವನ್ನು ನಡೆಯಿಸಲು ನಮಗೆ ವ್ಯವಧಾನವಿಲ್ಲ. ಸುಮ್ಮನೆ ತೊಲಗಿ.

ಸನತ್ಸುಜಾತ—ಅಯ್ಯಾ, ನಿಮಗೆ ತೊಂದರೆಯನ್ನುಂಟುಮಾಡಲೆಂದು ನಾವು ಬಂದವರಲ್ಲವಲ್ಲಾ !

(ತಟ್ಟನೆ ಬೆಳಕು ಕಾಣಿಸಿ—ಲಕ್ಷ್ಮೀನಾರಾಯಣರು ಪ್ರತ್ಯಕ್ಷರಾಗುವರು.)

ಸನಕಾದಿಗಳು—(ಭಕ್ತಿಯಿಂದ ಕೈಮುಗಿದು)

ಶ್ಲೋ॥ ಸಶಂಖಚಕ್ರಂ ಸಕಿರೀಟಕುಂಡಲಂ ।
ಸಪೀತವಸ್ತ್ರಂ ಸರಸೀರುಹೇಕ್ಷಣಂ ॥
ಸಹಾರವಕ್ಷಸ್ಥಲಶೋಭಿ ಕೌಸ್ತುಭಂ ।
ನಮಾಮಿ ವಿಷ್ಣುಂ ಶಿರಸಾ ಚತುರ್ಭುಜಂ ॥

ನಾರಾಯಣ—ಎಲೈ, ಯೋಗಿವರೇಣ್ಯರಾ, ನನ್ನ ಭಕ್ತರಾದೀ ಜಯ ವಿಜಯರು ಲೋಕಾನುಗ್ರಹಾರ್ಥವಾಗಿ ಉದಯಿಸಿದ ಮಾಯೆಗೆ ಅಧೀನರಾಗಿ, ಸ್ವಾರ್ಥತೆಗೆ ಎಡೆಗೊಟ್ಟು, ಅರಿಷಡ್ವರ್ಗಗಳಿಗೆ ಸೆರೆಗೊಡ್ಡಿರುವರು. ಈ ಕಾರಣದಿಂದಲೇ ಅಹಂಕೃತಿ ಅಭ್ಯಾಸ ಅಸೂಯೆ ಎಂಬ ಮೂರು ದುರ್ಗುಣಗಳೂ ತಲೆದೋರಿರುವು. ಇವುಮೂರೂ ಮೂರುಜನ್ಮಗಳನ್ನೆತ್ತಿದಲ್ಲದೆ ಪರಿಹಾರವಾಗುವುದಿಲ್ಲ. ಇದಕ್ಕಾಗಿಯೇ ದೈತ್ಯರಾಕ್ಷಸ ಮಾನುಷಗಳೆಂಬ ಮೂರು ಜನ್ಮಗಳನ್ನು ಇವರು ತಾಳುವರು. ನಿಮ್ಮನ್ನು ತಿರಸ್ಕರಿಸುವ ಉದ್ದೇಶದಿಂದ—"ಹತ್ತು ತಲೆಗಳು—ಮೂರು ಕಣ್ಣುಗಳು—ಎಂದು" ಸೊಕ್ಕಿನುಡಿದ ಈ ದ್ವಾರಪಾಲಕರಿಗೆ ರಾಕ್ಷಸಜನ್ಮಗಳಲ್ಲಿ ಹತ್ತುತಲೆಗಳೂ ಮೂರು ಕಣ್ಣುಗಳೂ ಉಳ್ಳ ರೂಪವೇ ಲಭಿಸುವುದು. ನಾನೇ ನಾರಸಿಂಹ—ರಾಮ ಕೃಷ್ಣಾವತಾರಗಳಿಂದ ಇವರಿಗೆ ಮೋಕ್ಷವನ್ನು ಕೊಡುವೆನು. ಎಂದಿಸಂತ [illegible]

[illegible]

ರಾಮ—ಸೀತೇ ... [illegible]

ಸುಂದರಿ ! ಅಬಲೆ ! ಅವನನುನೆಯಲ್ಲಿ ಸೆರೆಯಾಗಿದ್ದೆ. ನಿನ್ನ ಚರಿತ್ರೆಯಲ್ಲಿ ಕಳಂಕವನ್ನು ಹೇಗೆತಾನೆ ಶಂಕಿಸದಿರಲಾದೀತು ?

ಸೀತೆ—(ಕಿವಿಮುಚ್ಚಿಕೊಂಡು) ಆರ್ಯಪುತ್ರ ! ಶಂಕೆಯೇ ? ನಿನಗೆ? ನನ್ನ ವಿಷಯದಲ್ಲಿಯೇ ? ಬಾಲ್ಯದಿಂದಲೂ ನನ್ನ ಮನಸ್ಸನ್ನರಿತಿಲ್ಲವೆ? ಹಾ ! ರಾಮಚಂದ್ರ; ನೀನು ಕೈಬಿಟ್ಟಬಳಿಕ ಗತಿಯೇನು ? (ಎಂದಳುವಳು.)

ರಾಮ—ಲಕ್ಷ್ಮಣಭರತರಿರುವರು. ಸುಗ್ರೀವಾಂಗದರಿರುವರು. ವಿಭೀಷಣನಿರುವನು.

ಎಲ್ಲರೂ—(ಕಿವಿಮುಚ್ಚಿಕೊಂಡು) ರಾಮರಾಮ ! ಶಾಂತಂ ಪಾಪಂ ! ಶಾಂತಂ ಪಾಪಂ.

ಸೀತೆ—ಹಾ ! ನಿರ್ಭಾಗ್ಯಳಾದ ಜಾನಕೀ, ಈ ಕರ್ಣಕಠೋರವಾದ ಮಾತನ್ನು ಕೇಳುವುದಕ್ಕಾಗಿಯೇ ರಾಕ್ಷಸರ ಹಿಂಸೆಗಳನ್ನೆಲ್ಲ ಸೈರಿಸಿ ಜೀವಿಸಿದೆಯಾ ? (ಎಂದು ಕೆಳಗೆ ಬೀಳುವಳು.)

ಸರಮೆ—(ಉಪಚರಿಸಿ ಎಚ್ಚರಿಸುವಳು.)

ಸೀತೆ—(ಎದ್ದು) ಆರ್ಯಪುತ್ರ, ನನ್ನ ಸುಕೃತಸಾಕ್ಷಿಯಾಗಿಯೂ ನೀನು ಆರೋಪಿಸುವ ದುಶ್ಶೀಲವು ಯಾವುದೂ ನನ್ನಲ್ಲಿಲ್ಲ. ಆ ದುಷ್ಟನು ಸಹಾಯ ಶೂನ್ಯೆಯಾಗಿದ್ದ ನನ್ನನ್ನು ದುರಾಸೆಯಿಂದ ಅಪಹರಿಸಿ ತಂದುದು ನನ್ನದೋಷವಲ್ಲ. ತ್ರಿಕರಣಶುದ್ಧಿಯಾಗಿಯೂ ನಾನು ನಿನ್ನನ್ನೇ ನಂಬಿರುವವಳು. ಈ ಅಂಜನಾನಂದನನು ನನ್ನ ಸ್ಥಿತಿಯನ್ನೆಲ್ಲ ಕಣ್ಣಾರೆ ಕಂಡೆನಲ್ಲಾ ! ಅವನ ಮಾತುಗಳೂ ನಿನಗೆ ನಂಬಿಕೆಯನ್ನುಂಟುಮಾಡಲಾರದೆಹೋದುವೆ ? ವಿವಾಹಕಾಲದಲ್ಲಿ ಮಾಡಿದ್ದ ಪ್ರತಿಜ್ಞೆಯೂ ಮರೆತುಹೋಗಬಹುದೇ ?

ರಾಮ—ಸೀತೇ, ಈಗ ನನಗೆ ಅದೊಂದೂ ಬೇಡ.

ಸೀತೆ—ಆರ್ಯಪುತ್ರ, ನಿನಗೆ ಬೇಡವಾದ ಬಳಿಕ ಈ ಹಾಳುದೇಹದಿಂದೇನು ? (ಎಂದು ಲಕ್ಷ್ಮಣನಕಡೆ ತಿರುಗಿ) ವತ್ಸ, ಮಿಥ್ಯಾಪವಾದಕ್ಕೆ ಗುರಿಯಾದೀದೇಹವು ಅಗ್ನಿಯಲ್ಲಿ ದಗ್ಧವಾಗಿ ಹೋಗಲಿ. ಚಿತೆಯನ್ನೇರ್ಪಡಿಸಿಕೊಡು.

ಲಕ್ಷ್ಮಣ—(ರಾಮನಕಡೆಗೆ ನೋಡುವನು.)

ರಾಮ—(ಸುಮ್ಮನಿರುವನು.)

ಲಕ್ಷ್ಮಣ—(ಸ್ವಗತಂ) ಆರ್ಯನೊ ಅನುಮತಿಸಿದ ಬಳಿಕ ಉಪೇಕ್ಷಿಸಲಾಗದು. (ಎಂದು ಹೋಗಿ ಕಾಷ್ಠಗಳನ್ನು ತಂದು ಚಿತೆಯನ್ನು ಉರಿಸುವನು.)

ಸೀತೆ—(ತಲೆಬಾಗಿ ಮುಂದೆಬಂದು)

ಕಂ|| ಹಿರಿಯರಿರಾ, ವಿಬುಧರಿರಾ |
ವರವೇದಾಂಗಾದಿ ಸಕಲತತ್ವಜ್ಞರಿರಾ |
ಗುರುಗಳಿರಾ ಕರುಣಿಸುವಿದೆ |
ಧರಣಿಜೆ ಪತಿಭಾಗ್ಯ ನಿಮ್ಮ ಸಾಧಿಸಂದಿಸುವೆಳ್ ||

(ಎಂದು ಕೈಮುಗಿವಳು)

[illegible]

[illegible]

[illegible]

[illegible]

[illegible]

ಮಹೇಂದ್ರ—ರಾಮಭದ್ರ,

ಕಂ|| ನೀನಾದಿ ಕಾರಣಂಗಡ |
ನೀನೇ ತ್ರೈಲೋಕ್ಯಪಾಲನೀಸಕಲಕ್ಕಂ ||
ನೀನೇ ಕರ್ತಾರಂಗಡ |
ಮಾನವನಂತೇಕೆ ನಟಿಪೆ ಪುರುಷೋತ್ತಮಕೇಳ್ ||

(ಆಗ ಚತುರ್ಮುಖಬ್ರಹ್ಮನು ಪ್ರವೇಶಿಸುವನು.)

ಬ್ರಹ್ಮ—ಎಲೈ, ಸಕಲಜೀವಿಗಳಲ್ಲಿಯೂ ನೆಲಸಿರುವ ಪುರುಷೋತ್ತಮನೇ, ನೀನು ಆದಿಮಧ್ಯಾಂತರಹಿತನು. ನೀನೇ ನಾರಾಯಣ. ನಿನ್ನ ಶಕ್ತಿಸ್ವರೂಪಿಣಿಯಾದ ಸೀತೆಯೇ ಲಕ್ಷ್ಮಿ! ಈ ಬ್ರಹ್ಮಾಂಡವೆಲ್ಲ ನಿನ್ನ ಗರ್ಭದಲ್ಲಿಯೇ ನೆಲಸಿರುವುದು. ನಿನ್ನ ಕ್ಷಮಾಗುಣವೇ ಈ ಭೂಮಿ. ನಿನ್ನಕೋಪವೇ ಸೂರ್ಯ, ನಿನ್ನ ಅನುಗ್ರಹವೇ ಚಂದ್ರ, ದುಷ್ಟರಾದ ರಾವಣಕುಂಭಕರ್ಣರನ್ನು ವಧಿಸಿ ಲೋಕಗಳನ್ನು ಕಾಪಾಡಲೆಂದೇ ಅಲ್ಲವೆ ನೀನೀ ಮಾನುಷವಿಗ್ರಹವನ್ನು ಕೈಗೊಂಡಿರುವುದು ?

ಮಹೇಶ್ವರ—(ಪ್ರವೇಶಿಸಿ) ರಾಮಭದ್ರ, ಈ ಭ್ರಮೆಯನ್ನು ಬಿಡು. ಸೀತೆಯು ಪರಮಪಾವನೆ! ಇದೊ, ಯಜ್ಞೇಶ್ವರನು ಆಕೆಯನ್ನು ಕರೆತರುತ್ತಿರುವನು.

(ಆಗ ಸೀತಾಸಮೇತನಾಗಿ ಅಗ್ನಿಯು ಪ್ರವೇಶಿಸಿ)

ಅಗ್ನಿ—ರಾಮಭದ್ರ, ಸೀತೆಯು ಪರಿಶುದ್ಧೆ. ತ್ರಿಕರಣಶುದ್ಧಿಯಾಗಿ ಈಕೆಯು ನಿನ್ನನ್ನೇ ನಂಬಿ ಅನುವರ್ತಿಸಿ ಇರತಕ್ಕವಳು. ಇವಳನ್ನು ಪರಿಗ್ರಹಿಸುವುದರಲ್ಲಿ ಸಂದೇಹಬೇಡ.

ಮಹೇಶ್ವರ—ವತ್ಸ, ನಿನ್ನಿಂದಲೇ ಸಮಸ್ತಲೋಕಗಳೂ ಸಂತೋಷವನ್ನು ಪಡೆದುವು. ಲೋಕಕಂಟಕನಾಗಿದ್ದ ರಾವಣನು ಸಂಹೃತನಾದನು. ಸೀತೆಯ ಪಾತಿವ್ರತ್ಯವು ಜಗದ್ವಿದಿತವಾಯಿತು. ಪಾವನೆಯಾದೀಸೀತೆಯನ್ನು ಪರಿಗ್ರಹಿಸಿ ಅಯೋಧ್ಯೆಗೆ ಹೊರಡು. ಕೌಸಲ್ಯಾಭರತರು ನಿನ್ನನ್ನೇ ನಿರೀಕ್ಷಿಸುತ್ತ ಪ್ರಾಣಧಾರಣಮಾಡಿಕೊಂಡಿರುವರು. (ಎಂದು ಮೇಲೆತೋರಿಸುತ್ತ) ಅದೊ, ದಶರಥನು ತೀರ್ಣಪ್ರತಿಜ್ಞನಾದ ನಿನ್ನನ್ನೇ ಉತ್ಸಾಹದಿಂದ ನೋಡುತ್ತಿರುವನು.

ರಾಮ—(ಸಂತೋಷದಿಂದ ತಲೆಯೆತ್ತಿ ನೋಡುವನು)

(ಆಗ ವಿಮಾನದಲ್ಲಿ ದಶರಥನ ಪ್ರವೇಶ)

ದಶರಥ—ವತ್ಸ, ವನವಾಸವನ್ನು ತಾಳ್ಮೆಯಿಂದ ನಿರ್ವಹಿಸಿ ಅಯೋಧ್ಯೆಗೆ ಹಿಂತಿರುಗುವ ನಿನ್ನನ್ನು ಕೌಸಲ್ಯಾಸುಮಿತ್ರೆಯರೂ ಪ್ರಜೆಗಳೂ ಕಂಡು ಕೃತಾರ್ಥರಾಗುವರು. ಅವರಲ್ಲವೆ ಸುಕೃತಿಗಳು.

ರಾಮ—ಪೂಜ್ಯನೇ, ಎಲ್ಲವೂ ನಿನ್ನ ಆಶೀರ್ವಾದವಲ್ಲವೆ? ನಾನು ಅರಣ್ಯಕ್ಕೆ ಹೊರಟಕಾಲದಲ್ಲಿ ನನ್ನನ್ನಗಲಲಾರದೆ ನೀನು ದುಃಖದಿಂದ [illegible] ಕೈಕೆಯನ್ನು ಶಾಪಕ್ಕೆ ಗುರಿಮಾಡಿದ್ದೆ. ಈಗ ದಯೆಯಿಟ್ಟು ಆ ಶಾಪವನ್ನು ಪರಿಹರಿಸು.

ದಶರಥ—ವತ್ಸ, ನಿನ್ನ ಮನೋರಥವಿದ್ದಂತೆಯೇ ಆಗಲಿ. ನಿನ್ನ ಸತ್ಯಪರತೆಯೂ [illegible] ಗುರುಜನವಿಧೇಯತೆಯೂ ಧರ್ಮಪರಿಪಾಲನಾಸಕ್ತಿಯೂ ಸಕಲಲೋಕಕ್ಕೂ ಆದರ್ಶವಾಗಲಿ. (ಎಂದು ಸೀತೆಯ ಕಡೆಗೆ ತಿರುಗಿ) ವತ್ಸೇ, ಜಾನಕೀ! ನಿನ್ನ ಚಾರಿತ್ರ್ಯವು ಪಾವನವಾದುದೆಂದು ತಿಳಿದಿದ್ದರೂ ಅದನ್ನು ಲೋಕಕ್ಕೆಲ್ಲ ತಿಳಿಸಬೇಕೆಂಬ ಉದ್ದೇಶದಿಂದ ಪರೀಕ್ಷಿಸಿದ ನಿನ್ನ ಪತಿಯಲ್ಲಿ ನಿನಗೆ ಪ್ರೀತಿಯೂ ಗೌರವವೂ ಇನ್ನೂ ಹೆಚ್ಚಾಗಿ ಅಭಿವೃದ್ಧಿಗೊಳ್ಳಲಿ. ನೀನು ಅವನನ್ನು ಅನುವರ್ತಿಸಿಕೊಂಡು ಧರ್ಮಪರಿಪಾಲನೆಗೆ [illegible]

ಸೀತೆ—ಅಪ್ಪಣೆ.

ರಾಮ—(ಸೀತೆಯು ಕೈಯನ್ನು ಹಿಡಿದುಕೊಳ್ಳುವನು)

([illegible])

[illegible] ಒಡನೆ ಕಳೆ. [illegible]

[illegible] ಧನ್ಯಕಳ

[illegible]

[illegible] ಕಣ್ಣರೆ

ಕಂಡು ನನಗೆ ಅತ್ಯಾನಂದವಾಯಿತು. ಆ ಜಯವಿಜಯರೇ ಶಿಶುಪಾಲ ದಂತವಕ್ರರಾಗಿ ಮತ್ತೆ ಭೂಲೋಕದಲ್ಲಿ ಜನ್ಮಿಸುವರಷ್ಟೆ? ಅವರ ಅನುಗ್ರಹಾರ್ಥವಾಗಿ ನೀನು ಧರಿಸುವ ಲೀಲಾಮಾನುಷವಿಗ್ರಹವನ್ನೂ ದಯೆಮಾಡಿ ತೋರಿಸಿ ನನ್ನ ಮನೋರಥವನ್ನು ಸಫಲಮಾಡು.

ರಾಮ—ಹಾಗೆಯೇ ಆಗಲಿ.

* ಗೋಪಿಕಾಸ್ತ್ರೀಯರ ನಡುವೆ ವೇಣುಗಾನನಿರತನಾದ ಶ್ರೀಕೃಷ್ಣನು ಕಾಣಿಸಿಕೊಳ್ಳುವನು.

ನಾರದಾದಿಗಳು—. ರಾಗ—ತಾಳ.

ವಿಜಯಕಾರಣ ವಿಕ್ರಮಪೂರ್ಣ | ವಿಜಿತರಾಕ್ಷಸಮಂಡಲ ಶರಣ ||
ಶರಣವಿಭೀಷಣ | ನುತ ನಕ ಚಾರಣ | ಸಿತಶರಭೀಷಣ | ಪ್ರಕಟಿತಕುಲರಣ ||

ಮೂರನೆಯ ಅಂಕಂ.

ಸೀನ್ ೧.

(ಶ್ರೀಕೃಷ್ಣನು ವೇಣುಗಾನ ಮಾಡುತ್ತಿರುವನು—ರಾಧೆ, ಕಮಲೆ, ನಳಿನಿ ಮುಂತಾದ ಸ್ತ್ರೀಯರು ಸುತ್ತಲೂ ನಿಂತಿರುವರು.)

ಕೃಷ್ಣ— ರಾಗ—ತಾಳ.
ಸಾದರೇ | ಮೈದೋರೆ | ಬಾರೆಚದುರೆ |
ರಾಧೆ—ಕೈವಿಡಿದು | ಕಾಪಾಡು | ಕರುಣಾಕರ ||
ಕೃಷ್ಣ—ಸುಖಸಾರೆ | ಉದಾರೆ | ಗಭೀರೆ |
ಕಮಲೆ—ಸಾಕುಸಾಕೀಗ | ನಾವ್ಬಲ್ಲೆವೆಲ್ಲ |
ಕೃಷ್ಣ—ಬಿಡುಜಾಣೇ | ಎನ್ನಾಣೇ | ನೀಕಾಣೇ |
ನಳಿನಿ—ಆಡಿಲಿನ್ನೇನು | ಮರುಳಾದೆವಲ್ಲ |
ಕೃಷ್ಣ—ಬಾರೆಮೋಹಾಕರೇ | ಬಿಂಬಾಧರೇ | ಶೃಂಗಾರರತ್ನಾಕರೇ ||
ರಾಧೆ—ಯದುನಾಥಮನ್ನಿಸುಬೇಗ |
ಕೃಷ್ಣ—ಮುದವಾಯ್ತೆಮಾನಸಕೀಗ |

ಕಮಲೆ—ಪದುಮಾಕ್ಷ ನಿನ್ನನುರಾಗ |
ಕೃಷ್ಣ—ಸದನಾದುದೀಪ್ಸಿತಭೋಗ |
ನಳಿನಿ—ಪ್ರಿಯವಿಂದಾದುದೈ | ದಯಾಮಯಾ |
ಎಲ್ಲರೂ—ಸಂಮೋದ | ಪ್ರಮೋದ | ವಿನೋದ | ವಿಹಾರದೇ |
ಎಮಗಾದೊ | [illegible] ||

ರಾಧೆ—ಸ್ವಾಮಿಯೇ, ನಿನ್ನ ಅನುಗ್ರಹವನ್ನೇ ಬಯಸಿ ಹಗಲಿರುಳೂ ಹಂಬಲಿಸುತ್ತಿರುವ ನಮಗೆ ಇಷ್ಟು ಬರಿಮಾತುಗಳಿಂದ ಹುಚ್ಚು ಹಿಡಿಸುವೆಯಾ?

ಕೃಷ್ಣ—ಏನು! ನಾನು ಇಷ್ಟು ಬರಿ ಮಾತಿನವನೇ ಆಗಲಿ! ನಿಮಗೆ ನನ್ನಲ್ಲಿ ನಿಜವಾದ ಪ್ರೀತಿಯಿರುವುದೇನು?

ಕಮಲೆ—ಸ್ವಾಮಿಯೇ, ನಿಜವೋ ಸುಳ್ಳೋ ನಾನರಿಯೆ. ನನಗೇನೋ ಬಹಳವಾಗಿಯೂ ನಿನ್ನ ಸುಗುಣವೇ ಇಷ್ಟ, ನಿನ್ನ ಮಾತು, ನಿನ್ನ ವಿಲಾಸ ಇವುಗಳಲ್ಲಿ ಬೆರೆದು ಸಂತೋಷಿಸುತ್ತಿರಬೇಕೆಂಬ ಆಸೆ.

ನಳಿನಿ—ಸ್ವಾಮಿಯೇ, ನಮಗೆ ನಿನ್ನಲ್ಲಿ ನಿಜವಾದ ಪ್ರೀತಿಯಿರುವುದೆಂಬುದಕ್ಕೆ [illegible] ಬೇಕಾದರೆ [illegible]

ಕೃಷ್ಣ—(ನಗುತ್ತ) ಏನು! [illegible]?

[illegible] |
[illegible] |
[illegible] |
[illegible]? ||

ರಾಧೆ—ಸ್ವಾಮಿಯೇ, [illegible] ನಿನ್ನ [illegible] [illegible]

ಕೃಷ್ಣ—[illegible]!

ನಳಿನೀ—ನಿನ್ನನ್ನು ಮೃದುಮನಸ್ಕನೆಂದೇ ಹೇಳಬೇಕಾದರೂ ವ್ರತೋಪವಾಸಾದಿಗಳಿಂದ ಕೃಶರಾದ—ಬರಿಯೆಲುಬಿನ ಮೈಯುಳ್ಳವರಾದ—ಯೋಗಿಜನಗಳ ಪಂಚಾಗ್ನಿ ಶುದ್ಧವಾದ ಶುಷ್ಕಮಾನಸಪೂಜೆಗೆ ನೀನು ಹೆಚ್ಚಾಗಿ ಒಲಿಯುವೆಯಾದುದರಿಂದ ನಿನ್ನನ್ನು ಕಲ್ಲೆದೆಯುವನೆಂದೇ ಹೇಳುವೆವು.

ಕೃಷ್ಣ—ನಳಿನೀ, ನಿರ್ಮಲವಾದ ಆ ಯೋಗಿಜನರ ಹೃದಯಾಂತರದಲ್ಲಿ ಉಕ್ಕುತ್ತಿರುವ ಭಕ್ತಿರಸಪ್ರವಾಹವು ನನ್ನನ್ನು ಮರುಳುಮಾಡಿಬಿಡುವುದು.

ಕಮಲೆ—ಆಹಾ! ರಾಗಸಹಿತವಾದ ನಮ್ಮ ಹೃದಯಾಂತರದಿಂದ ಮೇರೆ ಮೀರಿ ಹೊಮ್ಮುತ್ತಿರುವ ಪ್ರೇಮರಸವು ಒಂದಾನೊಂದು ಕಾಲದಲ್ಲಿ ಮನೋಹಾರಕವಾಗಿತ್ತು. ಈಗ ಅದು ಹಿತಕರವಲ್ಲವೇನೋ?

ರಾಧೆ—(ಕೋಪದಿಂದ ಕಮಲೆಯ ಕಡೆಗೆ ತಿರುಗಿ) ಕಮಲೇ, ನಡೆ. ಇನ್ನು ನಮಗಿಲ್ಲಿ ಕೆಲಸವೇನು? (ಎಂದು ಹೊರಟುಹೋಗುವಳು)

ಕೃಷ್ಣ—ರಾಧೇ! ರಾಧೆ! (ಎಂದು ಆತುರದಿಂದ ಏಳುವನು)

ಕಮಲೆ—ಆಗಲಿ! ಆಗಲಿ! (ಎಂದು ಮುಖದಿರುಗಿಸಿ) ಆ ಯೋಗಿಜನಗಳೇ ಇರುವಾಗ ನಮ್ಮಂತಹ ವಿಯೋಗಿಜನದಿಂದೇನು? (ಎಂದು ಹೊರಟುಹೋಗುವಳು.)

ಕೃಷ್ಣ—(ನಳಿನಿಯ ಕೈಯನ್ನು ಹಿಡಿದುಕೊಂಡು) ನಳಿನೀ, ನಿಮ್ಮ ಅಕ್ಕಂದಿರಂತೆಯೇ ನೀನೂ ಮುನಿದೆಯೊ?

ನಳಿನಿ—(ಮುಖವನ್ನು ಗಂಟಿಕ್ಕಿ ಕೈಗಳನ್ನು ಬಿಡಿಸಿಕೊಂಡು) ಸ್ವಾಮಿಯೇ, ನಿನ್ನ ಈ ಮನೋಗತವನ್ನು ಚೆನ್ನಾಗಿ ತಿಳಿದ ನಾವು ಇನ್ನು ಮೋಸಹೋಗೇವೇ?

ವೃ॥ ಮುನಿಗಳ ಮಂತ್ರಮೇ ಬಹುಮನೋಹರಮೀಪ್ರಿಯೋಕ್ತಿ
ಜಾಲದಿಂ | ಘನತರಮುಕ್ಕುಮಾನಿಗಮಪಾಠನಮೆಮ್ಮಯ ರಮ್ಯಗಾನದಿಂ |
ವನರುಹನೇತ್ರ ಚಂದನವಿಲೇಪನದಿಂ ಭಸಿತಾನುಲೇಪನಂ | ಮನಕಿಸಿದಳ್ಕೆ
ಮಾಮುನಿಗಳಾಪ್ತರನಾಪ್ತೆಯರಾದೆವಲ್ತೆ ನಾವ್ ॥

ಬಿಡು ಬಿಡು. ನಾನು ನಿನ್ನೀ ಬರಿಮಾತಿಗೆ ಬೆರಗಾಗುವಂತಹ ಅಜ್ಞಳಲ್ಲ (ಎಂದು ಹೊರಟುಹೋಗುವಳು)

ಕೃಷ್ಣ—(ಸುತ್ತಲೂ ನೋಡಿ ಸ್ವಗತ) ಇದೀಗ ಒಳ್ಳೆಯ ಸಮಯ. ಮಾಲತಿಯು ನಾಲ್ಕಾರು ಬಾರಿ ನನ್ನನ್ನು ಬರಹೇಳಿ ವರ್ತಮಾನಕಳುಹಿಸಿದ್ದಳು. ಅವಳನ್ನು ಸಂತವಿಸಿ ಬರುವೆನು.

ಸ್ತ್ರೀಪರಿಚಾರಿಣಿ—ಸ್ವಾಮಿಯು ಇತ್ತ ದಯೆಮಾಡಿಸಬೇಕು. (ಎಂದು ಕೂಗುತ್ತ ಮುಂದೆಹೋಗುವಳು—ಕೃಷ್ಣನೂ ಹೊರಟು ಹೋಗುವನು.)

(ರಾಧೆ ಮೊದಲಾದವರು ಒಬ್ಬೊಬ್ಬರಾಗಿ ಪ್ರವೇಶಿಸಿ ಶ್ರೀ ಕೃಷ್ಣನಿಲ್ಲದಿರುವುದನ್ನು ಕಂಡು ಖಿನ್ನರಾಗುವರು.)

ರಾಧೆ—ಕಮಲೇ, ಸ್ವಾಮಿಯೆಲ್ಲಿ ?

ಕಮಲೆ—ರಾಧೇ, ನಾನರಿಯೆ. ಈ ನಳಿನಿ ಇಲ್ಲಿಯೇ ಇದ್ದಳು.

ನಳಿನಿ—ಇಲ್ಲ ಇಲ್ಲ, ನಾನೂ ನಿಮ್ಮ ಹಿಂದೆಯೇ ಹೊರಟುಬಿಟ್ಟೆನು. ನನಗೇನೂ ತಿಳಿಯದು.

ರಾಧೆ—ಅಯ್ಯೋ ! ಸ್ವಾಮಿಯು ನಮ್ಮ [illegible] ಕೂಡಿ [illegible] ಹೊರಟುಹೋದನೋ ! ಇನ್ನೇಗತಿ !

ರಾಗ— [illegible]

[illegible] ॥ ೧ ॥

[illegible] ॥ ೨ ॥

ಕಮಲೆ— [illegible] ।

ರಾಧೆ— [illegible] ।

[illegible] ॥

[illegible] ॥

[illegible]

[illegible]

ಕಮಲೆ— [illegible]

[illegible]

ರಾಧೆ—(ಸುತ್ತಲೂ ಸಂಭ್ರಮದಿಂದ ನೋಡಿ) ಸ್ವಾಮಿಯೆಲ್ಲಿ !

ಕಮಲೆ—ಇಲ್ಲಿಂದ ನಮ್ಮನ್ನು ಈಗತಾನೆ ಕೂಗಿದಂತಾಯಿತಲ್ಲವೆ ?

ನಳಿನಿ—(ತೆರೆಯಕಡೆ ನೋಡಿ) ಅಕ್ಕಾ, ಒಬ್ಬ ಬ್ರಾಹ್ಮಣನು ಬರುತ್ತಿರುವನು.

ಕಮಲೆ—(ಸಂತೋಷದಿಂದ) ಬ್ರಾಹ್ಮಣರೆಲ್ಲಿಯೋ ತಾನೂ ಅಲ್ಲಿಯೇ ನೆಲೆಸಿರುವೆನೆಂದು ಹೇಳಿರುವ ನಮ್ಮ ಸ್ವಾಮಿಯು ಈಗ ಪ್ರತ್ಯಕ್ಷನಾಗುವುದರಲ್ಲಿ ಸಂದೇಹವೇನು ?

ರಾಧೆ—ನಳಿನಿ, ಅರ್ಘ್ಯಪಾದ್ಯಾದಿಗಳೆಲ್ಲ ಸಿದ್ಧವಾಗಿರುವುದೆ ?

ನಳಿನಿ—ಅಕ್ಕಾ, ಎಲ್ಲವೂ ಸಿದ್ಧವಾಗಿರುವುವು)

(ಆಗ ಪ್ರಯಾಣಶ್ರಾಂತನಾದ ಬ್ರಾಹ್ಮಣನ ಪ್ರವೇಶ.)

ಬ್ರಾಹ್ಮಣ—ಶ್ಲೋಕ॥ ಹೇಗೋಪಾಲಕ ಹೇಕೃಪಾಜಲನಿಧೇ ಹೇಸಿಂಧುಕನ್ಯಾಪತೇ। ಹೇಕಂಸಾಂತಕ ಹೇಗಜೇಂದ್ರ ಕರುಣಾಪಾರೀಣ ಹೇಮಾಧವ ॥ಹೇ ನಾರಾಯಣ ಹೇದಯಾಪರ ಗುರೋ ಹೇಪುಂಡರೀಕಾಕ್ಷ ಮಾಂ। ಹೇಗೋಪೀಜನನಾಥ ಪಾಲಯಪರಂ ಜಾನಾಮಿನ ತ್ವಾಂವಿನಾ ॥

(ಆಗ ಶ್ರೀಕೃಷ್ಣನು ಪ್ರತ್ಯಕ್ಷನಾಗುವನು.)

ಕೃಷ್ಣ—ವಿಪ್ರೋತ್ತಮ, ಸುಖವಾಗಿ ಬಂದೆಯಾ ? ಈ ಪೀಠವನ್ನು ಪರಿಗ್ರಹಿಸು.

ಬ್ರಾಹ್ಮಣ—ಸ್ವಾಮಿಯೇ, ನಿನ್ನ ಅನುಗ್ರಹಕ್ಕೆ ಪಾತ್ರರಾದವರಿಗೆ ಸುಖವಲ್ಲದೆ ದುಃಖವೆಂದರೇನು ? ನಿನ್ನ ಅನುಗ್ರಹವೊಂದಿದ್ದರೆ ಈ ಬ್ರಹ್ಮಾಂಡವೆಲ್ಲ ಸೌಖ್ಯವಾಗಿಯೇ ಇರುವುದು.

ಕೃಷ್ಣ—ವಿಪ್ರೋತ್ತಮ, ಬಹುದೂರದ ಪ್ರಯಾಣದಿಂದ ನೀನು ಬಳಲಿರುವಂತೆ ತೋರುವುದು. ನಿನ್ನ ಅಗಲುವಿಕೆಯಿಂದ ಯಾವ ದೇಶವು ವ್ಯಥೆಗೀಡಾಗಿರುವುದು? ತಿಳಿಸು. ಬ್ರಾಹ್ಮಣನಿಗೆ ಕರ್ಮಾಚರಣೆಯೇ ಪ್ರಥಮ ಧರ್ಮವು. ಕರ್ಮಾಸಕ್ತನಾದವನು ನಿರಂತರವೂ ಸಂತುಷ್ಟನಾಗಿರುವನು. ಅಂತಹ ಕರ್ಮನಿರತನಿಗೆ ಯಾವ ಉಪಹತಿಯುಂಟಾದರೂ ನಾನು ಸೈರಿಸತಕ್ಕವನಲ್ಲ.

ಬ್ರಾಹ್ಮಣ—ಎಲೈ ಪುರುಷೋತ್ತಮನೆ, ಸರ್ವಜ್ಞನಾದ ನಿನಗೆ ತಿಳಿಯದಿರುವುದಾವುದು ? ವಿಜ್ಞಾಪಿಸುವೆನು. ವಿದರ್ಭದೇಶಾಧಿಪತಿಯಾದ

ಭೀಷ್ಮಕನು ದುಷ್ಟಶಿಕ್ಷಣ ಶಿಷ್ಟರಕ್ಷಣಗಳಲ್ಲಿ ಆಸಕ್ತನೆಂಬುದನ್ನು ಬಲ್ಲೆಯಷ್ಟೆ ?

ಕೃಷ್ಣ—ಆಹಾ ! ಅತನು ನನಗೆ ಪರಮಾತ್ಮನು. ನೀನು ಅಲ್ಲಿಂದ ಬಂದೆಯಾ ? ಬಹಳ ಸಂತೋಷ. ರುಕ್ಮಿಣಿಯು ಕ್ಷೇಮವೇ ? ಮೂರ್ಖಸ್ವಭಾವವುಳ್ಳ ರುಕ್ಮಿಯಿಂದ ಪ್ರಜೆಗಳಿಗೇನೂ ಕೊರತೆಯಿಲ್ಲವಷ್ಟೆ ? ವೃದ್ಧಭೀಷ್ಮಕನ ರಾಜಧರ್ಮಕ್ಕೆ ಕುಂದಿಲ್ಲವಷ್ಟೆ ?

ಬ್ರಾಹ್ಮಣ—ಸ್ವಾಮಿಯೇ, ನಿಮ್ಮಲ್ಲಿಯೇ ಅನುರಕ್ತೆಯಾದ ರುಕ್ಮಿಣಿಯು ಈ ಓಲೆಯನ್ನು ನಿನಗೊಪ್ಪಿಸಬೇಕೆಂದು ತಿಳಿಸಿ ನನ್ನನ್ನು ಕಳುಹಿರುವಳು. (ಎಂದು ಕೊಡುವನು.)

ಕೃಷ್ಣ—(ಸಂಭ್ರಮದಿಂದ ತೆಗೆದುಕೊಂಡು) ಆಹಾ ! ಅಮೃತಧಾಯನ್ನು ಕರೆಯುತ್ತಿರುವ ಅಕ್ಷರಪಙ್ಕ್ತಿಯು ಎಷ್ಟು ಮನೋಹರವಾಗಿರುವುದು.

[illegible]

[illegible]

ಕ್ಷಿಸುತ್ತಿರುವುದು. ಇಷ್ಟಾದರೂ ನಾನು ನಿನ್ನ ಅರ್ಧಾಂಗಿಯೆನಿಸಿಕೊಳ್ಳುವ ಸುಯೋಗವುಮಾತ್ರ ಲಭಿಸಲಿಲ್ಲ, ಲಭಿಸುವುದೇ ಇಲ್ಲವೇನೋ ಎಂಬ ಶಂಕೆಯು ತಲೆದೋರಿರುವುದು. ಹಾಗಾಗದಿರಲಿ. ಮೂರ್ಖನಾದ ನನ್ನ ಸಹೋದರನು ದುಷ್ಟಶಿಶುಪಾಲನನ್ನು ಮೆಚ್ಚಿ ನನ್ನನ್ನು ಅವನಿಗೆ ಕೊಟ್ಟು ಮದುವೆಮಾಡಲು ನಿರ್ಣಯಿಸಿರುವನು. ಜರಾಸಂಧನೇಮೊದಲಾದ ಅವನ ಅನುಯಾಯಿಗಳೆಲ್ಲರೂ ಬಹು ಸಂಭ್ರಮದಿಂದಿರುವರು, ಎಲೈ ಅಚ್ಯುತನೇ, ನೀನು ಆರ್ತತ್ರಾಣಪರಾಯಣನಲ್ಲವೆ ? ನಾನು ಗುರುಜನವಿಧೇಯಳೂ, ಸ್ಥಿರಮಾನಸಳೂ, ವ್ರತೋಪವಾಸನಿರತಳೂ ಆಗಿರುವ ಪಕ್ಷದಲ್ಲಿ ನೀನು ಕಟಾಕ್ಷಿಸು. ನಾಳೆ ಶುಕ್ರವಾರ ಗೋಧೂಳಿಲಗ್ನದಲ್ಲಿ ನಡೆಯಬೇಕೆಂದು ನಿಶ್ಚಿತವಾಗಿರುವ ಮುಹೂರ್ತವೇ ನಮ್ಮಿಬ್ಬರ ಪಾಣಿಗ್ರಹಣಕ್ಕೆ ಸುಮುಹೂರ್ತವಾಗಲಿ. ಮನೆತನದ ಪದ್ಧತಿಯಂತೆ ಶಚಿಯನ್ನು ಆರಾಧಿಸಲು ಹೋಗಿಬರುವ ಮಾರ್ಗವೇ ವಿವಾಹಮಂಟಪವಾಗಲಿ, ಶಿಶುಪಾಲಾದಿಗಳನ್ನು ಸೋಲಿಸಿ ಮೂರ್ಖರುಕ್ಮಿಗೆ ಬುದ್ಧಿಗಲಿಸಿ ಪಣವನ್ನು ಗೆಲ್ಲುವುದು ನಿನ್ನಂತಹ ಪರಾಕ್ರಮಿಗೆ ಮುಖ್ಯ ಧರ್ಮವು. ಧರ್ಮಪಾಲಕನೇ ನೀನು ಉಪೇಕ್ಷಿಸುವೆಯಾದರೆ ಈ ದೇಹವನ್ನು ತ್ಯಜಿಸಿ ಮುಂದಿನ ಜನ್ಮದಲ್ಲಿಯಾದರೂ ನಿನ್ನನ್ನು ಸೇರದೇಬಿಡೆನೆಂಬುದನ್ನು ಚೆನ್ನಾಗಿ ನಂಬು;

ಕಂ ‖ ನಿನ್ನಂತಃಪುರಕೆಂದೇ |
ಸನ್ನುತ ಜನಿಯಿಸುತ ನಿನಗೆ ಸರ್ವಸ್ವಮುಮಂ |
ಚೆನ್ನನೆ ಸಮರ್ಪಿಸಿರ್ಪೆ |
ಕನ್ನೆಯು ನಿನ್ನಾರೊಕಾವರುಳಯುಲ'ನೀನೇ ‖

"ರುಕ್ಮಿಣಿ"

ಕೃಷ್ಣ—(ಸಂಭ್ರಮದಿಂದ) ಎಲೈ, ವಿಪ್ರೋತ್ತಮನೇ, ರುಕ್ಮಿಣಿಯ ರೂಪಾತಿಶಯ, ಧರ್ಮಾಸಕ್ತಿ, ಅಚಂಚಲವಾದ ಭಕ್ತಿ-ಇವುಗಳೆಲ್ಲವೂ ಈ ಪತ್ರವನ್ನು ಓದುವುದಕ್ಕಿಂತ ಮೊದಲೇ ನನ್ನನ್ನು ಅವಳ ಅನುರಾಗದಲ್ಲಿ ಮುಳುಗಿಸಿದ್ದುವು. ಇನ್ನು ಕಾಲಹರಣಮಾಡಲಾಗದು. (ಎಂದು ತಿರುಗಿ) ದಾರುಕನೆ, ನಮ್ಮ ದಿವ್ಯಾಶ್ವರಥಗಳನ್ನು ಸಿದ್ಧಗೊಳಿಸು. ಅಂಗರಕ್ಷಕರಾದ ಯದುವೀರರು ಮುಂದಾಗಿಯೇ ಹೊರಟು ಭೀಷ್ಮಕನ

ಪಟ್ಟಣವನ್ನು ಸೇರಲಿ. ನನಗೆ ಭಾವಮೈದನೆನಿಸುವ ರುಕ್ಮಿಯೊಡನೆ ಸರಸವಾಡಲು ತಕ್ಕ ಸಮಯವು ಸನ್ನಿಹಿತವಾಗಿದೆ. ಹೊರಡು—

ದಾರುಕ—ಅಪ್ಪಣೆ, (ಎಂದು ಹೊರಟುಹೋಗುವನು.)

ಕೃಷ್ಣ—ವಿಪ್ರೋತ್ತಮ,

ಕಂ॥ ದುರುಳರ ಸೊಕ್ಕಂ ಮುರಿಯುತೆ|
ತರಳಾಕ್ಷಿ [illegible] ರುಕ್ಮಿಣಿಯುಂ ||
[illegible] |
[illegible] ||

(ಎಂದು ಹೊರಟುಹೋಗುವರು)

([illegible])

ರುಕ್ಮಿ— [illegible]

[illegible]

ಜರಾಸಂಧ—ಏನಾದರೂ ಉಂಟೋ ?

ಶಿಶುಪಾಲ—ಇಲ್ಲದೆ ಉಂಟೇ ? ಲೆಕ್ಕವಿಲ್ಲದಷ್ಟು ಉಂಟು. ತುಂಟ ಗೊಲ್ಲನ ತುಡುಗಾಟ ! ಸೆಗಣಿಯೆತ್ತುವವರ ಕೊಂಡಾಟ ! ಲೋಕತ್ರಯದ ಓಡಾಟ ! ಇವೇ ಈ ನಾರದರ ಕಿತ್ತಾಟ !

ರುಕ್ಮಿ—ಇವನು ಆ ಬೆಣ್ಣೆಗಳ್ಳನಿಗೆ ಅಚ್ಚುಮೆಚ್ಚಿನವನು.

ನಾರದ—ಅಯ್ಯಾ, ನನಗೇನೋ ಸಮಸ್ತವೂ ನನ್ನದಾಗಿಯೇ ಇರುವುದು. ನೀವೇ ಬೇರೆ, ಕೃಷ್ಣನೇ ಬೇರೆ ಎಂಬ ಭಾವವು ತೋರುವುದಿಲ್ಲ. ಇದುವರೆಗೆ ಅವನೊಡನೆಯೂ ಮಾತನಾಡುತ್ತಿದ್ದು ಬಂದೆನು. ಅವನ ಮಾತಿನಲ್ಲಿ ರಾಕ್ಷಸವಿವಾಹವಾಗುವಂತೆ ತೋರುವುದು.

ಶಿಶು—ಏನು ! ಎಲಾ ! ಕಲಹೋಪಜೀವಿ ! ರಾಕ್ಷಸವಿವಾಹವೆಂದು ಹೇಳುವೆಯಾ ? ಯಾರಿಗೆ? ಈ ಶಿಶುಪಾಲನನ್ನು ರುಕ್ಮಿಣಿಯು ತಾನೇ ಒಲಿದು ಬಂದು ಗಾಂಧರ್ವವಿವಾಹಮಾಡಿಕೊಳ್ಳುವಳು, ನೋಡು.

ನಾರದ—ವರನೊಪ್ಪಿದಮಾತ್ರವೇ ವಧುವೊಪ್ಪದಿದ್ದರೆ ಅದು ಗಾಂಧರ್ವ ವಿವಾಹವೆಲ್ಲಿ ? ಪೈಶಾಚವಿವಾಹ. ಈಗ ಕೃಷ್ಣನು ರುಕ್ಮಿಣಿಯನ್ನು ರಥದಲ್ಲಿ ಕುಳ್ಳಿರಿಸಿಕೊಂಡು ತನ್ನ ರಾಜಧಾನಿಗೆ ಕರೆದುಕೊಂಡೇಹೋಗುವನು. ನೀವಿಷ್ಟುಮಂದಿಯೂ ವೀರರು ! ಕ್ಷಾತ್ರಧರ್ಮವನ್ನು ಬಲ್ಲಿರಿ.

ರುಕ್ಮಿ—(ಕೋಪದಿಂದ)

ಕಂ॥ ನೀಚಕುಲೋತ್ಪನ್ನನವಂ |
ಗೋಚರಿಸುವೊಡಹಹ ಕಡಿದು ದಿಗ್ಬಲಿಯೀವೆಂ ||
ಶ್ರೀಚೈದ್ಯೇಶನನುಳಿದಾ |
ಯಾಚಕನಂ ಸೇರಲೀವೆನೇಂ ಸಹಭವೆಯಂ ||

ಶಿಶುಪಾಲ—(ಕೋಪದಿಂದ)

ಕಂ॥ ನಲ್ಲೆಯನಾರುಕ್ಮಿಣಿಯಂ |
ಗೊಲ್ಲರ ಪೆಣ್ಣೆಂದು ಬರಿದೆಭಾವಿಸಿದನೊ ? ಮೇಣ್ ||
ಪಲ್ಲಿಯ ಪಾಲ್ಮೊಸರೆನುತಂ |
ಸೊಲ್ಲಿಸಿದನೊ ? ಕೇಳ ಕಲಹಕಾರಿಯನಿವಸಂ ||

ನಾರದ—ಅಯ್ಯಾ, ನನ್ನಮೇಲೇಕೆ ನಿಮಗೆ ಇಷ್ಟು ಆಗ್ರಹ!

(ತೆರೆಯಲ್ಲಿ)

ಕಂ॥ ಪರಿಣಯಪೂರ್ವಾಂಗಮೆನಲ್ ।
ಪರಿಪೂಜಿಸೆ ಕಚೆಯನೈದೆ ಬಿಜಯಂಗೈವಳ್ ॥
ಸರಪತಿಯ ತನುಜೆಯುದರಿಂ ।
ವಿರದೆಮ್ಮಯಸೇನೆ ಸಜ್ಜುಗೊಂಡೈದುಗೆ ತಾಂ ॥

ರುಕ್ಮಿ—ಭಾವ! ಭೈದ್ಯೇಶ್ವರ, ರುಕ್ಮಿಣಿಯು ದೇವಾಲಯಕ್ಕೆ ಹೊರಟಿರುವಳು. ನಾವೂ ಸಂಗಡ ಹೋಗುವುದುತ್ತಮ.

ಶಿಶುಪಾಲ—ರುಕ್ಮಿ, ಇವೆಲ್ಲವೂ ಸ್ತ್ರೀಯರಿಗೆ ಸಂಬಂಧಿಸಿದ ವ್ಯವಹಾರವಷ್ಟೆ? ನಾವೇಕೆ ಹೋಗಬೇಕು?

[illegible] ಅಭಿಪ್ರಾಯವೂ ಅದೇ. ಆದರೆ ಆ ಗೊಲ್ಲನ [illegible] ಏನೋ ಹೇಳ [illegible] ಉತ್ತಮ.

[illegible] ಅಡ್ಡಬರುವನೇ! ([illegible])

[illegible]

[illegible] ತಾಳ । [illegible] ವರಯ [illegible] ಗೊಲ್ಲರ [illegible] ।

[illegible]

[illegible]

ತೋರುತ್ತೈತೆ । ಮೀಸೆಮೇಗೆ ಕೈ ಏಕೆ । ಲೇಸೈತೇ ॥ ಆ ॥ ಧಲಾಂಧಲಾ ಹೆಂಡರನು ಒಲಿಸುವ ಕಾಸು । ಬಲುಭಂಡತನಾ ಲಂಡತನಾ ಕಲಿಸುವ ಕಾಸು ॥ ಬಹುದಂಡದಲೀ ಹೆಂಡದಲೀ ಹೋಗುವ ಕಾಸು । ಅಹ ದಂಡಿನಲಿ ಗಂಡುತನಾ ಕೂಡಿಸುವ ಕಾಸು । ಕಾಸೇ ಗಂಟೂ, ಕಾಸೇನಂಟೂ । ಕಾಸಿದ್ರೆಲ್ಲಾ ಸುಖವುಂಟೂ ॥

(ಆಗ ಸಂಭ್ರಮ ಯುಕ್ತನಾದ ಬ್ರಾಹ್ಮಣನು ಪ್ರವೇಶಿಸುವನು.)

ಬ್ರಾಹ್ಮಣ—ಅಯ್ಯಾ, ರಾಜಾಜ್ಞಾಧಾರಕನೇ, ವಿಶೇಷವೇನು?

ಡಂಗುರದವನು—(ತಿರುಗಿನೋಡಿ) ಸೋಮೀ, ಈಜೆನ ನಮ್ ದೊರೇಮಗ ಛಾನಲ್ಲ ರುಕ್ಮಿ ಮಾರಾಜ ಅವನಪ್ಪ ಆಗ್ಯೆತೆ! ಏನೆಂದ್ರೆ ದೊರೇಮಗಳಿಗೆ ಮದುವೇನಡೀತೈತೆ. ಕೇರೀಮನೆಗೋಳಿಗೆಲ್ಲ ದೀಪಳಚ್ಚೆ ಸುಣ್ಣ ಬಣ್ಣ ಗೋಳ್ ಹಚ್ಚಬೇಕು! ಎಲ್ಲಾ ಎಂಗಸ್ರೂ ಗಂಡಸ್ರೂ ಮನೆಳ್ಳೆಸಾಲಿಗೆ ಓರ್ಣೀ ಕಾರ್ಣೀ ಮಾಡಬೇಕು! ಚಿಕ್ಕೋರೂ ದೊಡ್ಡೋರೂ ಬಂದೋರೂ ಬರದೋರೂ ಇರೋರೂ ಇಲ್ದೋರೂ ಕಂಡೋರೂ ಕಾಣ್ದೋರೂ ಎಲ್ರೂವೇ ಈ ಉಸ್ವ ನಡೀಸಬೇಕು ಇದಕ್ ತಪ್ಪೋರ್‌ಗೆ ತಲೇ ಹೋಯ್ತುದೇ ಅಂತ ದೊರೇವರಾಗ್ನೇ ಆಗ್ಯೆತೇ (ಎಂದು ತಂಬಟೆಯನ್ನು ಬಾರಿಸುವನು.)

ಬ್ರಾಹ್ಮಣ—ಅಯ್ಯಾ, ನಡೆನಡೆ ಮುಂದಿನ ಬೀದಿಯಲ್ಲಿ ಸಾರು.

ಡಂಗೂರು—ಅಪ್ಣೋ! ಬುದ್ಧಿ (ಎಂದು ಮರೆತಂತೆ ನಟಿಸಿ) ಬುದ್ಧೀ! ಒಂದು ಇಸಾರ ವೈತೆ ಇಸಾರ. (ಎಂದು ತೂರಾಡುವನು.)

ಬ್ರಾಹ್ಮಣ (ಸ್ವಗತ) ಇವನು ಮಿತಿಮೀರಿ ಪಾನಮಾಡಿರುವನು. ಇರಲಿ. (ಎಂದು ಪ್ರಕಾಶ) ಏನಯ್ಯ? ಅದು?

ಡಂಗುರ—ಬುದ್ಧೀ! ಗಂಡ್ನೆಸ್ರೇನೋ ಮರತ್ಬುಟ್ನಲ್ಲಾ ದಮ್ಮಯ್ಯಾ! ಸಟೀಗೇಳ್ರೊಲಾ?

ಬ್ರಾಹ್ಮಣ—(ನಗುತ್ತಾ) ಚೆನ್ನಾಯಿತು. ಬಿಡು. ಮದುವೆಯ ವರ್ತಮಾನವನ್ನು ಹೇಳುತ್ತಿರುವವನೇ ನೀನು. ಗಂಡಿನ ಹೆಸರೇನೆಂದು ನನ್ನನ್ನು ಕೇಳಿದರೆ ಏನುಹೇಳಲಿ?

ಡಂಗುರದವನು—ಸೋಮೀ. ಅದೆಂತೇದೋ ಪಾಲ್ನಂತೆ ನನ್ಗೊತ್ತಾ?

ಬ್ರಾಹ್ಮಣ—ಏನು! ಪಶುಪಾಲನೋ!

ಡಂಗುರದವನು—ಊ! ಅದೇಯಾ! ಅದೇಯಾ! ಪಸಪ್ಲಾಲ! ಪಸ್ಪಾ

ಲ! (ಎಂದು ತಂಬಟೆಯನ್ನು ಬಾಜಿಸುತ್ತ) ನವೊದ್ದರೇ ಮಬಿಳ್ನ ಪಸಪ್ಪಾಲಂಗ್ ಕೊಟ್ಟು ಮದಿನೇ ನಡೀತ್ತೈತೇ! ಈ ಊರ್ ಜನೊಗ್ಗೀಳಲ್ಲಾ ಉಸ್ಟಾಬ್ ಮಾಡ್ಕೀಕಂತಾ ದೊರೀವರಾಗ್ಲೀ ಆಗ್ಯೆತೇ!!! (ಎಂದು ಸಾರುತ್ತ ಹೊರಟು ಹೋಗುವನು. ?

ಬ್ರಾಹ್ಮಣ—ರುಕ್ಮಿಣಿಗೆ ಶಿಶುಪಾಲನು ಪತಿಯಾಗುವುದೇ ಸತ್ಯ. ಈ ಡಂಗುರದವನು ಶಿಶುಪಾಲನೆಂಬ ಹೆಸರಿಗೂ ಪಶುಪಾಲನೆಂಬ ಹೆಸರಿಗೂ ಭೇದವನ್ನೇ ಅರಿಯದೆ ಅರಚಿಕೊಂಡು ಹೋಗುತ್ತಿರುವನು. ಶ್ರೀ ಕೃಷ್ಣನು [illegible] ಸತ್ಕಾರವನ್ನು ಪಡೆದು ಕಚೇರಿ [illegible] ನಿರೀಕ್ಷಿಸುತ್ತಿರುವನು ನಮ್ಮ ರಾಜಪುತ್ರಿಯ ಮನೋರಥವು [illegible] ಇನ್ನು ಸಂಶಯವಿಲ್ಲ. ಈಗನಾನು [illegible] ಹೋಗಿ [illegible] ನೆರವೇರಿಸುವೆನು. (ಎಂದು ಹೊರಟು ಹೋಗುವನು.)

([illegible] ಪ್ರವೇಶಿಸುವಳು)

[illegible] — [illegible]

[illegible] | [illegible] | [illegible] |
[illegible] || [illegible] |
[illegible] || [illegible] |
[illegible] | [illegible] |
[illegible] |

[illegible]

[illegible]

ರುಕ್ಮಿಣಿ—(ಕಚೆಯನ್ನು ಪೂಜಿಸುತ್ತ)

ರಾಗ—ಕಾಳ

ಕಾಯೆಕಾಯೆ | ಮುನಿಗೇಯೆ | ದೀನಾಶ್ರಯೇ || ಪ || ಸದಯೇ ಮಹೋದಯೆ || ಸಾರಸೌಖ್ಯಜಾಲವೀಯೆ | ಗಾರುಗೊಂಡೆಭೋಗದಾತ್ರಿಯೆ || ಸ್ವೈರಸೆನುಕುನ್ನಿಗಳ | ಕ್ರೂರವಚನವನಕಟ | ವೀರವಾರ ವಿನುತಗೋಪ | ಧೀರಸಾರೆ ಬೇಡಿಕೊಂಡೆನು || ೧ || ಭೂವಿನುತವಲ್ಲಭನ | ದೇವಿಕರುಣಿಸುಮುದದೆ | ನೋವೇನೇವೆ | ಕೃಪೆಯನೀಡು ದೇವದೇವ ಜಾಯೆ | ಮಾಯೆ || ೨ ||

ಕಂ || ಪತಿಯೇ ಮಂಗಳ ಭಾಗ್ಯಂ |
ಪತಿಯೇ ಬಹುಭೋಗದಾಯಕಂ ಪತಿಯೊಡೆಯಂ |
ಪತಿಯೇ ಪರದೈವತಮುಂ |
ಪತಿಯೇ ಸರ್ವಸ್ವಮಲ್ತೆ ಕರುಣಿಸು ಪತಿಯಂ ||

(ಎಂದು ನಮಸ್ಕರಿಸುವಳು.)

(ತೆರೆಯಲ್ಲಿ) ಕಂ || ಚಿಂತಿಸದಿರು ನೀಂ ರುಕ್ಮಿಣಿ |
ಪಿಂ ತೆಗೆಯಂ ನುಡಿದೆನುಡಿಗೆ ಪಡಿಯಂ ನುಡಿಯಂ |
ಭ್ರಾಂತಿಯನುಳಿನಿನ್ನದಿರೊಳ್ |
ಕಾಂತಂ ಯದುಕಾಂತನೆಸೆವನಮಲೈಕಾಂತಂ ||

(ರುಕ್ಮಿಣಿಯು ಸಂಭ್ರಮದಿಂದ ಸುತ್ತಲೂ ನೋಡುವಳು. ಆಗ ಶ್ರೀಕೃಷ್ಣನು ಪ್ರತ್ಯಕ್ಷನಾಗಿ ರುಕ್ಮಿಣಿಯ ಕೈಯನ್ನು ಹಿಡಿದು ಕೊಳ್ಳುವನು.

ಬ್ರಾಹ್ಮಣ—(ಸಂತೋಷದಿಂದ) ರಾಜ ಪುತ್ರಿಯನ್ನು ಪಶುಪಾಲನಿಗೆ ಕೊಟ್ಟು ಮದುವೆಯಾಗುವುದೆಂದು ಈಗ ತಾನೆ ಡಂಗುರದವನು ಸಾರಿದುದು ನಿಜ್ಜವೇ ಆಯಿತಲ್ಲ !

ಕೃಷ್ಣ—(ನಗುತ್ತ) ಬ್ರಾಹ್ಮಣೋತ್ತಮ, ನನ್ನನ್ನು ದನಕಾಯುವವನೆಂದೆಯಾ ?

ಬ್ರಾಹ್ಮಣ—ದನಕಾಯುವವನೂ ಧನಕಾಯುವವನೂ, ಜಗಕಾಯುವವನೂ ಜಗಳಕಾಯುವವನೂ ಎಲ್ಲವೂ ನೀನೇ.

ಕೃಷ್ಣ—ಪ್ರಿಯೇ, ನಡೆ ನಮ್ಮೂರಿಗೆ ಹೊರಡೋಣ. (ಎಂದು ರುಕ್ಮಿಣಿಯ ಕೈಯನ್ನು ಹಿಡಿದು ರಥದಲ್ಲಿ ಕುಳ್ಳಿರಿಸಿಕೊಂಡು ಹೊರಟು ಹೋಗುವನು.)

ಬ್ರಾಹ್ಮಣ—(ಗಟ್ಟಿಯಾಗಿ) ಎಲೈ, ಶಿಶುಪಾಲಾದಿಮಹಾವೀರರಾ, ರಾಜಪುತ್ರಿಯಾದ ರುಕ್ಮಿಣಿಯನ್ನು ಶ್ರೀ ಕೃಷ್ಣನು ನಿರ್ಭಯವಾಗಿ ರಥದಲ್ಲಿ ಕುಳ್ಳಿರಿಸಿಕೊಂಡು ಹೋಗುತ್ತಿರುವನು. ನಿಮ್ಮ ಸಂಕಲ್ಪವು ಬರಿದಾಯಿತೇ ?

(ಆಗ [illegible] ರುಕ್ಮಿಯು ಪ್ರವೇಶಿಸುವನು.)

ರುಕ್ಮಿ— ಕಂ | ಅಹಹಾ ಗೊಲ್ಲರ[illegible]ಗಂ |
[illegible] ||
[illegible] |
[illegible] ||

ಶಿಶುಪಾಲ— ಕಂ | [illegible] |
[illegible] ಮುಂಬರಿಗುಂ ||
[illegible] |
[illegible] |

[illegible]

[illegible]

[illegible]

[illegible]

(ಎಂದು ಖಡ್ಗವನ್ನು ಬೀಸುತ್ತ ಹೊರಟು ಹೋಗುವನು.)

(ತೆರೆಯಲ್ಲಿ) ರಾಗ—ತಾಳ.

ಘಡಾಕಟ್ಟಿ ಕೊಲಿರಿ | ಸೆಡೆಯದಿರಿ | ಬಾಡಾಬಾಡಿಗಿದೆ ಸಮಯ ||

ಶಿಶು—(ನೋಡಿ) ರುಕ್ಮಿಯು ಆಗಲೇ ರಥವನ್ನು ತಡೆದು ಶತ್ರುವನ್ನು ಆಕ್ರಮಿಸುತ್ತಿರುವನು.

ದಂತ—(ನೋಡಿ) ಎಲೈ, ಈಗ ನಾವೊಂದುಪಾಯವನ್ನು ಮಾಡೋಣ. ರುಕ್ಮಿಯು ಆಕಳ್ಳನೊಡನೆ ಯುದ್ಧಮಾಡುತ್ತಿರಲಿ. ಅರಕ್ಷಿತಳಾದ ರುಕ್ಮಿಣಿಯನ್ನು ನಾವು ಸುಲಭವಾಗಿ ಕರೆದುಕೊಂಡು ಹೊರಟು ಬರಬಹುದು.

ಜರಾಸಂಧ—ಭಾಪುದಂತವಕ್ರ, ಭಾಪು! ನಿನ್ನ ಆಲೋಚನೆಯು ಯುಕ್ತವಾಗಿರುವುದು.

ಶಿಶು—(ಚೆನ್ನಾಗಿನೋಡಿ) ಏನು! ಸಾರಥ್ಯವನ್ನು ಮಾಡುತ್ತಿರುವರು ಯಾರು ?

ಬ್ರಾಹ್ಮಣ—ಎಲೈ, ಸಾಹಸಿಗಳಿರಾ, ನೀವೆಲ್ಲರೂ ಇಲ್ಲಿಯೇ ನಿಂತು ಕಾಲ ಹರಣ ಮಾಡುತ್ತಿರುವಿರಿ! ಸುಕುಮಾರನಾದ ರುಕ್ಮಿಗೆ ಯಾವವಿಪತ್ತು ಸಂಭವಿಸುವುದೋ-ಎಂದು ನನ್ನ ಹೃದಯವು ತಲ್ಲಣಿಸುತ್ತಿರುವುದು.

ಜರಾಸಂಧ—ಎಲಾ, ಬ್ರಾಹ್ಮಣನೇ, ರುಕ್ಮಿಗೆ ಅಪಾಯವೆಂದರೇನು! ರಾಜಕುಮಾರನಿಗೆ ಗೋಪಕುಮಾರನಿಂದ ಕೇಡೇ ? ನಿನ್ನೀ ಶಂಕೆಯನ್ನು ಬಿಡು.

ಶಿಶು—ಎಲಾ, ಮೂರ್ಖ ಅವಾಚ್ಯವನ್ನಾಡಿದರೆ ನಿನ್ನ ತಲೆಯನ್ನು ಚೆಂಡಾಡುವೆನು.

ಜರಾಸಂಧ—ಚೈದ್ಯೇಶ್ವರನೇ, ಹೊಟ್ಟೆಬಾಕನಾದ ಬ್ರಾಹ್ಮಣನಿಗೆ ಯುದ್ಧವಿದ್ಯೆಯೇನು ಗೊತ್ತು ? ಕಾಲಹರಣ ಮಾಡಲಾಗದು. ನಡೆ

(ಎಂದು ನಾಲ್ವರೂ ಹೊರಟು ಹೋಗುವರು.)

ಬ್ರಾಹ್ಮಣ—(ನೋಡಿನಗುತ್ತ) ಆಹಾ! ಮಹಾರಥರು! ಒಬ್ಬರಿಗಿಂತ ಒಬ್ಬರು ಯುದ್ಧವಿದ್ಯಾವಿಶಾರದರು. ಆದರೆ ಬಾಯಾರಿದವನು ಬಿಸಿಲುಗುದುರೆಯನ್ನು ಕಂಡು ಹಿಗ್ಗಿದಂತೆ ಇವರಾವೀರವಾದಗಳು ನಿಷ್ಫಲವಾಗುತ್ತ

ವಲ್ಲಾ! ಎಂದು ಚಿಂತಿಸುವೆನು. ಆಗಲಿ ಈ ವಿಷಯವನ್ನೆಲ್ಲ ವೃದ್ಧರಾಜನಾದ ಭೀಷ್ಮಕನಿಗೆ ತಿಳಿಸುವೆನು. (ಎಂದು ಹೊರಟು ಹೋಗುವನು.)

(ನಾರದನ ಪ್ರವೇಶ)

ರಾಗ—ಕಾಪಿ.

ಕರುಣಾಸಾಗರಾ | ಮಧುರಾ || ದಾನವಭೀಕರ | ಗೋಪೀಜನಾರಾ |
ಸುಜನಾಧಾರ | ಭವದೂರಾ | ಶ್ರೀ ||

ನಾರದ—ಆಹಾ! ಲಕ್ಷ್ಮೀನಾರಾಯಣರು ರುಕ್ಮಿಣೀ ಕೃಷ್ಣರ ಸ್ವರೂಪದಿಂದ ಪ್ರಕಾಶಿಸುತ್ತಿರುವರು. ಶಿಶುಪಾಲದಂತವಕ್ತ್ರರ ರೂಪದಲ್ಲಿರುವ ವೈಕುಂಠದ್ವಾರಪಾಲಕರಿಗೆ ಮೋಕ್ಷಕಾಲವು ಸನ್ನಿಹಿತವಾಗುತ್ತಿರುವುದು. ವೃದ್ಧ ಭೀಷ್ಮಕನನ್ನು ಮೂಲೆಗೊತ್ತಿ ಸ್ವಾಮಿಯನ್ನು ದ್ವೇಷಿಸುತ್ತಿರುವ ಮೂರ್ಖರುಕ್ಮಿಗೂ ಸಹ ಈಗ ಮುಗಿಯುವುದರಲ್ಲಿ ಅಡ್ಡಿಯಿಲ್ಲ. (ಎಂದು ಮುಂದೆ ಹೋಗಿ ನೋಡಿ) ಓಹೋ! ಈ ಮಾರ್ಗವಾಗಿಯೇ ಬರುತ್ತಿದ್ದ ನನ್ನನ್ನು ಕಂಡು [illegible] ಈ ವೀರಭಟನು ಯಾರು? (ಎಂದು ನೋಡಿ ನಗುತ್ತ) ಇವನು ಜರಾಸಂಧ! (ಎಂದು ಮುಂದೆ ಹೆಜ್ಜೆಯಿಟ್ಟು ನೋಡಿ) ಶಿಶುಪಾಲ ದಂತವಕ್ತ್ರರ [illegible] ದಾರಿಯಕ್ಕೆ [illegible] ಮಾತನಾಡಿಸುವೆನು. (ಎಂದು ಪ್ರಕಾಶ) ಅಯ್ಯಾ, ಜರಾಸಂಧನೇ, ಇದೇನು ನನ್ನನ್ನು ಕಂಡರೂ ಕಾಣದ ಹಾಗೆ ಹೋಗುತ್ತಿರುವೆ!

([illegible])

ಜರಾಸಂಧ—[illegible]

ನಾರದ—[illegible] ಹೋಗುವೆ? [illegible]

ಜರಾಸಂಧ—[illegible]

[illegible]

ಮಾಡಿ ಕಳ್ಳನಿಗೂ ಬೀಗರಿಗೂ ಜಗಳ ಬಿಟ್ಟರೆ ಬೀಗರು ಜಗಳಕ್ಕೆ ಕಾಲ್ಕೆರೆದು ನಿಲ್ಲಬಹುದೋ? ಬೀಗರಿಗೆ ಘನತೆಯುಂಟಾದೀತೋ! ಸ್ವಾಮೀ, ತ್ರಿಲೋಕ ಸಂಚಾರಿಗಳೇ, ಕೇಳಿ ಮುಖ್ಯವಾಗಿ ಮೂರ್ಖಬಾಲಕರ ಸಹವಾಸ! ಅದಕ್ಕಾದ ಫಲ ಆಭಾಸ! ತಮಗಿದೆಲ್ಲಾ ಗ್ರಾಸ !!!

ನಾರದ—(ತಲೆದೂಗುತ್ತ) ಅಯ್ಯಾ ಮಾಗಧೇಶ್ವರ! ನೀನು ಯುದ್ಧದಲ್ಲಿ ಹಿಂದೆ ಬಿದ್ದರೂ ಮಾತಿನಲ್ಲಿ ಮುಂದೆ ಬೀಳುವವನೇ! ಈಗ ನಿಮ್ಮ ಆ ವರನೆಲ್ಲಿ?

ಜರಾಸಂಧ—ವರನೇ? ಹೆಂಗಳ್ಳನ ಮೇಲಕ್ಕೆ ಸಂಚಕಾರ ತೆಗೆದುಕೊಂಡು ಹೋದನು! ಇರಲಿ ನನಗೆ ಕಾರ್ಯ ಎದೆ. (ಎಂದು ಹೊರಟು ಹೋಗುವನು.)

ನಾರದ—ಇವನಾಯಿತು. (ಎಂದು ನೋಡಿ) ಇವನು ಯಾರು! ದಂತವಕ್ತ್ರ! ಏನಯ್ಯ, ದಂತವಕ್ತ್ರನೇ, ಏಕಾಂಗಿಯಾಗಿ ಹೊರಟೆ! ರುಕ್ಮಿಣಿಯನ್ನು ಬಿಡಿಸಿ ತಂದರಷ್ಟೆ?

(ಆಗ ದಂತವಕ್ತ್ರನು ಕೋಪದಿಂದ ಪ್ರವೇಶಿಸುವನು.)

ದಂತವಕ್ತ್ರ— ಕಂ || ಬಡಗೊಲ್ಲನವಂ ಲಕ್ಷ್ಯಮೆ |
ಬಿಡು ಬಿಡುಸುರಮುನಿಯೆ ವೀರಕುಲಕಿದುತರಮೇಂ |
ಜಡರುಕ್ಮಿಗೆ ಮಾನವೆ ಪೇಳ್ |
ಕಡುಗಳ್ಳಂಗೆಮ್ಮ ಮುಂದೆ ಕಾದುವುದು ಪೆಣ್ಣಂ |

ಮೂರ್ಖರುಕ್ಮಿಯು ಮನಸ್ಸಿನಲ್ಲಿ ಹೀಗೆಯೇ ಮಾಡಬೇಕೆಂದು ನಿಶ್ಚಯಿಸಿಕೊಂಡಿದ್ದು ಕೃಷ್ಣಬಲರಾಮರಿಗೂ ಲಗ್ನಪತ್ರಿಕೆಯನ್ನು ಬರೆದು ಕಳುಹಿಸಿದ್ದನು. ಇಲ್ಲದಿದ್ದರೆ ಯಾದವರು ಸೈನ್ಯ ಸಮೇತರಾಗಿ ಬರುತ್ತಿದ್ದರೇ? ದುರಭಿಪ್ರಾಯದಿಂದಲೇ ಬಂದಿರುವ ಆ ಹೀನ ಕುಲದ ಹೀನಾಕಾರದ ಹುಡುಗರೊಡನೆ ನಮ್ಮಂತಹ (ಎಂದು ಮೀಸೆಯನ್ನು ಹುರಿಮಾಡುತ್ತ) ಧೀರೋದಾತ್ತರು ನಿಲ್ಲ ತಕ್ಕುದು ಸಮನಲ್ಲ. ಅದರಿಂದಲೇ ಸುನೀಥನು ಸುಮ್ಮನಾದನು. ನಾನೂ ಸುಖವಾಗಿ ಹೊರಟು ಬಂದೆನು. ಈಗ ಸ್ವಲ್ಪ ಕಾರ್ಯವಿರುವುದು

ನಾರದ—ಯಾರಿಗೆ? ನಿನಗೇ?

ದಂತವಕ್ರ—ಅಹುದು.

ನಾರದ—ಆಹಾ ! ಹಾಗುಂಟೇ ?

ನಾರದ—ಅದೇಕೆ ?

ನಾರದ—ನಿಮ್ಮಂತಹ ದೊಡ್ಡಮನುಷ್ಯನು ಸ್ವಲ್ಪ ಕಾರ್ಯಕ್ಕೆ ಹೋಗುವುದೇ ? ಸ್ವಲ್ಪ ಕಾರ್ಯವನ್ನು ಮಾಡಿದರೂ ಮಹತ್ಕಾರ್ಯವೆಂದು ಮಹಿಮೆಗೊಳ್ಳುವುದು. !

ದಂತವಕ್ರ—ಸ್ವಾಮಿ, ಈ ನಿಮ್ಮ ವಾಗ್ವೈಖರಿಯನ್ನು ನಾನು ಕೇಳಲಾರೆನು [illegible]. (ಎಂದು ಹೊರಟು ಹೋಗುವನು.)

ನಾರದ—[illegible] ! (ಎಂದು ನೋಡಿ ತಿಳಿಯದಂತೆ ಅಭಿನಯಿಸಿ) [illegible] ! [illegible] ! [illegible] !!

([illegible] ವ್ಯಸನದಿಂದ ಪ್ರವೇಶಿಸುವನು.)

ನಾರದ—([illegible]) [illegible], ರುಕ್ಮಿ ಮಹಾರಾಜನೇ ! ಆಹಾ [illegible] ! [illegible] ! [illegible] ಮಾತ್ರವೇ ಕಷ್ಟ [illegible] ! [illegible] ಯಾವ ರಾಜಕುಮಾ [illegible] ! [illegible] ಎರೆದುಕೊಡಿದವಳೆಂಬ [illegible] ವಧಿಸಿದವನಿಗೆ [illegible] ?

[illegible], ಎತ್ತುವನು. ಯು [illegible]

[illegible] |
[illegible] ವರೆಗಂ |
[illegible] |
[illegible] ಪೊಸ ಪಟ್ಟಮಂ |

[illegible] ಹುಟ್ಟ [illegible] ಮುಖ್ಯವಾಗಿರು [illegible] ಇನ್ನಿವನಿಗೆ

ವಿದರ್ಭದೇಶದ ಪ್ರವೇಶವೂ ಇಲ್ಲ. ಜೀವಿಸಿದ್ದೂ ಮೃತಪ್ರಾಯನೇ ಸರಿ. ಈಗ ಶಿಶುಪಾಲಜರಾಸಂಧರಿಬ್ಬರೂ [illegible] ಮತ್ತೊಂದು [illegible] ಯುವಿರುವುದು. ಧರ್ಮಪರನಾದ ಯುಧಿಷ್ಠಿರನು ಗುರುಜನ ವಿಧೇಯತೆಯುಳ್ಳ [illegible] ಪರಾಕ್ರಮಿಗಳೂ ಆದಭೀಮಾರ್ಜುನಾದಿ ಸಹೋದರರೊಡನೆ ಇಂದ್ರಪ್ರಸ್ಥದಲ್ಲಿ ರಾಜ್ಯಭಾರ ಮಾಡುತ್ತಿರುವನು. ಅವನು ರಾಜಸೂಯಯಾಗಮಾಡುವುದು ಶಿಷ್ಟ ಸಮ್ಮತವಾಗಿರುವುದು. ಶ್ರೀಕೃಷ್ಣನ ಸಹಾಯ್ಯ [illegible] ವಿರುವುದರಿಂದ ಆ ಕಾರ್ಯವು ಸುಲಭವಾಗಿ [illegible] ವುದರಲ್ಲಿ ಸಂದೇಹವಿಲ್ಲ. ಈ ಸಂದರ್ಭದಲ್ಲಿ ಸ್ವಾರ್ಥಪರರೂ [illegible] ಅದ ಶಿಶುಪಾಲಜರಾಸಂಧರ ಭಾರವು ಭೂಮಿಗೆ [illegible] ಅವಕಾಶದೊರೆಯುವುದು. ಆದುದರಿಂದ ಈಗಲೇ ಹೋಗಿ [illegible] ಯುಧಿಷ್ಠಿರನಿಗೆ ಪ್ರೇರೇಪಿಸಿ ದುಷ್ಟಶಿಕ್ಷಣ ಶಿಷ್ಟರಕ್ಷಣೆಗಳಿಗೆ ಅವಕಾಶವುಂಟು ಮಾಡಿಸುವೆನು.

(ಎಂದು ಹೊರಟು ಹೋಗುವನು)

ಇಂತಿದು ಮೂರನೆಯಂಕಂ.

ನಾಲ್ಕನೆಯ ಅಂಕಂ

(ವ್ಯಾಕುಲ ಹೃದಯನಾದ ದುರ್ಯೋಧನನೂ ಶಕುನಿಯೂ ಪ್ರವೇಶಿಸುವರು.)

ಶಕುನಿ—ವತ್ಸ ಸುಯೋಧನ, ನಿನ್ನ ಮುಖವು ಕಳೆಗುಂದಿರುವುದೇಕೆ ? ಬಾರಿಬಾರಿಗೂ ನಿಟ್ಟುಸಿರು ಬಿಡುತ್ತಿರುವುದಕ್ಕೆ ಕಾರಣವೇನು.

ದುರ್ಯೋಧನ—

ವೃ ॥ ಅರಿಯುಪೊಗಳ್ಕೆಯಂ ಕಿವಿಗಳಾಲಿಸಿ ಸುಟ್ಟುರಿಬೊಗಿಯಾದುವಾ |
ದುರುಳರಭಾಗ್ಯಮಂ ಸಲೆವಿಲೋಕಿಸಿ ಬೆಂದುವು ಕಣ್ಗಳಕ್ಕಟಾ ||
ಮೆರೆವವರೇಳ್ಗೆಯಂ ಸೊಗದ ಬಾಳ್ಕೆಯುಮಂ ನೆರೆನೋಡಿ ಮಾನಸಂ |
ಕರಕರಗೊಂಡುದಯ್ಯೊ ! ತಡೆಯೆಂ ದಹಿಪೀ ಬಲುಬೇಗೆಗೇನೆನಾಂ ||

ಮಾವ, ನಿನಗಿಂತ ನನಗೆ ಆಪ್ತರಾದವರು ಮತ್ತಾರಿರುವರು. ಕೇಳು, ಎಷ್ಟು ಸಾಹಸಮಾಡಿದರೂ ನಾಶವಾಗದೆ ಕ್ಷಣೇಕ್ಷಣೇ ಹೆಚ್ಚು ತ್ತಿರುವ ಶತ್ರುವಿನ ಏಳಿಗೆಯನ್ನೂ ಐಶ್ವರ್ಯವನ್ನೂ ಕಂಡ ನನಗೆ ಸಹಿಸ ಲಾಗದಷ್ಟು ಸಂಕಟವುಂಟಾಗಿರುವುದು. ಅಯ್ಯೋ! ದಾಯಾದ್ಯನಾದ ಧರ್ಮಸುತನು ಉಚ್ಛ್ರಾಯಸ್ಥಿತಿಯಲ್ಲಿರುವುದನ್ನೂ, ನಾನು ದೀನನಾಗಿ ಸೊಂಟ ಕಟ್ಟಿಕೊಂಡು ಅವನು ಮಾಡುವ ಯಾಗದಲ್ಲಿ ಸೇವಕನಾಗಿರುವು ದನ್ನೂ ನೀನು ಕಣ್ಣಾರೆ ಕಾಣುತ್ತಿದ್ದೂ ನನ್ನ ಮನಸ್ಸಿನ ಬೇಗೆಯನ್ನು ತಿಳಿದುಕೊಳ್ಳಲಾರದೆ ಕೇಳುವೆಯಲ್ಲಾ! ಅಥವಾ ಹಾಸ್ಯಮಾಡಬೇಕೆಂದು ಹೀಗೆ ಕೇಳುತ್ತಿರುವೆಯೋ!

ಶಕುನಿ—ಅಪ್ಪ! ಈ ಅಲ್ಪವಿಷಯಕ್ಕೆ ನಿನ್ನಂಥವನು ಕೊರಗುವುದು [illegible] ಕೊರತೆಯೇನು? ನಿನ್ನ ತಮ್ಮಂದಿರು [illegible] ಕೃಪನೂ ಹೇಡಿ [illegible] ನಾಗಾಡಿಯಲ್ಲವಲ್ಲ. [illegible] ನಮ್ಮ ಮಂತ್ರಾಲೋಚ [illegible] ಈ ಸರ್ವಭೂಮಿ [illegible] ಪಡೆಯುವು [illegible]

[illegible] ಈಗ [illegible] ರಾಜ್ಯಹವನ್ನು [illegible] ಅರಮನೆ [illegible] ಮಾಡು [illegible] ಎಷ್ಟೆಷ್ಟು

ಇಂತಹ ವೈಭವವು ಕರಗುವಂತೆಯೇ ಇಲ್ಲವಲ್ಲ! ವೆಚ್ಚಮಾಡುತ್ತಿದ್ದರೂ ಕರಗುವಂತೆಯೇ ಇಲ್ಲವಲ್ಲ! ನನಗೆಲ್ಲಿ ದೊರೆದೀತು? ನನ್ನ ಮನಸ್ಸಿಗೆ ನೆಮ್ಮದಿಯೆಲ್ಲಿ ಬಂದೀತು?

ಶಕುನಿ—ಸುಯೋಧನ, ನಿನ್ನ ಆತುರವನ್ನು ಸ್ವಲ್ಪ ಸೈರಿಸಿಕೊ. ಈ ದುಃಖವು ನಿನಗೆ ಮಾತ್ರವಲ್ಲ. ನಿನ್ನ ಪರಿವಾರವೆಲ್ಲ ಸಂಕಟಪಡುತ್ತಿರು ವುದು. ನೀನು ಶಿಶುಪಾಲನ ಮುಖಭಾವವನ್ನು ನೋಡಲಿಲ್ಲವೆ? ಕೃಷ್ಣನು ಈ ರಾಜಸೂಯ ಯಾಗದ ನೆವದಿಂದ ಜರಾಸಂಧನನ್ನು ಕೊಲ್ಲಿಸಿದನಷ್ಟೆ, ಅವನ ವಧೆಯಿಂದ ಶಿಶುಪಾಲನ ಮನಸ್ಸಿಗುಂಟಾಗಿರುವ ಸಂಕಟವೂ ದಂತವಕ್ರನ ಮರಣದಿಂದಾದ ಆಕ್ರೋಶವೂ ಉರಿಯುತ್ತಿರುವುವು. ಅವು ಹೀಗೆ ಬಹುಕಾಲ ಅಡಗಿರಲಾರವು. ಅದುವರೆಗೂ ಸುಮ್ಮನಿರು.

ದುರ್ಯೋಧನ—ಮಾವ, ಇದೀಗ ಒಳ್ಳೆಯ ಸಮಾಧಾನ. ಶಿಶುಪಾಲ ನಿಗೆ ಕೃಷ್ಣನಮೇಲೆ ಕೋಪವುಂಟಾಗಿರುವ ಮಾತ್ರವೇ ನನಗೆ ಬಂದ ಭಾಗ್ಯವೇನು? ನನ್ನ ಶತ್ರುವಿನ ಅಭ್ಯುದಯಕ್ಕೆ ಕುಂದೇನು?

ಶಕುನಿ—ಸುಯೋಧನ, ಕೃಷ್ಣನು ಭೀಮಾರ್ಜುನರ ಸಮೇತವಾಗಿ ಹೋಗಿ ಬ್ರಾಹ್ಮಣವೇಷವನ್ನು ಧರಿಸಿಕೊಂಡು ಜರಾಸಂಧನ ರಾಜಗೃಹವನ್ನು ಹಿಂದಣಬಾಗಿಲಿಂದ ಪ್ರವೇಶಿಸಿ ಅವನನ್ನು ವಂಚಿಸಿ ಕೊಲ್ಲಿಸಿದನೆಂಬುದನ್ನು ನೀನು ಕೇಳಬಲ್ಲೆಯಷ್ಟೆ? ಜರಾಸಂಧನನ್ನು ಕೊಂದವನು ಭೀಮನು. ಶಿಶು ಪಾಲನು ಅವನಿಗೆ ಪ್ರತೀಕಾರಮಾಡದೆ ಬಿಡತಕ್ಕವನಲ್ಲ, ಭೀಮನ ವಧೆಯಾದಮೇಲೆ ಪಾಂಡವರಾಟವೇ ಮುಗಿಯಿತು. ಶತ್ರುವಿನ ಸರ್ವ ಸ್ವವೂ ನಿನ್ನ ವಶವಾಗದೆ ಮತ್ತೇನಾಗುವುದು.

(ಆಗ ನಾರದನು ಪ್ರವೇಶಿಸುವನು.)

ನಾರದ—ಏನಯ್ಯ, ದುರ್ಯೋಧನ, ವಿರಾಮವಾಗಿ ನಿಂತುಬಿಟ್ಟೆ? (ಎಂದು ಶಕುನಿಯ ಕಡೆಗೆ ನೋಡಿ) ಓಹೋ! ಮಾವನೂ ಅಳಿಯನೂ ಮಂತ್ರಾಲೋಚನೆಯಲ್ಲಿದ್ದಿರೇನೋ?

ಶಕು—ಮಂತ್ರಾಲೋಚನೆಯೇನುಬಂತು? ತಮ್ಮ ಸಂದರ್ಶನಾರ್ಥ ವಾಗಿಯೇ ನಿಂತಿದ್ದೆವು,

ನಾರದ—ಆಹಾ! ಬಹಳ ಸಂತೋಷ. ನಾನು ಬಂದುದು ನಿಮಗೆ ಆನಂದದಾಯಕವಾಗಿದ್ದರೆ ನಾನು ಇಲ್ಲಿಯೇ ನಿಂತುಬಿಡುವೆನು. (ಎಂದು ಕರಿಯ ಕಡೆಗೆ ನೋಡುವನು)

(ಆಗ ಗಂಟುಮೂಟೆಗಳಲ್ಲಿ ವಸ್ತ್ರಾಭರಣಗಳನ್ನು ಕಟ್ಟಿಕೊಂಡು ಬ್ರಾಹ್ಮಣರು ಒಬ್ಬೊಬ್ಬರಾಗಿ ಪ್ರವೇಶಿಸುವರು.)

ನಾರದ—ಎಲೈ ಬ್ರಾಹ್ಮಣರಿರಾ, ಯಾಗವು ಪೂರ್ತಿಯಾಯಿತೇ ? ಇದೇನು ಆಗಲೇ ಹೊರಟು ಬಿಟ್ಟಿರಿ ?

ಒಬ್ಬಬ್ರಾಹ್ಮಣ—ಸ್ವಾಮೀ, ಯಾಗವು ಪೂರ್ತಿಯಾಯಿತು. ಭೂತ ಸಂತೃಪ್ತಿಯಾಯಿತು. ಸ್ನಾತಕರಿಗೆ ಸಂಭಾವನೆಗಳು ಮನದಣಿಯುವಂತೆ ದೊರೆತವು.

ಇನ್ನೊಬ್ಬ—ಸ್ವಾಮೀ, ಧರ್ಮರಾಯನೆಂಬ ಹೆಸರು ಅನ್ವರ್ಥವೇ ಸರಿ. ಧರ್ಮವೆಂದರೆ ಇದೇ ಧರ್ಮ. ಎಷ್ಟೋ ಮಂದಿ ರಾಜರಿರಬಹುದು. ಎಷ್ಟೋ ಮಂದಿ ಯಾಗಮಾಡಬಹುದು. ಎಷ್ಟೋ ಮಂದಿ ಬ್ರಾಹ್ಮಣ ಪೂಜೆಯನ್ನು ನೆರವೇರಿಸಬಹುದು. ಆದರೆ ಈ ಯಾಗದಲ್ಲಿ ಧರ್ಮಸುತನು ಮಾಡಿದ ಪೂಜೆಯನ್ನೂ ಕೊಟ್ಟ ದಾನಗಳನ್ನೂ ಮಾಡಿಸಿದ ಪೂಜೆಯನ್ನೂ ಲೋಕತ್ರಯದಲ್ಲಿ [illegible] ಮಾಡಲಾರರು.

[illegible]—([illegible]) [illegible], ನಡೆ. [illegible] ([illegible] ಹೊರಟು ಹೋಗುವನು.)

[illegible] ಈ ನೀಚನ [illegible]

[illegible]

ಮಂಟಪದಲ್ಲಿ ಯುಧಿಷ್ಠಿರನು ಈಗ ಅಗ್ರಪೂಜೆ ಮಾಡತಕ್ಕವನಾಗಿರುವನು. ಅಲ್ಲಿ ನಡೆಯುವ ಅದ್ಭುತಗಳನ್ನು ನೋಡಿ ಸಂತೋಷಿಸುವೆನು. (ಎಂದು, ಹೊರಟುಹೋಗುವನು.)

(ಅನಂತರ ರಾಜಸೂಯಯಾಗಮಂಟಪದಲ್ಲಿ ಧರ್ಮರಾಯ, ಭೀಮ, ಅರ್ಜುನ, ನಕುಲ, ಸಹದೇವ ಭೀಷ್ಮ, ದ್ರೋಣ, ಕೃಪ, ಶಿಶುಪಾಲ, ದುರ್ಯೋಧನ, ಕರ್ಣ, ನಾರದ, ಶ್ರೀಕೃಷ್ಣ, ಬಲರಾಮ ಮುಂತಾದವರಿರುವರು.)

ನಾರದ—(ಎದ್ದು) ಯುಧಿಷ್ಠಿರಾ, ನೀನು ಧನ್ಯನಾದೆ. ರಾಜಸೂಯವು ಪೂರ್ತಿಯಾಯಿತು. ಋತ್ವಿಜರಲ್ಲಿಯೂ ಆಚಾರ್ಯರಲ್ಲಿಯೂ ಗುರುಗಳಲ್ಲಿಯೂ ಯಾರು ನಿನಗೆ ಶ್ರೇಷ್ಠರೆಂದು ತೋರುವುದೋ ಅವರಿಗೆ ಅಗ್ರಪೂಜೆಯನ್ನು ಸಲ್ಲಿಸು.

ಧರ್ಮರಾಯ—(ನಿಂತು ಭೀಷ್ಮನೊಡನೆ) ಎಲೈ ಪಿತಾಮಹನೇ, ನೀನು ಸಮಸ್ತವನ್ನೂ ತಿಳಿದು ನಮಗೆ ಹಿತವನ್ನು ಕೋರುತ್ತಿವವನು ಅಗ್ರಪೂಜೆಗೆ ಅರ್ಹರಾದವರು ಯಾರೆಂಬುದನ್ನು ದಯೆಯಿಟ್ಟು ತಿಳಿಸಿ, ನನ್ನನ್ನು ಕೃತಾರ್ಥನನ್ನಾಗಿ ಮಾಡು.

ಭೀಷ್ಮ—(ಎದ್ದುನಿಂತು) ಧರ್ಮನಂದನ, ನೀನು ಧರ್ಮಸ್ವರೂಪವನ್ನು ಅರಿಯದವನೇ ? ನಕ್ಷತ್ರ ಸಮೂಹದಲ್ಲಿ ಸೂರ್ಯನಲ್ಲದೆ ಮತ್ತಾರುಗಣ್ಯರು ? ಪರ್ವತಗಳಲ್ಲಿ ಹಿಮವಂತನಲ್ಲದೆ ಇನ್ನಾರು ಶ್ರೇಷ್ಠರು! ಸಾಗರಗಳಲ್ಲಿ ಕ್ಷೀರಸಮುದ್ರವಲ್ಲದೆ ಬೇರಾವುದು ಪ್ರಶಸ್ತವು? ಈ ದೇವಾಸುರನರೋರಗ ವೃಂದದಲ್ಲಿ ಶ್ರೀಕೃಷ್ಣನಲ್ಲದೆ ಪೂಜಾರ್ಹರು ಮತ್ತೆಯಾರು ? (ಎಂದು ಸುತ್ತಲೂ ನೋಡಿ) ವ್ಯಾಸ ರೋಮಶ ನಾರದಾದಿಗಳೂ ಈ ಅಭಿಪ್ರಾಯವನ್ನು ಅನುಮೋದಿಸುವರು !

ನಾರದಾದಿಗಳು—ಆಹಾ ! (ಎಂದು ಸಮ್ಮತಿಯನ್ನು ಸೂಚಿಸುವರು.)

(ಧರ್ಮರಾಯನು ಭೀಮನಕಡೆಗೆ ನೋಡಲು ಭೀಮನು ಚಿನ್ನದ ಸಿಂಹಾಸನವನ್ನು ತಂದುಹಾಕುವನು. ಸಹದೇವನು ಶ್ರೀಕೃಷ್ಣನಿಗೆ ಹಸ್ತಲಾಘವವನ್ನು ಕೊಟ್ಟು ಕರೆತಂದು ಸಿಂಹಾಸನದಮೇಲೆ ಕುಳ್ಳಿರಿಸುವನು—ಧರ್ಮರಾಯನು ಶ್ರೀಕೃಷ್ಣನ ಕಾಲುತೊಳೆದು ಪೂಜೆಮಾಡುವನು—

ಅಂತರಿಕ್ಷದಲ್ಲಿ ಜಯಧ್ವನಿಯಾಗುವುದು. ಪುಷ್ಪವೃಷ್ಟಿಯಾಗುವುದು— ಅರ್ಜುನನು ನವರತ್ನಖಚಿತವಾದ ತಟ್ಟೆಯನ್ನು ಶ್ರೀಕೃಷ್ಣನಿಗೆ ಸಮರ್ಪಿಸುವನು.)

ನಾರದ—(ಸಂತೋಷದಿಂದ) ಭಾಪುಭಾಪು! ಈಗ ರಾಜಸೂಯವು ರಮಣೀಯವಾಯಿತು.

(ದುರ್ಯೋಧನನು ಶಕುನಿಯ ಮುಖವನ್ನು ನೋಡುವನು.)

ಶಕುನಿ—(ಕಣ್ಸನ್ನೆಯಿಂದ ಸುಮ್ಮನಿರೆಂದು ತಿಳಿಸುವನು.)

ಶಿಶುಪಾಲ—(ಕೋಪದಿಂದ ಎದ್ದು)

ಕಂ|| [illegible] |
[illegible] ಬಂದಂತಿರೆವ್ರೋಲ' ||
[illegible] |
[illegible] ಯಾಯ್ತೋಂ ||

[illegible]—

ಕಂ|| ಈ [illegible] |
[illegible] ಲಕ್ಷ್ಯಸದಾ ||
[illegible] |
[illegible] ||

([illegible])

[illegible] ಸತ್ಕಾರ್ಯ [illegible] ನಂದನ [illegible] ದಿಗಳನ್ನು [illegible] ! ನಿಮ್ಮ [illegible] ಧರ್ಮಸುತ, [illegible] ಪೂಜಿಸು [illegible] !

[illegible] ಎಲ್ಲರೂ [illegible]

ಶಿಶು—ಎಲಾ ಭಂಡಭೀಷ್ಮ, ಹೆಂಡತಿಯನ್ನು ಕಾಪಾಡಿಕೊಳ್ಳುವ ಸಾಮರ್ಥ್ಯ ಸಾಲದೆ ಮತ್ತಾರನ್ನೋ ಬದುಕಿಸಲು ಮದುವೆಯಾಗದೆ ಬಿಟ್ಟವನಂತೆ ಅಭಿನಯಿಸಿದ ಭರತಾಧಮನಾದ ನೀನು ನಮ್ಮಂತಹ ವೀರಾಗ್ರಣಿಗಳಿಗೆ ವಿವೇಕ ಕಲಿಸಕೊಡಲು ಬರುವೆಯೋ ? ನಿನ್ನಿಂದ ವಿವೇಕವನ್ನು ಕಲಿತವರು ನಿನ್ನಂತೆಯೇ ನಪುಂಸಕರಾಗುವರು. ಛೀ ! ಅವಿವೇಕಿ, ಈ ಸಭೆಯಲ್ಲಿ ಪರಶಿವನಂತೆ ಪಾವನರಾದವರೂ ಪಾಕಶಾಸನನಂತೆ ಪರಾಕ್ರಮಿಗಳಾದವರೂ ಇಷ್ಟುಮಂದಿ ಕುಳಿತಿದ್ದರೂ ಈ ಹಳ್ಳಿಯಮುಕ್ಕನಿಗೆ ಒಳ್ಳೆಯ ಪೂಜೆಯನ್ನು ಮಾಡಿಸಿದೆ! ಇದೇ ತಾನೇ ನಿನ್ನ ವಿವೇಕ ! ಹಿರಿಯ ವಯೋವೃದ್ಧರಾದ ವ್ಯಾಸಾದಿಗಳಿಗಿಂತ ಈ ನೆನ್ನೆಮೊನ್ನೆಯವನಿಗೆ ಹಿರಿತನವೋ ? ಮಹಾರಥರಾದ ಅಶ್ವತ್ಥಾಮಾದಿಗಳಿಗಿಂತ ಮಹಿಳಾಚೋರನಾದ ಈ ಸ್ತ್ರೀಘಾತುಕನಿಗೆ ಮನ್ನಣೆಯೋ ? (ಎಂದು ಅರ್ಜುನನಕಡೆ ತಿರುಗಿ) ಅರ್ಜುನಾ, ಈ ಜಾರನು ನಿನ್ನ ಜತೆಗಾರ ! ಆದುದರಿಂದ (ಎಂದು ಮೀಸೆ ಹುರಿಮಾಡುತ್ತ) ನಮ್ಮಂತಹ ವೀರರಿಗೆ ತಿರಸ್ಕಾರ ! ಇದಲ್ಲವೆ ಹುಡುಗ ಸಮಾಚಾರ ! (ಎಂದು ಧರ್ಮರಾಯನೊಡನೆ) ಎಲಾ, ಧರ್ಮಧರ್ಮವೆಂದು ಹಲ್ಲುಹಲ್ಲು ಕಿರಿಯುವ ಹೇಡಿ ! ನಿನ್ನ ಧರ್ಮವೇನು ಬೊಗಳು. ಈ ಕಳ್ಳನೇನು ಬ್ರಾಹ್ಮಣನೋ? ಋತ್ವಿಜನೋ ? ಆಚಾರ್ಯನೋ? ಇವನನ್ನೇನೆಂದು ಪೂಜಿಸಿದೆ ? ನಿನಗೆ ನಚ್ಚಿನ ನೆಂಟನಾಗಿದ್ದರೆ ಅಂತಃಪುರಕ್ಕೆ ಕರೆದುಕೊಂಡು ಹೋಗಿ ತೋರಿತೋರಿದಂತೆಲ್ಲ ಕುಣಿಯಬೇಕಾಗಿತ್ತು ! ನಾವು ನಿನ್ನ ವಯಸ್ಸಿಗೆ ಗೌರವ ಕೊಟ್ಟು ಯಾಗಕ್ಕೆ ಉಪಯೋಗಿಸಲೆಂದು ನಮ್ಮ ಭಂಡಾರದಲ್ಲಿ ಬಿದ್ದಿದ್ದ ಧನಕನಕಗಳನ್ನು ಕಳುಹಿಸಿದರೆ ನಿನಗೆ ಪರಾಜಿತರಾಗಿ ಕಪ್ಪಕೊಟ್ಟೆವೆಂದು ಭ್ರಮಿಸಿದೆಯೋ ? (ಎಂದು ಸುತ್ತಲೂ ನೋಡಿ) ಈ ಭೀಷ್ಮನೇನೋ ಅಜ್ಜ ! ಅಶ್ವತ್ಥಾಮ ಪ್ರಭೃತಿಗಳು ಬ್ರಾಹ್ಮಣಗೊಡ್ಡುಗಳು ! ಭೋಜನಪ್ರಿಯರು !! ಮಿಕ್ಕವರು ಸುಭಟರಾದರೂ ಹಣದಾಸೆಗೆ ತಮ್ಮ ಮೂಗನ್ನೇ ಕಳೆದುಕೊಂಡು ಕಿವಿಯೋಗಕ್ಕೆ ಎಡೆಯಾಗಿರುವರು. ಕೃಷ್ಣ, "ನಿನ್ನ ರೊಟ್ಟಿ ಜಾರಿ ತುಪ್ಪದಲ್ಲಿ ಬಿತ್ತು"

ಭೀಷ್ಮ—ಸುನೀಥ, ಗೌರವಾಪೇಕ್ಷೆಯುಳ್ಳವನು ಗೌರವಸ್ಥರನ್ನು ಬಲ್ಲನು. ವಿದ್ಯಾಭಿಮಾನಿಯು ವಿದ್ಯಾವಂತರನ್ನು ಬಲ್ಲನು. ಪರಾಕ್ರಮಿಯು

ವೀರರನ್ನು ಬಲ್ಲನು. ಯಾವುದೂ ಅಲ್ಲದ ನೀನು ಶ್ರೀಕೃಷ್ಣನನ್ನು ಹೇಗೆ ತಾನೇ ಬಲ್ಲೆ!

ಧರ್ಮ—ಪಿತಾಮಹ, ದುರ್ವಚನಗಳಿಂದ ದಗ್ಧವಾದ ಕಿವಿಗಳಿಗೆ ಶ್ರೀಕೃಷ್ಣನ ದಿವ್ಯಚರಿತಾಮೃತ ಪಾನಕ್ಕಿಂತ ಹಿತವಾದುದು ಮತ್ತೇನಿರುವುದು? ಹೇಳುಹೇಳು!

ಭೀಷ್ಮ—ಯುಧಿಷ್ಠಿರಾ, ಕೇಳು;

ವೃ॥ ಈತಂ [illegible] ಕೊಂದಿಕ್ಕಿದಂ [illegible] ।
ಈತಂ [illegible] ಮೆಟ್ಟಲ್ಕೆ [illegible] ॥
ಈತಂ ಲೋಕದೆ ಧರ್ಮಮಂ ಮೆರೆಯಿಸಲ್ ಮುಂಕೊಂಡವಂ ಕಂಡವಂ ।
ಈತಂ [illegible] ಭೂಮೀಧವಂ ಮಾಧವಂ ॥

ಧರ್ಮ—ಈ [illegible] ಚೈತ್ಯರೋಗಿಗೆ [illegible] ಹೇಗೋ?

ಭೀಷ್ಮ—[illegible] ಬಲ್ಲವರು ಯಾರೋ ಅವರೇ ಈ [illegible]

[illegible] ಹೊಗಳದು [illegible] ಕತ್ತಲೆಯನ್ನು ಬೆಳ [illegible]

ಭೀಷ್ಮ—([illegible])

[illegible] ।
[illegible] ।
[illegible] ।
[illegible] ।

ಭೀಷ್ಮ—[illegible] ಕೃತಯುಗದಲ್ಲಿ [illegible] ಇವನಿಗೆ [illegible] ಇವನಿಗೆ

ಮೂರು ಕಣ್ಣುಗಳೂ ನಾಲ್ಕು ಕೈಗಳೂ ಇದ್ದುವು. ಕತ್ತೆಯಂತೆ ಕಿರಿಚುತ್ತಿದ್ದ ಇವನನ್ನು ಇವನ ತಾಯಿಯು ಇದೇನೋ ವಿಪರೀತವೆಂದು ಹೆದರಿ ಹೊರಕ್ಕೆ ಬಿಸಾಡಬೇಕೆಂದು ಯೋಚಿಸಿದಳು. ಅಷ್ಟರಲ್ಲಿ ಈ ಮಗುವು ಸೌಂದರ್ಯಶಾಲಿಯಾಗುವುದು. ಮಗುವನ್ನು ಉಪೇಕ್ಷಿಸದೆ ಕಾಪಾಡು. ಯಾರ ಸಂಸ್ಪರ್ಶದಿಂದ— ಈ ಮಗುವಿನ ವಿಕಾರಗಳೆಲ್ಲ ತಪ್ಪಿ ಸುರೂಪವುಂಟಾಗುವುದೋ ಅವರಿಂದಲೇ ಇವನಿಗೆ ಮರಣವುಂಟಾಗುವುದು.—ಎಂದು ಅಶರೀರವಾಣಿಯಾಯಿತು. ಅದರಂತೆಯೇ ಬಂದಾನೊಂದು ದಿವಸ ಅಲ್ಲಿಗೆ ಹೋದ ಶ್ರೀಕೃಷ್ಣನು ಇವನನ್ನು ಮುಟ್ಟಲು ವಿರೂಪವು ಹೋಗಿ ಸುರೂಪವಾಯಿತು. ತತ್‌ಕ್ಷಣವೇ ಇವನ ತಾಯಿಯು ಇವನ ಶತಾಪರಾಧಗಳನ್ನು ಕ್ಷಮಿಸಬೇಕೆಂದು ಶ್ರೀಕೃಷ್ಣನನ್ನು ಪ್ರಾರ್ಥಿಸಿಕೊಂಡಳು. ಸ್ವಾಮಿಯು ಅಭಯವನ್ನು ಕೊಟ್ಟನು. ಅಂದಿನಿಂದ ಗರ್ವಿತನಾದ ಈ ಮೂರ್ಖನು ನೂರಕ್ಕಿಂತ ಅಧಿಕವಾಗಿಯೇ ಅಪರಾಧಗಳನ್ನು ಮಾಡಿರುವನು. ಇನ್ನೇನು ಅಂತ್ಯಕಾಲವು ಸನ್ನಿಹಿತವಾಯಿತು.

ಶಿಶು—ಎಲಾ ಮುದುಕಾ, ಈಪಡ್ಡಹುಡುಗರು ಸಜ್ಜೆಮಾಡರೆಂಬುದನ್ನು ತಿಳದು ಈ ಅಡ್ಡ ಕತೆಗಳನ್ನು ಹೇಳುತ್ತಿರುವೆಯೋ? ಕೃಷ್ಣನು ಕೊಲ್ಲುವವನು! ನಾನು ಕೊಲ್ಲಿಸಿಕೊಳ್ಳುವವನು! ನೀನು ಇದನ್ನು ಬಲ್ಲವನು! ಅಯ್ಯೋ! ನಿನಗಿಷ್ಟುವಯಸ್ಸಾದರೂ ವಿವೇಕಮಾತ್ರ ಬರಲಿಲ್ಲವಲ್ಲಾ! ಅಥವಾ ನಾಯಿಗೆ ನರೆಬಂದಮಾತ್ರವೇ ನಾಚಿಕೆಬಂದೀತೆ? (ಎಂದು ಕೃಷ್ಣನ ಕಡೆಗೆ ತಿರುಗಿ) ಎಲಾ ಗೊಲ್ಲಿತಿಯರ ನಲ್ಲ, ಕೇಳು,

ಕಂ॥ ಕಟ್ಟೆರಕಂಗೊಳುತ್ತೆ ಪಶುಪಾಲಕ! ನೀಂ ಪಶುವಾಗೆ ಭೀಷ್ಮನಾ ।
ಕಟ್ಟುಳದಿರ್ಪ ವರ್ಣನೆಯ ದಳ್ಳುರಿಗೂಡಿದ ಯಜ್ಞಕುಂಡದೊಳ್ ।
ನೆಟ್ಟನೆ ಪಾಂಡವಾರುಣ ಜಲಾಜ್ಯದೆ ಜೇಳ್ಪಿಸಿದಲ್ತೆ ನಿಶ್ಚಯಂ! ।
ದಿಟ್ಟರ ಜಟ್ಟಿ ಕಟ್ಟದೆನಿದೋ ಶಪಥಂ ಘಡ! ಜೋಳ! ಗೋಪಾ! ॥

ಎಲ್ಲರೂ—ಶಾಂತಂ ಪಾಪಂ! ಶಾಂತಂ ಪಾಪಂ (ಎಂದು ಕಿವಿಮುಚ್ಚಿಕೊಳ್ಳುವರು.)

ಕೃಷ್ಣ—(ಎದ್ದುನಿಂತು ನಗುತ್ತ) ಎಲೈ ಧರ್ಮಜ್ಞರಾದ ಪಾಂಡು ಕುಮಾರರಿರಾ, ಈ ರಾಜಸೂಯವು ಸಫಲವಾಯಿತು. ಸಮಸ್ತವನ್ನೂ ನಿಂದಿಸಿ ತನ್ನನ್ನೇ ಶ್ರೇಷ್ಠನೆಂದು ಬದರುತ್ತಿರುವೀಚೈದ್ಯನಿಗೆ ನಾನೀಗಲೇ ವೈದ್ಯನಾಗುವೆನು.

ಧರ್ಮ—(ಭೀತಿಯಿಂದ ಸುತ್ತಲೂ ನೋಡಿ) ಇದೇನು? ಎಲ್ಲೆಲ್ಲಿಯೂ ಉತ್ಪಾತ ಸೂಚನೆಗಳೇ ತಲೆದೋರುತ್ತಿರುವುವು.

ಭೀಷ್ಮ—ಯುಧಿಷ್ಠಿರಾ, ಅವುಗಳೆಲ್ಲ ಶಿಶುಪಾಲನ ಪರಾಭವವನ್ನು ಸೂಚಿಸುತ್ತಿರುವುವು. ನೀನು ಹೆದರಬೇಡ.

ಶಿಶು—ಎಲಾ, ಕೃಷ್ಣ, ಇತ್ತಬಾ. ಮೊದಲು ನಿನ್ನನ್ನು ಮುಗಿಸಿ ತರುವಾಯ ನಿನ್ನ ಹೊಗಳುಭಟ್ಟರನ್ನು [illegible]

ಕೃಷ್ಣ—ಚೈದ್ಯ, ನನ್ನನ್ನು ಯಾರು ಕರೆದರೂ, ನಾನು ಹೋಗದೆ [illegible] (ಎಂದು ಅಂತರಿಕ್ಷಕ್ಕೆ ಕೈನೀಡುವನು)—

[illegible] ಪ್ರಯೋಗಿಸಲು ಶಿಶುಪಾಲನ ಕತ್ತು [illegible] ಶ್ರೀಕೃಷ್ಣನನ್ನು ಸೇರುವುದು. [illegible] * * * * * * * * *

[illegible]

[illegible]

[illegible]

[illegible]

[illegible]

ಸಾನ್ನಿಧ್ಯವನ್ನು ಸೇರಿರುವರು. ಹೀಗೆಯೇ ನೀನು ನಿರಂತರವೂ ಲೋಕಾನುಗ್ರಹಕರನಾಗಿ ಧರ್ಮಕ್ಕೆ ಗ್ಲಾನಿಯುಂಟಾದ ಕಾಲಗಳಲ್ಲೆಲ್ಲ ನಿನ್ನ ಲೀಲಾವಿಲಾಸವಿಭವಗಳನ್ನು ಪ್ರಕಾಶಪಡಿಸುತ್ತಿರಬೇಕೆಂದು ಪ್ರಾರ್ಥಿಸುವೆನು.

ವಿಷ್ಣು—ಎಲೈ ದೇವರ್ಷಿಯೆ, ನಿನ್ನ ಇಷ್ಟದಂತೆಯೇ ಆಗಲಿ (ಎಂದು ಮಹೇಂದ್ರನೊಡನೆ) ಎಲೈ, ಸುರಪತಿಯೆ, ನಿನಗೆ ಮತ್ತಾವ ಮನೋರಥವಿರುವುದು? ತಿಳಸು.

ಮಹೇಂದ್ರ—ಸ್ವಾಮಿಯೇ, ನಿನ್ನ ಅನುಗ್ರಹದಿಂದ ನನ್ನ ಮನೋರಥಗಳೆಲ್ಲವೂ ಕೈಸೇರಿದುವು. ಆದರೂ ಹೀಗೆ ಪ್ರಾರ್ಥಿಸುವೆನು.

(ಭರತವಾಕ್ಯ)

ಕಂ|| ರಾರಾಜಿಸುಗುರ್ವೀತಲ |
ಮೋರಂತಿರೆ ಸರ್ವಸಸ್ಯಪೂರ್ಣಂ ಜಗದೊಳ್ ||
ತೋರುವಹಂಕೃತಿತಮಮುದು |
ಪಾರುಗೆ! ಸುಜ್ಞಾನದೀಪ್ತಿಯಿಂದಕ್ಕೆ! ಶುಭಂ ||

ವಿಷ್ಣು—“ ತಥಾಸ್ತು ”

(ಎಂದೆಲ್ಲರೂ ಹೊರಟುಹೋಗುವರು.)

ಇದು ನಾಲ್ಕನೆಯ ಅಂಕಂ.

ಸಂಪೂರ್ಣಂ.

THE
KARNATAKA CHANDRIKE.

SERIES NO. 67.

ಅಧಿಕಪ್ರಸಂಗಿಯ

ಮೈಸೂರು ಯಾತ್ರೆ.

ಕರ್ಣಾಟಕ ಪಂಡಿತ

ನಂಜನಗೂಡು ಶ್ರೀಕಂಠಶಾಸ್ತ್ರಿಗಳವರಿಂದ

ರಚಿತವಾದುದು.

MYSORE;
PRINTED AT THE G. T. A. PRESS,
1921.

ಹೂಡಿಟ್ಟು ನನ್ನನ್ನೇ ನಿರೀಕ್ಷಿಸುತ್ತಿದ್ದರು. ಸ್ನಾನಭೋಜನಗಳಾದುವು. ......(ಇಲ್ಲಿಂದ ಕೆಲವು ಭಾಗ ಮೂತ್ಯಕೆಯು ನಷ್ಟವಾಯಿತು. ಸಂಪಾದಕ) ....ಕಳುವಾದ ಪದಾರ್ಥವೊಂದೂ ದೊರೆಯದಿದ್ದರೂ ಪೋಲೀಸರ ಠಾಣೆಕ್ಕೆ ಅಲೆದುದೂ, ನ್ಯಾಯಾಸ್ಥಾನಕ್ಕೆ ತಿರುಗಿದುದೂ, ಕಂಡಕಂಡವರಿಗೆಲ್ಲ ಕಾಣಿಕೆಯನ್ನೊಪ್ಪಿಸಿದುದೂ, ದುರ್ಮಾರ್ಗನೆಂಬ ವಂಚಕನು ಪರಮಾಪ್ತನಂತೆ ನಟಿಸಿ ನನ್ನನ್ನು ಹಲವು ಬಗೆಯ ಕಷ್ಟಗಳಿಗೆ ಎಡೆಮಾಡಿದುದೂ, ಆಶಾಪರನೆಂಬ ನ್ಯಾಯವಾದಿಯು ನನ್ನಿಂದ ಸುಳ್ಳು ಹೇಳಿಸಿ ಅದಕ್ಕಾಗಿ ನನಗೇ ಶಿಕ್ಷೆಯಾಗುವಂತೆ ತೊಂದರೆಕೊಟ್ಟುದೂ, ಇವೇ ನನ್ನ ಮೈಸೂರು ಯಾತ್ರೆಯಲ್ಲಿ ನಡೆದ ಮುಖ್ಯವಿಷಯಗಳು. ನಮ್ಮ ಅತ್ತೆಯವರು ಇದನ್ನೆಲ್ಲ ನೋಡಿ ವ್ಯಥೆಪಟ್ಟುಕೊಂಡು ಮೈಸೂರಿನಲ್ಲಿ ಭದ್ರವಾದ ಮನೆಯೊಂದಿದ್ದ ಪಕ್ಷದಲ್ಲಿ ಇಂತಹ ನಷ್ಟವೂ ಉಪಹತಿಯೂ ಉಂಟಾಗುತ್ತಿರಲಿಲ್ಲವೆಂದೂ, ಮೈಸೂರಿನಲ್ಲಿ ಒಂದು ಮನೆಯನ್ನು ಕಟ್ಟಿಸಬೇಕೆಂದೂ ಅಭಿಪ್ರಾಯಪಟ್ಟುದರಿಂದ ಊರಿನಲ್ಲಿ ಬರಬೇಕಾಗಿದ್ದ ಹಣಕಾಸುಗಳನ್ನು ತಂದು ಮನೆಕಟ್ಟುವುದು ಯುಕ್ತವೆಂದು ನಿಶ್ಚಯಿಸಿ ಭಾದ್ರಪದಶುಕ್ಲ ಪ್ರಥಮೆಯ ದಿವಸ ಮೈಸೂರನ್ನು ಬಿಟ್ಟು ಹೊರಟು ಬಂದೆವು. ಓಹೋ! ಮರೆತಿದ್ದೆ! ವಾಚಕವರ್ಗ, ಕ್ಷಮಿಸಿರಿ! ಸಾಧ್ಯವಾದಷ್ಟು ಜಾಗ್ರತೆಯಾಗಿ ಮತ್ತೆ ತಮ್ಮ ಬಳಿಗೆ ಬಂದು ಮುಂದಣ ಸಂಗತಿಗಳನ್ನು ಅರಿಕೆಮಾಡಿಕೊಳ್ಳುವೆನು.

"ಅಧಿಕಪ್ರಸಂಗಿ"

ದಿಂದ ನನೆದ ಮುಖವುಳ್ಳದಾಗಿ ಸಂತೋಷದಿಂದ ತಾನು ಮಾಡಿದ ಕೆಲಸವನ್ನು ತಾಯಿಗೆ ತಿಳಯಿಸಬೇಕೆಂದು ಇದಿರಾಗಿ ಬಂದಿತು. ತಾಯಿಯೂ ರಕ್ತಾರ್ದ್ರವಾದ ಮುಖವುಳ್ಳ ಆ ಮುಂಗುಸಿಯುನ್ನು ಕಂಡು ಮನದಲ್ಲಿ ಬೆದರಿ, ಕೇಡಾಳಿಯಾದಿದು ಮಗುವನ್ನು ತಿಂದುಹಾಕಿರುವುದೆಂದೆಣಿಸಿ ಕೋಪದಿಂದ ಆ ನೀರಿನ ಬಿಂದುಗೆಯುನ್ನು ಅದರಮೇಲೆತ್ತಿಹಾಕಿದಳು. ಇಂತು ಆವಳು ಆ ಮಗುವನ್ನು ಕೊಂದು ಗೋಳಿಡುತ್ತ ಮನೆಗೆ ಬಂದಳು. ಮಗು ಹಾಗೆಯೇ ಮಲಗಿದ್ದಿತು. ಹತ್ತಿರ ಚೂರುಚೂರಾಗಿ ಮಾಡಲ್ಪಟ್ಟದ್ದ ಕೃಷ್ಣಸರ್ಪವನ್ನು ನೋಡಿ ತನ್ನ ಮಗು ಹತವಾಯಿತೆಂದು ಗೋಳಾಟದಿಂದ ತನ್ನ ತಲೆಯುನ್ನೂ ಎದೆಯುನ್ನೂ ಹೊಡೆದುಕೊಳ್ಳಲಾರಂಭಿಸಿದಳು. ಅಷ್ಟರಲ್ಲಿ ಬ್ರಾಹ್ಮಣನೂ ಭಿಕ್ಷಾಟನಮಾಡಿಕೊಂಡು ಬಂದು ನೋಡುವಷ್ಟರಲ್ಲಿ ಪುತ್ರಶೋಕಸಂತಾಪದಿಂದ ಆ ಬ್ರಾಹ್ಮಣಿತಿ ಪ್ರಲಪಿಸುತ್ತಿದ್ದಳು. ಅವಳು ಅವನನ್ನು ಕುರಿತು-ಎಲವೆಲವೊ ಲೋಭಾತ್ಮನೆ, ಲೋಭತಿರಸ್ಕೃತನಾಗಿ ನೀನು ನನ್ನ ಮಾತನ್ನು ನಡೆಯಿಸದೆಹೋದೆ. ಅದರಿಂದ ಈಗ ಪುತ್ರನಾಶದುಃಖವನ್ನು ಅನುಭವಿಸು. ಇದು ಯುಕ್ತವಾದಮಾತು :-

ಎನಸುಂ ಲೋಭಿಸಬಾರದು |
ಮನುಜಂ ಲೋಭಮನೆ ತೊರೆಯಬಾರದು ಮತ್ತಂ ||
ಎನಸುಂ ಲೋಭತಿರಸ್ಕೃತ |
ನೆನಿಪನ ಸಿರದಲ್ಲಿ ಸುತ್ತುತಿರ್ಕ್ಕುಂ ಚಕ್ರಂ || ೧೨ ||

ಬ್ರಾಹ್ಮಣನು ಇದೆಂತೆನಲು, ಅವಳಂತೆಂದಳು :-

ಕಥೆ ೩.

ಒಂದೂರಿನಲ್ಲಿ ನಾಲ್ವರು ಬ್ರಾಹ್ಮಣಕುಮಾರರು ಪರಸ್ಪರಸ್ನೇಹವುಳ್ಳವರಾಗಿ ವಾಸಮಾಡಿಕೊಂಡಿದ್ದರು. ಅವರು ಬಡತನದಿಂದ ಉಪಹತರಾಗಿ ಒಬ್ಬರಲ್ಲೊಬ್ಬರು ಇಂತು ಆಲೋಚನೆಮಾಡಿದರು :-ಅಹಹ! ಈ ಬಡತನವು ಬಹುನಿಂದ್ಯವಾದುದು. ಹೇಳಿಯುೂ ಇದೆ :—

ಪುಲಿ ಸಿಂಗಂ ಮೊದಲಾದ ಕ್ರೂರಮೃಗಗಳಿಂ ಕೂಡಿರ್ದ ಮೇಣ್ ಕಂಟಕಾ |
ಕುಲಮಾಗಿರ್ಪ ಜನಂಗಳಿಲ್ಲದ ಮಹಾಕಾಂತಾರದಲ್ಲಿರ್ಪುದುಂ ||

ನೆಲದೊಳ್ ಪುಲ್ಗಳಮೇಲೆ ನಿದ್ರಿಸುವುದುಂ ವಲ್ಕಾಂಬರಂದಾಳ್ವುದುಂ |
ಸಲೆ ಮೇಲ್ ನಿರ್ಧನನಾಗಿ ನಂಟರೆಡೆಯೊಳ್ ತಾಂ ಜೀವಿಸಲ್ ಬಾರದೈ || ೨೩ ||

ಅಂತಲ್ಲದೆ :-

ಪಗೆಗುಂ ತನ್ನಾಳ್ದನಂ ಸೇವಿಸಿದೊಡಮುಬ್ಬರ್ ಕಲ್ಕಿನೊಳ್ನಂಟರೆಲ್ಲರ್ |
ಸುಗುಣಂ ಕುಂಬಿದೊರ್ಡಂ ಕಣ್ಗೊಳಿಸದು ತನುಜರ್ ಬಿಟ್ಟಪರ್ ಕಟ್ಟಿಡಪ್ಪೆರ್ ||
ಪ್ಪುಗುವೊಲ್ಪಾರಾಧಿಸಲ್ ಸತ್ಕುಲಜೆ ಮಡದಿಯುಂ ನ್ಯಾಯಮಾರ್ಗಾನುಗರ್ ನೇ|
ಹಿಗರುಂ ಸೇರರ್ ವಲಂ ಲೋಕದೆ ಧನರಹಿತಂಗಿಂತು ಪಾಡಕ್ಕುಮಲ್ತೇ || ೨೪ ||

[illegible] |
[illegible] ||
ಧನವಿಲ್ಲದಿರಲ್ [illegible] |
[illegible] || ೨೫ ||

[illegible] |
[illegible] ||
[illegible] |
[illegible] || ೨೬ ||

[illegible] ಹೋಗಲೇಕೆ—
ಎಂದು [illegible] ಊರನ್ನು
[illegible] ಯುಕ್ತವಾದ
[illegible]

[illegible] |
[illegible] ||
[illegible] |
[illegible] || ೨೭ ||

[illegible]

ರಟು ಅವನ ಮಠವನ್ನು ಸೇರಿದರು. ಬಳಿಕ ಆಯೋಗಿ ಅವರನ್ನು ಕುರಿತು-ನೀವು ಎಲ್ಲಿಂದ ಬಂದಿರಿ? ಎಲ್ಲಿಗೆ ಹೋಗುವಿರಿ? ಏತಕ್ಕೆ?- ಎನಲು ಅವರಿಂತೆಂದರು:—

ನಾವು ಯಾತ್ರಿಗರು. ಸಾಹಸದಿಂದ ಎಲ್ಲಿ ಸಂಪಾದನೆಯಾಗುವುದೋ ಅಲ್ಲಿಗೆ ಹೋಗಿ ಪ್ರಯತ್ನಿಸಬೇಕೆಂದು ನಿಶ್ಚಯಿಸಿ ಹೊರಟಿರುವೆವು. ಇಂತು ಹೇಳಿಯೂ ಇದೆ:—

ತನುಗಳನಾಯಾಕಾಲ |
ಕ್ಕನುಗುಣವಾಗಿಪ್ಪರ್ತೆಱದಿನನುಗೊಳಿಸುತ್ತುಂ |
ಘನಸಾಹಸಿಕರ್ ದುರ್ಲಭ |
ವೆನಿಸುವ ಸಕಲೇಪ್ಸಿತಾರ್ಥಮುಂ ಸಾಧಿಸುವರ್ || ೨೮ ||

ಗಗನದಿನದೊಮ್ಮೆರ್ ಬಿಳ್ದಪು |
ದಗೆದೊಡೆ ಕಿನ್ನೆಲದಿನಾದೊಡಂ ನೀರ್ ಸಿದ್ಧಂ ||
ಜಗದೊಳದೃಷ್ಟಮತರ್ಕ್ಯಂ |
ಬಗೆವೊಡೆ ಬಲ್ಲಿತ್ತು ಪೌರುಷಂ ಸಿದ್ಧಮೆದಲ್ || ೨೯ ||

ತೀವಿದ ಪೌರುಷದಿಂದಂ |
ಭಾವಿತಸಕಳಾರ್ಥಸಿದ್ಧಿ ನಿಕ್ಕುವಮುಕ್ಕುಂ ||
ಆವುದನದೃಷ್ಟಮೆಂಬೆಯೊ |
ಭಾವಿಪೊಡದದೃಷ್ಟನಾಮಪೌರುಷಮೆವಲಂ || ೩೦ ||

ಉರುಬಲರಿಂದೊದವುವನಿ |
ರ್ಭರಮುಂ ಭಯಮುಂ ತಮುತ್ತು ಹರಣಂಗಳುಮಂ ||
ವರಸಾಹಸಿಕರ್ ತೃಣವೆನೆ |
ಪರಿಗಣಿಸುವರವರ ನಡೆಯಿದಚ್ಚರಿಯೆನಿಕುಂ || ೩೧ ||

ಪುದಿದಾಯಸಮುಂ ಮೆಯ್ಗೀ |
ಯುದೆ ಸುಖದಿನೆ ಸೌಖ್ಯವೊಂದಲಾರ್ಗಮಸಾಧ್ಯಂ ||
ಪದುಮೆಯನಪ್ಪುಗುಮಚ್ಯುತ |
ನುದಧಿಯ ಕಡೆದುಱಿ ಬಲಿಲ್ದ ಬಾಹುಗಳಿಂದಂ || ೩೨ ||

ಎಸಗನದೆನ್ನೆವರಂ ಸಾ |
ಹಸಮಂ ಪೆಂಪೊಂದನಲ್ತೆ ಸೆರನನ್ನೆವರಂ ||
ಬಿಸುಗದಿರನೇಱುತುಲೆಯಂ |
ಮುಸುಂಕಿದನುಗಿಲ್ಗಳೋಳಿಯಂ ಜಯಿಸಿದಪಂ || ೩೩ ||

ಅದುದರಿಂದ ವಿವರಪ್ರವೇಶ, ಶಾಕಿನೀಸಾಧನ, ಶ್ಮಶಾನಸೇವನ, ಮಹಾಮಾಂಸವಿಕ್ರಯ, ಸಾಧಕವರ್ತಿ ಮುಂತಾದವುಗಳಲ್ಲಿ ಅನುಕೂಲವಾದ ಯಾವುದನ್ನಾದರೂ ಒಂದು ಧನೋಪಾಯವನ್ನು ನಮಗೆ ಹೇಳು. ನೀವು ಅದ್ಭುತಶಕ್ತಿಯುಳ್ಳವರೆಂದು ಕೇಳುವೆವು. ನಾವೂ ಮಹಾಸಾಹಸಿಕರಾಗಿರುವೆವು. ಇಂತುಹೇಳಿದೆ :-

[illegible] |
[illegible] ||
[illegible] |
[illegible] || ೩೪ ||

[illegible]

[illegible]

[illegible]

ತ್ತಲೂ ಮುಂದೆ ಹೋಗುತ್ತಿದ್ದವನ ಬತ್ತಿ ಬಿದ್ದಿತು. ಅವನೂ ನೆಲವನ್ನು ಅಗೆಯಲುಪಕ್ರಮಿಸಲು, ಅದು ಬೆಳ್ಳಿಯದಾಗಿದ್ದಿತು. ಬಳಿಕ ಅವನು ಸಂತೋಷಗೊಂಡು-ಎಲೈ ! ಬೇಕಾದಷ್ಟು ಬೆಳ್ಳಿಯನ್ನು ತೆಗೆದುಕೊಳ್ಳಿ-ಎನಲು, ಅವರಿಬ್ಬರು—ಹಿಂದೆ ತಾಮ್ರಮಯವಾದ ಭೂಮಿ ಸಿಕ್ಕಿತು ; ಇಲ್ಲಿ ಬೆಳ್ಳಿಯದು ; ಆದಕಾರಣ ನಿಶ್ಚಯವಾಗಿ ಮುಂದೆ ಚಿನ್ನದನೆಲವು ಸಿಕ್ಕುವುದು. ಈ ಬೆಳ್ಳಿ ಎಷ್ಟು ಹೆಚ್ಚಾಗಿ ಸಿಕ್ಕಿದರೂ ಬಡತನ ಹೋಗುವುದಿಲ್ಲ. ಅದುದರಿಂದ ನಾವು ಮುಂದೆ ಹೋಗುವೆವು-ಎಂದು ಹೇಳಿ ಅವರಿಬ್ಬರೂ ಮುಂದೆ ಹೊರಟರು. ಎರಡನೆಯವನಾದ ಅವನು ತನ್ನ ಶಕ್ತ್ಯನುಸಾರದಿಂದ ಬೆಳ್ಳಿಯನ್ನು ತೆಗೆದುಕೊಂಡು ಹಿಂತಿರುಗಿದನು. ಉಳಿದವರಿಬ್ಬರೂ ಹೋಗುತಿರಲು, ಒಬ್ಬನ ಬತ್ತಿ ಮುಂದೆ ಬಿದ್ದಿತು. ಅವನೂ ಸಂತೋಷಗೊಂಡು ಅಗೆಯುತಿರುವಷ್ಟರಲ್ಲಿ ಚಿನ್ನದ ನೆಲವು ಕಂಡಿತು. ಇನ್ನೊಬ್ಬನನ್ನು ಕುರಿತು-ಅಯ್ಯ ! ಬೇಕಾದಷ್ಟು ಚಿನ್ನವನ್ನು ತೆಗೆದುಕೊ; ಚಿನ್ನಕ್ಕಿಂತಲೂ ಮತ್ತೊಂದು ಉತ್ತಮಪದಾರ್ಥವಿಲ್ಲ-ಎನಲು ಅವನು-ಎಲೆಮೂಢ ! ನಿನಗೇನೂ ಗೊತ್ತಿಲ್ಲ. ಮೊದಲು ತಾಮ್ರ, ಆಮೇಲೆ ಬೆಳ್ಳಿ, ಆಮೇಲೆ ಚಿನ್ನ ; ಆದುದರಿಂದ ನಿಶ್ಚಯವಾಗಿ ಇನ್ನುಮುಂದೆ ರತ್ನಗಳು ಸಿಕ್ಕುವುವು. ಇಂತಹ ರತ್ನವೊಂದಿದ್ದರೂ ಬಡತನವೆಲ್ಲವೂ ನಶಿಸುವುದು. ಅದರಿಂದ ಏಳು ಮುಂದೆ ಹೋಗೋಣ. ಬರಿಯ ಹೊರೆಯಾದ ಈ ಚಿನ್ನವನ್ನು ಹೆಚ್ಚಾಗಿ ತೆಗೆದುಕೊಂಡರೆತಾನೇ ಏನು ?-ಎಂದನು.

ಅದಕ್ಕವನು-ನೀನುಹೋಗು ; ನಾನು ಇಲ್ಲಿಯೇ ಇದ್ದುಕೊಂಡು ನಿನ್ನನ್ನು ನಿರೀಕ್ಷಿಸುತ್ತಿರುವೆನು-ಎಂದು ಅದೇರೀತಿಮಾಡಲು, ನಾಲ್ಕನೆಯವನು ಒಬ್ಬಂಟಿಗನಾಗಿ ಹೋಗುತ್ತ ಬೇಸಗೆಯ ಬಿರುಬಿಸಿಲಿಂದ ಬಳಲಿ ಬೆಂಡಾಗಿ ಬಾಯಾರಿ ಸಿದ್ಧಿಮಾರ್ಗ ತಪ್ಪಿ ಅತ್ತಿತ್ತ ಅಲೆದಾಡುತ್ತಿದ್ದನು. ಬಳಿಕ ನೆಲದಮೇಲೆ ಸುತ್ತಾಡುತ್ತ ರಕ್ತದಿಂದ ನನೆದ ಮೈಯುಳ್ಳವನೂ ತಲೆಯಲ್ಲಿ ಸುತ್ತುತ್ತಿರುವ ಚಕ್ರವುಳ್ಳವನೂ ಆದ ಒಬ್ಬ ಪುರುಷನನ್ನು ಕಂಡನು. ಬಳಿಕ ಬೇಗ ಅವನಹತ್ತಿರ ಹೋಗಿ ಅವನನ್ನು ಕುರಿತು-ಅಯ್ಯ ! ನೀನು ಯಾರು ? ಇದೇನು ? ಎಂತು ನಿನ್ನ ತಲೆಯಮೇಲೆ ಚಕ್ರವು ಸುತ್ತುತ್ತಿರು

ವುದು ? ಎಲ್ಲಿಯಾದರೂ ನೀರು ಇದ್ದರೆ ನನಗೆ ಹೇಳು ಎಂದನು. ಅಷ್ಟರಲ್ಲಿ ಅವನ ತಲೆಯಿಂದ ಆ ಚಕ್ರವು ಇವನ ತಲೆಗೆ ಹಾರಿತು. ಇವನು ಇದರ ಬಿಡುಗಡೆಯಾಗುವುದು ಯಾವಾಗ? ಹೇಳು ; ನನಗೆ ಮಹತ್ತಾದ ಹಿಂಸೆಯಾಗುತ್ತಿರುವುದು-ಎನಲು, ಅದಕ್ಕವನು-ಯಾವನಾದರೂ ಒಬ್ಬನು ನಿನ್ನಂತೆ ಸಿದ್ಧವರ್ತಿಯನ್ನು ಹಿಡಿದುಕೊಂಡು ಯಾವಾಗ ಇಲ್ಲಿಗೆ ಬಂದು ನಿನ್ನನ್ನು ಮಾತನಾಡಿಸುವನೋ ಆಗ ಈ ಚಕ್ರವು ಅವನ ತಲೆಗೆ ಹಾರುವುದು—ಎಂದನು. ಇವನು—ಎಷ್ಟು ದಿವಸದಿಂದ ನೀನು ಇಂತು ದುರವಸ್ಥೆಯಲ್ಲಿ ಇದ್ದೆ ?—ಎಂದು ಬೆಸಗೊಳ್ಳಲು, ಅವನು—ಈಗ ಭೂಮಿಯನ್ನು ಆಳುವ ರಾಜನು ಯಾರು ?—ಎಂದು ಕೇಳಿದನು. ಇವನು—ವೀಣಾವತ್ಸರಾಜನು—ಎನಲು, ಅದಕ್ಕವನು—ಕಾಲವನಾನರಿಯೆನು ಆದರೆ; ಶ್ರೀರಾಮನು ಯಾವಾಗ ರಾಜನಾಗಿದ್ದನೋ ಆಗ ನಾನು ಬಡತನದಿಂದ ಪರಿಪೀಡಿತನಾಗಿ ಸಿದ್ಧವರ್ತಿಯನ್ನು ಹಿಡಿದುಕೊಂಡು ಈ ದಾರಿಯಲ್ಲಿ ಬಂದೆನು. ಆಗ ನಾನು ತಲೆಯಲ್ಲಿ ಚಕ್ರವು ಸುತ್ತುತ್ತಿದ್ದ ಒಬ್ಬ ಮನುಷ್ಯನನ್ನು ಕಂಡು ಕೇಳಿದೆನು. [illegible] ನನಗೆ [illegible] ಉಂಟಾಯಿತು—ಎಂದನು. ಅದಕ್ಕವನು—ಅಯ್ಯಾ ! ಈ [illegible] ನಿನಗೆ ಅನ್ನವೂ ನೀರೂ ಎಂತು [illegible] ?—ಎನಲು, ಅದಕ್ಕವನು—ಅಯ್ಯಾ ! [illegible] ಕುಬೇರನು [illegible] ಇಲ್ಲಿಗೆ [illegible] ಅವನು [illegible] ಬರಿಯ [illegible] ನನ್ನ [illegible]

[illegible] ಆ ಸುವ [illegible] ತಲೆ [illegible]

ಯುಳ್ಳವನೂ ಆಗಿ ಹಿಂಸೆಗೊಂಡು ಕೂಗಿಕೊಳ್ಳುತ್ತ ಕುಳಿತಿದ್ದ ಇವನ ಬಳಿಸಾರ್ದು ಕಂಬನಿದುಂಬಿ—ಅಯ್ಯ ! ಇದೇನು ?—ಎಂದು ಬೆಸಗೊಳ್ಳಲು, ಇವನು ದೈವಾಜ್ಞೆಯೆಂದನು. ಅದಕ್ಕವನು-ಅದೆಂತು ? ಇದರ ಕಾರಣವೇನು ? ಹೇಳು-ಎನಲು, ಬಳಿಕ ಇವನು ಚಕ್ರವೃತ್ತಾಂತವನೆಲ್ಲವನ್ನೂ ಹೇಳಿದನು. ಅವನು ಅದನಾಲಿಸಿ ಇವನನ್ನು ಕುರಿತು-ಎಲವೊ! ನಾನು ಅನೇಕಾವೃತ್ತಿ ನಿಷೇಧಿಸಿದೆನು. ಆದರೂ ನೀನು ನನ್ನ ಮಾತನ್ನು ಕೇಳಲಿಲ್ಲ. ಆದುದರಿಂದ ಈಗ ಏನುಮಾಡುವೆ ? ನೀನು ವಿದ್ಯಾವಂತನಾದರೂ ಸತ್ಕುಲಪ್ರಸೂತನಾದರೂ ಬುದ್ಧಿಯಿಲ್ಲದವನು. ಇದು ಯುಕ್ತವಾದ ಮಾತು :—

ಕ್ಷಿತಿಯುಲ್ಲತಿಶಯಮುಳ್ಳುದು |
ಮತಿಗಡ ಕಲೆಯುಲ್ತ ಬಗೆಯೆ ಕಲೆಯಿಂ ಮತಿ ಮೇಲ್ ||
ಮತಿಹೀನರಾದ ಪುರುಷರ್ |
ಕ್ಷತಿಯೊಂದುವರಿರದೆ ಸಿಂಗವಂ ಗೈದರವೋಲ್ || ೩೫ ||

ಚಕ್ರಧರನು—ಇದೆಂತೆನಲು, ಸುವರ್ಣಸಿದ್ಧಿಯಿಂತೆಂದನು :-

ಕಥೆ ೪.

ಒಂದೂರಿನಲ್ಲಿ ನಾಲ್ವರು ಬ್ರಾಹ್ಮಣಕುಮಾರರು ಪರಸ್ಪರಸ್ನೇಹಭಾವದಿಂದ ಇರುತ್ತಿದ್ದರು. ಅವರಲ್ಲಿ ಮೂವರು ಶಾಸ್ತ್ರಪಾರಂಗತರು. ಆದರೆ ಬುದ್ಧಿಹೀನರು. ಒಬ್ಬನುಮಾತ್ರ ಕೇವಲಬುದ್ಧಿಶಾಲಿ, ಶಾಸ್ತ್ರದಲ್ಲಿ ಪ್ರವೇಶವುಳ್ಳವನಲ್ಲ. ಆ ಸ್ನೇಹಿತರೆಲ್ಲರೂ ಒಂದುಕಾಲದಲ್ಲಿ ಒಟ್ಟಾಗಿ ಸೇರಿ—ದೇಶಾಂತರಕ್ಕೆ ಹೋಗಿ ಮಹಾರಾಜರನ್ನು ಸಂತೋಷಗೊಳಿಸಿ ಧನವನ್ನು ಸಂಪಾದಿಸದಿದ್ದಮೇಲೆ ಸುಮ್ಮನೆ ವಿದ್ಯೆಯನ್ನು ಕಲಿತುದರಿಂದ ಪ್ರಯೋಜನವೇನು ? ಆದುದರಿಂದ ಪೂರ್ವದೇಶಕ್ಕೆ ಹೋಗೋಣ_ಎಂದು ಆಲೋಚಿಸಿ ಅದೇ ರೀತಿ ಹೊರಟರು. ಸ್ವಲ್ಪದೂರ ಹೋಗುತ್ತಲೂ ಅವರಲ್ಲಿ ಮೊದಲನೆಯವನಿಂತೆಂದನು :_ಎಲೈ ! ನಮ್ಮಲ್ಲಿ ಈ ನಾಲ್ಕನೆಯವನು ಮಾತ್ರ ವಿದ್ಯಾವಿಹೀನನು. ಆದರೆ ಬರಿಯ ಬುದ್ಧಿಯುಳ್ಳವನು ; ವಿದ್ಯೆಯಿಲ್ಲದೆ ಬರಿಯ ಬುದ್ಧಿಯಿಂದ ರಾಜನನ್ನು ಪಿಡಿಯಲಾಗುವುದಿಲ್ಲ. ನಾನು ಸಂಪಾದಿ

ಸಿದ ಹಣವನ್ನು ಇವನಿಗೆ ಕುಡೆನು. ಆದುದರಿಂದ ಇವನು ಮನೆಗೆ ಹೊರಟು ಹೋಗಲಿ.

ಬಳಿಕ ಎರಡನೆಯವನು ಇಂತೆಂದನು:—ಎಲೈ! ಈರೀತಿ ಮಾಡುವುದು ಯುಕ್ತವಲ್ಲ; ಏಕೆಂದರೆ, ನಾವು ನಾಲ್ವರೂ ಚಿಕ್ಕಂದಿನಿಂದ ಬಂದೆಡೆಯಲ್ಲಿ ಆಡುತಿದ್ದವರು; ಆದುದರಿಂದ ನಮ್ಮ ಜತೆಯಲ್ಲಿಯೇ ಬರಲಿ. ನಾವು ಸಂಪಾದಿಸಿದ ಧನದಲ್ಲಿ ಈತನೂ ಸಮಭಾಗಿಯಾದವನು. ಇತರರಿಗೆ ಉಪಯುಕ್ತವಲ್ಲದ ಧನದಿಂದ ಏನು ಪ್ರಯೋಜನ? ಇಂತು ಹೇಳಿಯೂ ಇದೆ:—

[illegible] |
[illegible] ||
[illegible] |
[illegible] || ೩೬ ||

ಅಲ್ಲದೆ:—

[illegible] |
[illegible] ||
[illegible] |
[illegible] || ೩೭ ||

[illegible]

ಬಳಿಕ [illegible] ಕಂಡರು. [illegible] ಗುವುದು. [illegible]

ಸಿಂಹವನ್ನಾಗಿ ಮಾಡಿದರೆ, ಬಳಿಕ ಇದು ನಮ್ಮೆಲ್ಲರನ್ನೂ ಕೊಂದುಬಿಡುವುದು—ಎನಲು, ಅದಕ್ಕವನು ಛೀ ಮೂರ್ಖ! ನಾನು ವಿದ್ಯೆಯನ್ನು ವ್ಯರ್ಥ ಮಾಡೆನು—ಎಂದನು. ಬಳಿಕ ಅವನು ನಾನು ಮರವೇರುವವರೆಗೆ ಸ್ವಲ್ಪ ನಿರೀಕ್ಷಿಸು—ಎಂದು ಮರವನ್ನು ಹತ್ತಿದನು ಮೂರನೆಯವನು ಅದಕ್ಕೆ ಜೀವವನ್ನು ಬರಿಸಿದನು. ಒಡನೆಯೇ ಸಿಂಹವು ಎದ್ದು ಆ ಮೂವರನ್ನೂ ಕೊಂದಿಟ್ಟಿತು. ನಾಲ್ಕನೆಯವನು ಮರದಿಂದ ಇಳಿದು ತನ್ನ ಮನೆಯ ಸೇರಿದನು. ಇದರಿಂದ ನಾನು ಹೇಳುವೆನು:—"ಕ್ಷಿತಿಯಲ್ಲಿ ತಿಳುವಳಿಕೆಯುಳ್ಳದು ಮತಿಗಿಡ ಕಲಿಯಲ್ತು" ಎಂದು. ಇದರ ಮೇಲೆ ಇಂತು ಹೇಳಿದೆ:—

ಕಡುಜಾಣ್ ಶಾಸ್ತ್ರದೆ ತವಗಿ |
ದೊರ್ಡವಿರದೊಡೆ ತಕ್ಕುದೆನಿಸ ಲೋಕಾಚಾರಂ ||
ಪೊಡವಿಯೊಳಂತಪ್ಪರ್ ನಗೆ |
ವಡೆದಪರಾಮೂರ್ಖಪಂಡಿತರ್ಕಳ ತೆರದಿಂ || ೩೮ ||

ಚಕ್ರಧರನು ಇದೆಂತೆನಲು, ಅವನು ಇಂತೆಂದನು:—

ಕಥೆ ೪.

ಒಂದೂರಲ್ಲಿ ನಾಲ್ವರು ಬ್ರಾಹ್ಮಣರು ಪರಸ್ಪರಮಿತ್ರಭಾವದಿಂದಿರುತಿದ್ದರು. ಚಿಕ್ಕಂದಿನಲ್ಲಿ ದೇಶಾಂತರಕ್ಕೆ ಹೋಗಿ ವಿದ್ಯೆಯನ್ನು ಸಂಪಾದಿಸಬೇಕೆಂದು ಅವರಿಗೆ ಬುದ್ಧಿಯುಂಟಾಯಿತು. ಬಳಿಕ ಒಂದುದಿವಸ ಅವರೆಲ್ಲರೂ ಕೂಡಿ ವಿದ್ಯೆಯನ್ನು ಸಂಪಾದಿಸುವುದಕ್ಕೋಸ್ಕರ ಕಾನ್ಯಕುಬ್ಜದೇಶಕ್ಕೆ ಹೊರಟರು. ಆ ದೇಶವನ್ನು ಸೇರಿ ಅಲ್ಲಿ ವಿದ್ಯಾಮಠದಲ್ಲಿ ಓದುತಿದ್ದರು. ಹನ್ನೆರಡುವರ್ಷ ಏಕಾಗ್ರಚಿತ್ತತೆಯಿಂದ ಓದಿ ವಿದ್ಯಾಕುಶಲರಾದರು. ಬಳಿಕ ನಾಲ್ವರೂ ಸೇರಿ ನಾವು ಸಕಲಕಲಾಪಾರಂಗತರಾದೆವು. ಆದುದರಿಂದ ಗುರುಗಳನ್ನು ಕೇಳಿಕೊಂಡು ನಮ್ಮ ದೇಶಕ್ಕೆ ಹೋಗೋಣ—ಎಂದು ಮಾತನಾಡಿಕೊಂಡು ಬಳಿಕ ಗುರುಗಳನ್ನು ಪ್ರಾರ್ಥಿಸಿ ಅವರ ಅನುಜ್ಞೆಯನ್ನು ಪಡೆದು ಪುಸ್ತಕಗಳನ್ನು ತೆಗೆದುಕೊಂಡು ಹೊರಟರು. ಸ್ವಲ್ಪ ದೂರ ಹೋಗುತ್ತಲೂ ಅಲ್ಲಿ ಎರಡು ಮಾರ್ಗಗಳು ಕಂಡುವು. ಅಲ್ಲಿ ನಾಲ್ವರೂ ಕುಳಿತುಕೊಂಡರು. ಅವರಲ್ಲಿ ಒಬ್ಬನು ಯಾವ ಮಾರ್ಗವಾಗಿ

ಹೋಗೋಣ—ಎಂದನು. ಅಷ್ಟುಹೊತ್ತಿಗೆ ಆ ಊರಲ್ಲಿ ಒಬ್ಬ ವರ್ತಕನ ಮಗನು ಮೃತನಾಗಿದ್ದನು. ಅವನ ದಹನಕ್ಕೋಸ್ಕರ ಮಹಾಜನ ಬಂದಿತು ಆಗ ಆ ನಾಲ್ವರಲ್ಲಿ ಒಬ್ಬನು ಪುಸ್ತಕವನ್ನು ನೋಡಿದನು. ಅದರಲ್ಲಿ "ಮಹಾಜನೋ ಯೇನ ಗತಸ್ಸಪನ್ಥಾಃ" (ಮಹಾಜನಂ ಪೋದುದಾವುದೋ ಅದೆಮಾರ್ಗಂ) ಎಂದು ಇದ್ದಿತು. ಅದನ್ನು ನೋಡಿ, ನಾವೂ ಮಹಾಜನ ಹೋದ ಮಾರ್ಗದಲ್ಲಿ ಹೋಗೋಣ—ಎಂದನು. ಬಳಿಕ ಆ ನಾಲ್ವರು ಪಂಡಿತರು ಮಹಾಜನದ ಗುಂಪಿನೊಡನೆ ಹೊರಟರು. ಅಷ್ಟರೊಳಗೆ ಆ ಶ್ಮಶಾನದಲ್ಲಿ ಒಂದು ಕತ್ತೆ ಕಾಣಿಸಿತು. ಬಳಿಕ ಎರಡನೆಯವನು ಪುಸ್ತಕವನ್ನು ತೆರೆದು ನೋಡಿದನು. ಅದರಲ್ಲಿ—"ಉತ್ಸವೇ ವ್ಯಸನೇ ಪ್ರಾಪ್ತೇ ದುರ್ಭಿಕ್ಷೇ ಶತ್ರುಸಂಕಟೇ । ರಾಜದ್ವಾರೇ ಶ್ಮಶಾನೇ ಚ ಯಸ್ತಿಷ್ಠತಿ ಸ ಬಾನ್ಧವಃ ।"

> [illegible] ।
> [illegible] ॥
> [illegible] ।
> [illegible] ॥ ೩೯ ॥

ಎಂದು ಇದ್ದಿತು. ಅದನ್ನು ಓದಿ—ಎಲೈ! ಇದು ನಮ್ಮ ಸಂಬಂಧಿ [illegible] ಬಳಿಕ ಒಬ್ಬನು [illegible] ಒಬ್ಬನು ಅದರ [illegible] ನೋಡುವಷ್ಟ ರಲ್ಲಿ [illegible] ಪುಸ್ತಕವನ್ನು [illegible] (......ಧರ್ಮಗತಿ [illegible] ಇದು ಧರ್ಮ [illegible] [illegible] ಎಂದನು. ಬಳಿಕ [illegible] ದನು. [illegible] ಆಗ [illegible] ಕೊಂಡರು. [illegible]

ಆ ನದಿಯಲ್ಲಿ ಬರುತಿದ್ದ ಪಲಾಶಪತ್ರವನ್ನು ನೋಡಿ ಒಬ್ಬ ಪಂಡಿತನು—"ಆಗಮಿಷ್ಯತಿ ಯತ್ಪತ್ರಂ ತದಸ್ಮಾಂಸ್ತಾರಯಿಷ್ಯತಿ" (ಐತರ್ಪುದು ಪತ್ರವೆಮ್ಮನುತ್ತಾರಿಸುಗುಂ) ಎಂದು ನುಡಿದು ಆ ಪತ್ರದಮೇಲೆ ಬಿದ್ದು ಪ್ರವಾಹದಿಂದ ಒಯ್ಯಲ್ಪಡುತಿರಲು, ಇನ್ನೊಬ್ಬ ಪಂಡಿತನು ಅವನ ಜುಟ್ಟನ್ನು ಹಿಡಿದುಕೊಂಡು—"ಸರ್ವನಾಶೇ ಸಮುತ್ಪನ್ನೇ ಅರ್ಧಂ ತ್ಯಜತಿಪಣ್ಡಿತಃ । ಅರ್ಧೇನ ಕುರುತೇ ಕಾರ್ಯಂ ಸರ್ವನಾಶೋಹಿ ದುಸ್ಸಹಃ ॥"

> ಎಲ್ಲಮುಮಳಿವಂತಿರ್ದೊಡೆ ।
> ಬಲ್ಲಂ ಬಗೆದರ್ಧಮಳಿವನಿನ್ನರ್ಧದೆ ಕಾ ॥
> ಸೆಲ್ಲಾ ಕಾರ್ಯಮನೆಸಗುವ ।
> ನೆಲ್ಲಮುಮಿರದಳಿಯೆ ಸಹಿಸಲಸದಳವಲ್ತೇ ॥

ಎಂದು ನುಡಿದು ಅವನ ತಲೆಯನ್ನು ಕತ್ತರಿಸಿದನು. ಬಳಿಕ ಉಳಿದ ಮೂವರು ಹಿಂದಕ್ಕೆ ಹೋಗಿ ಒಂದು ಹಳ್ಳಿಯನ್ನು ಸೇರಿದರು. ಅಲ್ಲಿಯವರು ಅವರನ್ನು ಬೇರೆಬೇರೆ ತಮ್ಮ ಮನೆಗೆ ಕರೆದುಕೊಂಡು ಹೋದರು.

ಬಳಿಕ ಒಬ್ಬ ಪಂಡಿತನಿಗೆ ಒಬ್ಬನ ಮನೆಯಲ್ಲಿ ಸದ್ಯೋಘೃತದಿಂದ ಕೂಡಿದ ಶ್ಯಾವಿಗೆಯನ್ನು ಊಟಕ್ಕೆ ಬಡಿಸಿದರು. ಆ ಪಂಡಿತನು ದೀರ್ಘಸೂತ್ರವಾದ (ಉದ್ದವಾದ ಎಳೆಯುಳ್ಳ) ಆ ಶ್ಯಾವಿಗೆಯನ್ನು ನೋಡಿ ಚಿಂತಿಸಿ, "ದೀರ್ಘಸೂತ್ರೋ* ವಿನಶ್ಯತಿ" (ಅಳಿಗುಂ ಗಡ ದೀರ್ಘಸೂತ್ರಂ) ಎಂದು ನುಡಿದು, ಊಟವನ್ನು ಬಿಟ್ಟು ಎದ್ದನು.

ಎರಡನೆಯ ಪಂಡಿತನಿಗೆ ಮಂಡಿಗೆಯನ್ನು ಬಡಿಸಿದರು. ಅವನೂ—"ಅತಿವಿಸ್ತಾರವಿಸ್ತೀರ್ಣಂ ತದ್ಭವೇನ್ನಚಿರಾಯುಷಮ್" (ಅತಿವಿಸ್ತೃತವಾದುದಿಂದತಾಂ ಚಿರಂಕಾಲಂ) ಎಂದು ನುಡಿದು ಊಟವನ್ನು ತೊರೆದುಹೊರಟನು.

ಮೂರನೆಯವನಿಗೆ ವಡೆಯನ್ನು ಬಡಿಸಿದರು. ಅಲ್ಲಿ ಅವನು "ಛಿದ್ರೇಷ್ವನರ್ಥಾ ಬಹುಳೀಭವನ್ತಿ" (ಛಿದ್ರಂಗಳ್ ನೆಲೆಯೆ ಬಹುಳಮಕ್ಕುಮನರ್ಥಂ) ಎಂದು ಹೇಳಿ ಎದ್ದನು.

ಇಂತು ಆ ಪಂಡಿತರು ಮೂವರೂ ಹಸಿವಿನಿಂದ ಬಳಲಿ ಜನಗಳ ಅಪಹಾಸ್ಯಕ್ಕೆ ಗುರಿಯಾಗಿ ಆ ಸ್ಥಳವನ್ನು ಬಿಟ್ಟು ತಮ್ಮ ದೇಶಕ್ಕೆ ಹೊರಟು ಹೋದರು.

---

* ದೀರ್ಘಸೂತ್ರಂ—ಮೆಲ್ಲಗೆ ಕೆಲಸಮಾಡುವವನು.

ಬಳಿಕ ಮತ್ತೆ ಸುವರ್ಣಸಿದ್ಧಿಯು ಚಕ್ರಧರನನ್ನು ಕುರಿತು—ಎಲೈ ಲೋಕವ್ಯವಹಾರವನ್ನು ಅರಿಯದ ನೀನು ನನ್ನಿಂದ ನಿಷೇಧಿಸಲ್ಪಟ್ಟರೂ ನಿಲ್ಲದೆ ಹೊರಟುಬಂದೆ. ಅದರಿಂದಲೇ "ಕಡುಜಾಣ್ಶಾಸ್ತ್ರದೆ ತಮಗಿರ್ದೊಡಂ........" ಎಂಬಿದನ್ನು ನಾನು ಹೇಳಿದೆನೆನಲು, ಚಕ್ರಧರನು ಅದನ್ನು ಕೇಳ, ಎಲೈ! ವಿಸ್ತಾರಣವಾಗಿ ನೀನುಸುಡಿವೆ. ಬಹುಬುದ್ಧಿಶಾಲಿಗಳಾದರೂ ದುಷ್ಟದೈವದಿಂದ ವಿನಾಶಹೊಂದುವರು. ಅಲ್ಪಮತಿಗಳಾದರೂ ಮನೆಯಲ್ಲಿ ಹಾನಾಗಲೂ ಸಂತೋಷಿಸುತ್ತಿರುವರು. ಇಂತು ಹೇಳಿಯೂ ಇದೆ:—

[illegible] |
[illegible] ||
[illegible] |
[illegible] ||೪೧||

[illegible]

[illegible] |
[illegible] ||
[illegible] |
[illegible] ||೪೨||

[illegible]

[illegible]

[illegible]

ಬೆಸ್ತರು ಕೈಯಲ್ಲಿ ಬಲೆಯನ್ನು ಹಿಡಿದು, ತಾವುಕೊಂದಿಟ್ಟ ಹಲವು ಮತ್ಸ್ಯಗಳನ್ನು ತಲೆಯಲ್ಲಿ ಹೊತ್ತುಕೊಂಡು ಅಸ್ತಮಯಸಮಯದಲ್ಲಿ ಆ ಸರೋವರದ ಬಳಿಗೆ ಬಂದರು. ಬಳಿಕ ಆ ಸರೋವರವನ್ನು ನೋಡಿ ಒಬ್ಬರಲ್ಲೊಬ್ಬರು—ಈ ಸರೋವರದಲ್ಲಿ ಅನೇಕ ಮತ್ಸ್ಯಗಳು ಇರುವಂತೆ ಕಾಣುವುದು. ನೀರು ಸ್ವಲ್ಪವೇ ಇದೆ. ಆದುದರಿಂದ ನಾಳೆ ಬೆಳಗೆ ಇಲ್ಲಿಗೆ ಬರೋಣ—ಎಂದು ಮಾತನಾಡಿಕೊಂಡು ತಮ್ಮ ಮನೆಗೆ ಹೋದರು.

ಮತ್ಸ್ಯಗಳು ದುಗುಡಗೊಂಡು ಪರಸ್ಪರವಿಂತು ಆಲೋಚಿಸಿದುವು:— ಅವುಗಳಲ್ಲಿ ಕಪ್ಪೆಯಿಂತೆಂದಿತು:—ಎಲೈ ಶತಮತಿಯೆ! ಬೆಸ್ತರು ಆಡಿದ ಮಾತನ್ನು ಕೇಳಿದೆಯೋ? ಈ ವಿಷಯದಲ್ಲಿ ಏನಮಾಡಬಹುದು? ಓಡಿಹೋಗುವುದೋ ಅಥವಾ ನಿಲ್ಲುವುದೋ? ಯಾವುದನ್ನು ಮಾಡಬಹುದೋ ಅದನ್ನು ಅಪ್ಪಣೆ ಕೊಡಿಸು.

ಸಹಸ್ರಮತಿ ಆ ನುಡಿಯನ್ನು ಕೇಳಿ ನಕ್ಕು ಇಂತೆಂದಿತು:—ಎಲೈ ಮಿತ್ರನೆ, ಹೆದರಬೇಡ. ಏಕೆಂದರೆ, ಮಾತನ್ನು ಸ್ಮರಿಸಿಕೊಂಡ ಮಾತ್ರದಿಂದಲೇ ಭಯಪಡಬಾರದು, ಇಂತು ಹೇಳಿದೆ:—

ಕುರಿಪ್ಪದೆ ಪೆಱರಸುಗಳನಪ |
ಹರಿಸುವ ಪಾವುಗಳ ಮೇಣ್ ದುರಾತ್ಮಕರಭ್ಯಂ ||
ತರದೊಳಗಣಾಶಯಂಗಳ್ |
ಪಿರಿದುಂ ಸಿದ್ಧಿಸವು ಜಗವಿದದಱಿಂದಿಕ್ಕುಂ ||೪೨||

ಆ ಬೆಸ್ತರು ಪ್ರಕೃತದಲ್ಲಿ ಬರುವ ಸಂಭವವೂ ಇಲ್ಲ. ಒಂದುವೇಳೆ ಮುಂದೆ ಬರಬಹುದು. ಆದರೆ ನಾನು ನನ್ನ ಬುದ್ಧಿಪ್ರಭಾವದಿಂದ ನಿನ್ನನ್ನೂ ರಕ್ಷಿಸುವೆನು. ಏಕೆಂದರೆ ನಾನು ಜಲಗತಿಗಳ ಚರ್ಯೆಯನ್ನು ಬಲ್ಲೆನು.

ಅದನಾಲಿಸಿ ಶತಮತಿಯಿಂತೆಂದಿತು:—ಎಲೈ! ನೀನು ಸಂಗತವಾಗಿ ಮಾತನಾಡಿದೆ. ನೀನು ಸಹಸ್ರಮತಿಯೇಸರಿ. ಇದು ಯುಕ್ತವಾದಮಾತು:—

ಕ್ಷಿತಿಯೊಳ್ ಸನ್ಮತಿಯುಳ್ಳರ |
ಮತಿಗತಿದುರ್ಗಮಮೆನಿಪ್ಪುದಾವುದುಮಿಲ್ಲಂ ||
ಮತಿಬಲದಿಂ ಚಾಣಕ್ಯಂ |
ಹತಿಗೊಳಿಸಿದನಂದು ಪಗೆದನಂದರನೆಲ್ಲಂ ||೪೩||

ಅಂತಲ್ಲದೆ;—

ಅನಿಲಂ ಮತ್ತಂ ಬಿಸುಗದಿ |
ರನ ಶಿವಿರ್ಗಳುಮೆಲ್ಲಿ ಗಮಿಸಲಾಱವೊ ಕೇಳ್ ಧ ||
ಟ್ಟನೆ ಗಮಿಪುದಲ್ಲಿಯುಂ ಘನ |
ವೆನಿಸುವ ಕೋವಿದರ ಬುದ್ಧಿಯೆಂಬುದದೆಂಗುಂ || ೪೪ ||

ಆದಕಾರಣ ಮಾತನ್ನು ಕೇಳದಮಾತ್ರಕ್ಕೆ ಹಿರಿಯರ ತಲೆಯಿಂದಲೂ ಬಂದ ಈ ಜನ್ಮಸ್ಥಳವನ್ನು ಬಿಡಲಾಗುವುದಿಲ್ಲ. ಹೇಳಿಯೂ ಇದೆ:—

[illegible] |
[illegible] ||
[illegible] |
[illegible] || ೪೫ ||

ಆದುದರಿಂದ ಯಾವಾಗಲೂ ಈ ಸ್ಥಳವನ್ನು ಬಿಟ್ಟು ಹೋಗಬಾರದು. ನಾನು ನಿಮ್ಮನ್ನು [illegible] ಪ್ರಭಾವದಿಂದ ಸಲಹುವೆನು.

ಕಪ್ಪೆ ಅವುಗಳಂ ಕುರಿತು—ಪ್ರಿಯರಿರಾ! ನನಗೆ ಒಂದೇ ಬುದ್ಧಿ. [illegible] ಆದುದರಿಂದ ನಾನು ನನ್ನ ಮಡದಿಯೊಡನೆ [illegible] ಕುರಿತು ಹೋರಡುವೆನು—ಎಂದು ನುಡಿದು ರಾತ್ರಿಯಲ್ಲಿಯೇ ಹೊರಟು ಮತ್ತೊಂದು ಸರೋವರವನ್ನು ಸೇರಿತು.

ಬೆಸ್ತರು ಬೆಳಗಾಗುತ್ತಲೂ ಬಂದು, [illegible] ಮೀನು, ಆಮೆ, ಕಪ್ಪೆ, [illegible] ಹಿಡಿದು, [illegible] ಶತಮತಿ ಸಹಸ್ರಮತಿಗಳನ್ನು [illegible] ಕೊಂಡರು. [illegible]

ಕೊಂಡನು. ದಾರಿಯಲ್ಲಿ ಬಂದುಬಾವಿಯ ಮೇಲ್ಗಡೆ ಕುಳಿತಿದ್ದ ಏಕಮತಿಯೆಂಬ ಆ ಕಪ್ಪೆಯು ಅಂತು ಬೆಸ್ತರಿಂದ ಒಯ್ಯಲ್ಪಡುತಿರುವ ಶತಮತಿ ಸಹಸ್ರಮತಿಗಳೆಂಬ ಆ ಮೀನುಗಳನ್ನು ಕಂಡು ತನ್ನ ಮಡದಿಯನ್ನು ಕುರಿತು—ಪ್ರಿಯೆ! ನೋಡು ನೋಡು :—

ತಲೆಯೊಳ್ ಶತಮತಿಯಿರ್ಕ್ಕುಂ |
ವಲಮಿದು ಜೋಲ್ಗುಂ ಸಹಸ್ರಮತಿಯೀಗಳ್ ನೋ ||
ಡೆಲೆ ದಯಿತೆಯೇಕಮತಿ ನಾಂ |
ನಲವಿಂ ತಿಳಿನೀರೊಳಿಂತು ಬಿನದಿಸುತಿರ್ಪೆಂ || ೪೬ ||

ಎಂದಿತು. ಇದರಿಂದ ನಾನು ಹೇಳಿದೆನು :—"ತಲೆಯೊಳ್ ಶತಮತಿಯಿರ್ಕುಂ" | .... ಎಂದು. ಆದಕಾರಣ ಬುದ್ಧಿವಿಶೇಷವು ಮುಖ್ಯವಲ್ಲ.

ಸುವರ್ಣಸಿದ್ಧಿಯೆಂದನು :—ಇದೇನೋ ಉಂಟು. ಆದರೂ ಹಿರಿಯನ ಮಾತನ್ನು ಅತಿಕ್ರಮಿಸಬಾರದು. ಇನ್ನೇನು ಮಾಡತಕ್ಕದು? ನನ್ನಿಂದ ತಡೆಯಲ್ಪಟ್ಟರೂ ನೀನು ಚಪಲತೆಯಿಂದಲೂ ವಿದ್ಯಾಗರ್ವದಿಂದಲೂ ನಿಲ್ಲದೆ ಹೋದೆ. ಇದು ಯುಕ್ತವಾದ ಮಾತು :—

ಬಂದುರವೆನಿಸಿತು ಪಾಡಿದು |
ದಿಂದಾಂ ಮಾಣೆಂದೆನಾದೊಡಂ ಪಾಡಿದೆ ನೀಂ ||
ಕಂದರದಪೂರ್ವಮೀಮಣಿ |
ಸಂದಿತ್ತಿದು ಮಾವ ಗಾನಲಕ್ಷಣವಲ್ತೇ || ೪೭ ||

ಚಕ್ರಧರನು ಇದೆಂತೆನಲು, ಸುವರ್ಣಸಿದ್ಧಿಯಿಂತೆಂದನು :—

ಕಥೆ ೬.

ಬಂದೂರಲ್ಲಿ ಉದ್ಧತವೆಂಬ ಕತ್ತೆಯಿದ್ದಿತು. ಅದು ಯಾವಾಗಲೂ ಆಗಸನ ಮನೆಯಲ್ಲಿ ಹೊರೆಹೊತ್ತು ರಾತ್ರಿವೇಳೆ ಸ್ವೇಚ್ಛೆಯಿಂದ ತಿರುಗುತ್ತ, ಬೆಳಗಾದೊಡನೆಯೇ ಭಯದಿಂದ ತಾನೇ ಆಗಸನ ಮನೆಗೆ ಬರುತಿದ್ದಿತು. ಅಗಸನು ಅದನ್ನು ಕಟ್ಟಿಹಾಕುತಿದ್ದನು. ರಾತ್ರಿ ಹೊಲಗಳಲ್ಲಿ ತಿರುಗುತ್ತಿದ್ದ ಆ ಕತ್ತೆಗೆ ಬಂದುದಿವಸ ಆದೊಂದುನರಿಯೊಡನೆ ಸ್ನೇಹವುಂಟಾಯಿತು. ಅದು ಶರೀರದಲ್ಲಿ ಸ್ಥೂಲವಾದುದರಿಂದ ಮೆಲ್ಲನೆ

ನಡೆಯುತ್ತ ಸೌತೆಹೊಲವನ್ನು ನರಿಯೊಡನೆ ಪ್ರವೇಶಿಸುತಿದ್ದಿತು. ಇಂತು ಆ ಕತ್ತೆನರಿಗಳು ಸೌತೆಕಾಯಿಗಳನ್ನು ಬೇಕಾದಷ್ಟು ತಿಂದು ಪ್ರತಿದಿವಸವೂ ಬೆಳಗಾಗುವುದೂ ತಮ್ಮ ಸ್ಥಳಕ್ಕೆ ಹೊರಟುಹೋಗುತಿದ್ದುವು.

ಬಳಿಕ ಒಂದುದಿವಸ ಹೊಲದ ನಡುವೆ ಇದ್ದ ಮದೋದ್ಧತವಾದ ಆ ಕತ್ತೆ ನರಿಯನ್ನು ಕುರಿತು—ಎಲೆಮಾಗು! ನೋಡು ನೋಡು; ಈ ರಾತ್ರಿ ಎಷ್ಟು ನಿರ್ಮಲವಾಗಿದೆ! ನಾನು ಹಾಡುತ್ತೇನೆ, ಹೇಳು; ಯಾವ ರಾಗವನ್ನು ಹಿಡಿದು ಹಾಡಲಿ?—ಎನಲು, ಆ ನರಿಯಿಂತೆಂದಿತು:—ಮಾವ! ಸುಮ್ಮನೆ ಅನರ್ಥವನ್ನು ತಂದುಕೊಳ್ಳುವುದರಿಂದೇನು? ಏಕೆಂದರೆ, ನಾವಿಬ್ಬರೂ ಚೋರಕರ್ಮದಲ್ಲಿ ಇರುವವರು. ಜಾರರೂ ಚೋರರೂ ಅಡಗಿಕೊಂಡಿರಬೇಕು. ಇಂತು ಹೇಳಿಯೂ ಇದೆ:—

[illegible] |
[illegible] ||
[illegible] |
[illegible] ॥ ೪೮ ॥

ಅಲ್ಲದೆ ನಿನ್ನ ಗಾನವು ಅಷ್ಟು ಮಧುರವಾದುದಲ್ಲ. ಶಂಖಧ್ವನಿ [illegible]

[illegible]

[illegible] |
[illegible] |
[illegible] |
[illegible] ॥ ೪೯ ॥

[illegible]

ಕತ್ತೆಯೆಂದಿತು:—ಛೀ ಛೀ ಮೂಢ! ನಾನು ಸಂಗೀತವನ್ನು ಅರಿಯೆನೋ? ಸಂಗೀತದ ಪ್ರಕಾರಗಳನ್ನು ವಿವರಿಸುವೆನು; ಕೇಳು:—

ಸ್ವರವೇೞುಂ ಗ್ರಾಮಂ ಮೂ |
ಱುಂ ಯಿರ್ಪತ್ತೊಂದು ಮೂರ್ಛನಂ ತಾಳಂಗಳ್ ||
ನೆಱೆವೊಡೆ ನಾಲ್ವತ್ತೊಂಬ |
ತ್ತೊರೆಗುಂ ಮೂಱುಗಡ ಮಾತ್ರೆ ಮೂಱುಲಯಂಗಳ್ ॥ ೫೦ ॥

ಜತಿಗಳ ತಾಣಂಗಳ್ ಮೂ |
ಱತಿಶಯದ ಮುಖಂಗಳಾಱುಮೊಂಬತ್ತುರಸಂ ||
ನುತರಾಗಂ ಮೂವತ್ತಾ |
ಱುತರಂ ಭಾವಂಗಳೆಣಿಸೆ ನಾಲ್ವತ್ತೆಲಂ ॥ ೫೧ ॥

ಅವುಗಡ ನೂಱಿಪ್ಪತ್ತೆಂ |
ಬುವು ಪರಿಗಣಿಸುವೊಡೆ ಗಾನದಂಗಂಗಳ್ ಮು ||
ನ್ನವಿದಂ ತಾನೇ ನುಡಿದಂ |
ವಿವರಿಸಿ ಭರತಮುನಿ ವೇದಕೆಱಡನೆಯದೆನಲ್ ॥ ೫೨ ॥

ಬಗೆವೊಡೆ ದೇವತೆಗಳ್ಗಂ |
ಜಗದೊಳ್ ಗಾನರಸದಿಂ ಪ್ರಿಯಂ ಪೆಱತಿಲ್ಲಂ ||
ಬಿಗಿನೋಣನರದಿಂಚರದಿಂ |
ಮಿಗೆ ಮಚ್ಚಿಸಿದಂ ಮಹೇಶನಂ ದಶವದನಂ ॥ ೫೩ ॥

ಎಲವತ್ಸ! ಅದೆಂತು ನನ್ನನ್ನು ತಿಳಿಯದವನೆನ್ನುತ್ತ ತಡೆಯುತಿರುವೆ?

ನರಿಯೆಂದಿತು:—ಮಾವ! ನಿನಗಿಂತು ಅಭಿಪ್ರಾಯವಿದ್ದರೆ ಆಗಲಿ. ನಾನು ಬೇಲಿಯ ಬಾಗಿಲಲ್ಲಿ ಇದ್ದುಕೊಂಡು ಹೊಲದ ಕಾಯ್ವನವನನ್ನು ನೋಡುತ್ತಿರುವೆನು ನಿನ್ನ ಮನಸ್ಸುಬಂದಂತೆ ನೀನು ಗಾನಮಾಡು.

ಬಳಿಕ ಕತ್ತೆ ಅದೇರೀತಿ ಮಾಡಲು, ಕ್ಷೇತ್ರಪಾಲಕನು ಅದರ ಕೂಗನ್ನುಕೇಳಿ ಕೋಪದಿಂದ ಎದ್ದು ಕಲ್ಲುಗಳನ್ನು ಕಟಕಟನೆ ಕಡಿಯುತ್ತ ಓಡಿಬಂದು ಕತ್ತೆಯನ್ನು ಕಂಡು ನೆಲದಲ್ಲಿಬಿದ್ದೊರಗುವಂತೆ ದೊಣ್ಣೆಯಿಂದ ಬಡಿದನು. ಮತ್ತು ನಡುವೆ ರಂಧ್ರವುಳ್ಳ ಒರಲನ್ನು ಕೊರಲಿಗೆ ಬಂಧಿಸಿ ಹೊರಟುಹೋದನು. ಕತ್ತೆಯು ತನ್ನ ಜಾತಿಯ ಸ್ವಭಾವದಿಂದ ಕ್ಷಣದಲ್ಲಿ ನೋವನ್ನು ಪರಿಹರಿಸಿಕೊಂಡು ಎದ್ದಿತು. ಹೇಳಿಯೂ ಇದೆ:—

ಏದಿತವಿದು ಕುಕ್ಕುರಕ್ಕಂ |
ಕುದುರೆಗಮಲ್ಲದೆ ವಿಶೇಷದಿಂ ಕತ್ತೆಗಮಂ ||
ಗದೆ ತಾಡನದತ್ತಣಿಸೊದ |
ಏದ ನೋವಿರದಲ್ತೆ ಕಳೆಯಲೊಂದು ಮುಹೂರ್ತಂ || ೫೪ ||

ಬಳಿಕ ಕತ್ತೆ ಆ ವ್ರೋರಲನ್ನು ಎಳೆದುಕೊಂಡು ಬೇಲಿಯನ್ನು ಪುಡಿಪುಡಿಮಾಡಿ ಓಡಲಾರಂಭಿಸಿತು. ಇಷ್ಟರೊಳಗೆ ನರಿಯೂ ದೂರದಿಂದಲೇ ಆ ಕತ್ತೆಯನ್ನು ನೋಡಿ ನಗುತ ಇಂತೆಂದಿತು:—

[illegible] |
[illegible] ||
[illegible] |
[illegible] || ೫೫ ||

ಆದುದರಿಂದ ನೀನು [illegible]

ಅದನಾಲಿಸಿ ಚಕ್ರಧರನು ಇಂತೆಂದನು:—ಎಲೆ ಕೇಳು, ಇದು ದಿಟ ಯುಕ್ತವಾದವಾತಿದು:—

[illegible] |
[illegible] ||
[illegible] |
[illegible] || ೫೬ ||

[illegible]

[illegible]

[illegible]

ಆ ಮರದಲ್ಲಿ ಒಂದು ಭೂತವು ಅಧಿಷ್ಠಿತವಾಗಿದ್ದಿತು ; ಅದೆಂದಿತು :—ಎಲೈ! ಈ ಮರವು ಅನೇಕರಿಗೆ ಆಶ್ರಯವಾದುದು. ಎಂತಾದರೂ ಇದನ್ನುರಕ್ಷಿಸಬೇಕು. ಏಕೆಂದರೆ, ನಾನು ಇಲ್ಲಿ ಬಹುಸುಖದಿಂದಿರುವೆನು ; ಸಮುದ್ರದ ಅಲೆಗಳ ಸೋಂಕಿನಿಂದಲೂ ತಂಗಾಳಿಯ ಚಲನೆಯಿಂದಲೂ ಆಹ್ಲಾದಕರವಾಗಿರುವುದು.

ನೇಯಿಗೆಯವನಿಂತೆಂದನು:—ಎಲೈ ! ನಾನೇನಮಾಡಲಿ ? ಮರಮುಟ್ಟುಗಳಿಲ್ಲದೆ ನನ್ನ ಮಡದಿಮಕ್ಕಳು ಹಸಿವಿನಿಂದ ಪೀಡಿತರಾಗಿರುವರು. ಆದುದರಿಂದ ನೀನು ಇನ್ನೆಲ್ಲಿಗಾದರೂ ಬೇಗ ಹೋಗು ; ನಾನು ಈ ಮರವನ್ನು ಕಡಿವೆನು.

ಭೂತವೆಂದಿತು:— ಅಯ್ಯೋ ! ನಾನು ನಿನ್ನ ವಿಷಯದಲ್ಲಿ ಸಂತುಷ್ಟನಾಗಿರುವೆನು. ನಿನಗೆ ಬೇಕಾದುದನ್ನು ಬೇಡು, ಕುಡುವೆನು. ಈ ಮರವನ್ನು ರಕ್ಷಿಸು.

ನೇಯಿಗೆಯವನಿಂತೆಂದನು:—ಇಂತಾದರೆ, ನಾನು ನನ್ನ ಮನೆಗೆ ಹೋಗಿ ನನ್ನ ಮಿತ್ರನನ್ನೂ ಕಳತ್ರವನ್ನೂ ಬೆಸಗೊಂಡುಬರುವೆನು ; ಆ ಮೇಲೆ ನೀನು ನನ್ನ ಇಷ್ಟಾರ್ಥವನ್ನು ಕುಡು.

ಆ ಭೂತವು ಅದೇರೀತಿಯಾಗಲೆಂದು ಒಪ್ಪಿತು. ಆ ನೇಯಿಗೆಯವನು ಸಂತೋಷಗೊಂಡು ತನ್ನ ಮನೆಗೆ ಹೊರಟನು. ಮುಂದೆ ಊರೊಳಗೆ ಪ್ರವೇಶಿಸುವುದೂ ತನ್ನ ಸ್ನೇಹಿತನಾದ ನಾಪಿತನು ಕಂಡನು. ಅವನನ್ನು ಕುರಿತು—ಎಲೆ ಮಿತ್ರ ! ನನಗೆ ಒಂದು ಭೂತವು ಪ್ರಸನ್ನವಾಗಿರುವುದು. ಅದನ್ನು ನಾನು ಏನ ಬೇಡಲಿ ? ನಾನು ನಿನ್ನನ್ನು ಬೆಸಗೊಳಲು ಬಂದೆನು—ಎಂದನು.

ನಾಪಿತನೆಂದನು :—ಅಯ್ಯ ! ಇಂತಿದ್ದರೆ ರಾಜ್ಯವನ್ನು ಬೇಡು. ಅದರಿಂದ ನೀನು ರಾಜನಾಗುವೆ. ನಾನು ನಿನ್ನ ಮಂತ್ರಿಯಾಗುವೆನು. ನಾವಿಬ್ಬರೂ ಇಹದಲ್ಲಿ ಸುಖವನ್ನು ಅನುಭವಿಸಿ ಪರದಲ್ಲಿ ಸದ್ಗತಿಯನ್ನು ಪಡೆಯೋಣ. ಕೇಳು :—

ಪದೆದೆಂದುಂ ದಾನಂಗೈ |
ವುದಱಿಲ್ಲಿ ಪರಸು ನಲ್ಲ ಸಂಬಡೆದಿಹದೊಳ್ ||

ಅದಱನುಭಾವದೆ ಮಗುೞ್ದಿಂ |
ತ್ರಿದಿವದೊಳಾತ್ರಿದಶರೊಡನೆಯುಂ ಪುರುಡಿಸುವಂ ॥ ೫೭ ॥

ಕೌಲಿಕನೆಂದನು:— ಇದೇನೋ ಉಂಟು. ಆದರೂ ಮನೆಯಾಕೆ ಯನ್ನು ಬೆಸಗೊಳ್ಳುವೆನು.

ನಾಪಿತನೆಂದನು :—ಅಯ್ಯ ! ಸ್ತ್ರೀಯೊಡನೆ ಆಲೋಚಿಸುವುದು ಶಾಸ್ತ್ರವಿರುದ್ಧ; ಏಕೆಂದರೆ, ಅವರು ಅಲ್ಪಮತಿಗಳು. ಕೇಳು:—

[illegible] |
[illegible] ॥
[illegible] |
[illegible] ॥ ೫೮ ॥

[illegible] |
[illegible] ॥
[illegible] |
[illegible] ॥ ೫೯ ॥

[illegible] |
[illegible] ॥
[illegible] |
[illegible] ॥ ೬೦ ॥

[illegible]

ಇರದಲ್ಪರೊಳಾಡುಂಗಾ |
ಱರೊಳಂ ವಂದಿಗಳೊಳೆಳೆಯರೊಳ್ ನಾಪಿತರೊಳ್ ॥
ತಿರಿಕುಳಿಗಳೊಳಮಭಿಜ್ಞಂ |
ನೆರೆದಾಳೋಚನೆಯನೆಸಗಬಾರದೆಂದುಂ ॥ ೬೧ ॥

ಅಲ್ಲದೆ ರಾಜ್ಯಸ್ಥಿತಿಯೆಂಬುದು ಮಹಾಕ್ಲೇಶಪರಂಪರೆಯೇಸರಿ. ಇದು ಸಂಧಿವಿಗ್ರಹಯಾನಾಸನಾಶ್ರಯದ್ವೈಧೀಭಾವಗಳಿಂದಲೂ ಇತರವಿಷಯಗಳಿಂದಲೂ ಪುರುಷನಿಗೆ ಯಾವಾಗಲೂ ಸುಖವನೀಯದು. ಏಕೆಂದರೆ,

ಇಳೆಯಾಣ್ಮನಾದನೆನಲಾ |
ಗಳೆ ಚಿಂತನದಲ್ಲಿ ಬುದ್ಧಿ ಪತ್ತುಗೆಗೊಳ್ಗುಂ ॥
ಜಳದೊಡನೆಯೆ ಬರಿಕುಂ ನೃಪ |
*ಗಱಿಲಂ ಪಟ್ಟಾಭಿಷೇಕಕಾಲದೆ ಕಳಶಂ ॥ ೬೨ ॥

ಅಂತಲ್ಲದೆ:—

ಶ್ರೀರಾಮಂ ವನದಲ್ಲಿ ವಾಸಿಸಿದುದಂ ಕೌಂತೇಯರುಂ ಸೋಲ್ತು ಕಾಂ |
ತಾರಂಬೊಕ್ಕುದನಾಯದುಕ್ಷಯಮುಮಂ ಭೈಮೀಶಸೌದಾಸರಾಂ |
ತಾರಾಜ್ಯಚ್ಯುತಿಯಂ ಮಹಾರ್ಜುನನ ಕುಂದಂ ಮತ್ತಮಾರಯ್ಯೆ ಲಂ |
ಕಾರಾಜ್ಯೇಶನ ಪಾಡುಮಂ ಬಯಪರೇನಾರಾನುಮಾರಾಜ್ಯಮಂ ॥ ೬೩ ॥

ಪಿರಿದೊಲವಿನಾವುದಂ ಸ್ವೀ |
ಕರಿಸಲ್ ಸೋದರರುಮಾತ್ಮಜಾತರುಮಿಳೆಯಾ ॥
ಳ್ವರಸರ ಕೊಲಲ್ಕೆ ವಾಂಛಿ |
ಪ್ಪರದಂ ದೂರದೊಳೆ ರಾಜ್ಯಮಂ ಬಿಡವೇೞ್ಕುಂ ॥ ೬೪ ॥

ನೇಯಿಗೆಯವನಿಂತೆಂದನು:—ನೀನು ಹೇಳಿದುದು ದಿಟ ; ಆದರೆ ಇನ್ನಾವುದನ್ನು ಬೇಡಲಿ.

ಅವಳೆಂದಳು:—ನೀನು ನಿತ್ಯವೂ ಒಂದುವಸ್ತ್ರವನ್ನು ನೇಯುವೆ. ಅದು ವೆಚ್ಚಗಳಿಗೆಮಾತ್ರ ಸಾಕಾಗುವುದು. ಈಗ ಇನ್ನೆರಡು ತೋಳುಗಳನ್ನೂ ಇನ್ನೊಂದು ತಲೆಯನ್ನೂ ಬೇಡು. ಅದರಿಂದ ಹಿಂದೆಯೂ ಮುಂದೆಯೂ ಎರಡು ವಸ್ತ್ರಗಳನ್ನು ನೇಯಲಾಗುವುದು. ಎರಡನೆಯವಸ್ತ್ರದ ಬೆಲೆಯಿಂದ ವೆಚ್ಚನಕಾರ್ಯಗಳನ್ನು ನಡೆಯಿಸಬಹುದು. ಇಂತು ಸೌಖ್ಯದಿಂದ ಸನ್ನು

ಜಾತಿಯವರ ನಡುವೆ ಹೊಗಿಸಿಕೊಂಡು ಬಾಳಬಹುದು. ಇದರಿಂದ ನಮಗೆ ಇಹಪರಗಳೆರಡೂ ಸಿದ್ಧಿಸುವುವು.

ಅವನು ಆ ಮಾತನ್ನು ಕೇಳಿ ಸಂತೋಷಗೊಂಡು ಅವಳನ್ನು ಕುರಿತು—ಭಾಪು ಸತಿಯೆ ಭಾಪು. ನೀನು ಸಮಂಜಸವಾಗಿ ಮಾತನಾಡಿದೆ. ನಿನ್ನ ಮಾತನ್ನು ನಡೆಯಿಸುವೆನು. ಇದು ನಿಶ್ಚಿತವು—ಎಂದು ನುಡಿದು ಭೂತದ ಬಳಿಗೆ ಹೋಗಿ—ಅಯ್ಯಾ! ನೀನು ನನ್ನ ಮನೋರಥವನ್ನು ಈಡೇರಿಸುವುದಾದರೆ ನನಗೆ ಇನ್ನೆರಡು ತೋಳುಗಳನ್ನೂ ಇನ್ನೊಂದು ತಲೆಯನ್ನೂ ಅನುಗ್ರಹಿಸು—ಎನಲು, ಒಡನೆಯೇ ಅವನಿಗೆ ಇನ್ನೆರಡು ತೋಳುಗಳೂ ಇನ್ನೊಂದು ತಲೆಯೂ ಉಂಟಾದುವು.

ಬಳಿಕ ಅವನು ನಾಲ್ಕು ತೋಳುಗಳೂ ಎರಡು ತಲೆಗಳೂ ಉಳ್ಳವನಾಗಿ ಸಂತೋಷಗೊಂಡು ತನ್ನ ಮನೆಗೆ ಬರುತ್ತಿರುವಷ್ಟರಲ್ಲಿ ಜನಗಳು ಅವನನ್ನು ನೋಡಿ ರಾಕ್ಷಸನೆಂದು ದೊಣ್ಣೆಗಳಿಂದಲೂ ಕಲ್ಲುಗಳಿಂದಲೂ ಹೊಡೆದು ಕೊಂದರು. ಇದರಿಂದ ನಾನು ಹೇಳುವೆನು—[illegible]ಬುದ್ಧಿಯಿಲ್ಲದವನಿಗೆ ...... ಎಂದು—

ಚಕ್ರಧರನು [illegible]—ಅಯ್ಯಾ! ಇದು ನಿಜ. ಲೋಕದಲ್ಲಿ ಎಲ್ಲರೂ [illegible] ಅವಿವೇಕದಿಂದ ಅನಿಷ್ಟರಾಗಿ ಹಾಸ್ಯಕ್ಕೆ ಗುರಿಯಾಗುವರು. [illegible]—

[illegible]

[illegible]

[illegible]

[illegible] || ೭೫ ||

[illegible]—

ಕಥೆ ೬

[illegible]

[illegible]

[illegible]

ಗೂಟಕ್ಕೆ ನೇತುಹಾಕಿ ಅದರ ಕೆಳಗೆ ಒಂದುಮಂಚವನ್ನು ಹಾಕಿಕೊಂಡು ಯಾವಾಗಲೂ ಆ ಗಡಿಗೆಯನ್ನು ಒಂದೇದೃಷ್ಟಿಯಿಂದ ನೋಡುತಿದ್ದನು. ಬಳಿಕ ಒಂದುದಿನ ರಾತ್ರಿ ಮಲಗಿಕೊಂಡು ಇಂತು ಚಿಂತಿಸಿದನು :—

ಈ ಗಡಿಗೆ ಹಿಟ್ಟಿನಿಂದ ತುಂಬಿದೆ. ಮುಂದೆ ಬರಗಾಲ ಬಂದರೆ ಈ ಹಿಟ್ಟಿನಿಂದ ನೂರುರೂಪಾಯಿಗಳ ಸಂಪಾದನೆಯಾಗುವುದು. ಅದರಿಂದ ಎರಡು ಆಡುಗಳನ್ನು ಕೊಂಡುಕೊಳ್ಳುವೆನು. ಅವು ಆರುತಿಂಗಳಿಗೆ ಒಂದಾವೃತ್ತಿ ಮರಿಹಾಕುವ ಕಾರಣ ಆಯೆರಡಾಡುಗಳಿಂದ ಮಂದೆಯಾಗುವುದು. ಆಮೇಲೆ ಆಡುಗಳಿಂದ ಹೆಚ್ಚಾದ ಹಸುಗಳನ್ನು ತೆಗೆದುಕೊಳ್ಳುವೆನು. ಹಸುಗಳಿಂದ ಎಮ್ಮೆಗಳನ್ನೂ ಎಮ್ಮೆಗಳಿಂದ ಹೆಂಗುದುರೆಗಳನ್ನೂ ಕೊಂಡುಕೊಳ್ಳುವೆನು. ಅವು ಮರಿಗಳನ್ನು ಹಾಕಲು, ಹಲವುಕುದುರೆಗಳಾಗುವುವು ಅವನ್ನು ಮಾರಿದರೆ ಬೇಕಾದಷ್ಟು ಹೊನ್ನು ದೊರೆಯುವುದು. ಅದರಿಂದ ನಾಲ್ಕು ತೊಟ್ಟಿಯ ಮನೆಯನ್ನು ಕಟ್ಟಿಸಬಹುದು. ಯಾವನಾದರೂ ಒಬ್ಬ ಬ್ರಾಹ್ಮಣನು ಬಂದು ವಯಸ್ಸಾದ ರೂಪವುಳ್ಳ ಕನ್ಯೆಯನ್ನು ನನಗೆ ಕೊಟ್ಟು ಮದುವೆಮಾಡುವನು. ಅವಳಲ್ಲಿ ನಾನು ಪುತ್ರನನ್ನು ಪಡೆವೆನು. ಅವನಿಗೆ, ಸೋಮಶರ್ಮನೆಂಬ ಹೆಸರನಿಡುವೆನು. ಅವನು ಹಜ್ಜೆಯಿಡುವಷ್ಟು ಯೋಗ್ಯತೆಯುಳ್ಳವನಾಗುತ್ತಲೂ, ನಾನು ಪುಸ್ತಕವನ್ನು ಹಿಡಿದುಕೊಂಡು ಕುದುರೆಲಾಯದ ಹಿಂದೆ ಕುಳಿತುಕೊಂಡು ಓದಿಕೊಳ್ಳುವೆನು. ಇಷ್ಟರೊಳಗೆ ಸೋಮಶರ್ಮನು ನನ್ನನ್ನು ನೋಡಿ ತಾಯ ತೊಡೆಯಿಂದ ಇಳಿದು ಮೆಲ್ಲಡಿಯಿಡುತ್ತ ಕುದುರೆಯ ಗೊರಸಿನ ಬಳಿಯಿಂದ ನನ್ನ ಸಮೀಪಕ್ಕೆ ಬರುವನು. ಬಳಿಕ ನಾನು ಕೋಪಿಸಿಕೊಂಡು ಆ ಕೆಯನ್ನು ಕುರಿತು—ಮಗುವನ್ನು ಎತ್ತಿಕೊಳ್ಳೆನ್ನುವೆನು. ಅವಳು ಮನೆಕೆಲಸದ ವ್ಯಗ್ರತೆಯಿಂದ ನನ್ನ ಮಾತನ್ನು ಕಿವಿಗೆ ಹಾಕಿಕೊಳ್ಳುವುದಿಲ್ಲ. ಆ ಮೇಲೆ ನಾನು ಎದ್ದು ಅವಳನ್ನು ಕಾಲಿನಿಂದ ಝಾಡಿಸಿ ಒದೆವೆನು—ಎನ್ನುತ್ತ ಅದೇಧ್ಯಾನದಿಂದ ಒದೆದನು. ಒಡನೆಯೆ ಗಡಿಗೆಯು ಪುಡಿಪುಡಿಯಾಯಿತು. ಆ ಹಿಟ್ಟಿನಿಂದ ಅವನ ಮೈಯೆಲ್ಲವೂ ಬೆಳ್ಳಗಾಯಿತು. ಇದರಿಂದ ನಾನು ಹೇಳುವೆನು :—

ದೊರೆಕೊಳ್ಳದ ವಿಷಯದೆ ಬಿ | ತ್ತರದಿನಸಂಭಾವ್ಯಮಪ್ಪ ಚಿಂತೆಯನೀನಂ ||
ವಿರಚಿಸುವನವಂ ಬೆಳ್ಪಿದಿ | ದೊಱಗಿದಪಂ ......|| ಎಂದು.

ಸುವರ್ಣಸಿದ್ಧಿಯಿಂತೆಂದನು:—

ಇದು ಸತ್ಯ ನಿನ್ನ ತಪ್ಪೇನು? ಏಕೆಂದರೆ, ಲೋಕವೆಲ್ಲವೂ ಲೋಭದಿಂದ ಬಾಧಿಸಲ್ಪಟ್ಟು ಹಾಸ್ಯಾಸ್ಪದವಾಗಿರುವುದು. ಇಂತು ಹೇಳಿಯೂ ಇದೆ:—

[illegible] |
[illegible] ||
[illegible] |
[illegible] || ೬೬ ||

[illegible]

[illegible]

[illegible]

ಈ ಕುರಿ ಅನ್ನತಿನ್ನುವುದರಲ್ಲಿ ಅತ್ಯಾಸಕ್ತಿಯುಳ್ಳುದಾಗಿರುವುದು. ಅಡಿಗೆಯುವರು ಮಹಾಕೋಪಿಷ್ಠರು; ಹತ್ತಿರಿದ್ದುದನ್ನು ತೆಗೆದುಕೊಂಡು ಹೊಡೆವರು. ಯಾವ ವಸ್ತುವೂ ಸಿಕ್ಕದಿದ್ದರೆ ಕೊಳ್ಳಿಯಿಂದಲೇ ಹಾಡಿಸುವರು. ವಿಶೇಷವಾಗಿ ತುಪ್ಪುಟವುಳ್ಳ ಈಕುರಿಯು ಅಸಂದರ್ಭದಲ್ಲಿ ಬಂದುಕಿಡಿ ತಗಲಿದರೂ ಹೊತ್ತಿಕೊಂಡು ಪ್ರಜ್ವಲಿಸುವುದು. ಆ ಉರಿಯಿಂದ ಕೂಡಿ ಹಾಗೆಯೇ ಹತ್ತಿರಿರುವ ಕುದುರೆಲಾಯಕ್ಕೆ ನುಗ್ಗುವುದು, ಆ ಗ ಲಾಯವೂ ಹುಲ್ಲುಮೊದೆಗಳಿಂದ ತುಂಬಿರುವ ಕಾರಣ ಧಗ್ಗನೆ ಹೊತ್ತಿಕೊಳ್ಳುವುದು. ಆಮೇಲೆ ಕುದುರೆಗಳೂ ಬೆಂಕಿಯ ಜ್ವಾಲೆಗೆ ಸಿಕ್ಕುವುವು. ಶಾಲಿಹೋತ್ರನು ಕುದುರೆಗಳಿಗುಂಟಾದ ಅಗ್ನಿಜ್ವಾಲೆಯ ದೋಷವು ಕಪಿಹೃದಯಮೇದಸ್ಸಿನಿಂದ ಶಾಂತವಾಗುವುದೆಂದು ಹೇಳಿರುವನು. ಆದರೆ ತಪ್ಪದೆ ಕಪಿನಾಶವುಂಟಾಗುವುದು.

ಇಂತು ನಿಶ್ಚಯಿಸಿ, ಕಪಿಕುಲವನ್ನು ಕರೆದು ರಹಸ್ಯದಲ್ಲಿ ಇಂತೆಂದಿತು:—ಎಲೆ ಕಪಿಗಳಿರ!

ಅಡುಗೆಯನೆಸಗುವ ಜನವಾ |
ವೆಡೆಯೊಳ್ ಕುಱಿಯಂ ಕನಲ್ದು ತಾನನುದಿನಮುಂ ||
ಪೊಡೆದಟ್ಟುಗುಮತ್ತಲ್ ಸಂ |
ಗಡಿಪುದು ಕಪಿಗಳ್ಗೆ ಕೇಡು ಸಂದೆಗವಿಲ್ಲಂ || ೬೭ ||

ಸದನದೊಳದೆಲ್ಲಿ ನಿಚ್ಚಮು |
ಮುದಯಿಪುದೇನುಂ ನಿಮಿತ್ತಮಿಲ್ಲದೆ ಕಲಹಂ |
ಬರ್ದು*ಕಿರಲಿಚ್ಛಿಸುವಾತಂ |
ಸದನಮುನದನುೞಿದು ದೂರಮೆಯ್ದಲ್ವೇೞ್ಕುಂ || ೬೮ ||

ಅಂತಲ್ಲದೆ :—

ಕಲಹಂ ಸಮನಿಸುವನ್ನಂ |
ನೆಲೆಮಾಡಂ ಕೆಳೆ ದುರುಕ್ತಿಯಂ ನುಡಿವನ್ನಂ ||
ಖಲನರಸಾಳ್ವನ್ನಂ ರಾ |
ಜ್ಯಲಕ್ಷ್ಮಿಯೞಿಗಜ್ಜವೆಸಗುವನ್ನಂ ಜಸಮುಂ || ೬೯ ||